

# ಮಾರ್ಕ್ಸ್
# ಏಂಗೆಲ್ಸ್

# ಕಮ್ಯೂನಿಸ್ಟ್
# ಪಾರ್ಟಿ
# ಪ್ರಣಾಳಿಕೆ



Karl Marx



F. Engels

# ಕಮ್ಯೂನಿಸ್ಟ್
# ಪಾರ್ಟಿ
# ಪ್ರಣಾಳಿಕೆ

ಎಲ್ಲ ದೇಶಗಳ ಶ್ರಮಜೀವಿಗಳೇ, ಒಂದಾಗಿರಿ!

# ಕೆ. ಮಾರ್ಕ್ಸ್

# ಎಫ್. ಎಂಗೆಲ್ಸ್

# ಕಮ್ಯೂನಿಸ್ಟ್ ಪಾರ್ಟಿ ಪ್ರಣಾಳಿಕೆ

ಅನುಬಂಧ:

ಎಫ್. ಎಂಗೆಲ್ಸ್

ಕಮ್ಯೂನಿಸಂನ ಮೂಲತತ್ವಗಳು

ಪ್ರಗತಿ ಪ್ರಕಾಶನ

ಮಾಸ್ಕೋ

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

ಪ್ರಸಕ್ತ "ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ" ಎಂಬ ಕನ್ನಡ ಭಾಷಾಂತರವನ್ನು 1888ರಲ್ಲಿ ಫ್ರೆಡರಿಕ್ ಎಂಗೆಲ್ಸ್‌ರವರು ಸಿದ್ಧಗೊಳಿಸಿದ ಇಂಗ್ಲಿಷ್ ಆವೃತ್ತಿಯನ್ನು ಆಧರಿಸಿ ಸಿದ್ಧಗೊಳಿಸಲಾಗಿದೆ. ಈ ಇಂಗ್ಲಿಷ್ ಆವೃತ್ತಿಗೆ ಹಾಗೂ 1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್ ಬರೆದಿರುವ ಟಿಪ್ಪಣಿ ಹಾಗೂ ಮುನ್ನುಡಿಗಳನ್ನು ಸೇರಿಸಲಾಗಿದೆ.

© ಕನ್ನಡ ಭಾಷಾಂತರ ಪ್ರಗತಿ ಪ್ರಕಾಶನ 1978

М. Э. $\frac{10101 - 805}{014(01) - 81}$ без объявл. 0101010000

ಸೋವಿಯತ್ ಒಕ್ಕೂಟದಲ್ಲಿ ಪ್ರಕಟವಾಗಿದೆ

"ಅಸಾಧಾರಣ ಪ್ರತಿಭೆಗೆ ಸಹಜವಾದಂಥ ಸುಸ್ಪಷ್ಟತೆ ಹಾಗೂ ಉಜ್ವಲತೆಯೊಂದಿಗೆ ಈ ಕೃತಿ ಹೊಸ ಜಾಗತಿಕ ಮನೋಧರ್ಮದ, ಸುಸಂಗತ ವಸ್ತುವಾದದ, ರೂಪುರೇಷೆಗಳನ್ನು ನೀಡುತ್ತದೆ. ಇದು ಸಾಮಾಜಿಕ ಜೀವನ ಕ್ಷೇತ್ರವನ್ನೂ, ಅತ್ಯಂತ ಸಮಗ್ರವಾದ ಹಾಗೂ ಪ್ರಗಾಢವಾದ ಬೆಳವಣಿಗೆಯ ಸಿದ್ಧಾಂತವಾದ ದ್ವಂದ್ವಾತ್ಮಕತೆಯನ್ನೂ ತನ್ನ ಅವಗಾಹನೆಗೆ ತಂದುಕೊಂಡಿದೆ. ಇದು ವರ್ಗ ಹೋರಾಟದ ಹಾಗೂ ನೂತನ ಕಮ್ಯೂನಿಸ್ಟ್ ಸಮಾಜ ನಿರ್ಮಾಪಕ ಕಾರ್ಮಿಕ ವರ್ಗದ ವಿಶ್ವ– ಐತಿಹಾಸಿಕ ಕ್ರಾಂತಿಕಾರೀ ಪಾತ್ರವನ್ನು ನಿರೂಪಿಸುವ ಸಿದ್ಧಾಂತವಾಗಿದೆ."

ಲೆನಿನ್

# ವಿಷಯ ಸೂಚಿ

1872ರ ಜರ್ಮನ್ ಆವೃತ್ತಿಗೆ ಮುನ್ನುಡಿ . . . . . . 9

1882ರ ರಶಿಯನ್ ಆವೃತ್ತಿಗೆ ಮುನ್ನುಡಿ . . . . . . . 12

1883ರ ಜರ್ಮನ್ ಆವೃತ್ತಿಗೆ ಮುನ್ನುಡಿ . . . . . . . 15

1888ರ ಇಂಗ್ಲಿಷ್ ಆವೃತ್ತಿಗೆ ಮುನ್ನುಡಿ . . . . . . . 17

1890ರ ಜರ್ಮನ್ ಆವೃತ್ತಿಗೆ ಮುನ್ನುಡಿ . . . . . . . 25

1892ರ ಪೋಲಿಷ್ ಆವೃತ್ತಿಗೆ ಮುನ್ನುಡಿ . . . . . . . 33

1893ರ ಇಟಾಲಿಯನ್ ಆವೃತ್ತಿಗೆ ಮುನ್ನುಡಿ . . . . . . 36

ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ

I. ಬೂರ್ಷ್ವಾಗಳು ಹಾಗೂ ಶ್ರಮಜೀವಿಗಳು . . . . . . 40

II. ಶ್ರಮಜೀವಿಗಳು ಮತ್ತು ಕಮ್ಯೂನಿಸ್ಟರು . . . . . . 59

III. ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಸಾಹಿತ್ಯ . . . . 72

1. ಪ್ರತಿಗಾಮಿ ಸಮಾಜವಾದ . . . . . . . . 72

(ಎ) ಸಾಮಂತಶಾಹಿ ಸಮಾಜವಾದ . . . . . . 72

(ಬಿ) ಪೆಟಿ ಬೂರ್ಷ್ವಾ ಸಮಾಜವಾದ . . . . . 75

(ಸಿ) ಜರ್ಮನ್ ಅಥವಾ “ನೈಜ” ಸಮಾಜವಾದ . . . 76

2. ಸಂಪ್ರದಾಯಶರಣ ಅಥವಾ ಬೂರ್ಷ್ವಾ ಸಮಾಜವಾದ . . 81

3. ವಿಮರ್ಶಾತ್ಮಕ-ಅಸಾಧ್ಯಾದರ್ಶ ಸಮಾಜವಾದ ಹಾಗೂ ಕಮ್ಯೂನಿಸಂ . . . . . . . . . . . . . . . 83

IV. ಅಸ್ತಿತ್ವದಲ್ಲಿರುವ ನಾನಾ ವಿರೋಧ ಪಕ್ಷಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರ ನಿಲುವು . . . . . . . . . . . . . . 87

ಅನುಬಂಧ

ಎಫ್. ಎಂಗೆಲ್ಸ್. ಕಮ್ಯೂನಿಸಂನ ಮೂಲತತ್ವಗಳು . . . . . 90

ಟಿಪ್ಪಣಿಗಳು . . . . . . . . . . . . . . . . . 116

# 1872ರ ಜರ್ಮನ್ ಆವೃತ್ತಿಗೆ ಮುನ್ನುಡಿ

ಆಗಿನ ಪರಿಸ್ಥಿತಿಗಳಲ್ಲಿ ಗುಪ್ತವಾಗಷ್ಟೆ ಕೆಲಸಮಾಡಬಲ್ಲುದಿದ್ದ, ಕಾರ್ಮಿಕರ ಅಂತರರಾಷ್ಟ್ರೀಯ ಸಂಸ್ಥೆ "ಕಮ್ಯೂನಿಸ್ಟ್ ಲೀಗ್"ನ 1847ರ ನವಂಬರ್ ತಿಂಗಳಿನಲ್ಲಿ ಲಂಡನ್ನಿನಲ್ಲಿ ಜರುಗಿದ ಮಹಾಧಿವೇಶನದಲ್ಲಿ ಪಾರ್ಟಿಯ ವಿವರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಕಾರ್ಯಕ್ರಮವೊಂದನ್ನು ಪ್ರಕಟಣೆಗಾಗಿ ಸಿದ್ಧಗೊಳಿಸಲು ಕೆಳಗೆ ಹಸ್ತಾಕ್ಷರ ಮಾಡಿರುವವರನ್ನು ನಿಯೋಜಿಸಲಾಯಿತು. ಹೀಗೆಯೇ ಈ ಕೆಳಗಿನ ಪ್ರಣಾಳಿಕೆ ಜನ್ಮ ತಾಳಿದುದು. ಇದರ ಹಸ್ತಪ್ರತಿ ಫೆಬ್ರುವರಿ ಕ್ರಾಂತಿ[1]ಗೆ ಕೆಲವು ವಾರಗಳ ಮುನ್ನ ಮುದ್ರಣವಾಗಲೋಸುಗ ಲಂಡನ್ನಿಗೆ ಪ್ರಯಾಣ ಬೆಳೆಸಿತು. ಮೊದಲು ಜರ್ಮನ್ ಭಾಷೆಯಲ್ಲಿ ಪ್ರಕಟವಾದ ಇದು ಆ ಭಾಷೆಯಲ್ಲಿ ಕೊನೆಯ ಪಕ್ಷ ಹನ್ನೆರಡು ಬಾರಿ ವಿಭಿನ್ನ ಆವೃತ್ತಿಗಳಲ್ಲಿ ಜರ್ಮನಿ, ಇಂಗ್ಲೆಂಡ್, ಅಮೆರಿಕಗಳಲ್ಲಿ ಪುನರ್‌ಪ್ರಕಟವಾಗಿದೆ. ಇಂಗ್ಲಿಷಿನಲ್ಲಿ ಪ್ರಪ್ರಥಮ ಬಾರಿಗೆ 1850ರಲ್ಲಿ ಲಂಡನ್ನಿನ "ರೆಡ್ ರಿಪಬ್ಲಿಕನ್" (*Red Republican*) ನಲ್ಲಿ ಪ್ರಕಟವಾಯಿತು. ಅದನ್ನು ಮಿಸ್ ಹೆಲೆನ್ ಮಕ್‌ಫರ್‌ಲೇನ್‌ರು ಅನುವಾದಿಸಿದ್ದರು. 1871ರಲ್ಲಿ ಅದು ಅಮೆರಿಕದಲ್ಲಿ ಕೊನೆಯ ಪಕ್ಷ ಮೂರು ವಿಭಿನ್ನ ಭಾಷಾಂತರಗಳಲ್ಲಿ ಪ್ರಕಟವಾಯಿತು. ಇದರ ಫ್ರೆಂಚ್ ಮುದ್ರಣವು ಮೊದಲು 1848ರ ಜೂನ್ ಬಂಡಾಯ[2]ಕ್ಕೆ ಸ್ವಲ್ಪ ಮುನ್ನ ಪ್ಯಾರಿಸ್ಸಿನಲ್ಲೂ, ಈಚೆಗೆ ನ್ಯೂಯಾರ್ಕ್‌ನಲ್ಲಿ "ಲೆ ಸೋಸ್ಯಲಿಸ್ಟ್" (*Le Socialiste*)ನಲ್ಲೂ ಪ್ರಕಟವಾಯಿತು. ಹೊಸ ಭಾಷಾಂತರವೊಂದು ಸಿದ್ಧಗೊಳ್ಳುತ್ತಿದೆ. ಮೊದಲು ಜರ್ಮನ್‌ನಲ್ಲಿ ಪ್ರಕಟವಾದ ಸ್ವಲ್ಪಕಾಲದ ತರುವಾಯದಲ್ಲೇ ಅದರ ಪೋಲಿಷ್ ಅನುವಾದವೊಂದು ಲಂಡನ್ನಿನಲ್ಲಿ ಪ್ರಕಟವಾಯಿತು. ಈ ಶತಮಾನದ '7ನೆಯ ದಶಕದಲ್ಲಿ ಜಿನೀವಾದಲ್ಲಿ ರಶಿಯನ್ ಭಾಷಾಂತರವೊಂದು ಪ್ರಕಟವಾಯಿತು.

ಮೊದಲು ಪ್ರಕಟಗೊಂಡ ಸ್ವಲ್ಪ ಸಮಯದಲ್ಲೇ "ಪ್ರಣಾಳಿಕೆ"ಯು ಡೇನಿಷ್ ಭಾಷೆಗೂ ಅನುವಾದಿತವಾಯಿತು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಸ್ತುಸ್ಥಿತಿಯು ಎಷ್ಟೇ ಬದಲಾಗಿರಬಹುದಾಗಿದ್ದರೂ ಈ "ಪ್ರಣಾಳಿಕೆ"ಯಲ್ಲಿ ಹಾಕಿಕೊಡಲಾಗಿರುವ ಸಾಮಾನ್ಯ ಸೂತ್ರಗಳು ಒಟ್ಟಿನ ಮೇಲೆ ಹಿಂದೆಂದಿನಂತೆ ಇಂದೂ ಅಷ್ಟೇ ಸೂಕ್ತವಾದುದಾಗಿವೆ. ಇಲ್ಲಿ ಅಲ್ಲಿ ಕೆಲವು ವಿವರಣೆಗಳನ್ನು ಸರಿಪಡಿಸಬಹುದೇನೋ. "ಪ್ರಣಾಳಿಕೆ"ಯೇ ತಿಳಿಸುವಂತೆ ಈ ಸೂತ್ರಗಳ ಪ್ರಾಯೋಗಿಕ ಅನ್ವಯವು ಎಲ್ಲೆಲ್ಲೂ ಮತ್ತು ಎಲ್ಲ ಕಾಲಗಳಲ್ಲೂ ಆಯಾ ಕಾಲದಲ್ಲಿ ಅಸ್ತಿತ್ವದಲ್ಲಿರಬಹುದಾದ ಚಾರಿತ್ರಿಕ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಆ ಕಾರಣದಿಂದಾಗಿಯೇ ಎರಡನೆಯ ಅಧ್ಯಾಯದ ಕೊನೆಯಲ್ಲಿ ಸಲಹೆ ಮಾಡಲಾಗಿರುವ ಕ್ರಾಂತಿಕಾರಿ ಕ್ರಮಗಳ ಬಗೆಗೆ ಯಾವ ರೀತಿಯ ವಿಶೇಷ ಒತ್ತಾಯವನ್ನೂ ಹಾಕಿಲ್ಲ. ಆ ಭಾಗವನ್ನು ಇಂದಿನ ಸನ್ನಿವೇಶದಲ್ಲಿ ಬರೆದಿದ್ದರೆ, ಅನೇಕ ರೀತಿಯಲ್ಲಿ ತೀರ ಬೇರೆಯೇ ಮಾತುಗಳಲ್ಲಿ ಬರೆಯಲಾಗುತ್ತಿದ್ದಿತು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಆಧುನಿಕ ಕೈಗಾರಿಕೆಯು ದಾಪುಗಾಲು ಹಾಕಿಕೊಂಡು ಮುಂದುವರಿದಿರುವುದರ ಫಲವಾಗಿ, ಅದರೊಂದಿಗೇ ಕಾರ್ಮಿಕ ವರ್ಗದ ಪಾರ್ಟಿ ಸಂಘಟನೆ ಸುಧಾರಿತವಾಗಿ ವಿಸ್ತೃತವಾಗಿರುವುದರ ಫಲವಾಗಿ, ಮೊದಲು ಫೆಬ್ರವರಿ ಕ್ರಾಂತಿಯಲ್ಲೂ ಆನಂತರ ಇನ್ನೂ ಹೆಚ್ಚಾಗಿ ಶ್ರಮಜೀವಿ ವರ್ಗವು ಪ್ರಪ್ರಥಮ ಬಾರಿಗೆ ಇಡೀ ಎರಡು ತಿಂಗಳಿನ ಕಾಲ ರಾಜಕೀಯ ಅಧಿಕಾರ ಹಿಡಿದಿದ್ದ ಪ್ಯಾರಿಸ್ ಕಮ್ಯೂನ್[3]ನಲ್ಲೂ ಗಳಿಸಿಕೊಂಡ ಪ್ರಾಯೋಗಿಕ ಅನುಭವದ ಫಲವಾಗಿ, ಈ ಕಾರ್ಯಕ್ರಮವು ಕೆಲವು ವಿವರಗಳಲ್ಲಿ ಹಳೆಯದಾಗಿ ಹೋಗಿದೆ. ಕಮ್ಯೂನ್ ಒಂದು ವಿಷಯವನ್ನು ವಿಶೇಷವಾಗಿ ಸಾಧಿಸಿ ತೋರಿತು. ಅದೆಂದರೆ – "ಆಗಲೇ ಅಸ್ತಿತ್ವದಲ್ಲಿದ್ದ ರಾಜ್ಯಯಂತ್ರವನ್ನು ಕಾರ್ಮಿಕ ವರ್ಗವು ಸುಮ್ಮನೆ ತನ್ನ ಕೈಗೆ ತೆಗೆದುಕೊಂಡು ಅದನ್ನು ತನ್ನ ಸ್ವಂತ ಉದ್ದೇಶಗಳಿಗಾಗಿ ಪ್ರಯೋಗಿಸಲು ಸಾಧ್ಯವಿಲ್ಲ" ("ಫ್ರಾನ್ಸಿನಲ್ಲಿ ಅಂತರ್ಯುದ್ಧ. ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್‌ನ ಜನರಲ್ ಕೌನ್ಸಿಲ್‌ನ ಮನವಿ." ಲಂಡನ್, ಟ್ರೂಲೊವ್ ಪ್ರಚುರಣಾಲಯ, 1871, ಪು. 15 ನೋಡಿ. ಅದರಲ್ಲಿ ಈ ವಿಷಯವನ್ನು ಮತ್ತಷ್ಟು ವಿಶದವಾಗಿ ವಿಕಾಸಗೊಳಿಸಲಾಗಿದೆ*). ಅಷ್ಟೇ ಅಲ್ಲದೆ, ಇದರಲ್ಲಿ ಒಡಮೂಡಿಸಿರುವ ಸಮಾಜವಾದೀ ಸಾಹಿತ್ಯದ ಟೀಕೆಯು ಈ ಕಾಲಕ್ಕೆ ಸಂಬಂಧಿಸಿದಂತೆ ಅಸಮರ್ಪಕ ಎಂಬ ವಿಷಯ ಸ್ವಯಂಸ್ಪಷ್ಟ. ಏಕೆಂದರೆ ಈ ಟೀಕೆಯು 1847ರ

---

*ಕೆ. ಮಾರ್ಕ್ಸ್ ಮತ್ತು ಎಫ್. ಎಂಗೆಲ್ಸ್, ಆಯ್ದ ಕೃತಿಗಳು, ಎರಡು ಸಂಪುಟಗಳ ಆವೃತ್ತಿ, ಸಂ. 1, ಮಾಸ್ಕೋ, 1951, ಪು. 468. – ಸಂ.

ವರೆಗಿನ ವಿಷಯಗಳನ್ನಷ್ಟೆ ಗಮನಕ್ಕೆ ತಂದುಕೊಳ್ಳುತ್ತದೆ. ಅಲ್ಲದೆ ವಿವಿಧ ವಿರೋಧಿ ಪಾರ್ಟಿಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರು ತಳೆಯಬೇಕಾದ ನಿಲುವಿನ ಕುರಿತಾದ ಹೇಳಿಕೆಗಳೂ (ಅಧ್ಯಾಯ IV) ಸೂತ್ರತಃ ಈಗಲೂ ಸರಿಯಾದವುಗಳಾದರೂ ಕಾರ್ಯತಃ ಹಳೆಯದಾಗಿ ಹೋಗಿವೆ; ಏಕೆಂದರೆ, ರಾಜಕೀಯ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಿದೆ ಮತ್ತು "ಪ್ರಣಾಳಿಕೆ"ಯಲ್ಲಿ ನಮೂದಾಗಿರುವ ರಾಜಕೀಯ ಪಾರ್ಟಿಗಳಲ್ಲಿ ಅನೇಕವನ್ನು ಇತಿಹಾಸದ ಪ್ರಗತಿಯು ಭೂಮಿಯ ಮೇಲಿನಿಂದ ಹೇಳಹೆಸರಿಲ್ಲದಂತೆ ಕೊಚ್ಚಿಹಾಕಿದೆ.

ಆದರೂ ಸಹ "ಪ್ರಣಾಳಿಕೆ"ಯು ಒಂದು ಐತಿಹಾಸಿಕ ದಾಖಲೆಯಾಗಿದೆ. ಅದನ್ನು ಬದಲಿಸುವ ಹಕ್ಕು ನಮಗೆ ಎಷ್ಟು ಮಾತ್ರವೂ ಇಲ್ಲ. 1847ರಿಂದ ಇಂದಿನವರೆಗಿನ ಅವಧಿಯಲ್ಲಾಗಿರುವ ಘಟನೆಗಳನ್ನೂ ಒಳಗೊಂಡಿರುವಂಥ ಪೀಠಿಕೆಯನ್ನುಳ್ಳ ಆವೃತ್ತಿಯೊಂದು ಬಹುಶಃ ಮುಂದೆ ಕಾಣಿಸಿಕೊಳ್ಳಬಹುದು; ಈಗ ಈ ಮುದ್ರಣ ತೀರ ಅನಿರೀಕ್ಷಿತವಾಗಿ ಬಂದು ಅಂಥ ಪೀಠಿಕೆಯನ್ನು ಬರೆಯಲು ನಮಗೆ ಸಮಯಾವಕಾಶವಿಲ್ಲವಾಗಿದೆ.

ಲಂಡನ್, ಜೂನ್ 24, 1872

ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಎಂಗೆಲ್ಸ್

# 1882ರ ರಶಿಯನ್ ಆವೃತ್ತಿಗೆ ಮುನ್ನುಡಿ

"ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ"ಯ ಮೊದಲ ರಶಿಯನ್ ಆವೃತ್ತಿಯು 19ನೆಯ ಶತಮಾನದ ಏಳನೆಯ ದಶಕದಲ್ಲಿ[4] "ಕೋಲೊಕೋಲ್"[5] ಮುದ್ರಣಾಲಯದಲ್ಲಿ ಪ್ರಕಟವಾಯಿತು. ಇದನ್ನು ಬಕೂನಿನ್ ಭಾಷಾಂತರಿಸಿದ್ದರು. ಆಗ ಪಾಶ್ಚಿಮಾತ್ಯ ದೇಶಗಳು ಅದರಲ್ಲಿ ("ಪ್ರಣಾಳಿಕೆ"ಯ ರಶಿಯನ್ ಆವೃತ್ತಿಯಲ್ಲಿ) ಸಾಹಿತ್ಯಿಕ ಕೌತುಕವನ್ನಷ್ಟೆ ಕಾಣಬಲ್ಲವಾಗಿದ್ದವು. ಇಂದು ಅಂಥ ದೃಷ್ಟಿಕೋನ ಅಸಾಧ್ಯವೇ ಸರಿ.

ಆ ಕಾಲದಲ್ಲಿ (ಡಿಸೆಂಬರ್ 1847ರಲ್ಲಿ) ಶ್ರಮಜೀವಿ ಚಳವಳಿ ಎಷ್ಟು ಸೀಮಿತ ಕ್ಷೇತ್ರವನ್ನಷ್ಟೆ ಪಡೆದಿದ್ದಿತು ಎಂಬುದನ್ನು "ಪ್ರಣಾಳಿಕೆ"ಯ ಕೊನೆಯ ಅಧ್ಯಾಯವು ಅತ್ಯಂತ ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಅದರಲ್ಲಿ ನಾನಾ ದೇಶಗಳಲ್ಲಿ ವಿವಿಧ ವಿರೋಧಿ ಪಾರ್ಟಿಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರ ನಿಲುವನ್ನು ವಿವರಿಸಲಾಗಿದೆ. ಅದರಲ್ಲಿ ರಶಿಯ ಹಾಗೂ ಸಂಯುಕ್ತ ಸಂಸ್ಥಾನಗಳೇ ಬಿಟ್ಟುಹೋಗಿವೆ. ರಶಿಯವು ಯೂರೋಪಿನ ಎಲ್ಲ ಪ್ರತಿಗಾಮಿಗಳ ಕೊನೆಯ ದೊಡ್ಡ ಭದ್ರನೆಲೆಯಾಗಿದ್ದ ಕಾಲವಾಗಿದ್ದಿತು ಅದು. ಯೂರೋಪಿನಿಂದ ವಲಸೆ ಬರುತ್ತಿದ್ದ ಮಿಗುತಾಯ ಶ್ರಮಜೀವಿ ಶಕ್ತಿಗಳನ್ನು ಅಮೆರಿಕವು ತನ್ನಲ್ಲಿ ಲೀನಗೊಳಿಸಿಕೊಂಡ ಕಾಲವಾಗಿದ್ದಿತು ಅದು. ಇವೆರಡು ದೇಶಗಳೂ ಯೂರೋಪಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿದ್ದವು ಮತ್ತು ಅದೇ ಹೊತ್ತಿನಲ್ಲಿ ಅವು ಯೂರೋಪಿನ ಕೈಗಾರಿಕೋತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಗಳಾಗಿಯೂ ಆಗಿದ್ದವು. ಆದ್ದರಿಂದ ಆ ಕಾಲದಲ್ಲಿ ಎರಡು ದೇಶಗಳೂ ಒಂದಲ್ಲ ಒಂದು ರೀತಿಯಲ್ಲಿ ಅಂದು ಅಸ್ತಿತ್ವದಲ್ಲಿದ್ದ ಯೂರೋಪಿಯನ್ ವ್ಯವಸ್ಥೆಗೆ ಆಧಾರಸ್ತಂಭಗಳಾಗಿದ್ದವು.

ಇಂದು ಪರಿಸ್ಥಿತಿ ಎಷ್ಟು ಭಿನ್ನ ! ಐರೋಪ್ಯರು ಉತ್ತರ ಅಮೆರಿಕಕ್ಕೆ ವಲಸೆ ಹೋದುದೇ ಅಲ್ಲಿನ ಬೃಹತ್ ಪ್ರಮಾಣದ ಕೃಷಿ ಉತ್ಪಾದನೆಗೆ ನೆರವಾಯಿತು. ಅದರ ಪೈಪೋಟಿಯು ಯೂರೋಪಿನ ಸಣ್ಣ ಹಾಗೂ ದೊಡ್ಡ ಪ್ರಮಾಣದ ಭೂಮಾಲಿಕತ್ವ ವ್ಯವಸ್ಥೆಯ ಅಡಿಪಾಯಗಳನ್ನೇ ಅಲುಗಿಸುತ್ತಿದೆ. ಇದರ ಜೊತೆಗೇ ಅದು ಅಮೆರಿಕಕ್ಕೆ ಅದರ ಪ್ರಚಂಡ ಕೈಗಾರಿಕಾ ಸಂಪನ್ಮೂಲಗಳನ್ನು ಉಪಯೋಗಕ್ಕೆ ತಂದುಕೊಳ್ಳಲು ಸಾಧ್ಯ ಮಾಡಿಕೊಟ್ಟಿತು. ಅಮೆರಿಕವು ಈ ಕಾರ್ಯವನ್ನು ಎಷ್ಟು ಕಸುವಿನೊಂದಿಗೆ ಎಷ್ಟು ಭಾರಿ ಪ್ರಮಾಣದಲ್ಲಿ ಮಾಡಿತೆಂದರೆ ಅದು ಪಶ್ಚಿಮ ಯೂರೋಪಿನಲ್ಲಿ, ಅದರಲ್ಲೂ ಮುಖ್ಯವಾಗಿ ಇಂಗ್ಲೆಂಡಿನಲ್ಲಿ, ಇರುವ ಕೈಗಾರಿಕಾ ಏಕಸ್ವಾಮ್ಯವನ್ನು ಬೇಗನೆಯೇ ಮುರಿಯಲಿದೆ. ಇವೆರಡು ಸಂದರ್ಭಗಳೂ ಅಮೆರಿಕದ ಮೇಲೆಯೇ ಕ್ರಾಂತಿಕಾರಿ ರೀತಿಯಲ್ಲಿ ಪ್ರತಿಪ್ರಭಾವ ಬೀರುತ್ತಿವೆ. ಅಮೆರಿಕದ ಇಡೀ ರಾಜಕೀಯ ಘಟನಾ ವ್ಯವಸ್ಥೆಯ ಆಧಾರವಾದ ರೈತರ ಸಣ್ಣ ಹಾಗೂ ಮಧ್ಯಮ ಭೂಮಾಲಿಕತ್ವವು ಹೆಜ್ಜೆಹೆಜ್ಜೆಯಾಗಿ ಬೃಹತ್ ಕೃಷಿಕ್ಷೇತ್ರಗಳ ಪೈಪೋಟಿಗೆ ಸಿಕ್ಕಿ ಕುಸಿದು ಬೀಳುತ್ತಿದೆ, ಅದೇ ಹೊತ್ತಿನಲ್ಲಿ ಕೈಗಾರಿಕಾ ಪ್ರಾಂತಗಳಲ್ಲಿ ಮೊಟ್ಟಮೊದಲ ಬಾರಿಗೆ ಶ್ರಮಜೀವಿಗಳ ಬೃಹತ್ ಸಮೂಹವೂ ಬಂಡವಾಳದ ಅಪರಿಮಿತ ಕೇಂದ್ರೀಕರಣವೂ ಬೆಳೆಯುತ್ತಿವೆ.

ಮತ್ತೆ ಈಗ ರಶಿಯಕ್ಕೆ ಬರೋಣ ! 1848-1849ರ ಕ್ರಾಂತಿ ಸಮಯದಲ್ಲಿ ಯೂರೋಪಿನ ಸಾಮಂತ ರಾಜರಷ್ಟೆ ಅಲ್ಲ ಐರೋಪ್ಯ ಬೂರ್ಷ್ವಾಗಳೂ ಸಹ ರಶಿಯವು ಮಧ್ಯಪ್ರವೇಶಿಸಿದರಷ್ಟೆ ಆಗತಾನೇ ಜಾಗೃತಗೊಳ್ಳತೊಡಗಿದ್ದ ಶ್ರಮಜೀವಿ ವರ್ಗದಿಂದ ತಾವು ಪಾರಾಗಲು ಸಾಧ್ಯ ಎಂದು ಕಂಡುಕೊಂಡಿದ್ದರು. ಆದ್ದರಿಂದ ತ್ಸಾರ್ ದೊರೆಯನ್ನು ಐರೋಪ್ಯ ಪ್ರತಿಗಾಮಿಗಳ ಅಧಿನಾಯಕನೆಂದು ಘೋಷಿಸಲಾಯಿತು. ಆದರೆ ಇಂದು ಆತ ಗಾಟ್‌ಚಿನದಲ್ಲಿ ಕ್ರಾಂತಿಯ ಯುದ್ಧ ಬಂದಿಯಾಗಿದ್ದಾನೆ, ರಶಿಯವು ಯೂರೋಪಿನಲ್ಲಿ ಕ್ರಾಂತಿಕಾರಿ ಚಳವಳಿಯ ಮುಂಚೂಣಿಯಾಗಿ ರೂಪುಗೊಂಡಿದೆ.

ಆಧುನಿಕ ಬೂರ್ಷ್ವಾ ಆಸ್ತಿ ವ್ಯವಸ್ಥೆಯ ಆಸನ್ನ ಅನಿವಾರ್ಯ ವಿಸರ್ಜನೆಯನ್ನು ಘೋಷಿಸುವುದನ್ನೇ "ಕಮ್ಯೂನಿಸ್ಟ್ ಪ್ರಣಾಳಿಕೆ" ತನ್ನ ಗುರಿಯನ್ನಾಗಿ ಇಟ್ಟುಕೊಂಡಿದ್ದಿತು. ಆದರೆ ರಶಿಯದಲ್ಲಿ ನಾವು ಶೀಘ್ರವಾಗಿ ಬೆಳೆಯುತ್ತಿರುವ ಬಂಡವಾಳವಾದೀ ವಂಚನೆ ಹಾಗೂ ಈಗತಾನೆ ಬೆಳೆಯತೊಡಗಿರುವ ಬೂರ್ಷ್ವಾ ಭೂಮಾಲಿಕತ್ವ ವ್ಯವಸ್ಥೆಯ ಜೊತೆಗೇ, ಅರ್ಧಕ್ಕಿಂತ ಹೆಚ್ಚು ಭಾಗ ಭೂಮಿಯನ್ನು ರೈತರೇ ಸಾಮುದಾಯಿಕ ಒಡೆತನದಲ್ಲಿ ಹೊಂದಿರುವ ವ್ಯವಸ್ಥೆಯನ್ನೂ ಕಾಣುತ್ತೇವೆ. ಈಗಿನ ಪ್ರಶ್ನೆ ಎಂದರೆ ತುಂಬ ಮಟ್ಟಿಗೆ ಶಿಥಿಲಗೊಂಡಿದ್ದರೂ ಭೂಮಿಯ ಸಾಮುದಾಯಿಕ ಒಡೆತನದ ಒಂದು ರೀತಿಯ ಪ್ರಾಚೀನ ಪದ್ಧತಿಯಾಗಿ ಉಳಿ

ದಿರುವ ರಶಿಯನ್ 'ಒಬ್‌ಷ್ಚೀನ'*ವು ಸಾಮುದಾಯಿಕ ಒಡೆತನದ ಉನ್ನತ ಮಟ್ಟದ ಕಮ್ಯೂನಿಸ್ಟ್ ಪದ್ಧತಿಗೆ ನೇರವಾಗಿ ಹೋಗಬಲ್ಲುದೇ? ಅಥವಾ ತದ್ವಿರುದ್ಧವಾಗಿ, ಪಶ್ಚಿಮ ದೇಶಗಳ ಚಾರಿತ್ರಿಕ ವಿಕಾಸದಲ್ಲಿ ಕಂಡು ಬಂದಂತೆ ಅದು ಮೊದಲು ಅದೇ ರೀತಿಯ ವಿಸರ್ಜನ ಪ್ರಕ್ರಿಯೆಗೆ ಒಳಪಡಬೇಕೆ? ಎಂಬುದಾಗಿದೆ.

ಇದಕ್ಕೆ ಇಂದು ಸಾಧ್ಯವಿರುವ ಒಂದೇ ಉತ್ತರವೆಂದರೆ – ಇಂದಿನ ರಶಿಯನ್ ಕ್ರಾಂತಿಯು ಪಶ್ಚಿಮ ದೇಶಗಳಲ್ಲೂ ಶ್ರಮಜೀವಿ ಕ್ರಾಂತಿಗೆ ಪ್ರೇರಕವಾಗಿ, ಎರಡು ಕ್ರಾಂತಿಗಳೂ ಪರಸ್ಪರ ಪೂರಕವಾಗಿ ಬೆಳೆದರೆ, ಇಂದು ರಶಿಯದಲ್ಲಿರುವ ಭೂಮಿಯ ಸಾಮುದಾಯಿಕ ಒಡೆತನದ ಪದ್ಧತಿಯೇ ಕಮ್ಯೂನಿಸ್ಟ್ ಬೆಳವಣಿಗೆಗೆ ಆರಂಭ ಬಿಂದುವಾಗಿ ಸಹಾಯವಾಗಬಹುದು.

ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಎಂಗೆಲ್ಸ್

ಲಂಡನ್, ಜನವರಿ 21, 1882

---

* ಒಬ್‌ಷ್ಚೀನ – ಗ್ರಾಮ ಸಮುದಾಯ ವ್ಯವಸ್ಥೆ. – ಸಂ.

# 1883ರ ಜರ್ಮನ್ ಆವೃತ್ತಿಗೆ ಮುನ್ನುಡಿ

ಪ್ರಸ್ತುತ ಆವೃತ್ತಿಯ ಮುನ್ನುಡಿಗೆ ನಾನೊಬ್ಬನೇ ಸಹಿ ಹಾಕಬೇಕಾಗಿ ಬಂದಿರುವುದು ವಿಷಾದದ ಸಂಗತಿ. ಯೂರೋಪು ಅಮೆರಿಕಗಳ ಇಡೀ ಕಾರ್ಮಿಕ ವರ್ಗವು ಬೇರೆಲ್ಲರಿಗಿಂತಲೂ ಹೆಚ್ಚಾಗಿ ಯಾರಿಗೆ ಋಣಿಯಾಗಿದೆಯೋ ಅವರು – ಮಾರ್ಕ್ಸ್ – ಹೈಗೇಟ್ ರುದ್ರಭೂಮಿಯಲ್ಲಿ ಚಿರನಿದ್ರೆಯೊಳಗಿದ್ದಾರೆ. ಅವರ ಸಮಾಧಿಯ ಮೇಲೆ ಆಗಲೇ ಮೊದಲ ಹುಲ್ಲಿನ ಗರಿಕೆಗಳು ಕಾಣಿಸಿಕೊಂಡಿವೆ. ಅವರ ಮರಣದ ತರುವಾಯ "ಪ್ರಣಾಳಿಕೆ"ಯನ್ನು ಪುನರ್‌ಪರಿಶೀಲಿಸುವ ಅಥವಾ ಅದಕ್ಕೆ ಹೆಚ್ಚಿಗೆ ಸೇರಿಸುವ ವಿಚಾರ ಮಾಡುವ ಸಂದರ್ಭ ಇನ್ನೂ ಅಲ್ಪವೇ. ಮಿಗಿಲಾಗಿ, ಈ ಕೆಳಗಿನ ವಿಷಯವನ್ನು ನಾನು ಮತ್ತೆ ಇಲ್ಲಿ ಹೆಚ್ಚು ಸ್ಪಷ್ಟವಾಗಿ ಹೇಳುವುದು ಅವಶ್ಯವೆಂದು ಪರಿಗಣಿಸುತ್ತೇನೆ.

"ಪ್ರಣಾಳಿಕೆ"ಯಾದ್ಯಂತ ಹರಿಯುತ್ತಿರುವ ಮೂಲ ವಿಚಾರಧಾರೆ ಹೀಗಿದೆ: ಪ್ರತಿಯೊಂದು ಐತಿಹಾಸಿಕ ಯುಗದ ಆರ್ಥಿಕ ಉತ್ಪಾದನೆಯೂ ಮತ್ತು ಅದ ರಿಂದ ಅವಶ್ಯವಾಗಿಯೇ ಉದ್ಭವಿಸುವ ಸಮಾಜ ರಚನೆಯೂ ಈ ಯುಗದ ರಾಜಕೀಯ ಹಾಗೂ ಬೌದ್ಧಿಕ ಇತಿಹಾಸದ ತಳಪಾಯವಾಗಿರುತ್ತವೆ: ತತ್ಫಲವಾಗಿ (ಭೂಮಿಯ ಸಾಮುದಾಯಿಕ ಒಡೆತನದ ಪ್ರಾಚೀನ ವ್ಯವಸ್ಥೆಯು ವಿಸರ್ಜನೆ ಗೊಂಡಂದಿನಿಂದ) ಎಲ್ಲ ಇತಿಹಾಸವೂ ವರ್ಗ ಹೋರಾಟಗಳ, ಶೋಷಿತ ಹಾಗೂ ಶೋಷಕ ವರ್ಗಗಳ ನಡುವಿನ ಹೋರಾಟಗಳ, ಸಾಮಾಜಿಕ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಮರ್ದಿತ ಹಾಗೂ ಮರ್ದಕ ವರ್ಗಗಳ ನಡುವಿನ ಹೋರಾಟಗಳ ಇತಿಹಾಸವಾಗಿದೆ. ಆದರೆ ಈ ಹೋರಾಟ ಈಗ ಎಂತಹ ಹಂತ ತಲುಪಿದೆ ಎಂದರೆ, ಶೋಷಿತ ಹಾಗೂ ಮರ್ದಿತ ವರ್ಗವು (ಶ್ರಮಜೀವಿ ವರ್ಗವು) ತನ್ನನ್ನು ಶೋಷಿಸುತ್ತಿರುವ ಹಾಗೂ ಮರ್ದಿಸುತ್ತಿರುವ ವರ್ಗದಿಂದ (ಬೂರ್ಷ್ವಾಸೀ)

ತನ್ನ ವಿಮೋಚನೆಯನ್ನು, ಅದೇ ಹೊತ್ತಿನಲ್ಲಿ ಇಡೀ ಸಮಾಜವನ್ನೇ ಶೋಷಣೆ ಮರ್ದನ ಹಾಗೂ ವರ್ಗ ಹೋರಾಟಗಳಿಂದ ಸದಾ ಕಾಲಕ್ಕೂ ವಿಮೋಚನೆಗೊಳಿಸದೆ, ಸಾಧಿಸಿಕೊಳ್ಳಲಾರದಾಗಿದೆ. ಈ ಮೂಲ ವಿಚಾರಧಾರೆ ಸಂಪೂರ್ಣವಾಗಿ ಹಾಗೂ ವಿಶಿಷ್ಟವಾಗಿ ಮಾರ್ಕ್ಸ್‌ರವರದೇ ಆಗಿದೆ.*

ನಾನಾಗಲೇ ಇದನ್ನು ಅನೇಕ ಬಾರಿ ಹೇಳಿದ್ದೇನೆ; ಆದರೆ ಸ್ಪಷ್ಟವಾಗಿ ಈಗ ಇದು "ಪ್ರಣಾಳಿಕೆ"ಯ ಮುನ್ನುಡಿಯಲ್ಲೇ ಇರುವುದೂ ಅವಶ್ಯವಾಗಿದೆ.

ಎಫ್. ಎಂಗೆಲ್ಸ್

ಲಂಡನ್, ಜೂನ್ 28, 1883

---

*ಇಂಗ್ಲಿಷ್ ಭಾಷಾಂತರದ ಮುನ್ನುಡಿಯಲ್ಲಿ ನಾನು ಹೀಗೆ ಬರೆದಿದ್ದೇನೆ: "ಡಾರ್ವಿನ್ ಸಿದ್ಧಾಂತ'ವು ಜೀವವಿಜ್ಞಾನಕ್ಕೆ ಎಷ್ಟು ಮಹತ್ವಪೂರ್ಣವಾದುದೋ, ಈ ಪ್ರತಿಪಾದನೆಯು, ನನ್ನ ಅಭಿಪ್ರಾಯದಲ್ಲಿ, ಇತಿಹಾಸಕ್ಕೆ ಅಷ್ಟೇ ಮಹತ್ವಪೂರ್ಣವಾದುದು. 1845ಕ್ಕೆ ಮುನ್ನ ಕೆಲ ವರ್ಷಗಳಿಂದ ನಾವಿಬ್ಬರೂ ಬೇರೆ ಬೇರೆಯಾಗಿಯೇ ಇದೇ ವಿಚಾರದತ್ತ ಕ್ರಮಕ್ರಮವಾಗಿ ಸರಿಯುತ್ತಿದ್ದೆವು. "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ" ಎಂಬ ನನ್ನ ಕೃತಿಯು, ನಾನು ಎಷ್ಟರಮಟ್ಟಿಗೆ ಸ್ವತಂತ್ರವಾಗಿ ಆ ವಿಚಾರದತ್ತ ಸರಿದಿದ್ದೆ ಎಂಬುದನ್ನು ಅತ್ಯುತ್ತಮವಾಗಿ ತೋರಿಸಿಕೊಡುತ್ತದೆ. ಆದರೆ ನಾನು ಮತ್ತೆ ಮಾರ್ಕ್ಸ್‌ರವರನ್ನು 1845ರ ವಸಂತದಲ್ಲಿ ಬ್ರಸ್ಸೆಲ್ಸ್‌ನಲ್ಲಿ ಸಂಧಿಸಿದಾಗ, ಅವರಾಗಲೇ ಸಿದ್ಧಗೊಳಿಸಿ ತಂದಿದ್ದ ಆ ಪ್ರತಿಪಾದನೆಯನ್ನು ನನ್ನ ಮುಂದಿಟ್ಟರು. ಅದನ್ನವರು ನಾನಿಲ್ಲಿ ಹೇಳಿರುವಷ್ಟೇ ಸ್ಪಷ್ಟವಾದ ಮಾತುಗಳಲ್ಲಿ ನಿರೂಪಿಸಿದ್ದರು." (1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್‌ರು ಬರೆದಿರುವ ಟಿಪ್ಪಣಿ.)



Manifest

der

Kommunistischen Partei.

Veroffentlicht im Februar 1848.

Proletarier aller Länder vereinigt euch.

London.

Gedruckt in der Office der „Bildungs-Gesellschaft für Arbeiter"
von J. E. Burghard
46, Liverpool Street, Bishopsgate

“ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ”ಯ ಪ್ರಥಮ ಆವೃತ್ತಿಯ ಹೊರಕವಚ.

# 1888ರ ಇಂಗ್ಲಿಷ್ ಆವೃತ್ತಿಗೆ ಮುನ್ನುಡಿ

ಈ "ಪ್ರಣಾಳಿಕೆ"ಯು ಕಾರ್ಮಿಕ ಜನರ ಸಂಸ್ಥೆಯಾದ "ಕಮ್ಯೂನಿಸ್ಟ್ ಲೀಗ್"ನ ಕಾರ್ಯಕ್ರಮವಾಗಿ ಪ್ರಕಟವಾಯಿತು. ಮೊದಲು ಕೇವಲ ಜರ್ಮನ್ ಕಾರ್ಮಿಕರಿಗಷ್ಟೆ ಸೀಮಿತವಾಗಿದ್ದ ಕಮ್ಯೂನಿಸ್ಟ್ ಲೀಗ್ ಅನಂತರ ಅಂತರರಾಷ್ಟ್ರೀಯವಾಯಿತು. 1848ಕ್ಕೆ ಮುನ್ನ ಯೂರೋಪು ಖಂಡದಲ್ಲಿದ್ದ ರಾಜಕೀಯ ಪರಿಸ್ಥಿತಿಯಿಂದಾಗಿ ಅದು ಅನಿವಾರ್ಯವಾಗಿಯೇ ಗುಪ್ತ ಸಂಘಟನೆಯಾಗಿ ಕೆಲಸ ಮಾಡುತ್ತಿದ್ದಿತು. 1847ರ ನವಂಬರ್‌ನಲ್ಲಿ ಲಂಡನ್ನಿನಲ್ಲಿ ಜರುಗಿದ ಲೀಗ್‌ನ ಮಹಾಧಿವೇಶನದಲ್ಲಿ ಸಂಪೂರ್ಣವಾದ ಸೈದ್ಧಾಂತಿಕ ಹಾಗೂ ವ್ಯಾವಹಾರಿಕ ಪಾರ್ಟಿ ಕಾರ್ಯಕ್ರಮವೊಂದನ್ನು ಪ್ರಕಟಣೆಗೆ ಸಿದ್ಧಗೊಳಿಸುವ ಕಾರ್ಯವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರಿಗೆ ವಹಿಸಿಕೊಡಲಾಯಿತು. 1848ರ ಜನವರಿಯಲ್ಲಿ ಜರ್ಮನ್ ಭಾಷೆಯಲ್ಲಿ ರಚಿಸಲಾದ ಈ ಕಾರ್ಯಕ್ರಮದ ಹಸ್ತಪ್ರತಿಯನ್ನು ಫೆಬ್ರುವರಿ 24ರ ಫ್ರೆಂಚ್ ಕ್ರಾಂತಿ[8]ಗೆ ಕೆಲವು ವಾರಗಳ ಮುನ್ನ ಲಂಡನ್ನಿನ ಮುದ್ರಣಕಾರರೊಬ್ಬರಿಗೆ ಕಳುಹಿಸಿಕೊಡಲಾಯಿತು. ಇದರ ಫ್ರೆಂಚ್ ಭಾಷಾಂತರವನ್ನು ಪ್ಯಾರಿಸ್ಸಿನಲ್ಲಿ 1848ರ ಜೂನ್ ಬಂಡಾಯಕ್ಕೆ ಸ್ವಲ್ಪ ಮುನ್ನ ಹೊರತರಲಾಯಿತು. ಇದರ ಮೊದಲ ಇಂಗ್ಲಿಷ್ ಭಾಷಾಂತರ – ಮಿಸ್ ಹೆಲೆನ್ ಮಕ್‌ಫರ್‌ಲೇನ್‌ರು ಮಾಡಿದ ಭಾಷಾಂತರ – 1850ರಲ್ಲಿ ಲಂಡನ್ನಿನಲ್ಲಿ ಜಾರ್ಜ್ ಜೂಲಿಯನ್ ಹಾರ್ನಿಯವರ *Red Republican* ನಲ್ಲಿ ಕಾಣಿಸಿಕೊಂಡಿತು. ಆ ಹೊತ್ತಿಗೆ ಡೇನಿಷ್ ಹಾಗೂ ಪೋಲಿಷ್ ಆವೃತ್ತಿಗಳೂ ಪ್ರಕಟವಾಗಿದ್ದವು.

ಶ್ರಮಜೀವಿಗಳ ಮತ್ತು ಬೂರ್ಷ್ವಾಗಳ ನಡುವಿನ ಮೊದಲ ಮಹಾ ಹೋರಾಟವಾದ 1848ರ ಜೂನ್ ತಿಂಗಳಿನ ಪ್ಯಾರಿಸ್ ಬಂಡಾಯವು ಪರಾಭವಗೊಂಡುದು ಯೂರೋಪಿನ ಕಾರ್ಮಿಕ ವರ್ಗದ ಸಾಮಾಜಿಕ ಹಾಗೂ ರಾಜಕೀಯ

ಆಶೋತ್ತರಗಳನ್ನು ಸ್ವಲ್ಪ ಕಾಲದವರೆಗೆ ಹಿನ್ನೆಲೆಗೆ ತಳ್ಳಿತು. ಅಲ್ಲಿಂದಾಚೆಗೆ ಫೆಬ್ರವರಿ ಕ್ರಾಂತಿಗೆ ಮುನ್ನ ಇದ್ದಂತೆಯೇ ಆಸ್ತಿಯುಳ್ಳ ವರ್ಗದ ವಿವಿಧ ವಿಭಾಗಗಳು ತಮ್ಮ ತಮ್ಮಲ್ಲೇ ಅಗ್ರಸ್ಥಾನಕ್ಕಾಗಿ ಹೋರಾಟ ನಡೆಸತೊಡಗಿದವು; ಕಾರ್ಮಿಕ ವರ್ಗವು ರಾಜಕೀಯ ರಂಗದಲ್ಲಿ ತನಗೆ ಸ್ವಂತ ಸ್ಥಾನವೊಂದನ್ನು ದೊರಕಿಸಿಕೊಳ್ಳಲೂ ಹೋರಾಟ ನಡೆಸಬೇಕಾದ ಪರಿಸ್ಥಿತಿಗೆ, ಬೂರ್ಷ್ವಾ ವರ್ಗದ ತೀವ್ರವಾದಿಗಳ ಉಗ್ರ ಪಂಥವಾಗುವ ಪರಿಸ್ಥಿತಿಗೆ, ಇಳಿಯಿತು. ಸ್ವತಂತ್ರ ಶ್ರಮಜೀವಿ ಚಳವಳಿಗಳು ಎಲ್ಲೆಲ್ಲಿ ಜೀವಂತವಾಗಿರುವ ಲಕ್ಷಣಗಳು ತೋರಿಬಂದವೋ ಅಲ್ಲೆಲ್ಲ ಅವನ್ನು ನಿಷ್ಕರುಣೆಯಿಂದ ಹತ್ತಿಕ್ಕಲಾಯಿತು. ಪ್ರಷ್ಯನ್ ಪೊಲೀಸರು ಆಗ ಕೊಲೋನ್‌ನಲ್ಲಿ ಸ್ಥಾಪಿತವಾಗಿದ್ದ ಕಮ್ಯೂನಿಸ್ಟ್ ಲೀಗ್‌ನ ಕೇಂದ್ರ ಮಂಡಳಿಯ ಮೇಲೆ ದಾಳಿ ಮಾಡಿದರು. ಮಂಡಳಿಯ ಸದಸ್ಯರನ್ನು ದಸ್ತಗಿರಿ ಮಾಡಿ ಹದಿನೆಂಟು ತಿಂಗಳುಗಳ ಸೆರೆಮನೆ ವಾಸದ ನಂತರ ಅವರನ್ನು 1852ರ ಅಕ್ಟೋಬರ್ ತಿಂಗಳಿನಲ್ಲಿ ವಿಚಾರಣೆಗೆ ಗುರಿಪಡಿಸಿದರು. "ಕೊಲೋನ್ ಕಮ್ಯೂನಿಸ್ಟ್ ವಿಚಾರಣೆ" ಎಂದು ಖ್ಯಾತಿ ಗಳಿಸಿದ ಈ ವಿಚಾರಣೆ ಅಕ್ಟೋಬರ್ 4ರಿಂದ ಹಿಡಿದು ನವಂಬರ್ 12ರವರೆಗೆ ಜರುಗಿತು. ಈ ಬಂದಿಗಳಲ್ಲಿ ಏಳು ಮಂದಿಯನ್ನು ಮೂರರಿಂದ ಆರು ವರ್ಷಗಳವರೆಗಿನ ವಿವಿಧ ಅವಧಿಯ ಶಿಕ್ಷೆಗೊಳಪಡಿಸಿ ಕೋಟೆಯೊಂದರಲ್ಲಿ ಬಂಧಿಸಿ ಇರಿಸಲಾಯಿತು. ಈ ಶಿಕ್ಷೆ ಪ್ರಕಟವಾದ ಕೂಡಲೇ ಉಳಿದ ಸದಸ್ಯರು ಲೀಗನ್ನು ಅಧಿಕೃತವಾಗಿ ವಿಸರ್ಜಿಸಿದರು. "ಪ್ರಣಾಳಿಕೆ"ಯ ಬಗೆಗೆ ಹೇಳುವುದಾದರೆ, ಅದು ಅಲ್ಲಿಂದಾಚೆಗ ವಿಸ್ಮೃತಿಯ ದುರ್ಗತಿಗೆ ಈಡಾಗುವುದೆಂದು ಕಂಡುಬಂದಿತು.

ಯೂರೋಪಿನ ಕಾರ್ಮಿಕ ವರ್ಗವು ಆಳುವ ವರ್ಗಗಳ ಮೇಲೆ ಮತ್ತೊಂದು ದಾಳಿ ಮಾಡಲು ಸಾಕಷ್ಟು ಶಕ್ತಿಯನ್ನು ಪುನಃ ಗಳಿಸಿಕೊಂಡಾಗ, ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್ (ಅಂತರರಾಷ್ಟ್ರೀಯ ಕಾರ್ಮಿಕ ಜನತೆಯ ಸಂಸ್ಥೆ) ಹುಟ್ಟಿಕೊಂಡಿತು. ಯೂರೋಪು ಅಮೆರಿಕಗಳ ಎಲ್ಲ ಸಮರಶೀಲ ಶ್ರಮಜೀವಿಗಳನ್ನೂ ಒಂದೇ ಸಂಘಟನೆಯಲ್ಲಿ ಬೆಸೆಯುವ ಸ್ಪಷ್ಟ ಗುರಿಯಿಂದ ರೂಪಿತವಾದ ಈ ಸಂಸ್ಥೆಗೆ "ಪ್ರಣಾಳಿಕೆ"ಯಲ್ಲಿ ಹಾಕಿಕೊಟ್ಟಿದ್ದ ಸೂತ್ರಗಳನ್ನು ಕೂಡಲೇ ಘೋಷಿಸಲು ಸಾಧ್ಯವಾಗಲಿಲ್ಲ. ಈ "ಇಂಟರ್‌ನ್ಯಾಷನಲ್" ಸಂಸ್ಥೆಯು ಇಂಗ್ಲಿಷ್ ಟ್ರೇಡ್‌ಯೂನಿಯನ್‌ಗಳಿಗೂ, ಫ್ರಾನ್ಸ್, ಬೆಲ್ಜಿಯಂ, ಇಟಲಿ ಹಾಗೂ ಸ್ಪೈನ್‌ಗಳಲ್ಲಿನ ಪ್ರುದೋನ್[9]ರ ಅನುಯಾಯಿಗಳಿಗೂ ಜರ್ಮನಿಯಲ್ಲಿನ ಲಸ್ಸಾಲಿಯನ್[10]ರಿಗೂ* ಒಪ್ಪಿಗೆಯಾಗುವಂಥ ಸಾಕಷ್ಟು ವಿಶಾಲವಾದ ಕಾರ್ಯಕ್ರಮ

*ವ್ಯಕ್ತಿಶಃ ಲಸ್ಸಾಲ್ ನಮ್ಮ ಮುಂದೆ ತಾವು ಮಾರ್ಕ್ಸ್‌ರ "ಶಿಷ್ಯ"ರೆಂದೇ,

ವನ್ನಷ್ಟೆ ಹಾಕಿಕೊಳ್ಳಬೇಕಿದ್ದಿತು. ಎಲ್ಲ ಪಕ್ಷಗಳಿಗೂ ತೃಪ್ತಿಯಾಗುವಂಥ ಅಂತಹ ಒಂದು ಕಾರ್ಯಕ್ರಮವನ್ನು ಮಾರ್ಕ್ಸ್‌ರವರು ರಚಿಸಿದರು. ಪರಸ್ಪರ ಚರ್ಚೆ ಸಂಯುಕ್ತ ಚಟುವಟಿಕೆಗಳಿಂದ ಫಲಿಸಲು ಖಂಡಿತವಿದ್ದ ಕಾರ್ಮಿಕ ವರ್ಗದ ಬೌದ್ಧಿಕ ಬೆಳವಣಿಗೆಯಲ್ಲಿ ಅವರು ಪೂರ್ಣವಾಗಿ ವಿಶ್ವಾಸವಿರಿಸಿದ್ದರು. ಬಂಡವಾಳದ ವಿರುದ್ಧ ಹೋರಾಟದಲ್ಲಿನ ಘಟನೆಗಳು ಮತ್ತು ವ್ಯತ್ಯಯಗಳು, ಗೆಲುವುಗಳಿಗಿಂತ ಹೆಚ್ಚಾಗಿ ಸೋಲುಗಳು, ಜನರ ಮನಸ್ಸಿನಲ್ಲಿ ಅವರ ನೆಚ್ಚಿನ ನಾನಾ ಯುಕ್ತಿ ಯೋಜನೆಗಳೆಲ್ಲ ಅಸಮರ್ಪಕವೆಂಬ ವಿಚಾರವನ್ನು ಮೂಡಿಸದೆ ಇರದಾದವು. ಕಾರ್ಮಿಕ ವರ್ಗದ ವಿಮೋಚನೆಗೆ ನಿಜವಾದ ಪರಿಸ್ಥಿತಿಗಳ ಇನ್ನೂ ಹೆಚ್ಚು ಪೂರ್ಣ ಒಳನೋಟ ಪಡೆದುಕೊಳ್ಳಲು ಅವು ಮಾರ್ಗ ಸಿದ್ಧಪಡಿಸಿಕೊಡುವುದು ಅನಿವಾರ್ಯವಾಗಿದ್ದಿತು. ಮಾರ್ಕ್ಸ್‌ರವರ ವಿಚಾರ ಸರಿಯಾಗಿದ್ದಿತು. 1874ರಲ್ಲಿ "ಇಂಟರ್‌ನ್ಯಾಷನಲ್" ಒಡೆದಾಗ ಕಾರ್ಮಿಕರು 1864ರಲ್ಲಿ ಅದು ಸ್ಥಾಪಿತವಾದಾಗ ಇದ್ದುದಕ್ಕಿಂತ ತೀರ ಭಿನ್ನವೇ ಆದ ಜನರಾಗಿದ್ದರು. ಫ್ರಾನ್ಸ್‌ನಲ್ಲಿ ಪ್ರುದೋನ್‌ವಾದವೂ ಜರ್ಮನಿಯಲ್ಲಿ ಲಸ್ಸಾಲಿಯನ್‌ವಾದವೂ ಕೊನೆಗಾಣುತ್ತಿದ್ದವು. ಇಂಗ್ಲೆಂಡಿನ ಕನ್‌ಸರ್ವಟೀವ್ (ಸಂಪ್ರದಾಯಶರಣ) ಟ್ರೇಡ್‌ಯೂನಿಯನ್‌ಗಳೂ — ಅವುಗಳಲ್ಲಿ ಅನೇಕವು ಬಹು ಕಾಲದ ಹಿಂದೆಯೇ ಇಂಟರ್‌ನ್ಯಾಷನಲ್‌ನ ಸಂಬಂಧ ಕಡಿದುಕೊಂಡಿದ್ದರೂ — ಕ್ರಮಕ್ರಮವಾಗಿ ಎಂಥ ಸ್ಥಿತಿಯತ್ತ ಮುಂದುವರೆಯುತ್ತಿದ್ದವೆಂದರೆ ಕಳೆದ ವರ್ಷ ಸ್ವಾನ್‌ಸೀಯಲ್ಲಿ ಅವುಗಳ ಅಧ್ಯಕ್ಷರು* ಅವುಗಳ ಪರವಾಗಿ "ಯೂರೋಪಿಯನ್ ಸಮಾಜವಾದವು ನಮಗೆ ಎಷ್ಟು ಮಾತ್ರವೂ ಭೀತಿಕಾರಕವಲ್ಲ" ಎಂದು ಹೇಳುವಂತಾಗಿದ್ದರು. ವಾಸ್ತವವಾಗಿ "ಪ್ರಣಾಳಿಕೆ"ಯ ಸೂತ್ರಗಳು ಎಲ್ಲ ದೇಶಗಳ ದುಡಿಯುವ ಜನರ ಮಧ್ಯೆಯೂ ಗಣನೀಯ ಮನ್ನಣೆ ಗಳಿಸಿದ್ದವು.

ಹೀಗೆ "ಪ್ರಣಾಳಿಕೆ" ಮತ್ತೆ ಮುಂದೆ ಬಂದಿತು. 1850ರಿಂದ ಜರ್ಮನ್ ಪಾಠವೇ ಹಲವಾರು ಬಾರಿ ಸ್ವಿಟ್ಸರ್‌ಲೆಂಡ್, ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಪುನರ್‌ಮುದ್ರಿಸಲ್ಪಟ್ಟಿತು. 1872ರಲ್ಲಿ ಅದನ್ನು ಇಂಗ್ಲಿಷಿಗೆ

---

ಅಂತೆಯೇ "ಪ್ರಣಾಳಿಕೆ"ಯ ಪರವಾಗಿಯೇ ಇದ್ದಾರೆಂದೇ ಒಪ್ಪಿಕೊಳ್ಳುತ್ತಿದ್ದರು. ಆದರೆ ಅವರು 1862-1864ರಲ್ಲಿ ನಡೆಸಿದ ತಮ್ಮ ಸಾರ್ವಜನಿಕ ಪ್ರಕ್ಷೋಭೆಯಲ್ಲಿ, ರಾಜ್ಯ ಸಾಲದ ಬೆಂಬಲವುಳ್ಳ ಸಹಕಾರೀ "ವರ್ಕ್‌ಷಾಪ್"ಗಳು ಸ್ಥಾಪಿತವಾಗಬೇಕು ಎಂಬುದಕ್ಕೂ ಮೀರಿದ ಬೇಡಿಕೆಗಳನ್ನು ಮಂಡಿಸುವ ಗೋಜಿಗೆ ಹೋಗಲಿಲ್ಲ (ಎಂಗೆಲ್ಸ್‌ರ ಟಿಪ್ಪಣಿ).

*ವಿ. ಬೀವೆನ್. — ಸಂ.

ನ್ಯೂಯಾರ್ಕ್‌ನಲ್ಲಿ ಭಾಷಾಂತರಿಸಲಾಯಿತು. ಅದನ್ನು *Woodhull and Claflin's Weekly* ("ವುಡೆಹಲ್ ಮತ್ತು ಕ್ಲಾಫ್ಲಿನ್‌ರ ವಾರಪತ್ರಿಕೆ")ಯಲ್ಲಿ ಪ್ರಕಟಿಸಲಾಯಿತು. ಈ ಇಂಗ್ಲಿಷ್ ಭಾಷಾಂತರದಿಂದ ಫ್ರೆಂಚ್ ಅನುವಾದವನ್ನು ಸಿದ್ಧಗೊಳಿಸಿ ನ್ಯೂಯಾರ್ಕ್‌ನ *Le Socialiste* ("ಸೊಸ್ಯಲಿಸ್ಟ್") ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. ಅಂದಿನಿಂದ ಕನಿಷ್ಠಪಕ್ಷ ಇನ್ನೆರಡು ಇಂಗ್ಲಿಷ್ ಅನುವಾದಗಳು, ಸ್ವಲ್ಪ ಹೆಚ್ಚುಕಮ್ಮಿ ವಿರೂಪಗಳೊಂದಿಗೆ ಅಮೆರಿಕದಲ್ಲಿ ಪ್ರಕಟವಾಗಿವೆ. ಅವುಗಳಲ್ಲೊಂದು ಇಂಗ್ಲೆಂಡಿನಲ್ಲೂ ಪುನರ್‌ಮುದ್ರಿತವಾಗಿದೆ. ಬಕೂನಿನ್‌ರು ಮಾಡಿದ ಮೊದಲ ರಶಿಯನ್ ಭಾಷಾಂತರ ಜಿನೀವಾದಲ್ಲಿ ಸುಮಾರು 1863ರಲ್ಲಿ ಹೆರ್ಟ್ಸೆನ್‌ರ "ಕೋಲೊಕೊಲ್" ಮುದ್ರಣಾಲಯದಲ್ಲಿ ಪ್ರಕಟವಾಯಿತು; ಎರಡನೆಯದು, ವೀರಾಗ್ರಣಿ ವೇರ ಸಸೂಲಿಚ್* ಭಾಷಾಂತರಿಸಿದುದು, 1882ರಲ್ಲಿ ಜಿನೀವಾದಲ್ಲೇ ಪ್ರಕಟವಾಯಿತು. ಒಂದು ಹೊಸ ಡೇನಿಷ್ ಆವೃತ್ತಿಯನ್ನು *Socialdemokratisk Bibliothek* ("ಸೋತ್ಸಿಯಲ್ ಡೆಮೊಕ್ರಾಟಿಸ್ಕ್ ಬಿಬ್ಲಿಯೋಥೇಕ್") ಕೊಪೆನ್‌ಹೇಗೆನ್, 1885ರಲ್ಲಿ ಮುದ್ರಿಸಲಾಯಿತು. 1886ರಲ್ಲಿ ಪ್ಯಾರಿಸ್ಸಿನಲ್ಲಿ *Le Socialiste* ("ಸೊಸ್ಯಲಿಸ್ಟ್") ಒಂದು ಹೊಸ ಫ್ರೆಂಚ್ ಅನುವಾದವನ್ನು ಪ್ರಕಟಿಸಿತು. ಈ ಕೊನೆಯದರಿಂದಲೇ ಒಂದು ಸ್ಪಾನಿಷ್ ಅನುವಾದವನ್ನು ಸಿದ್ಧಗೊಳಿಸಿ 1886ರಲ್ಲಿ ಮಾಡ್ರಿಡ್‌ನಲ್ಲಿ ಪ್ರಕಟಿಸಲಾಯಿತು. ಜರ್ಮನ್ ಪುನರ್‌ಮುದ್ರಣಗಳನ್ನಂತೂ ಎಣಿಸಲೇಬೇಕಾಗಿಲ್ಲ; ಕೊನೆಯ ಪಕ್ಷ ಒಟ್ಟು ಹನ್ನೆರಡು ಪುನರ್‌ಮುದ್ರಣಗಳಾದರೂ ಇವೆ. ಆರ್ಮೀನಿಯನ್ ಭಾಷಾಂತರವೊಂದು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಕೆಲವು ತಿಂಗಳುಗಳ ಹಿಂದೆ ಪ್ರಕಟವಾಗಬೇಕಿದ್ದಿತು. ಆದರೆ ಅದು ಪ್ರಕಟವಾಗಲಿಲ್ಲ, ಏಕೆಂದರೆ ಪ್ರಕಾಶಕನು ಮಾರ್ಕ್ಸ್‌ರವರ ಹೆಸರಿರುವ ಪುಸ್ತಕವನ್ನು ಹೊರತರಲು ಹೆದರಿದನು ಮತ್ತು ಭಾಷಾಂತರಕಾರನು ಅದು ತನ್ನ ಕೃತಿ ಎಂದು ಹೇಳಿಕೊಳ್ಳಲು ನಿರಾಕರಿಸಿದನು ಎಂದು ನನಗೆ ತಿಳಿದುಬಂದಿದೆ. "ಪ್ರಣಾಳಿಕೆ" ಇನ್ನೂ ಇತರ ಅನೇಕ ಭಾಷೆಗಳಿಗೆ ಅನುವಾದಗೊಂಡಿರುವ ಸಂಗತಿಯನ್ನು ನಾನು ಕೇಳಿ ತಿಳಿದಿದ್ದೇನೆ, ಆದರೆ ಆ ಅನುವಾದಗಳನ್ನು ನಾನು ಕಂಡಿಲ್ಲ. ಹೀಗೆ "ಪ್ರಣಾಳಿಕೆ"ಯ ಇತಿಹಾಸವು ತುಂಬ ಮಟ್ಟಿಗೆ ಆಧುನಿಕ

---

*ಅನಂತರ ಎಂಗೆಲ್ಸ್‌ರವರೇ "ರಶಿಯದಲ್ಲಿ ಸಾಮಾಜಿಕ ಸಂಬಂಧಗಳು" ಎಂಬ ಲೇಖನಕ್ಕೆ ಬರೆದ ಹಿನ್ನುಡಿಯಲ್ಲಿ ಈ ಭಾಷಾಂತರದ ನಿಜವಾದ ಅನುವಾದಕರು ಜಿ. ವಿ. ಪ್ಲೆಹಾನೊವ್ ಎಂದು ಸರಿಯಾಗಿಯೇ ತಿಳಿಸಿದರು. ಈ ಲೇಖನ 1894ರಲ್ಲಿ ಬರ್ಲಿನ್‌ನಲ್ಲಿ "ಇಂಟರ್‌ನಾತ್ಸಿಯೊನಾಲೆಸ್ ಔಸ್ ದೇಮ್ ಫೋಲ್ಕ್‌ಸ್ಟ್ಯಾಟ್" (1871-1875)ನಲ್ಲಿ ಪ್ರಕಟವಾಯಿತು. — ಸಂ.

ಕಾರ್ಮಿಕ ವರ್ಗ ಚಳವಳಿಯ ಇತಿಹಾಸವನ್ನೇ ಪ್ರತಿಬಿಂಬಿಸುತ್ತದೆ; ಪ್ರಸ್ತುತ ದಲ್ಲಿ ಇದು ನಿಸ್ಸಂಶಯವಾಗಿಯೂ ಅತ್ಯಂತ ವಿಸ್ತೃತ ಪ್ರಸಾರವುಳ್ಳ, ಸಮಾಜ ವಾದೀ ಸಾಹಿತ್ಯದಲ್ಲೆಲ್ಲ ಅತ್ಯಂತ ಅಂತರರಾಷ್ಟ್ರೀಯವಾದ ಕೃತಿಯಾಗಿದೆ, ಸೈಬೀ ರಿಯದಿಂದ ಕಾಲಿಫೋರ್ನಿಯವರೆಗೆ ಕೋಟ್ಯಾಂತರ ಕಾರ್ಮಿಕ ಜನರು ಒಪ್ಪಿ ಕೊಂಡಿರುವ ಎಲ್ಲರಿಗೂ ಸೇರಿದ ಕಾರ್ಯಕ್ರಮವಾಗಿದೆ.

ಆದರೂ, ಅದನ್ನು ರಚಿಸಿದಾಗ ನಾವು ಅದನ್ನು ಸಮಾಜವಾದೀ ಪ್ರಣಾಳಿಕೆ ಎಂದು ಕರೆಯಲಾಗಲಿಲ್ಲ. 1847ರಲ್ಲಿ ಎರಡು ರೀತಿಯ ಜನರನ್ನು ಸಮಾಜವಾದಿ ಗಳೆಂದು ಪರಿಗಣಿಸಲಾಗುತ್ತಿದ್ದಿತು. ಒಂದು ಕಡೆ ನಾನಾ ಅಸಾಧ್ಯಾದರ್ಶ ಸಮಾಜ ವ್ಯವಸ್ಥೆಗಳ ಅನುಯಾಯಿಗಳು, ಅದರಲ್ಲೂ ಇಂಗ್ಲೆಂಡಿನಲ್ಲಿ ಓವೆನ್‌ವಾದಿಗಳು,[11] ಫ್ರಾನ್ಸಿನಲ್ಲಿ ಫೂರಿಯೇವಾದಿಗಳು[12] ಇದ್ದರು. ಇವರಿಬ್ಬರೂ ಆಗಲೇ ಸಣ್ಣ ಸಣ್ಣ ತಂಡಗಳಾಗಿ ಕ್ಷಯಿಸಿ ಕ್ರಮೇಣ ಅಳಿಗಾಲ ಸಮೀಪಿಸುತ್ತಿದ್ದರು. ಮತ್ತೊಂದು ಕಡೆ ಅನೇಕಾನೇಕ ರೀತಿಯ ಸಾಮಾಜಿಕ ಹುಸಿ ವೈದ್ಯರಿದ್ದರು. ಅವರು ಬಂಡವಾ ಳಕ್ಕೂ ಲಾಭಕ್ಕೂ ಸ್ವಲ್ಪ ಮಟ್ಟಿಗೂ ಹಾನಿಯಾಗದಂತೆ ಎಲ್ಲ ರೀತಿಯ ಸಾಮಾ ಜಿಕ ಕುಂದು ಕೊರತೆಗಳನ್ನೂ ತಮ್ಮ ನಾನಾ ಸಾರ್ವತ್ರಿಕ ಸಿದ್ಧೌಷಧಗಳಿಂದಲೂ ನಾನಾ ರೀತಿಯ 'ರಿಪೇರಿ' ಕಾರ್ಯದಿಂದಲೂ ತೊಡೆದು ಹಾಕಬಯಸಿದ್ದರು. ಈ ಎರಡು ಪ್ರಸಂಗಗಳಲ್ಲೂ ಈ ಜನ ಕಾರ್ಮಿಕ ವರ್ಗದ ಚಳವಳಿಯ ಹೊರಗೆ ನಿಂತು ಬೆಂಬಲಕ್ಕಾಗಿ "ಸುಶಿಕ್ಷಿತ" ವರ್ಗಗಳ ಕಡೆಗೇ ನೋಡುತ್ತಿದ್ದರು. ಆದರೆ ಕೇವಲ ರಾಜಕೀಯ ಕ್ರಾಂತಿಗಳು ಸಾಲವೆಂದು ಮನಗಂಡು ಸಂಪೂರ್ಣವಾದ ಸಾಮಾಜಿಕ ಪರಿವರ್ತನೆ ಅವಶ್ಯವೆಂದು ಘೋಷಿಸಿದ್ದ ಕಾರ್ಮಿಕ ವರ್ಗದ ಒಂದು ವಿಭಾಗವು ತನ್ನನ್ನು ತಾನೇ ಆಗಲೇ 'ಕಮ್ಯೂನಿಸ್ಟ್' ಎಂದು ಕರೆದುಕೊಂಡಿತ್ತು. ಆದರೂ ಅದು ಅಡ್ಡಾದಿಡ್ಡಿಯಾಗಿ ನಿರ್ಮಿಸಿದ, ಕೇವಲ ಸಹಜಪ್ರವೃತ್ತಿಯ ಒಂದು ಮಾದರಿಯ ಅಪಕ್ವವಾದ ಕಮ್ಯೂನಿಸಂ ಆಗಿದ್ದಿತು; ಆದಾಗ್ಯೂ ಅದು ಪ್ರಧಾನ ಪ್ರಶ್ನೆಯನ್ನು ಪರಿಶೀಲಿಸಿದ್ದಿತು, ಕಾರ್ಮಿಕ ವರ್ಗದ ಮಧ್ಯೆ ಸಾಕಷ್ಟು ಪ್ರಭಾವಶಾಲಿಯಾಗಿದ್ದಿತು. ಫ್ರಾನ್ಸಿನಲ್ಲಿ ಕಾಬೇಯವರ, ಜರ್ಮನಿಯಲ್ಲಿ ವೈಟ್ಲಿಂಗ್ ರವರ[13] ಅಸಾಧ್ಯಾದರ್ಶ ಕಮ್ಯೂನಿಸಂಅನ್ನು ನಿರ್ಮಿಸುವಷ್ಟು ಶಕ್ತಿಯುತವಾ ಗಿದ್ದಿತು. ಹೀಗೆ 1847ರಲ್ಲಿ ಸಮಾಜವಾದವು ಬೂರ್ಷ್ವಾ ಚಳವಳಿಯಾಗಿಯೂ, ಕಮ್ಯೂನಿಸಂ ಕಾರ್ಮಿಕ ವರ್ಗದ ಚಳವಳಿಯಾಗಿಯೂ ಪರಿಗಣಿಸಲ್ಪಟ್ಟಿದ್ದವು. ಸಮಾಜವಾದವು ಕೊನೆಯ ಪಕ್ಷ ಯೂರೋಪಿನಲ್ಲಿ 'ಗೌರವಾರ್ಹ'ವಾಗಿದ್ದಿತು; ಕಮ್ಯೂನಿಸಂನ ಸ್ಥಿತಿ ಅದಕ್ಕೆ ತೀರ ವಿರುದ್ಧವಾಗಿದ್ದಿತು. "ಕಾರ್ಮಿಕ ವರ್ಗದ ವಿಮೋಚನೆಯು ಕಾರ್ಮಿಕ ವರ್ಗದ ಕೃತಿಯೇ ಆಗಿರಬೇಕು" ಎಂಬುದು ಆರಂಭ ದಿಂದಲೂ ನಮ್ಮ ಭಾವನೆಯಾಗಿದ್ದುದರಿಂದ ಈ ಎರಡು ಹೆಸರುಗಳಲ್ಲಿ ನಾವು

ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗೆಗೆ ನಮಗೆ ಯಾವ ಅನುಮಾನವೂ ಇರಲು ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲ ಅಂದಿನಿಂದ ನಾವು ಅದನ್ನು ಯಾವತ್ತೂ ನಿರಾಕರಿಸುವ ಗೋಜಿಗೂ ಹೋಗಿಲ್ಲ.

ಈ "ಪ್ರಣಾಳಿಕೆ"ಯು ನಮ್ಮ ಸಂಯುಕ್ತ ಕೃತಿಯಾಗಿದ್ದರೂ, ಇದರ ಅತ್ಯಂತ ಪ್ರಮುಖವಾಗಿರುವ ಮೂಲಭೂತ ಪ್ರತಿಪಾದನೆಯು ಮಾರ್ಕ್ಸ್‌ರವರಿಗೇ ಸೇರಿದುದೆಂದು ಹೇಳುವುದು ನನ್ನ ಕರ್ತವ್ಯವೆಂದು ನಾನು ಪರಿಗಣಿಸುತ್ತೇನೆ. ಆ ಪ್ರತಿಪಾದನೆಯು ಯಾವುದೆಂದರೆ — ಪ್ರತಿಯೊಂದು ಚಾರಿತ್ರಿಕ ಕಾಲಘಟ್ಟದಲ್ಲೂ ಅಸ್ತಿತ್ವದಲ್ಲಿರುವ ಆರ್ಥಿಕ ಉತ್ಪಾದನೆ ಹಾಗೂ ವಿನಿಮಯ ವಿಧಾನವೂ ಮತ್ತು ಅದರಿಂದ ಅವಶ್ಯಕವಾಗಿಯೇ ಉದ್ಭವಿಸುವ ಸಾಮಾಜಿಕ ಸಂಘಟನೆಯೂ ಆ ಕಾಲಘಟ್ಟದ ರಾಜಕೀಯ ಹಾಗೂ ಬೌದ್ಧಿಕ ಇತಿಹಾಸ ನಿರ್ಮಿತವಾಗುವುದಕ್ಕೆ ಆಧಾರ ಸ್ವರೂಪಗಳಾಗಿವೆ ಮತ್ತು ಅವುಗಳಿಂದಷ್ಟೆ ಈ ಇತಿಹಾಸವನ್ನು ವಿವರಿಸಲು ಸಾಧ್ಯ; ತತ್ಫಲವಾಗಿ ಮಾನವಕುಲದ ಇತಿಹಾಸವು (ಭೂಮಿಯ ಸಾಮುದಾಯಿಕ ಒಡೆತನದ ಪ್ರಾಚೀನ ವ್ಯವಸ್ಥೆ ವಿಸರ್ಜನೆಗೊಂಡಂದಿನಿಂದ) ವರ್ಗ ಹೋರಾಟಗಳ ಇತಿಹಾಸವೇ ಆಗಿದೆ, ಶೋಷಕ ಹಾಗೂ ಶೋಷಿತ, ಮರ್ದಕ ಹಾಗೂ ಮರ್ದಿತ ವರ್ಗಗಳ ನಡುವಿನ ಹೋರಾಟಗಳ ಇತಿಹಾಸವಾಗಿದೆ; ಈ ವರ್ಗ ಹೋರಾಟಗಳ ಇತಿಹಾಸವು ವಿಕಾಸಗಳ ಒಂದು ಶ್ರೇಣಿಯಾಗಿದೆ; ಈ ವಿಕಾಸದಲ್ಲಿ ನಾವಿಂದು ಎಂಥ ಘಟ್ಟ ತಲುಪಿದ್ದೇವೆಂದರೆ ಶೋಷಿತ ಹಾಗೂ ಮರ್ದಿತ ವರ್ಗವು – ಶ್ರಮಜೀವಿ ವರ್ಗವು — ಶೋಷಕ ಹಾಗೂ ಮರ್ದಕ ವರ್ಗ — ಬಂಡವಾಳಶಾಹಿ ವರ್ಗದ — ಆಧಿಪತ್ಯದಿಂದ ತನ್ನನ್ನು ತನ್ನ ಮಟ್ಟಿಗಷ್ಟೆ ವಿಮೋಚನೆಗೊಳಿಸಿಕೊಳ್ಳದಾಗಿದೆ; ಅದು ಒಮ್ಮಿಂದೊಮ್ಮೆಗೇ ಮತ್ತು ಶಾಶ್ವತವಾಗಿ ಇಡೀ ಸಮಾಜವನ್ನೇ ಎಲ್ಲ ಶೋಷಣೆ ಮರ್ದನ ವರ್ಗಭೇದ ಹಾಗೂ ವರ್ಗ ಹೋರಾಟಗಳಿಂದ ವಿಮೋಚನೆಗೊಳಿಸದೆ ತನ್ನ ವಿಮೋಚನೆ ಸಾಧಿಸಿಕೊಳ್ಳದಾಗಿದೆ; — ಇದೇ ಆ ಪ್ರತಿಪಾದನೆಯಾಗಿದೆ.

ಡಾರ್ವಿನ್ ಸಿದ್ಧಾಂತ[14]ವು ಜೀವವಿಜ್ಞಾನಕ್ಕೆ ಎಷ್ಟು ಮಹತ್ವಪೂರ್ಣವಾದುದೋ ಈ ಪ್ರತಿಪಾದನೆಯು, ನನ್ನ ಅಭಿಪ್ರಾಯದಲ್ಲಿ, ಇತಿಹಾಸಕ್ಕೆ ಅಷ್ಟೇ ಮಹತ್ವಪೂರ್ಣವಾದುದು. 1845ಕ್ಕೆ ಮುನ್ನ ಕೆಲವು ವರ್ಷಗಳಿಂದ ನಾವಿಬ್ಬರೂ ಬೇರೆ ಬೇರೆಯಾಗಿಯೇ ಇದೇ ವಿಚಾರದತ್ತ ಕ್ರಮಕ್ರಮವಾಗಿ ಸರಿಯುತ್ತಿದ್ದೆವು. "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ"* ಎಂಬ ನನ್ನ ಕೃತಿಯು, ನಾನು

---

*"1844ರಲ್ಲಿ ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ" — ಫ್ರೆಡರಿಕ್ ಎಂಗೆಲ್ಸ್ — ಅನುವಾದ ಫ್ಲಾರೆನ್ಸ್ ಕೆ. ವಿಷ್‌ನೆವೆತ್‌ಸ್ಕಿಯವರಿಂದ, ನ್ಯೂಯಾರ್ಕ್, ಲೊವೆಲ್ — ಲಂಡನ್, ಡಬ್ಲ್ಯು. ರೀವ್ಸ್. 1888 (ಎಂಗೆಲ್ಸ್‌ರ ಟಿಪ್ಪಣಿ).

ಎಷ್ಟರಮಟ್ಟಿಗೆ ಸ್ವತಂತ್ರವಾಗಿ ಆ ವಿಚಾರದತ್ತ ಸರಿದಿದ್ದೆ ಎಂಬುದನ್ನು ಅತ್ಯುತ್ತಮವಾಗಿ ತೋರಿಸಿಕೊಡುತ್ತದೆ. ಆದರೆ ನಾನು ಮತ್ತೆ ಮಾರ್ಕ್ಸ್‌ರವರನ್ನು 1845ರ ವಸಂತದಲ್ಲಿ ಬ್ರುಸ್ಸೆಲ್ಸ್‌ನಲ್ಲಿ ಸಂಧಿಸಿದಾಗ, ಅವರಾಗಲೇ ಸಿದ್ಧಗೊಳಿಸಿ ತಂದಿದ್ದ ಆ ಪ್ರತಿಪಾದನೆಯನ್ನು ನನ್ನ ಮುಂದಿಟ್ಟರು. ಅದನ್ನವರು ನಾನಿಲ್ಲಿ ಹೇಳಿರುವಷ್ಟೇ ಸ್ಪಷ್ಟವಾದ ಮಾತುಗಳಲ್ಲಿ ನಿರೂಪಿಸಿದ್ದರು.

1872ರ ಜರ್ಮನ್ ಆವೃತ್ತಿಗೆ ನಾವು ಬರೆದ ಸಂಯುಕ್ತ ಮುನ್ನುಡಿಯಿಂದ ನಾನು ಈ ಕೆಳಗಿನದನ್ನು ಉದ್ಧರಿಸುತ್ತಿದ್ದೇನೆ:

"ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಸ್ತುಸ್ಥಿತಿಯು ಎಷ್ಟೇ ಬದಲಾಗಿರಬಹುದಾಗಿದ್ದರೂ, ಈ "ಪ್ರಣಾಳಿಕೆ"ಯಲ್ಲಿ ಹಾಕಿಕೊಡಲಾಗಿರುವ ಸಾಮಾನ್ಯ ಸೂತ್ರಗಳು ಒಟ್ಟಿನ ಮೇಲೆ ಹಿಂದೆಂದಿನಂತೆ ಇಂದೂ ಅಷ್ಟೇ ಸೂಕ್ತವಾಗಿವೆ. ಇಲ್ಲಿ ಅಲ್ಲಿ ಕೆಲವು ವಿವರಣೆಗಳನ್ನು ಸರಿಪಡಿಸಬಹುದೇನೋ. "ಪ್ರಣಾಳಿಕೆ"ಯೇ ತಿಳಿಸುವಂತೆ ಈ ಸೂತ್ರಗಳ ಪ್ರಾಯೋಗಿಕ ಅನ್ವಯವು ಎಲ್ಲೆಲ್ಲೂ ಮತ್ತು ಎಲ್ಲ ಕಾಲಗಳಲ್ಲೂ ಆಯಾ ಕಾಲದಲ್ಲಿ ಅಸ್ತಿತ್ವದಲ್ಲಿರಬಹುದಾದ ಚಾರಿತ್ರಿಕ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಆ ಕಾರಣದಿಂದಾಗಿಯೇ ಎರಡನೆಯ ಅಧ್ಯಾಯದ ಕೊನೆಯಲ್ಲಿ ಸಲಹೆ ಮಾಡಲಾಗಿರುವ ಕ್ರಾಂತಿಕಾರೀ ಕ್ರಮಗಳ ಬಗೆಗೆ ಯಾವ ರೀತಿಯ ವಿಶೇಷ ಒತ್ತಾಯವನ್ನೂ ಹಾಕಿಲ್ಲ. ಆ ಭಾಗವನ್ನು ಇಂದಿನ ಸನ್ನಿವೇಶದಲ್ಲಿ ಬರೆದಿದ್ದರೆ, ಅನೇಕ ರೀತಿಯಲ್ಲಿ ತೀರ ಬೇರೆಯೇ ಮಾತುಗಳಲ್ಲಿ ಬರೆಯಲಾಗುತ್ತಿದ್ದಿತು. 1848ರಿಂದೀಚೆಗೆ ಆಧುನಿಕ ಕೈಗಾರಿಕೆಯು ದಾಪುಗಾಲು ಹಾಕಿಕೊಂಡು ಮುಂದುವರೆದಿರುವುದರ ಫಲವಾಗಿ, ಅದರೊಂದಿಗೇ ಕಾರ್ಮಿಕ ವರ್ಗದ ಸಂಘಟನೆ ಸುಧಾರಿಸಿ ವಿಸ್ತೃತವಾಗಿರುವುದರ ಫಲವಾಗಿ, ಮೊದಲು ಫೆಬ್ರುವರಿ ಕ್ರಾಂತಿಯಲ್ಲೂ, ಆನಂತರ ಇನ್ನೂ ಹೆಚ್ಚಾಗಿ, ಶ್ರಮಜೀವಿ ವರ್ಗವು ಪ್ರಪ್ರಥಮ ಬಾರಿಗೆ ಇಡೀ ಎರಡು ತಿಂಗಳಿನ ಕಾಲ ರಾಜಕೀಯ ಅಧಿಕಾರ ಹಿಡಿದಿದ್ದ ಪ್ಯಾರಿಸ್ ಕಮ್ಯೂನ್[15]ನಲ್ಲೂ, ಗಳಿಸಿಕೊಂಡ ಪ್ರಾಯೋಗಿಕ ಅನುಭವದ ಫಲವಾಗಿ, ಈ ಕಾರ್ಯಕ್ರಮವು ಕೆಲವು ವಿವರಗಳಲ್ಲಿ ಹಳೆಯದಾಗಿ ಹೋಗಿದೆ. ಕಮ್ಯೂನ್ ಒಂದು ವಿಷಯವನ್ನು ವಿಶೇಷವಾಗಿ ಸಾಧಿಸಿ ತೋರಿತು. ಅದೆಂದರೆ — 'ಆಗಲೇ ಅಸ್ತಿತ್ವದಲ್ಲಿದ್ದ ರಾಜ್ಯಯಂತ್ರವನ್ನು ಕಾರ್ಮಿಕ ವರ್ಗವು ಸುಮ್ಮನೆ ತನ್ನ ಕೈಗೆ ತೆಗೆದುಕೊಂಡು ಅದನ್ನು ತನ್ನ ಸ್ವಂತ ಉದ್ದೇಶಗಳಿಗಾಗಿ ಪ್ರಯೋಗಿಸಲು ಸಾಧ್ಯವಿಲ್ಲ' ("ಫ್ರಾನ್ಸಿನಲ್ಲಿ ಅಂತರ್ಯುದ್ಧ; ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್‌ನ ಜನರಲ್ ಕೌನ್ಸಿಲ್‌ನ ಮನವಿ" ಲಂಡನ್, ಟ್ರೂಲೊವ್ ಪ್ರಚುರಣಾಲಯ, 1871, ಪು. 15 ನೋಡಿ. ಅದರಲ್ಲಿ ಈ ವಿಷಯವನ್ನು ಮತ್ತಷ್ಟು ವಿಶದವಾಗಿ ವಿಕಾಸಗೊಳಿಸಲಾಗಿದೆ). ಅಷ್ಟೇ ಅಲ್ಲದೆ, ಇದರಲ್ಲಿ

ಒಡಮೂಡಿಸಿರುವ ಸಮಾಜವಾದೀ ಸಾಹಿತ್ಯದ ಟೀಕೆಯು ಈ ಕಾಲಕ್ಕೆ ಸಂಬಂಧಿಸಿದಂತೆ ಅಸಮರ್ಪಕ ಎಂಬ ವಿಷಯ ಸ್ವಯಂಸ್ಪಷ್ಟ. ಏಕೆಂದರೆ ಈ ಟೀಕೆಯು 1847ರವರೆಗಿನ ವಿಷಯುಗಳನ್ನಷ್ಟೆ ಗಮನಕ್ಕೆ ತಂದುಕೊಳ್ಳುತ್ತದೆ. ಅಲ್ಲದೆ ವಿವಿಧ ವಿರೋಧಿ ಪಾರ್ಟಿಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರು ತಳೆಯಬೇಕಾದ ನಿಲುವಿನ ಕುರಿತಾದ ಹೇಳಿಕೆಗಳೂ (ಅಧ್ಯಾಯ IV) ಸೂತ್ರತಃ ಈಗಲೂ ಸರಿಯಾದವುಗಳಾದರೂ ಕಾರ್ಯತಃ ಹಳೆಯದಾಗಿ ಹೋಗಿವೆ; ಏಕೆಂದರೆ ರಾಜಕೀಯ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಿದೆ ಮತ್ತು 'ಪ್ರಣಾಳಿಕೆ'ಯಲ್ಲಿ ನಮೂದಾಗಿರುವ ರಾಜಕೀಯ ಪಾರ್ಟಿಗಳಲ್ಲಿ ಅನೇಕವನ್ನು ಇತಿಹಾಸದ ಪ್ರಗತಿಯು ಭೂಮಿಯ ಮೇಲಿನಿಂದ ಹೇಳಹೆಸರಿಲ್ಲದಂತೆ ಕೊಚ್ಚಿಹಾಕಿದೆ.

"ಆದರೂ ಸಹ 'ಪ್ರಣಾಳಿಕೆ'ಯು ಒಂದು ಐತಿಹಾಸಿಕ ದಾಖಲೆಯಾಗಿದೆ. ಅದನ್ನು ಬದಲಿಸುವ ಹಕ್ಕು ನಮಗೆ ಎಷ್ಟು ಮಾತ್ರವೂ ಇಲ್ಲ."

ಪ್ರಸ್ತುತ ಆವೃತ್ತಿಯ ಈ ಭಾಷಾಂತರವನ್ನು ಮಾರ್ಕ್ಸ್‌ರವರ "ಬಂಡವಾಳ" ಕೃತಿಯ ಬಹು ಭಾಗವನ್ನು ಭಾಷಾಂತರಿಸಿದ ಮಿ. ಸಾಮುಯೆಲ್ ಮೂರ್‌ರವರು ಮಾಡಿದ್ದಾರೆ. ನಾವಿಬ್ಬರೂ ಜೊತೆಗೂಡಿ ಇದನ್ನು ಪರಿಷ್ಕರಿಸಿದ್ದೇವೆ. ನಾನು ಐತಿಹಾಸಿಕ ಪ್ರಸಂಗಗಳಿಗೆ ವಿವರಣೆ ನೀಡುವಂಥ ಕೆಲವು ಟಿಪ್ಪಣಿಗಳನ್ನು ಸೇರಿಸಿದ್ದೇನೆ.

ಫ್ರೆಡರಿಕ್ ಎಂಗೆಲ್ಸ್

ಲಂಡನ್, ಜನವರಿ 30, 1888

# 1890ರ ಜರ್ಮನ್ ಆವೃತ್ತಿಗೆ ಮುನ್ನುಡಿ

ಮೇಲಿನದನ್ನು ಬರೆದ ನಂತರ* "ಪ್ರಣಾಳಿಕೆ"ಯ ಒಂದು ಹೊಸ ಜರ್ಮನ್ ಆವೃತ್ತಿ ಮತ್ತೆ ಅವಶ್ಯವಾಗಿದೆ. ಅಲ್ಲದೆ "ಪ್ರಣಾಳಿಕೆ"ಯ ವಿಷಯದಲ್ಲೂ ಇಲ್ಲಿ ದಾಖಲು ಮಾಡಲೇಬೇಕಾದ ಅನೇಕ ಸಂಗತಿಗಳು ಜರುಗಿವೆ.

1882ರಲ್ಲಿ ಜಿನೀವಾದಲ್ಲಿ ವೇರ ಸಸೂಲಿಚ್‌ರು ಮಾಡಿದ ಎರಡನೆಯ ರಶಿಯನ್ ಭಾಷಾಂತರ ಕಾಣಿಸಿಕೊಂಡಿತು; ಆ ಆವೃತ್ತಿಗೆ ಮುನ್ನುಡಿಯನ್ನು ಮಾರ್ಕ್ಸ್‌ರವರೂ ನಾನೂ ಬರೆದೆವು. ದುರದೃಷ್ಟವಶಾತ್ ಮೂಲ ಜರ್ಮನ್ ಹಸ್ತಪ್ರತಿ ಎಲ್ಲಿಯೋ ಕಳೆದುಹೋಗಿದೆ; ಆದ್ದರಿಂದ ನಾನು ಅದನ್ನು ರಶಿಯನ್‌ನಿಂದ ಪುನರನುವಾದಿಸಬೇಕಾಗಿದೆ. ಇದು ಮೂಲವನ್ನು ಯಾವ ರೀತಿಯಲ್ಲೂ ಉತ್ತಮಗೊಳಿಸುವುದಿಲ್ಲವೆನ್ನಿ. ಅದು ಹೀಗೆ ಹೇಳುತ್ತದೆ:

"'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ'ಯ ಮೊದಲ ರಶಿಯನ್ ಆವೃತ್ತಿಯು ಏಳನೆಯ ದಶಕದಲ್ಲಿ 'ಕೋಲೊಕೊಲ್' ಮುದ್ರಣಾಲಯದಲ್ಲಿ ಪ್ರಕಟವಾಯಿತು. ಇದನ್ನು ಬಕೂನಿನ್ ಭಾಷಾಂತರಿಸಿದ್ದರು. ಆಗ ಪಾಶ್ಚಿಮಾತ್ಯ ದೇಶಗಳು ಅದರಲ್ಲಿ ("ಪ್ರಣಾಳಿಕೆ"ಯ ರಶಿಯನ್ ಆವೃತ್ತಿಯಲ್ಲಿ) ಸಾಹಿತ್ಯಿಕ ಕೌತುಕವನ್ನಷ್ಟೆ ಕಾಣಬಲ್ಲವಾಗಿದ್ದವು. ಇಂದು ಅಂಥ ದೃಷ್ಟಿಕೋನ ಅಸಾಧ್ಯವೇ ಸರಿ. ಆ ಕಾಲದಲ್ಲಿ (ಡಿಸೆಂಬರ್ 1847ರಲ್ಲಿ) ಶ್ರಮಜೀವಿ ಚಳವಳಿ ಎಷ್ಟು ಸೀಮಿತ ಕ್ಷೇತ್ರವನ್ನಷ್ಟೆ ಪಡೆದಿದ್ದಿತು ಎಂಬುದನ್ನು 'ಪ್ರಣಾಳಿಕೆ'ಯ ಕೊನೆಯ ಅಧ್ಯಾಯವು ಅತ್ಯಂತ ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಅದರಲ್ಲಿ ನಾನಾ ದೇಶಗಳಲ್ಲಿ ವಿವಿಧ

---

*ಎಂಗೆಲ್ಸ್‌ರು ಇಲ್ಲಿ ಉಲ್ಲೇಖಿಸುವುದು 1883ರ ಜರ್ಮನ್ ಆವೃತ್ತಿಗೆ ಬರೆದ ತಮ್ಮ ಮುನ್ನುಡಿ. — ಸಂ.

ವಿರೋಧಿ ಪಾರ್ಟಿಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರ ನಿಲುವನ್ನು ವಿವರಿಸಲಾಗಿದೆ. ಅದರಲ್ಲಿ ರಶಿಯಾ ಹಾಗೂ ಸಂಯುಕ್ತ ಸಂಸ್ಥಾನಗಳೇ ಬಿಟ್ಟುಹೋಗಿವೆ. ರಶಿಯವು ಯೂರೋಪಿನ ಎಲ್ಲ ಪ್ರತಿಗಾಮಿಗಳ ಕೊನೆಯ ದೊಡ್ಡ ಭದ್ರನೆಲೆಯಾಗಿದ್ದ ಕಾಲವಾಗಿದ್ದಿತು ಅದು. ಯೂರೋಪಿನಿಂದ ವಲಸೆ ಬರುತ್ತಿದ್ದ ಮಿಗುತಾಯ ಶ್ರಮಜೀವಿ ಶಕ್ತಿಗಳನ್ನು ಅಮೆರಿಕವು ತನ್ನಲ್ಲಿ ಲೀನಗೊಳಿಸಿಕೊಂಡ ಕಾಲವಾಗಿದ್ದಿತು ಅದು. ಇವೆರಡು ದೇಶಗಳೂ ಯೂರೋಪಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುತ್ತಿದ್ದವು ಮತ್ತು ಅದೇ ಹೊತ್ತಿನಲ್ಲಿ ಅವು ಯೂರೋಪಿನ ಕೈಗಾರಿಕೋತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಗಳಾಗಿಯೂ ಆಗಿದ್ದವು. ಆದ್ದರಿಂದ ಆ ಕಾಲದಲ್ಲಿ ಎರಡು ದೇಶಗಳೂ ಒಂದಲ್ಲ ಒಂದು ರೀತಿಯಲ್ಲಿ ಅಂದು ಅಸ್ತಿತ್ವದಲ್ಲಿದ್ದ ಯೂರೋಪಿಯನ್ ವ್ಯವಸ್ಥೆಗೆ ಆಧಾರಸ್ತಂಭಗಳಾಗಿದ್ದವು.

"ಇಂದು ಪರಿಸ್ಥಿತಿ ಎಷ್ಟು ಭಿನ್ನ! ಐರೋಪ್ಯರು ಉತ್ತರ ಅಮೆರಿಕಕ್ಕೆ ವಲಸೆ ಹೋದುದೇ ಅಲ್ಲಿನ ಬೃಹತ್ ಪ್ರಮಾಣದ ಕೃಷಿ ಉತ್ಪಾದನೆಗೆ ನೆರವಾಯಿತು. ಅದರ ಪೈಪೋಟಿಯು ಯೂರೋಪಿನ ಸಣ್ಣ ಹಾಗೂ ದೊಡ್ಡ ಪ್ರಮಾಣದ ಭೂಮಾಲಿಕತ್ವ ವ್ಯವಸ್ಥೆಯ ಅಡಿಪಾಯಗಳನ್ನೇ ಅಲುಗಿಸುತ್ತಿದೆ. ಇದರ ಜೊತೆಗೇ ಅದು ಅಮೆರಿಕಕ್ಕೆ ಅದರ ಪ್ರಚಂಡ ಕೈಗಾರಿಕಾ ಸಂಪನ್ಮೂಲಗಳನ್ನು ಉಪಯೋಗಕ್ಕೆ ತಂದುಕೊಳ್ಳಲು ಸಾಧ್ಯ ಮಾಡಿಕೊಟ್ಟಿತು. ಅಮೆರಿಕವು ಈ ಕಾರ್ಯವನ್ನು ಎಷ್ಟು ಕಸುವಿನೊಂದಿಗೆ ಎಷ್ಟು ಭಾರಿ ಪ್ರಮಾಣದಲ್ಲಿ ಮಾಡಿತೆಂದರೆ ಅದು ಪಶ್ಚಿಮ ಯೂರೋಪಿನಲ್ಲಿ, ಅದರಲ್ಲೂ ಮುಖ್ಯವಾಗಿ ಇಂಗ್ಲೆಂಡಿನಲ್ಲಿ, ಇರುವ ಕೈಗಾರಿಕಾ ಏಕಸ್ವಾಮ್ಯವನ್ನು ಬೇಗನೆಯೇ ಮುರಿಯಲಿದೆ. ಇವೆರಡು ಸಂದರ್ಭಗಳೂ ಅಮೆರಿಕದ ಮೇಲೆಯೇ ಕ್ರಾಂತಿಕಾರಿ ರೀತಿಯಲ್ಲಿ ಪ್ರತಿಪ್ರಭಾವ ಬೀರುತ್ತಿವೆ. ಅಮೆರಿಕದ ಇಡೀ ರಾಜಕೀಯ ಘಟನಾವ್ಯವಸ್ಥೆಯ ಆಧಾರವಾದ ರೈತರ ಸಣ್ಣ ಹಾಗೂ ಮಧ್ಯಮ ಭೂಮಾಲಿಕತ್ವವು ಹೆಜ್ಜೆಹೆಜ್ಜೆಯಾಗಿ ಬೃಹತ್ ಕೃಷಿಕ್ಷೇತ್ರಗಳ ಪೈಪೋಟಿಗೆ ಸಿಕ್ಕಿ ಕುಸಿದು ಬೀಳುತ್ತಿದೆ, ಅದೇ ಹೊತ್ತಿನಲ್ಲಿ ಕೈಗಾರಿಕಾ ಪ್ರಾಂತಗಳಲ್ಲಿ ಮೊಟ್ಟಮೊದಲ ಬಾರಿಗೆ ಶ್ರಮಜೀವಿಗಳ ಬೃಹತ್‌ಸಮೂಹವೂ ಬಂಡವಾಳದ ಅಪರಿಮಿತ ಕೇಂದ್ರೀಕರಣವೂ ಬೆಳೆಯುತ್ತಿವೆ.

"ಮತ್ತೆ ಈಗ ರಶಿಯಕ್ಕೆ ಬರೋಣ! 1848-1849ರ ಕ್ರಾಂತಿ ಸಮಯದಲ್ಲಿ ಯೂರೋಪಿನ ಸಾಮಂತ ರಾಜರಷ್ಟೆ ಅಲ್ಲ ಐರೋಪ್ಯ ಬೂರ್ಷ್ವಾಗಳೂ ಸಹ ರಶಿಯವು ಮಧ್ಯಪ್ರವೇಶಿಸಿದರಷ್ಟೆ, ಆಗತಾನೇ ಜಾಗೃತಗೊಳ್ಳತೊಡಗಿದ್ದ ಶ್ರಮಜೀವಿ ವರ್ಗದಿಂದ ತಾವು ಪಾರಾಗುವುದು ಸಾಧ್ಯ ಎಂದು ಕಂಡುಕೊಳ್ಳುತ್ತಿದ್ದರು. ಆದ್ದರಿಂದ ತ್ಸಾರ್ ದೊರೆಯನ್ನು ಐರೋಪ್ಯ ಪ್ರತಿಗಾಮಿಗಳ ಅಧಿ

ನಾಯಕನೆಂದು ಘೋಷಿಸಲಾಯಿತು. ಆದರೆ ಇಂದು ಆತ ಗಾಟ್ಚಿನದಲ್ಲಿ ಕ್ರಾಂತಿಯ ಯುದ್ಧಬಂದಿಯಾಗಿದ್ದಾನೆ, ರಶಿಯವು ಯೂರೋಪಿನಲ್ಲಿ ಕ್ರಾಂತಿಕಾರೀ ಚಳವಳಿಯ ಮುಂಚೂಣಿಯಾಗಿ ರೂಪುಗೊಂಡಿದೆ.

"ಆಧುನಿಕ ಬೂರ್ಷ್ವಾ ಆಸ್ತಿ ವ್ಯವಸ್ಥೆಯ ಆಸನ್ನ ಅನಿವಾರ್ಯ ವಿಸರ್ಜನೆಯನ್ನು ಘೋಷಿಸುವುದನ್ನೇ 'ಕಮ್ಯೂನಿಸ್ಟ್ ಪ್ರಣಾಳಿಕೆ' ತನ್ನ ಗುರಿಯನ್ನಾಗಿ ಇಟ್ಟುಕೊಂಡಿದ್ದಿತು. ಆದರೆ ರಶಿಯದಲ್ಲಿ ನಾವು ಶೀಘ್ರವಾಗಿ ಬೆಳೆಯುತ್ತಿರುವ ಬಂಡವಾಳವಾದೀ ವಂಚನೆ ಹಾಗೂ ಈಗ ತಾನೆ ಬೆಳೆಯತೊಡಗಿರುವ ಬೂರ್ಷ್ವಾ ಭೂಮಾಲಿಕತ್ವ ವ್ಯವಸ್ಥೆಯ ಜೊತೆಗೇ ಅರ್ಧಕ್ಕಿಂತ ಹೆಚ್ಚು ಭಾಗ ಭೂಮಿಯನ್ನು ರೈತರೇ ಸಾಮುದಾಯಿಕ ಒಡೆತನದಲ್ಲಿ ಹೊಂದಿರುವ ವ್ಯವಸ್ಥೆಯನ್ನು ಕಾಣುತ್ತೇವೆ. ಈಗಿನ ಪ್ರಶ್ನೆ ಎಂದರೆ ತುಂಬ ಮಟ್ಟಿಗೆ ಶಿಥಿಲಗೊಂಡಿದ್ದರೂ ಭೂಮಿಯ ಸಾಮುದಾಯಿಕ ಒಡೆತನದ ಒಂದು ರೀತಿಯ ಪ್ರಾಚೀನ ಪದ್ಧತಿಯಾಗಿ ಉಳಿದಿರುವ ರಶಿಯನ್ 'ಒಬ್‌ಷ್ಚೀನ'ವು ಸಾಮುದಾಯಿಕ ಒಡೆತನದ ಉನ್ನತ ಮಟ್ಟದ ಕಮ್ಯೂನಿಸ್ಟ್ ಪದ್ಧತಿಗೆ ನೇರವಾಗಿ ಹೋಗಬಲ್ಲುದೇ? ಅಥವಾ ತದ್ವಿರುದ್ಧವಾಗಿ, ಪಶ್ಚಿಮ ದೇಶಗಳ ಚಾರಿತ್ರಿಕ ವಿಕಾಸದಲ್ಲಿ ಕಂಡುಬಂದಂತೆ ಅದು ಮೊದಲು ಅದೇ ರೀತಿಯ ವಿಸರ್ಜನ ಪ್ರಕ್ರಿಯೆಗೆ ಒಳಪಡಬೇಕೆ? ಎಂಬುದಾಗಿದೆ.

"ಇದಕ್ಕೆ ಇಂದು ಸಾಧ್ಯವಿರುವ ಒಂದೇ ಉತ್ತರವೆಂದರೆ — ಇಂದಿನ ರಶಿಯನ್ ಕ್ರಾಂತಿಯು ಪಶ್ಚಿಮ ದೇಶಗಳಲ್ಲೂ ಶ್ರಮಜೀವಿ ಕ್ರಾಂತಿಗೆ ಪ್ರೇರಕವಾಗಿ, ಎರಡು ಕ್ರಾಂತಿಗಳೂ ಪರಸ್ಪರ ಪೂರಕವಾಗಿ ಬೆಳೆದರೆ, ಇಂದು ರಶಿಯದಲ್ಲಿರುವ ಭೂಮಿಯ ಸಾಮುದಾಯಿಕ ಒಡೆತನದ ಪದ್ಧತಿಯೇ ಕಮ್ಯೂನಿಸ್ಟ್ ಬೆಳವಣಿಗೆಗೆ ಆರಂಭ ಬಿಂದುವಾಗಿ ಸಹಾಯವಾಗಬಹುದು.

ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಎಂಗೆಲ್ಸ್

ಲಂಡನ್, ಜನವರಿ 21, 1882."

ಸುಮಾರು ಅದೇ ತಾರೀಖಿನಂದು ಜಿನೀವಾದಲ್ಲಿ ಒಂದು ಹೊಸ ಪೋಲಿಷ್ ಅನುವಾದ – "ಮ್ಯಾನಿಫೆಸ್ಟ್ ಕಮ್ಯೂನಿಸ್ಟಿಜ್ನಿ" – ಕಾಣಿಸಿಕೊಂಡಿತು.

ಇದಲ್ಲದೆ ಒಂದು ಹೊಸ ಡೇನಿಷ್ ಭಾಷಾಂತರ 1885ರಲ್ಲಿ *Socialdemokratisk Bibliothek* (ಸೋಶ್ಯಿಯಲ್ ಡೆಮೊಕ್ರಾಟಿಸ್ಕ್ ಬಿಬ್ಲಿಯೊತೇಕ್) ಕೊಪೆನ್‌ಹೇಗೆನ್‌ನಲ್ಲಿ ಪ್ರಕಟವಾಯಿತು. ದುರದೃಷ್ಟವಶಾತ್ ಅದು ಸಾಕಷ್ಟು ಪೂರ್ಣವಾಗಿಲ್ಲ; ಕೆಲವು ಅವಶ್ಯ ಭಾಗಗಳನ್ನು ಭಾಷಾಂತರಕಾರರಿಗೆ ಕಷ್ಟವಾಗಿ

ಕಂಡುಬಂದ ಕಾರಣ ಅದರಲ್ಲಿ ಕೈಬಿಡಲಾಗಿದೆ. ಇದರ ಜೊತೆಗೆ ಇಲ್ಲಿ ಅಲ್ಲಿ ಅಸಡ್ಡೆಯ ಲಕ್ಷಣಗಳೂ ಅದರಲ್ಲಿವೆ. ಭಾಷಾಂತರಕಾರ ಸ್ವಲ್ಪ ಹೆಚ್ಚು ಜಾಗರೂಕತೆ ವಹಿಸಿದ್ದಲ್ಲಿ ಅತ್ಯುತ್ತಮ ಕೃತಿ ತಯಾರಿಸಬಹುದಾಗಿದ್ದಿತೆಂಬುದನ್ನು ಭಾಷಾಂತರವೇ ಸೂಚಿಸುವುದರಿಂದ ಈ ಅಸಡ್ಡೆಯ ಲಕ್ಷಣಗಳು ಇನ್ನೂ ಹೆಚ್ಚು ಅಸಮಾಧಾನಕರವಾಗಿ ಎದ್ದು ಕಾಣುತ್ತವೆ.

1886ರಲ್ಲಿ ಪ್ಯಾರಿಸ್ಸಿನ *Le Socialiste* ("ಸೊಸ್ಯಲಿಸ್ಟ್")ನಲ್ಲಿ ಒಂದು ಹೊಸ ಫ್ರೆಂಚ್ ಭಾಷಾಂತರ ಕಾಣಿಸಿಕೊಂಡಿತು. ಇದೇ ಇದುವರೆಗೂ ಪ್ರಕಟವಾದ ಅನುವಾದಗಳಲ್ಲೆಲ್ಲ ಅತ್ಯುತ್ತಮವಾದುದು.

ಅದೇ ವರ್ಷ ಈ ಕೊನೆಯ (ಫ್ರೆಂಚ್) ಆವೃತ್ತಿಯಿಂದ ಒಂದು ಸ್ಪಾನಿಷ್ ಆವೃತ್ತಿಯೂ ಮೊದಲು ಮಾಡ್ರಿಡ್‌ನ *El Socialista* ("ಎಲ್ ಸೊಸ್ಯಲಿಸ್ಟ")ದಲ್ಲಿ ಪ್ರಕಟವಾಯಿತು. ಅನಂತರ ಇದನ್ನು ಹೊತ್ತಗೆಯ ರೂಪದಲ್ಲೂ ಪ್ರಕಟಿಸಲಾಯಿತು – " 'ಮ್ಯಾನಿಫೆಸ್ತೊ ಡೆಲ್ ಪಾರ್ಟೀಡೊ ಕೊಮುನಿಸ್ಟ' ಪೋರ್ ಕಾರ್ಲ್ಲೊಸ್ ಮಾರ್ಕ್ಸ್ ವೈ ಎಫ್. ಎಂಗೆಲ್ಸ್, ಮಾಡ್ರಿಡ್, ಅಡ್ಮಿನಿಸ್ಟ್ರಸ್ಯೋನ್ ಡೆ ಎಲ್ ಸೊಸ್ಯಲಿಸ್ಟ, ಹೆರ್ನಾನ್ ಕೊರ್ಟೆಸ್ 8."

ಕುತೂಹಲ ಕೆರಳಿಸುವ ಸುದ್ದಿಯಾಗಿ ನಾನಿಲ್ಲಿ, 1887ರಲ್ಲಿ ಆರ್ಮೀನಿಯನ್ ಭಾಷಾಂತರವೊಂದರ ಹಸ್ತಪ್ರತಿಯನ್ನು ಕಾನ್‌ಸ್ಟಾಂಟಿನೋಪಲ್ ಪ್ರಕಟಣಕಾರರೊಬ್ಬರಿಗೆ ಪ್ರಕಟಣೆಗೆ ಒಪ್ಪಿಸಲಾಗಿದ್ದಿತು, ಎಂಬ ವಿಷಯವನ್ನೂ ತಿಳಿಸಬಹುದು. ಆದರೆ ಆ ಮಹನೀಯನಿಗೆ ಮಾರ್ಕ್ಸ್‌ರವರ ಹೆಸರನ್ನು ಹೊಂದಿರುವ ಯಾವುದೇ ಕೃತಿಯನ್ನೂ ಪ್ರಕಟಿಸುವ ಧೈರ್ಯವಿರಲಿಲ್ಲ. ಭಾಷಾಂತರಕಾರನು ತನ್ನ ಹೆಸರನ್ನೇ ಗ್ರಂಥಕರ್ತನನ್ನಾಗಿ ಕೊಡಲಿ ಎಂದಾತ ಸಲಹೆ ಮಾಡಿದ. ಆದರೆ ಆ ಅನುವಾದಕ ಅದಕ್ಕೊಪ್ಪಲಿಲ್ಲ.

ಇಂಗ್ಲೆಂಡಿನಲ್ಲಿ ಒಂದಾದ ಮೇಲೊಂದರಂತೆ ಹೆಚ್ಚುಕಡಮೆ ತಪ್ಪುಗಳನ್ನುಳ್ಳ ಅಮೆರಿಕನ್ ಭಾಷಾಂತರಗಳನ್ನು ಪದೇ ಪದೇ ಪುನರ್‌ಮುದ್ರಿಸಿದ ನಂತರ 1888ರಲ್ಲಿ ಕೊನೆಗೂ ಒಂದು ಸಪ್ರಮಾಣಿಕ ಆವೃತ್ತಿ ಕಾಣಿಸಿಕೊಂಡಿತು. ಇದನ್ನು ಸಿದ್ಧಗೊಳಿಸಿದವರು ನನ್ನ ಮಿತ್ರ ಸಾಮುಯೆಲ್ ಮೂರ್. ಮುದ್ರಣಕ್ಕೆ ಕಳುಹಿಸಿಕೊಡುವ ಮುನ್ನ ನಾವು ಅದನ್ನು ಮತ್ತೊಮ್ಮೆ ಪರಿಶೀಲಿಸಿದೆವು. ಅದರ ಶೀರ್ಷಿಕೆ ಹೀಗಿದ್ದಿತು: " 'ಮಾನಿಫೆಸ್ಟೋ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ,' ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್‌ರವರಿಂದ. ಫ್ರೆಡರಿಕ್ ಎಂಗೆಲ್ಸ್‌ರು ಸಂಪಾದಿಸಿ ವಿವರಣೆಗಳನ್ನು ನೀಡಿದುದು, 1888, ಲಂಡನ್, ವಿಲಿಯಂ ರೀವ್ಸ್, 185, ಫ್ಲೀಟ್ ಸ್ಟ್ರೀಟ್, ಇ.ಸಿ." ಆ ಆವೃತ್ತಿಯ ಕೆಲವು ಟಿಪ್ಪಣಿಗಳನ್ನು ನಾನು ಇದರಲ್ಲಿ ಸೇರಿಸಿದ್ದೇನೆ.

ಈ "ಪ್ರಣಾಳಿಕೆ" ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಅದು ಮೊದಲು ಕಾಣಿಸಿಕೊಂಡಾಗ ಅದನ್ನು ಆಗ ಬಹುಸಂಖ್ಯೆಯಲ್ಲಿರದಿದ್ದ ವೈಜ್ಞಾನಿಕ ಸಮಾಜ ವಾದದ ಮುಂದಾಳುಗಳು ಉತ್ಸಾಹದಿಂದ ಸ್ವಾಗತಿಸಿದರು. (ಮೊದಲ ಮುನ್ನು ಡಿಯಲ್ಲಿ ನಮೂದಿಸಲಾದ ಭಾಷಾಂತರಗಳ ಸಂಖ್ಯೆಯೇ ಇದನ್ನು ಪುಷ್ಟೀಕರಿ ಸುತ್ತದೆ). ಆಮೇಲೆ 1848ರ ಜೂನ್[16]ನಲ್ಲಿ ಪ್ಯಾರಿಸ್ ಕಾರ್ಮಿಕರ ಸೋಲಿ ನಿಂದ ಪ್ರಾರಂಭವಾದ ಪ್ರತಿಗಾಮಿಗಳ ದಾಳಿ ಅದನ್ನು ಬೇಗನೇ ಹಿಂಬದಿಗೆ ತಳ್ಳಿತು. ಕೊನೆಗೆ 1852ರ ನವೆಂಬರ್[17]ನಲ್ಲಿ ಕೊಲೋನ್ ಕಮ್ಯೂನಿಸ್ಟರನ್ನು ಶಿಕ್ಷೆಗೊಳಪಡಿಸಿದಾಗ "ಪ್ರಣಾಳಿಕೆ"ಯನ್ನು "ಶಾಸನ ರೀತ್ಯಾ" ನಿಷೇಧಿಸಲಾಯಿತು. ಫೆಬ್ರುವರಿ ಕ್ರಾಂತಿಯೊಂದಿಗೆ ಪ್ರಾರಂಭವಾದ ಕಾರ್ಮಿಕರ ಚಳವಳಿ ಸಾರ್ವಜನಿಕ ಕ್ಷೇತ್ರದಿಂದ ಕಣ್ಮರೆಯಾಗುವುದರೊಂದಿಗೆ "ಪ್ರಣಾಳಿಕೆ" ಕೂಡ ಹಿನ್ನೆಲೆಗೆ ಸರಿಯಿತು.

ಯೂರೋಪಿನ ಕಾರ್ಮಿಕ ವರ್ಗವು ಆಳುವ ವರ್ಗಗಳ ಅಧಿಕಾರದ ಮೇಲೆ ಹೊಸ ದಾಳಿ ಮಾಡಲು ಸಾಲುವಷ್ಟು ಶಕ್ತಿಯನ್ನು ಮತ್ತೆ ಸಂಗ್ರಹಿಸಿ ಕೊಂಡಾಗ "ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್" (ಅಂತರರಾಷ್ಟ್ರೀಯ ಕಾರ್ಮಿಕ ಜನತೆಯ ಸಂಸ್ಥೆ) ಅಸ್ತಿತ್ವಕ್ಕೆ ಬಂದಿತು. ಅದರ ಗುರಿ ಯೂರೋಪು ಅಮೆರಿಕಗಳ ಇಡೀ ಸಮರಶೀಲ ಕಾರ್ಮಿಕ ವರ್ಗವನ್ನು ಒಂದೇ ಭಾರಿ ಸೇನೆಯಾಗಿ ಒಟ್ಟಿಗೆ ಬೆಸೆಯುವುದಾಗಿದ್ದಿತು. ಆದ್ದರಿಂದ ಅದು "ಪ್ರಣಾಳಿಕೆ"ಯಲ್ಲಿ ಹಾಕಿಕೊಡಲಾದ ಸೂತ್ರಗಳಿಂದ ತನ್ನ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಮುನ್ನಡೆಯುವುದು ಸಾಧ್ಯವಾಗಲಿಲ್ಲ. ಅದು ಇಂಗ್ಲಿಷ್ ಟ್ರೇಡ್‌ಯೂನಿಯನ್‌ಗಳನ್ನೂ, ಫ್ರೆಂಚ್, ಬೆಲ್ಜಿಯನ್, ಇಟಾಲಿಯನ್ ಹಾಗೂ ಸ್ಪಾನಿಷ್ ಪ್ರುದೋನ್‌ವಾದಿಗಳನ್ನೂ, ಜರ್ಮನಿಯ ಲಸ್ಸಾಲ್ ಅನುಯಾಯಿ ಗಳನ್ನೂ* ಹೊರಗಿರಿಸದಂಥ ಕಾರ್ಯಕ್ರಮವನ್ನೇ ಹೊಂದಿರಬೇಕಿದ್ದಿತು. ಈ ಕಾರ್ಯಕ್ರಮವನ್ನು – ಇಂಟರ್‌ನ್ಯಾಷನಲ್‌ನ ನಿಯಮಗಳಿಗೆ ಪೂರ್ವ ಪೀಠಿಕೆ[18]

---

*ಲಸ್ಸಾಲ್‌ರು ವ್ಯಕ್ತಿಶಃ ತಾವು ಮಾರ್ಕ್ಸ್‌ರವರ "ಶಿಷ್ಯ"ರೆಂದೂ ಪ್ರಣಾಳಿ ಕೆಯ ಪರವಾಗಿದ್ದಾರೆಂದೂ ನಮ್ಮ ಮುಂದೆ ಯಾವತ್ತೂ ಒಪ್ಪಿಕೊಳ್ಳುತ್ತಿದ್ದರು. ಆದರೆ ಅವರ ಅನುಯಾಯಿಗಳಲ್ಲಿ ಕೆಲವರ ಸಂಗತಿ ಬೇರೆಯಾಗಿದ್ದಿತು. ಅವರು ರಾಜ್ಯ ಸಾಲಗಳಿಂದ ಬೆಂಬಲ ಪಡೆದ ಉತ್ಪಾದಕರ ಸಹಕಾರೀ ಸಂಸ್ಥೆಗಳು ಸ್ಥಾಪನೆಯಾಗಬೇಕೆಂಬುದಕ್ಕಿಂತ ಹೆಚ್ಚಿನ ಬೇಡಿಕೆಗಳನ್ನು ಮಂಡಿಸಲು ಸಿದ್ಧರಿರ ಲಿಲ್ಲ. ಅವರು ಇಡೀ ಕಾರ್ಮಿಕ ವರ್ಗವನ್ನು ರಾಜ್ಯ ನೆರವಿನ ಬೆಂಬಲಿಗರು ಹಾಗೂ ಸ್ವಯಂ ನೆರವಿನ ಬೆಂಬಲಿಗರು ಎಂದು ವಿಭಜಿಸಿದ್ದರು. (ಎಂಗೆಲ್ಸ್‌ರ ಟಿಪ್ಪಣಿ.)

ಯನ್ನು – ಮಾರ್ಕ್ಸ್‌ರವರೇ ತಮ್ಮ ಸಿದ್ಧಹಸ್ತದಿಂದ ರಚಿಸಿದ್ದರು. ಬಕೂನಿನ್‌ರೂ ಅರಾಜಕತಾವಾದಿಗಳೂ ಸಹ ಇದನ್ನು ಒಪ್ಪಿಕೊಂಡಿದ್ದರು. "ಪ್ರಣಾಳಿಕೆ"ಯಲ್ಲಿ ಪ್ರತಿಪಾದಿಸಲಾದ ಸೂತ್ರಗಳ ಅಂತಿಮ ವಿಜಯಕ್ಕಾಗಿ ಮಾರ್ಕ್ಸ್‌ರವರು ಸಂಯುಕ್ತ ಕಾರ್ಯಾಚರಣೆ ಹಾಗೂ ಪರಸ್ಪರ ಚರ್ಚೆಗಳಿಂದ ಅವಶ್ಯವಾಗಿಯೇ ಫಲಿಸಲು ಖಂಡಿತವಿದ್ದ ಕಾರ್ಮಿಕ ವರ್ಗದ ಬೌದ್ಧಿಕ ಬೆಳವಣಿಗೆಯ ಮೇಲೆ ಸಂಪೂರ್ಣವಾಗಿ ಭರವಸೆ ಇರಿಸಿದ್ದರು. ಬಂಡವಾಳದ ವಿರುದ್ಧ ಹೋರಾಟದಲ್ಲಿನ ಘಟನೆಗಳು ಮತ್ತು ವ್ಯತ್ಯಯಗಳು, ಗೆಲುವುಗಳಿಗಿಂತ ಹೆಚ್ಚಾಗಿ ಸೋಲುಗಳು, ಹೋರಾಟಗಾರರಿಗೆ ಅದುವರೆವಿಗೂ ಅವರು ನಂಬಿದ್ದ ಸಾರ್ವತ್ರಿಕ ಸಿದ್ಧೌಷಧಗಳು ಎಷ್ಟು ಅಸಮರ್ಪಕ ಎಂಬುದನ್ನು ತಿಳಿಸಿಕೊಟ್ಟವು. ಕಾರ್ಮಿಕ ವಿಮೋಚನೆಗೆ ಅವಶ್ಯವಾದ ನಿಜವಾದ ಪರಿಸ್ಥಿತಿಗಳನ್ನು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳುವಂತೆ ಅವು ಅವರ ಮನಸ್ಸುಗಳನ್ನು ಸಿದ್ಧಗೊಳಿಸಿದವು. ಮಾರ್ಕ್ಸ್‌ರವರ ವಿಚಾರ ಸರಿಯಾಗಿದ್ದಿತು. ಇಂಟರ್‌ನ್ಯಾಷನಲ್ ವಿಸರ್ಜನೆಗೊಂಡಾಗ 1874ರಲ್ಲಿ ಇದ್ದ ಕಾರ್ಮಿಕ ವರ್ಗವು, 1864ರಲ್ಲಿ ಅದು ಸ್ಥಾಪನೆಯಾದಾಗ ಇದ್ದ ಕಾರ್ಮಿಕ ವರ್ಗಕ್ಕಿಂತ ತೀರ ಭಿನ್ನವಾಗಿದ್ದಿತು. ಲ್ಯಾಟಿನ್ ದೇಶಗಳಲ್ಲಿ ಪ್ರುದೋನ್‌ವಾದವೂ ಜರ್ಮನಿಯಲ್ಲಿ ವಿಶಿಷ್ಟ ಲಸ್ಸಾಲಿಯನ್‌ವಾದವೂ ಕ್ಷಯಿಸುತ್ತಿದ್ದವು. ಆಗ ತೀರ ಸಂಪ್ರದಾಯವಾದಿಗಳಾಗಿದ್ದ ಇಂಗ್ಲಿಷ್ ಟ್ರೇಡ್‌ಯೂನಿಯನ್‌ಗಳೂ ಕ್ರಮಕ್ರಮವಾಗಿ ಎಂಥ ಸ್ಥಿತಿ ತಲುಪುತ್ತಿದ್ದವೆಂದರೆ, "ಯೂರೋಪಿನ ಸಮಾಜವಾದವು ನಮಗೆ ಎಷ್ಟು ಮಾತ್ರವೂ ಭೀತಿಕಾರಕವಲ್ಲ" ಎಂದು ಅವುಗಳ ಸ್ವಾನ್‌ಸೀ ಮಹಾಧಿವೇಶನದಲ್ಲಿ 1887ರಲ್ಲಿ ಅಧ್ಯಕ್ಷರು ಅವುಗಳ ಪರವಾಗಿ ಹೇಳುವಂತಾದರು. ಆದರೂ 1887ರ ಹೊತ್ತಿಗೆ ಯೂರೋಪಿಯನ್ ಸಮಾಜವಾದವು ಸ್ಪಷ್ಟವಾಗಿ "ಪ್ರಣಾಳಿಕೆ"ಯಲ್ಲಿ ಘೋಷಿಸಲಾದ ಸಿದ್ಧಾಂತವೇ ಆಗಿದ್ದಿತು. ಹಾಗಾಗಿ ಸ್ವಲ್ಪಮಟ್ಟಿಗೆ "ಪ್ರಣಾಳಿಕೆ"ಯ ಇತಿಹಾಸವು 1848ರಿಂದ ಈಚೆಗಿನ ಆಧುನಿಕ ಕಾರ್ಮಿಕ ವರ್ಗ ಚಳವಳಿಯ ಇತಿಹಾಸವನ್ನೇ ಪ್ರತಿಬಿಂಬಿಸುತ್ತದೆ. ಪ್ರಸ್ತುತದಲ್ಲಿ ಇದು ನಿಸ್ಸಂಶಯವಾಗಿಯೂ ಅತ್ಯಂತ ವಿಶಾಲವಾದ ಪ್ರಸಾರವುಳ್ಳ, ಸಮಾಜವಾದೀ ಸಾಹಿತ್ಯದಲ್ಲೆಲ್ಲ ಅತ್ಯಂತ ಅಂತರರಾಷ್ಟ್ರೀಯವಾದ ಕೃತಿಯಾಗಿದೆ, ಸೈಬೀರಿಯಾದಿಂದ ಕ್ಯಾಲಿಫೋರ್ನಿಯವರೆಗೆ ಎಲ್ಲ ದೇಶಗಳ ಕೋಟ್ಯಾಂತರ ಕಾರ್ಮಿಕರ ಸಾಮಾನ್ಯ ಕಾರ್ಯಕ್ರಮವಾಗಿದೆ.

ಆದರೂ ಅದನ್ನು ರಚಿಸಿದಾಗ ನಾವದನ್ನು ಸಮಾಜವಾದೀ ಪ್ರಣಾಳಿಕೆ ಎಂದು ಕರೆಯಲಾಗಲಿಲ್ಲ. 1847ರಲ್ಲಿ ಎರಡು ರೀತಿಯ ಜನರನ್ನು ಸಮಾಜವಾದಿಗಳೆಂದು ಪರಿಗಣಿಸಲಾಗುತ್ತಿದ್ದಿತು. ಒಂದು ಕಡೆ ನಾನಾ ರೀತಿಯ ಅಸಾಧ್ಯಾದರ್ಶ ಸಮಾಜ ವ್ಯವಸ್ಥೆಗಳ ಅನುಯಾಯಿಗಳು, ಅದರಲ್ಲೂ ಗಮನಾರ್ಹ

ವಾಗಿ ಇಂಗ್ಲೆಂಡಿನಲ್ಲಿ ಓವೆನ್‌ವಾದಿಗಳು ಮತ್ತು ಫ್ರಾನ್ಸಿನಲ್ಲಿ ಫೂರ್ಯೇವಾದಿಗಳು, ಇದ್ದರು. ಇವರಿಬ್ಬರೂ ಆಗಲೇ ಸಣ್ಣ ಸಣ್ಣ ತಂಡಗಳಾಗಿ ಕ್ಷಯಿಸಿ ಕ್ರಮೇಣ ಅಳಿಗಾಲ ಸಮೀಪಿಸುತ್ತಿದ್ದರು. ಮತ್ತೊಂದು ಕಡೆ ಅನೇಕಾನೇಕ ರೀತಿಯ ಸಾಮಾಜಿಕ ಹುಸಿ ವೈದ್ಯರಿದ್ದರು. ಅವರು ಬಂಡವಾಳಕ್ಕೂ ಲಾಭಕ್ಕೂ ಸ್ವಲ್ಪ ಮಟ್ಟಿಗೂ ಹಾನಿಯಾಗದಂತೆ ಎಲ್ಲ ರೀತಿಯ ಸಾಮಾಜಿಕ ಕುಂದು ಕೊರತೆಗಳನ್ನೂ ತಮ್ಮ ನಾನಾ ಸಾರ್ವತ್ರಿಕ ಸಿದ್ಧೌಷಧಗಳಿಂದಲೂ ನಾನಾ ರೀತಿಯ 'ರಿಪೇರಿ' ಕಾರ್ಯದಿಂದಲೂ ತೊಡೆದು ಹಾಕಬಯಸಿದ್ದರು. ಈ ಎರಡು ಪ್ರಸಂಗಗಳಲ್ಲೂ ಈ ಜನ ಕಾರ್ಮಿಕ ಚಳವಳಿಯ ಹೊರಗೆ ನಿಂತು ಬೆಂಬಲಕ್ಕಾಗಿ "ಸುಶಿಕ್ಷಿತ" ವರ್ಗಗಳ ಕಡೆಗೇ ನೋಡುತ್ತಿದ್ದರು. ಆದರೆ ಕೇವಲ ರಾಜಕೀಯ ಕ್ರಾಂತಿಗಳು ಸಾಲದೆಂದು ಮನಗಂಡು ಸಂಪೂರ್ಣವಾದ ಸಾಮಾಜಿಕ ಪರಿವರ್ತನೆ ಅವಶ್ಯವೆಂದು ಘೋಷಿಸಿದ್ದ ಕಾರ್ಮಿಕ ವರ್ಗದ ಒಂದು ವಿಭಾಗವು ತನ್ನನ್ನು ತಾನೇ ಆಗಲೇ ಕಮ್ಯೂನಿಸ್ಟ್ ಎಂದು ಕರೆದುಕೊಂಡಿತು. ಆದರೂ ಅದು ಅಡ್ಡಾದಿಡ್ಡಿಯಾಗಿ ನಿರ್ಮಿಸಿದ, ಕೇವಲ ಸಹಜ ಪ್ರವೃತ್ತಿಯ, ಒಂದು ಮಾದರಿಯ ಅಪಕ್ವವಾದ ಕಮ್ಯೂನಿಸಂ ಆಗಿದ್ದಿತು. ಆದಾಗ್ಯೂ ಅದು ಎರಡು ಮಾದರಿಯ ಅಸಾಧ್ಯಾದರ್ಶದ ಕಮ್ಯೂನಿಸಂ ಅನ್ನು ಅಸ್ತಿತ್ವಕ್ಕೆ ತರಲು ಸಾಲುವಷ್ಟು ಶಕ್ತಿಯುತವಾಗಿದ್ದಿತು. ಫ್ರಾನ್ಸಿನಲ್ಲಿ ಕಾಬೇರವರ "ಇಕಾರಿಯನ್" ಕಮ್ಯೂನಿಸಂ ಹಾಗೂ ಜರ್ಮನಿಯಲ್ಲಿ ವೈಟ್ಲಿಂಗ್[19]ರ ಕಮ್ಯೂನಿಸಂ ಆ ಎರಡು ಮಾದರಿಗಳಾಗಿದ್ದವು. 1847ರಲ್ಲಿ ಸಮಾಜವಾದವು ಬೂರ್ಷ್ವಾ ಚಳವಳಿಯಾಗಿಯೂ, ಕಮ್ಯೂನಿಸಂ ಕಾರ್ಮಿಕ ವರ್ಗದ ಚಳವಳಿಯಾಗಿಯೂ ಪರಿಗಣಿಸಲ್ಪಟ್ಟಿದ್ದವು. ಸಮಾಜವಾದವು ಕೊನೆಯ ಪಕ್ಷ ಯೂರೋಪಿನಲ್ಲಿ "ಗೌರವಾರ್ಹ"ವಾಗಿದ್ದಿತು. ಆದರೆ ಕಮ್ಯೂನಿಸಂನ ಸ್ಥಿತಿ ಅದಕ್ಕೆ ತೀರ ವಿರುದ್ಧವಾಗಿದ್ದಿತು. ನಾವು ಆ ವೇಳೆಗಾಗಲೇ "ಕಾರ್ಮಿಕ ವರ್ಗದ ವಿಮೋಚನೆಯು ಕಾರ್ಮಿಕ ವರ್ಗದ ಕೃತಿಯೇ ಆಗಿರಬೇಕು" ಎಂಬ ದೃಢ ನಿರ್ಧಾರದ ಅಭಿಪ್ರಾಯ ಹೊಂದಿದ್ದರಿಂದ, ಈ ಎರಡು ಹೆಸರುಗಳಲ್ಲಿ ಯಾವುದನ್ನು ನಾವು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗೆಗೆ ನಮಗೆ ಯಾವ ಅನುಮಾನವೂ ಇರಲು ಸಾಧ್ಯವಿರಲಿಲ್ಲ. ಅಲ್ಲದೆ ಅಂದಿನಿಂದೀಚೆಗೆ ನಮ್ಮ ನಿರ್ಧಾರವನ್ನು ತ್ಯಜಿಸುವ ಅವಶ್ಯಕತೆಯೂ ನಮಗೆ ಕಂಡುಬಂದಿಲ್ಲ.

"ಎಲ್ಲ ದೇಶಗಳ ಶ್ರಮಜೀವಿಗಳೇ, ಒಂದಾಗಿರಿ !" – ನಲವತ್ತೆರಡು ವರ್ಷಗಳ ಹಿಂದೆ ಶ್ರಮಜೀವಿ ವರ್ಗವು ತನ್ನದೇ ಕೇಳಿಕೆಗಳನ್ನು ಮುಂದಿಟ್ಟ ಪ್ರಥಮ ಪ್ಯಾರಿಸ್ ಕ್ರಾಂತಿಗೆ ಮುನ್ನ ನಾವು ಈ ಮಾತುಗಳನ್ನು ಜಗತ್ತಿಗೆ ಘೋಷಿಸಿದಾಗ ಬಹಳ ಕಡಮೆ ಸಂಖ್ಯೆಯಲ್ಲಿ ಜನ ಈ ಕರೆಗೆ ಓಗೊಟ್ಟರು. ಆದರೆ 1864ರ ಸೆಪ್ಟೆಂಬರ್ 28ರಂದು ಬಹುಮಟ್ಟಿಗಿನ ಪಾಶ್ಚಿಮಾತ್ಯ ಯೂರೋಪಿಯನ್ ದೇಶ

ಗಳ ಶ್ರಮಜೀವಿಗಳು, ಈಗ ಭವ್ಯ ನೆನಪಾಗಷ್ಟೆ ಉಳಿದಿರುವ "ಇಂಟರ್‌ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್"ಅನ್ನು ಸೇರಿದ್ದರು. ನಿಜ, ಈ "ಇಂಟರ್‌ನ್ಯಾಷನಲ್" ಕೇವಲ ಒಂಬತ್ತು ವರ್ಷವಷ್ಟೆ ಜೀವಂತವಾಗಿದ್ದಿತು. ಆದರೆ ಅದು ಸೃಜಿಸಿದ ಎಲ್ಲ ದೇಶಗಳ ಶ್ರಮಜೀವಿಗಳ ಚಿರಂತನ ಐಕಮತ್ಯವು ಇನ್ನೂ ಜೀವಂತವಾಗಿದೆ. ಹಿಂದೆಂದಿಗಿಂತ ಹೆಚ್ಚು ಬಲಿಷ್ಠವಾಗಿದೆ ಎಂಬುದಕ್ಕೆ ಇಂದಿನ ಪರಿಸ್ಥಿತಿಗಿಂತ ಹೆಚ್ಚು ಉತ್ತಮವಾದ ಸಾಕ್ಷ್ಯ ಬೇರೊಂದಿಲ್ಲ. ಏಕೆಂದರೆ, ಇಂದು, ನಾನು ಈ ಸಾಲುಗಳನ್ನು ಬರೆಯುತ್ತಿರುವಾಗ ಯೂರೋಪಿಯನ್ ಹಾಗೂ ಅಮೆರಿಕನ್ ಕಾರ್ಮಿಕ ವರ್ಗವು ತನ್ನ ಯೋಧದಳಗಳ ಪ್ರದರ್ಶನದ ಪರಿಶೀಲನೆಯನ್ನು ನಡೆಸುತ್ತಿದೆ. ಈ ಯೋಧದಳಗಳನ್ನು ಪ್ರಪ್ರಥಮ ಬಾರಿಗೆ ಒಂದೇ ಸೇನೆಯಾಗಿ, ಒಂದೇ ಧ್ವಜದಡಿ, ಒಂದೇ ತುರ್ತಿನ ಗುರಿ ಸಾಧನೆಗಾಗಿ ಅಣಿನೆರೆಯಿಸಲಾಗಿದೆ. 1866ರಲ್ಲಿ ಇಂಟರ್‌ನ್ಯಾಷನಲ್‌ನ ಜಿನೀವಾ ಮಹಾಧಿವೇಶನವೂ ಆನಂತರ 1889ರಲ್ಲಿ ಪ್ಯಾರಿಸ್ ಕಾರ್ಮಿಕರ ಮಹಾಧಿವೇಶನವೂ ಘೋಷಿಸಿದಂತೆ, ನಿಗದಿಯಾದ 8 ಗಂಟೆಗಳ ಕೆಲಸದ ದಿನವನ್ನು ಶಾಸನರೀತ್ಯಾ ಜಾರಿಗೆ ತರಬೇಕು ಎಂಬುದೇ ಆ ತುರ್ತಿನ ಗುರಿಯಾಗಿದ್ದಿತು. ಇಂದಿನ ದೃಶ್ಯವು ಎಲ್ಲ ದೇಶಗಳ ಬಂಡವಾಳಗಾರರ ಹಾಗೂ ಭೂಮಾಲಿಕರ ಕಣ್ಣು ತೆರೆಯಿಸಿ, ಎಲ್ಲ ದೇಶಗಳ ಶ್ರಮಜೀವಿಗಳೂ ಇಂದು ನಿಜಕ್ಕೂ ಒಂದುಗೂಡಿದ್ದಾರೆ ಎಂಬ ಸತ್ಯ ಸಂಗತಿಯನ್ನು ತೋರಿಸಲಿರುವುದು.

ಮಾರ್ಕ್ಸ್‌ರವರೂ ಈ ದೃಶ್ಯವನ್ನು ಕಣ್ಣಾರೆ ಕಾಣಲು ನನ್ನ ಜೊತೆಯಲ್ಲಿ ಇದ್ದಿದ್ದರೆ !

ಎಫ್. ಎಂಗೆಲ್ಸ್

ಲಂಡನ್, ಮೇ 1, 1890

# 1892ರ ಪೋಲಿಷ್ ಆವೃತ್ತಿಗೆ ಮುನ್ನುಡಿ

"ಕಮ್ಯೂನಿಸ್ಟ್ ಪ್ರಣಾಳಿಕೆ"ಯ ಒಂದು ಹೊಸ ಪೋಲಿಷ್ ಆವೃತ್ತಿ ಅವಶ್ಯಕವಾಯಿತೆಂಬ ವಾಸ್ತವಾಂಶವೇ ಅನೇಕ ಆಲೋಚನೆಗಳಿಗೆ ಎಡೆಮಾಡಿಕೊಟ್ಟಿದೆ.

ಮೊದಲನೆಯದಾಗಿ, ಈ "ಪ್ರಣಾಳಿಕೆ"ಯು ಇತ್ತೀಚೆಗೆ ಯೂರೋಪಿಯನ್ ಖಂಡದಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಯ ಬೆಳವಣಿಗೆಯ ದರ್ಜೆಯನ್ನು ಅಳೆಯುವ ಸೂಚಿಯೇನೋ ಎನ್ನುವಂತಾಗಿರುವುದು ಗಮನಾರ್ಹವಾಗಿದೆ. ಯಾವುದೇ ದೇಶದಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆ ಅಭಿವೃದ್ಧಿಗೊಂಡಂತೆ ಅದಕ್ಕೆ ಅನುಗುಣವಾಗಿ ಆ ದೇಶದ ಕಾರ್ಮಿಕರ ಮಧ್ಯೆ, ಉಳ್ಳವರ ವರ್ಗಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ವರ್ಗವಾಗಿ ತಮ್ಮ ಸ್ಥಾನಮಾನ ಏನು ಎಂಬುದನ್ನು ತಿಳಿದುಕೊಳ್ಳಬೇಕೆಂಬ ಜಾಗೃತಿಯೂ ಬೆಳೆಯುತ್ತಾ ಹೋಗುತ್ತದೆ. ಅವರ ಮಧ್ಯೆ ಸಮಾಜವಾದೀ ಚಳವಳಿಯೂ ಹರಡುತ್ತದೆ; "ಪ್ರಣಾಳಿಕೆ"ಗಾಗಿ ಕೇಳಿಕೆಯೂ ಹೆಚ್ಚುತ್ತದೆ. ಹೀಗಾಗಿ ಪ್ರತಿಯೊಂದು ದೇಶದಲ್ಲೂ ಶ್ರಮಜೀವಿ ಚಳವಳಿಯ ಸ್ಥಿತಿಗತಿಯನ್ನಷ್ಟೆ ಅಲ್ಲ ಅಲ್ಲಿನ ಬೃಹತ್ ಕೈಗಾರಿಕೆಯ ಬೆಳವಣಿಗೆಯ ಪ್ರಮಾಣವನ್ನೂ ಆ ದೇಶದ ಭಾಷೆಯಲ್ಲಿ ಪ್ರಸಾರವಾಗಿರುವ "ಪ್ರಣಾಳಿಕೆ"ಯ ಪ್ರತಿಗಳ ಸಂಖ್ಯೆಯಿಂದ ಸಾಕಷ್ಟು ಕರಾರುವಾಕ್ಕಾಗಿ ಅಳೆಯಬಹುದಾಗಿದೆ.

ಇದಕ್ಕನುಗುಣವಾಗಿ, ಪೋಲಿಷ್ ಭಾಷೆಯಲ್ಲಿ "ಪ್ರಣಾಳಿಕೆ"ಯ ಹೊಸ ಆವೃತ್ತಿ ಪ್ರಕಟಗೊಂಡಿರುವುದು ಪೋಲಿಷ್ ಕೈಗಾರಿಕೆಯು ಖಚಿತವಾದ ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ಸೂಚಿಸುತ್ತದೆ. ಹತ್ತು ವರ್ಷಗಳ ಹಿಂದೆ ಇದಕ್ಕೆ ಮುನ್ನಿನ ಆವೃತ್ತಿ ಪ್ರಕಟವಾದನಂತರದ ಕಾಲದಲ್ಲಿ ಕೈಗಾರಿಕೆಯಲ್ಲಿ ಈ ಪ್ರಗತಿಯು ನಿಜಕ್ಕೂ ಉಂಟಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಪೋಲಿಷ್ ರಾಜ್ಯ – ಕಾಂಗ್ರೆಸ್ ಪೋಲೆಂಡ್[20] – ರಶಿಯನ್ ಸಾಮ್ರಾಜ್ಯದ

ಭಾರಿ ಕೈಗಾರಿಕಾ ಪ್ರಾಂತವಾಗಿ ಆಗಿದೆ. ರಶಿಯದಲ್ಲಿ ಬೃಹತ್ ಕೈಗಾರಿಕೆ ಅಲ್ಲೊಂದು ಇಲ್ಲೊಂದು ಎನ್ನುವಂತೆ ವಿರಳವಾಗಿ ಹರಡಿದ್ದರೆ – ಒಂದು ಭಾಗ ಫಿನ್ಲೆಂಡ್ ಖಾರಿಯ ಸುತ್ತ, ಮತ್ತೊಂದು ಮಧ್ಯ ಭಾಗದಲ್ಲಿ (ಮಾಸ್ಕೋ ಹಾಗೂ ವ್ಲದೀಮಿರ್), ಮೂರನೆಯದು ಕಪ್ಪು ಹಾಗೂ ಅಜೋವ್ ಸಮುದ್ರಗಳ ತೀರಗಳ ಉದ್ದಕ್ಕೂ, ಮತ್ತೆ ಇತರ ಕೆಲವು ಬೇರೆ ಎಡೆಗಳಲ್ಲಿ, ಹರಡಿದ್ದರೆ – ಪೋಲಿಷ್ ಕೈಗಾರಿಕೆಯು ತುಲನಾತ್ಮಕವಾಗಿ ಸಣ್ಣದಾದ ಕ್ಷೇತ್ರದಲ್ಲಿ ಅಡಕವಾಗಿ ತುಂಬಿದೆ, ಅಂಥ ಕೇಂದ್ರೀಕರಣದಿಂದ ಲಭಿಸುವ ಅನುಕೂಲ ಅನಾನುಕೂಲಗಳೆರಡನ್ನೂ ಅನುಭವಿಸುತ್ತಿದೆ. ಪೋಲೆಂಡಿನ ಜನರನ್ನು ರಶಿಯನ್ನರನ್ನಾಗಿ ಪರಿವರ್ತಿಸುವ ಉತ್ಕಟೇಚ್ಛೆಯಿದ್ದರೂ, ಪೈಪೋಟಿ ಹೂಡಿದ್ದ ರಶಿಯನ್ ಕಾರ್ಖಾನೆ ಒಡೆಯರು ಕೇಂದ್ರೀಕರಣದಲ್ಲಿರುವ ಅನುಕೂಲತೆಗಳನ್ನು ಗಮನಿಸಿ ಪೋಲೆಂಡಿನ ವಸ್ತುಗಳ ಮೇಲೆ ಆಮದು ಸುಂಕ ಹೇರಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಪೋಲಿಷ್ ಕಾರ್ಖಾನೆ ಒಡೆಯರ ಮತ್ತು ರಶಿಯನ್ ಸರಕಾರದ ದೃಷ್ಟಿಯಿಂದ ಕೇಂದ್ರೀಕರಣದಲ್ಲಿರುವ ಅನಾನುಕೂಲತೆಗಳೆಂದರೆ – ಪೋಲಿಷ್ ಕಾರ್ಮಿಕರ ಮಧ್ಯೆ ಸಮಾಜವಾದೀ ವಿಚಾರಗಳು ಶೀಘ್ರವಾಗಿ ವ್ಯಾಪಿಸುತ್ತಿರುವುದಾಗಿದೆ, "ಪ್ರಣಾಳಿಕೆ"ಗಾಗಿ ಬೇಡಿಕೆ ಹೆಚ್ಚುತ್ತಿರುವುದಾಗಿದೆ.

ಆದರೆ, ರಶಿಯದ ಕೈಗಾರಿಕಾಭಿವೃದ್ಧಿಯನ್ನೂ ಮೀರಿಸಿ ಪೋಲಿಷ್ ಕೈಗಾರಿಕೆಯು ಶೀಘ್ರವಾಗಿ ಅಭಿವೃದ್ಧಿಗೊಳ್ಳುತ್ತಿರುವುದು ಪೋಲೆಂಡಿನ ಜನತೆಯ ಅಕ್ಷಯ ಚೈತನ್ಯಕ್ಕೆ ಒಂದು ಹೊಸ ಪ್ರಮಾಣವಾಗಿದೆ ಮತ್ತು ಮುಂಬರಲಿರುವ ಅದರ ರಾಷ್ಟ್ರೀಯ ಪುನರುತ್ಥಾನಕ್ಕೆ ಒಂದು ಹೊಸ ಭರವಸೆಯೂ ಆಗಿದೆ. ಸ್ವತಂತ್ರವಾದ ಬಲಿಷ್ಠವಾದ ಪೋಲೆಂಡಿನ ಪುನರುತ್ಥಾನವು ಪೋಲೆಂಡ್ ಜನರಿಗೆ ಸೇರಿದ ವಿಷಯವಷ್ಟೆ ಅಲ್ಲ ನಮ್ಮೆಲ್ಲರಿಗೂ ಸೇರಿದುದಾಗಿದೆ. ಯೂರೋಪಿಯನ್ ರಾಷ್ಟ್ರಗಳಲ್ಲಿ ಒಂದೊಂದೂ ತನ್ನ ಸ್ವಂತ ಮನೆಯಲ್ಲಿ ಸಂಪೂರ್ಣವಾಗಿ ಸ್ವಾಯತ್ತವಾಗಿದ್ದರಷ್ಟೆ ಆ ಎಲ್ಲ ರಾಷ್ಟ್ರಗಳ ಪ್ರಾಮಾಣಿಕ ಅಂತರರಾಷ್ಟ್ರೀಯ ಸಹಕಾರ ಸಾಧ್ಯ. ಶ್ರಮಜೀವಿ ವರ್ಗದ ಧ್ವಜವಡಿ ಶ್ರಮಜೀವಿ ಯೋಧರುಗಳು ಬೂರ್ಷ್ವಾಸೀಯ ಕೆಲಸ ಮಾಡಬೇಕಿದ್ದ 1848ರ ಕ್ರಾಂತಿಯು ತನ್ನ ನಿಯಮಿತ ಕಾರ್ಯ ನಿರ್ವಾಹಕರಾದ ಲುಯಿ ಬೋನಪಾರ್ಟ್ ಮತ್ತು ಬೀಸ್ಮಾರ್ಕ್‌ರ[21] ಮೂಲಕ ಇಟಲಿ, ಜರ್ಮನಿ ಹಾಗೂ ಹಂಗೇರಿಗಳ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಿತು. ಆದರೆ 1792ರಿಂದ ಕ್ರಾಂತಿಗೆ ಈ ಎಲ್ಲ ರಾಜ್ಯಗಳೂ ಒಟ್ಟಿಗೆ ಸೇರಿ ಮಾಡಿದುದಕ್ಕಿಂತ ಹೆಚ್ಚಾಗಿ ಮಾಡಿದ ಪೋಲೆಂಡನ್ನು ಅದರ ಅದೃಷ್ಟಕ್ಕೇ ಬಿಟ್ಟು ಬಿಡಲಾಯಿತು. ಇದರಿಂದಾಗಿ 1863ರಲ್ಲಿ ಅದು ಅದಕ್ಕಿಂತ ಹತ್ತು ಪಟ್ಟು ಹೆಚ್ಚು ಶಕ್ತಿಯುತವಾಗಿದ್ದ ರಶಿಯದ ಬಲಕ್ಕೆ[22] ಮಣಿಯಿತು.

ಕುಲೀನರು ಪೋಲೆಂಡಿನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೂ ಅಸಮರ್ಥರಾದರು, ಪುನಃ ಪಡೆದುಕೊಳ್ಳಲೂ ಅಸಮರ್ಥರಾದರು; ಇಂದು, ಬೂರ್ಷ್ವಾಸೀಗೆ ಈ ಸ್ವಾತಂತ್ರ್ಯವು, ಕನಿಷ್ಠ ಪಕ್ಷ, ಅಪ್ರಧಾನವಾಗಿದೆ. ಆದರೂ ಎಲ್ಲ ಯೂರೋಪಿಯನ್ ರಾಷ್ಟ್ರಗಳ ಸಾಮರಸ್ಯ ಸಹಕಾರಕ್ಕೆ ಅದೊಂದು ಅವಶ್ಯಕ. ಸ್ವಾತಂತ್ರ್ಯವನ್ನು ಎಳೆಯ ಪೋಲಿಷ್ ಶ್ರಮಜೀವಿ ವರ್ಗವಷ್ಟೆ ಗಳಿಸಬಲ್ಲುದು ಮತ್ತು ಅದರ ಕೈಗಳಲ್ಲಷ್ಟೆ ಅದು ಸುಭದ್ರ. ಏಕೆಂದರೆ ಯೂರೋಪಿನ ಉಳಿದ ದೇಶಗಳ ಕಾರ್ಮಿಕರಿಗೆ ಪೋಲೆಂಡಿನ ಸ್ವಾತಂತ್ರ್ಯವು. ಪೋಲಿಷ್ ಕಾರ್ಮಿಕರಿಗೆ ಬೇಕಾಗುವಷ್ಟೇ ಬೇಕು.

ಎಫ್. ಎಂಗೆಲ್ಸ್

ಲಂಡನ್, ಫೆಬ್ರುವರಿ 10, 1892

# 1893ರ ಇಟಾಲಿಯನ್ ಆವೃತ್ತಿಗೆ ಮುನ್ನುಡಿ

## ಇಟಾಲಿಯನ್ ಓದುಗರಿಗೆ

"ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ"ಯ ಪ್ರಕಟಣೆಯು ಮಿಲಾನ್ ಹಾಗೂ ಬರ್ಲಿನ್‌ಗಳಲ್ಲಿ ಕ್ರಾಂತಿಗಳು ಉಂಟಾದ ದಿನದೊಂದಿಗೇ, ಅಂದರೆ 1848ರ ಮಾರ್ಚ್ 18ರೊಂದಿಗೇ, ತಾಳೆಬಿದ್ದಿತೆಂದು ಹೇಳಬಹುದಾಗಿದೆ. ಈ ಕ್ರಾಂತಿಗಳು ಕೇಂದ್ರ ಸ್ಥಾನದಲ್ಲಿದ್ದ ಎರಡು ರಾಷ್ಟ್ರಗಳ ಸಶಸ್ತ್ರ ಬಂಡಾಯಗಳಾಗಿದ್ದವು – ಒಂದು ಯೂರೋಪಿಯನ್ ಖಂಡದ ಕೇಂದ್ರದಲ್ಲಿ, ಇನ್ನೊಂದು ಭೂಮಧ್ಯ ಸಮುದ್ರದ ಮಧ್ಯದಲ್ಲಿ. ಈ ಎರಡು ರಾಷ್ಟ್ರಗಳೂ ಅಲ್ಲಿಯವರೆಗೂ ವಿಭಜನೆ ಹಾಗೂ ಆಂತರಿಕ ಕಲಹದಿಂದಾಗಿ ಬಲಹೀನವಾಗಿದ್ದವು, ಹಾಗಾಗಿ ವಿದೇಶೀ ದಬ್ಬಾಳಿಕೆಗೆ ಗುರಿಯಾಗಿದ್ದವು. ಇಟಲಿಯು ಆಸ್ಟ್ರಿಯದ ಚಕ್ರವರ್ತಿಯ ಆಡಳಿತಕ್ಕೆ ಸಿಕ್ಕಿಬಿದ್ದಿದ್ದರೆ, ಜರ್ಮನಿಯು, ಎಲ್ಲ ರಶಿಯಗಳ ತ್ಸಾರ್ ಚಕ್ರವರ್ತಿಯ ನೊಗದಡಿ ನರಳುತ್ತಿದ್ದಿತು. ಈ ಪರಾಧೀನತೆಯು ಪರೋಕ್ಷವಾಗಿದ್ದರೂ ಅದರ ಪರಿಣಾಮ ಕಮ್ಮಿಯಾಗೇನೂ ಇರಲಿಲ್ಲ. 1848ರ ಮಾರ್ಚ್ ದಿನಾಂಕ 18ನೆ ತೇದಿಯ ಘಟನೆಗಳ ಪರಿಣಾಮಗಳು ಇಟಲಿ ಹಾಗೂ ಜರ್ಮನಿಗಳೆರಡನ್ನೂ ಈ ಅವಮಾನ ಸ್ಥಿತಿಯಿಂದ ಬಿಡುಗಡೆ ಮಾಡಿದವು. ಈ ಎರಡು ಮಹಾ ರಾಷ್ಟ್ರಗಳೂ 1848ರಿಂದ 1871ರ ಅವಧಿಯಲ್ಲಿ ಪುನಸ್ಸಂಘಟಿತವಾಗಿ ಹೇಗೋ ಪುನಃ ತಮ್ಮ ಕಾಲ ಮೇಲೆ ತಾವು ಎದ್ದು ನಿಲ್ಲುವಂತಾಗಿದ್ದರೆ, ಅದಕ್ಕೆ ಕಾರ್ಲ್ ಮಾರ್ಕ್ಸ್‌ರವರು ಹೇಳುತ್ತಿದ್ದಂತೆ, 1848ರ ಕ್ರಾಂತಿಯನ್ನು ಹತ್ತಿಕ್ಕಿದ ಜನರೇ, ತಮಗಿಷ್ಟವಿಲ್ಲದಿದ್ದರೂ ತಾವೇ ಕ್ರಾಂತಿಯ ನಿಯಮಿತ ಕಾರ್ಯನಿರ್ವಾಹಕರಾಗಿದ್ದುದು, ಕಾರಣವಾಗಿದ್ದಿತು.

ಪ್ರತಿಯೊಂದು ಕಡೆಯಲ್ಲಿಯೂ ಆ ಕ್ರಾಂತಿಯು ಕಾರ್ಮಿಕ ವರ್ಗದ ಕಾರ್ಯವಾಗಿದ್ದಿತು; ಈ ಕಾರ್ಮಿಕ ವರ್ಗವೇ ಅಳ್ವೇರಿಗಳನ್ನು ನಿರ್ಮಿಸಿ

ನೆತ್ತರನ್ನು ಸುರಿಸಿ ಕ್ರಾಂತಿಯನ್ನು ಆಗುಮಾಡಿದುದು. ಪ್ಯಾರಿಸ್ ಕಾರ್ಮಿಕರಷ್ಟೆ ಸರಕಾರವನ್ನು ಉರುಳಿಸುವಾಗ ಬೂರ್ಷ್ವಾಸೀಯು ಆಡಳಿತವನ್ನೂ ಉರುಳಿಸುವ ಅತ್ಯಂತ ನಿರ್ದಿಷ್ಟ ಉದ್ದೇಶ ಹೊಂದಿದ್ದುದು. ಆದರೆ ತಮ್ಮ ಸ್ವಂತ ವರ್ಗ ಹಾಗೂ ಬೂರ್ಷ್ವಾಸೀಯು ನಡುವೆ ಅಸ್ತಿತ್ವದಲ್ಲಿದ್ದ ಅನಿವಾರ್ಯ ವಿರೋಧದ ಬಗೆಗೆ ಅವರು ಮನವರಿಕೆ ಹೊಂದಿದ್ದರೂ ಸಹ, ದೇಶದ ಆರ್ಥಿಕ ಪ್ರಗತಿಯಾಗಲೀ ಫ್ರೆಂಚ್ ಕಾರ್ಮಿಕ ಜನಸಮೂಹದ ಬೌದ್ಧಿಕ ಬೆಳವಣಿಗೆಯಾಗಲೀ ಸಾಮಾಜಿಕ ಪುನರ್ ನಿರ್ಮಾಣ ಸಾಧ್ಯವಾಗುವಂತೆ ಮಾಡುವ ಘಟ್ಟವನ್ನು ಇನ್ನೂ ತಲುಪಿರಲಿಲ್ಲ. ಆದ್ದರಿಂದ ಕೊನೆಯ ವಿಶ್ಲೇಷಣೆಯಲ್ಲಿ, ಕ್ರಾಂತಿಯ ಫಲಗಳನ್ನೆಲ್ಲ ಬಂಡವಾಳಶಾಹಿ ವರ್ಗವೇ ಪಡೆದುಕೊಂಡಿದ್ದಿತು. ಇತರ ದೇಶಗಳಲ್ಲಿ, ಇಟಲಿಯಲ್ಲಿ, ಜರ್ಮನಿಯಲ್ಲಿ, ಆಸ್ಟ್ರಿಯಾದಲ್ಲಿ, ಕಾರ್ಮಿಕರು ಆರಂಭದಿಂದಲೇ ಬೂರ್ಷ್ವಾಸೀಯನ್ನು ಅಧಿಕಾರಕ್ಕೇರಿಸುವುದನ್ನು ಬಿಟ್ಟು ಬೇರೇನನ್ನೂ ಮಾಡಲಿಲ್ಲ. ಆದರೆ ಯಾವುದೇ ದೇಶದಲ್ಲಾಗಲೀ ರಾಷ್ಟ್ರೀಯ ಸ್ವಾತಂತ್ರ್ಯವಿಲ್ಲದೆ ಬೂರ್ಷ್ವಾ ಆಧಿಪತ್ಯ ಅಸಾಧ್ಯ. ಆದ್ದರಿಂಧ 1848ರ ಕ್ರಾಂತಿಯು ತನ್ನ ಹಿಂಬದಿಯಲ್ಲೇ ಅದುವರೆವಿಗೂ ಐಕ್ಯತೆ ಹಾಗೂ ಸ್ವಾತಂತ್ರ್ಯಗಳನ್ನು ಹೊಂದಿರದಿದ್ದ ಇಟಲಿ, ಜರ್ಮನಿ, ಹಂಗೇರಿಗಳಿಗೆ ಅವನ್ನು ತಂದುಕೊಡಬೇಕಿದ್ದಿತು. ಪೋಲೆಂಡ್ ಕೂಡ ತನ್ನ ಸರದಿ ಬಂದಾಗ ಆ ರಾಷ್ಟ್ರಗಳನ್ನು ಹಿಂಬಾಲಿಸುವುದು.

ಹಾಗಾಗಿ, 1848ರ ಕ್ರಾಂತಿಯು ಸಮಾಜವಾದೀ ಕ್ರಾಂತಿಯಾಗಿರದಿದ್ದರೂ, ಅಂಥ ಕ್ರಾಂತಿಗೆ ಮಾರ್ಗ ಸುಗಮ ಮಾಡಿಕೊಟ್ಟಿತು, ನೆಲೆ ಸಿದ್ಧಗೊಳಿಸಿಕೊಟ್ಟಿತು. ಎಲ್ಲ ದೇಶಗಳಲ್ಲೂ ಬೃಹತ್ ಪ್ರಮಾಣದ ಕೈಗಾರಿಕೆಗೆ ನೀಡಿದ ರಭಸದ ವಿಕಾಸದ ಮೂಲಕ ಬೂರ್ಷ್ವಾ ವ್ಯವಸ್ಥೆಯು ಕಳೆದ ನಲವತ್ತೈದು ವರ್ಷಗಳಲ್ಲಿ ಎಲ್ಲೆಲ್ಲೂ ಅಸಂಖ್ಯಾತವಾದ, ಕೇಂದ್ರೀಕೃತವಾದ ಹಾಗೂ ಪ್ರಬಲವಾದ ಶ್ರಮಜೀವಿ ವರ್ಗವನ್ನು ಸೃಜಿಸಿದೆ. ಹೀಗೆ ಅದು, "ಪ್ರಣಾಳಿಕೆ"ಯ ಭಾಷೆಯನ್ನು ಬಳಸುವುದಾದರೆ, ತನ್ನ ಸ್ವಂತ ಗೋರಿ ತೋಡುವವರನ್ನು ತಾನೇ ಸೃಜಿಸಿದೆ. ಪ್ರತಿಯೊಂದು ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಐಕ್ಯತೆಯನ್ನು ಪುನರ್‌ಸ್ಥಾಪಿಸಿದ ಹೊರತು ಶ್ರಮಜೀವಿ ವರ್ಗದ ಅಂತರರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಸಾಧ್ಯವಿಲ್ಲ, ಸಾಮಾನ್ಯ ಗುರಿ ಸಾಧನೆಗಾಗಿ ಈ ರಾಷ್ಟ್ರಗಳ ಶಾಂತಿಯುತ ಮತ್ತು ದಕ್ಷ ಸಹಕಾರ ಸಾಧಿಸುವುದೂ ಸಾಧ್ಯವಿಲ್ಲ. 1848ರ ಮುನ್ನಿನ ರಾಜಕೀಯ ಪರಿಸ್ಥಿತಿಗಳಲ್ಲಿ ಇಟಲಿ, ಹಂಗೇರಿ, ಜರ್ಮನಿ, ಪೋಲೆಂಡ್ ಹಾಗೂ ರಶಿಯ ಈ ದೇಶಗಳ ಕಾರ್ಮಿಕರ ಸಂಯುಕ್ತ ಅಂತರರಾಷ್ಟ್ರೀಯ ಕಾರ್ಯಾಚರಣೆ ಊಹಿಸಲಾದರೂ ಸಾಧ್ಯವೇ !

ಆದ್ದರಿಂದ 1848ರಲ್ಲಿ ನಡೆಸಿದ ಹೋರಾಟಗಳು ನಿರರ್ಥಕವಾಗಿರಲಿಲ್ಲ. ಆ ಕ್ರಾಂತಿಕಾರೀ ಯುಗವನ್ನು ನಮ್ಮಿಂದ ಪ್ರತ್ಯೇಕಿಸಿರುವ ಈ ನಲವತ್ತೈದು ವರ್ಷಗಳೂ ಉದ್ದೇಶರಹಿತವಾಗೇನೂ ಕಳೆದು ಹೋಗಿಲ್ಲ. ಹಣ್ಣುಗಳು ಮಾಗುತ್ತಿವೆ. ನನ್ನ ಮನದಾಶೆಯೆಲ್ಲ ಇಷ್ಟೆ: ಈ ಪ್ರಣಾಳಿಕೆಯ ಮೂಲಪ್ರತಿಯ ಪ್ರಕಟಣೆಯು ಅಂತರರಾಷ್ಟ್ರೀಯ ಕ್ರಾಂತಿಗೆ ಎಷ್ಟು ಶುಭಕಾರಿಯಾಯಿತೋ ಹಾಗೆಯೇ ಈ ಇಟಾಲಿಯನ್ ಭಾಷಾಂತರ ಪ್ರಕಟಣೆಯೂ ಇಟಾಲಿಯನ್ ಶ್ರಮಜೀವಿಗಳ ವಿಜಯಕ್ಕೆ ಶುಭಕಾರಿಯಾಗುವಂತಾಗಲಿ.

ಈ "ಪ್ರಣಾಳಿಕೆ"ಯು ಹಿಂದೆ ಬಂಡವಾಳವಾದ ನಿರ್ವಹಿಸಿದ ಕ್ರಾಂತಿಕಾರೀ ಪಾತ್ರವನ್ನು ನಿಷ್ಪಕ್ಷಪಾತವಾಗಿ ನೋಡಿದೆ. ಇಟಲಿಯು ಮೊದಲ ಬಂಡವಾಳ ಶಾಹಿ ರಾಷ್ಟ್ರವಾಗಿದ್ದಿತು. ಸಾಮಂತಶಾಹಿ ಮಧ್ಯಯುಗದ ಅಂತ್ಯ ಹಾಗೂ ಆಧುನಿಕ ಬಂಡವಾಳವಾದ ಯುಗದ ಆರಂಭ ಕಾಲವು ಒಬ್ಬ ಅತ್ಯದ್ಭುತ ವ್ಯಕ್ತಿಯನ್ನು ಕಂಡಿತು. ಆತನೇ ಇಟಲಿಯ ಕವಿ ಡಾಂಟೆ. ಆತ ಮಧ್ಯಯುಗದ ಕೊನೆಯ ಕವಿಯಾಗಿದ್ದಂತೆಯೇ ಆಧುನಿಕ ಕಾಲದ ಪ್ರಥಮ ಕವಿಯೂ ಆಗಿದ್ದರು. ಇಂದು, 1300ನೆಯ ವರ್ಷದಲ್ಲಿದ್ದಂತೆಯೇ, ಒಂದು ಹೊಸ ಚಾರಿತ್ರಿಕ ಯುಗ ಸಮೀಪಿಸುತ್ತಿದೆ. ಈ ಹೊಸ, ಶ್ರಮಜೀವಿ ಯುಗದ ಜನ್ಮದ ಘಳಿಗೆಯನ್ನು ಗುರುತಿಸುವ ಒಬ್ಬ ಹೊಸ ಡಾಂಟೆಯನ್ನು ಇಟಲಿಯು ನಮಗೆ ನೀಡುವುದೆ?

ಫ್ರೆಡರಿಕ್ ಎಂಗೆಲ್ಸ್

ಲಂಡನ್, ಫೆಬ್ರುವರಿ 1, 1893

# ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ

ಯೂರೋಪು ಒಂದು ಸಿಂಪಸ್ವಪ್ನದ ಹಿಡಿತಕ್ಕೆ – ಕಮ್ಯೂನಿಸಂ ಎನ್ನುವ ಭೀತಿಯ ಹಿಡಿತಕ್ಕೆ – ಸಿಕ್ಕಿಬಿದ್ದಿದೆ. ಈ ಭೀತಿಯನ್ನು ಹೋಗಲಾಡಿಸಲೋಸುಗ ಹಳೆಯ ಯೂರೋಪಿನ ಎಲ್ಲ ಆಡಳಿತ ಶಕ್ತಿಗಳೂ – ಪೋಪ್ ಹಾಗೂ ತ್ಸಾರ್, ಮೆಟೆರ್‌ನಿಕ್ ಹಾಗೂ ಗಿಜೋ,[23] ಫ್ರೆಂಚ್ ಉಗ್ರವಾದಿಗಳು ಮತ್ತು ಜರ್ಮನ್ ಪೊಲೀಸ್ ಗುಪ್ತಚಾರರು, ಎಲ್ಲರೂ – ಒಂದು ಪವಿತ್ರ ಕೂಟವನ್ನು ಏರ್ಪಡಿಸಿ ಕೊಂಡಿದ್ದಾರೆ.

ಆಡಳಿತದಲ್ಲಿರುವ ಎದುರಾಳಿಗಳಿಂದ 'ಕಮ್ಯೂನಿಸ್ಟ್' ಎಂದು ತೆಗಳಲ್ಪಡದಿರುವ ವಿರೋಧ ಪಕ್ಷ ಎಲ್ಲಿದೆ? ತನ್ನ ಮೇಲೆ ಮಾಡಲಾದ 'ಕಮ್ಯೂನಿಸ್ಟ್' ಎಂಬ ಆರೋಪವನ್ನು ತನಗಿಂತಲೂ ಹೆಚ್ಚು ಮುಂದುವರಿದ ವಿರೋಧ ಪಕ್ಷಗಳ ಮೇಲೆಯೂ ತನ್ನ ಪ್ರತಿಗಾಮಿ ಶತ್ರುಗಳ ಮೇಲೆಯೂ ಹಿಂದಿರುಗಿ ಎಸೆಯದ ವಿರೋಧ ಪಕ್ಷವಾದರೂ ಎಲ್ಲಿದೆ?

ಈ ಸತ್ಯಸಂಗತಿಯಿಂದ ಎರಡು ವಿಷಯಗಳು ಹೊರಹೊಮ್ಮುತ್ತವೆ:

1. ಕಮ್ಯೂನಿಸಂ ಸ್ವತಃ ಒಂದು ಶಕ್ತಿಯಾಗಿದೆ ಎಂದು ಈಗಾಗಲೇ ಎಲ್ಲ ಯೂರೋಪಿಯನ್ ರಾಷ್ಟ್ರಗಳೂ ಒಪ್ಪಿಕೊಂಡಿವೆ.

2. ಕಮ್ಯೂನಿಸ್ಟರು ಬಹಿರಂಗವಾಗಿ ಇಡೀ ಜಗತ್ತಿನ ಮುಂದೆ ತಮ್ಮ ಅಭಿಪ್ರಾಯಗಳನ್ನೂ ಗುರಿಗಳನ್ನೂ ಮತ್ತು ತಮ್ಮ ಒಲವುಗಳನ್ನೂ ಪ್ರಕಟಪಡಿಸಿ ಕಮ್ಯೂನಿಸಂ ಎಂಬ ಸಿಂಪಸ್ವಪ್ನದ ಈ ಅಡಗೂಲಜ್ಜಿ ಕಥೆಗೆ ಎದುರಾಗಿ ಪಾರ್ಟಿಯ ಸ್ವಂತ ಪ್ರಣಾಳಿಕೆಯನ್ನು ಎತ್ತಿ ಹಿಡಿಯುವ ಕಾಲ ಸಮೀಪಿಸಿದೆ.

ಈ ಗುರಿ ಸಾಧನೆಗಾಗಿ ವಿವಿಧ ರಾಷ್ಟ್ರಗಳ ಕಮ್ಯೂನಿಸ್ಟರು ಲಂಡನ್ನಿನಲ್ಲಿ ಸಮಾವೇಶಗೊಂಡು ಇಂಗ್ಲಿಷ್, ಫ್ರೆಂಚ್, ಜರ್ಮನ್, ಇಟಾಲಿಯನ್, ಫ್ಲೆಮಿಷ್ ಹಾಗೂ ಡೇನಿಷ್ ಭಾಷೆಗಳಲ್ಲಿ ಪ್ರಕಟಿಸುವುದಕ್ಕಾಗಿ ಈ ಕೆಳಗಿನ ಪ್ರಣಾಳಿಕೆಯನ್ನು ಸಿದ್ಧಗೊಳಿಸಿದ್ದಾರೆ.

# I

# ಬೂರ್ಷ್ವಾಗಳು ಹಾಗೂ ಶ್ರಮಜೀವಿಗಳು*

ಇದುವರೆವಿಗೂ ಆಗಿಹೋಗಿರುವ ಎಲ್ಲ ಸಮಾಜದ ಇತಿಹಾಸವೂ** ವರ್ಗ ಹೋರಾಟಗಳ ಇತಿಹಾಸವೇ ಆಗಿದೆ.

---

* ಬೂರ್ಷ್ವಾಸೀ ಎಂದರೆ ಆಧುನಿಕ ಬಂಡವಾಳಗಾರ ವರ್ಗ ಎಂದರ್ಥ. ಇವರು ಸಾಮಾಜಿಕ ಉತ್ಪಾದನಾ ಸಾಧನಗಳ ಒಡೆಯರು. ವೇತನ ಪಡೆಯುವ ಕೂಲಿಯಾಳುಗಳನ್ನು ಕೆಲಸಕ್ಕಿಟ್ಟುಕೊಳ್ಳುವವರು. ಶ್ರಮಜೀವಿ ವರ್ಗ ಎಂದರೆ ವೇತನ ಪಡೆಯುವ ಆಧುನಿಕ ಕೂಲಿಯಾಳುಗಳು ಎಂದರ್ಥ. ಇವರು ತಮ್ಮದೇ ಉತ್ಪಾದನಾ ಸಾಧನಗಳಿಲ್ಲದೆಯೇ ಜೀವನೋಪಾಯಕ್ಕಾಗಿ ಸ್ವಂತ ಶ್ರಮಶಕ್ತಿಯನ್ನೇ ಮಾರಿಕೊಳ್ಳುವ ಸ್ಥಿತಿಗೆ ಇಳಿಸಲ್ಪಟ್ಟಿರುತ್ತಾರೆ. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರು ಬರೆದ ಟಿಪ್ಪಣಿ.)

** ಅಂದರೆ, ಎಲ್ಲ ಲಿಖಿತ ಇತಿಹಾಸ. 1847ರಲ್ಲಿ, ಸಮಾಜದ ಪೂರ್ವೇತಿಹಾಸದ, ಅಂದರೆ, ದಾಖಲಾದ ಇತಿಹಾಸಕ್ಕೆ ಮುನ್ನವಿದ್ದ, ಸಾಮಾಜಿಕ ಸಂಘಟನೆಯ ವಿಷಯ ಏನ್ನು ಮಾತ್ರವೂ ತಿಳಿದಿರಲಿಲ್ಲ. ಅಲ್ಲಿಂದೀಚೆಗೆ ಹಾಕ್ಸ್‌ಥೌಸೆನ್[24]ರು ರಶಿಯದಲ್ಲಿ ಭೂಮಿಯ ಸಾಮುದಾಯಿಕ ಒಡೆತನ ಇದ್ದುದನ್ನು ಕಂಡು ಹಿಡಿದರು. ಈ ಸಾಮುದಾಯಿಕ ಒಡೆತನ ಪದ್ಧತಿಯು ಒಂದು ಸಾಮಾಜಿಕ ಅಡಿಪಾಯವಾಗಿದ್ದಿತು, ಅದರಿಂದಲೇ ಇತಿಹಾಸದಲ್ಲಿ ಎಲ್ಲ ಟ್ಯೂಟಾನಿಕ್ ಕುಲಗಳೂ ಪ್ರಾರಂಭವಾದುದು ಎಂದು ಮೌರರ್[25] ಸಾಧಿಸಿ ತೋರಿದರು. ಕಾಲ ಕಳೆದಂತೆ ಈ ಗ್ರಾಮೀಣ ಸಮುದಾಯಗಳು ಭಾರತದಿಂದ ಹಿಡಿದು ಐರ್ಲೆಂಡ್‌ವರೆಗೆ ಎಲ್ಲೆಲ್ಲೂ ಸಮಾಜದ ಪುರಾತನ ಸ್ವರೂಪಗಳಾಗಿದ್ದವೆಂದು ಕಂಡುಬಂದವು ಇಲ್ಲವೇ ಕ್ರಮೇಣ ತಿಳಿದು ಬಂದವು. ಈ ಪುರಾತನ ಕಮ್ಯೂನಿಸ್ಟ್

ಸ್ವತಂತ್ರ ಮನುಷ್ಯ ಮತ್ತು ಗುಲಾಮ, ಕುಲೀನ (patrician) ಹಾಗೂ ಸಾಮಾನ್ಯ ಪ್ರಜೆ (plebean), ಭೂಮಾಲಿಕ ಹಾಗೂ ಜೀತದಾಳು, ಗಿಲ್ಡ್ ಮಾಸ್ಟರ್* ಹಾಗೂ ಕೂಲಿಕಾರ, ಒಂದು ಮಾತಿನಲ್ಲಿ ಮರ್ದಕ ಹಾಗೂ ಮರ್ದಿತ ಜನ, ಒಬ್ಬರಿಗೊಬ್ಬರು ಸದಾ ಎದುರಾಳಿಗಳಾಗಿ ನಿಂತು ನಿರಂತರವಾಗಿ ಒಮ್ಮೆ ಗುಪ್ತವಾಗಿ ಒಮ್ಮೆ ಬಹಿರಂಗವಾಗಿ ಹೋರಾಟ ನಡೆಸಿದರು. ಈ ಹೋರಾಟವು ಪ್ರತಿ ಬಾರಿಯೂ ಸಮಗ್ರ ಸಮಾಜದ ಕ್ರಾಂತಿಕಾರಿ ಪುನರ್ರಚನೆಯಲ್ಲಿ ಇಲ್ಲವೇ ಹೋರಾಟ ನಡೆಸುತ್ತಿರುವ ವರ್ಗಗಳ ಸರ್ವನಾಶದಲ್ಲಿ ಕೊನೆಗಂಡಿತು.

ಇತಿಹಾಸದ ಆರಂಭಿಕ ಯುಗಗಳಲ್ಲಿ ಬಹುಮಟ್ಟಿಗೆ ಎಲ್ಲೆಲ್ಲೂ ಸಂಕೀರ್ಣ ಸಮಾಜ ವ್ಯವಸ್ಥೆ ಇದ್ದುದನ್ನು ನಾವು ಕಾಣುತ್ತೇವೆ. ಈ ವ್ಯವಸ್ಥೆಯಲ್ಲಿ ನಾನಾ ಸ್ಥಾನಮಾನಗಳು, ಸಾಮಾಜಿಕ ದರ್ಜೆಗಳು ಹಾಗೂ ಅನೇಕಾನೇಕ ಮಜಲು ಗಳು ಇದ್ದವು. ಪುರಾತನ ರೋಂನಲ್ಲಿ ಪ್ಯಾಟ್ರೀಷಿಯನ್ನರು (ಕುಲೀನರು), ನೈಟ್ಸ್ (ಶ್ರೀಮಂತ ಸರದಾರರು), ಪ್ಲೆಬಿಯನ್ನರು (ಸಾಮಾನ್ಯ ಪ್ರಜೆಗಳು) ಎಂಬ ಪಂಗಡ ಗಳಿದ್ದವು; ಮಧ್ಯಯುಗದಲ್ಲಿ ಸಾಮಂತಶಾಹಿ ಮಾಲಿಕರು, ಅವರ ಅನುಚರರು, ಗಿಲ್ಡ್ ಮಾಸ್ಟರುಗಳು, ಅಭ್ಯಾಸಿಗಳು, ಕೂಲಿಕಾರರು, ಜೀತದಾಳುಗಳು ಇದ್ದರು. ಈ ಎಲ್ಲ ವರ್ಗಗಳೂ ಮತ್ತೆ ಉಪಪಂಗಡಗಳಾಗಿ ವಿಭಜನೆಯಾಗಿದ್ದವು.

---

ಸಮಾಜದ ಆಂತರಿಕ ಸಂಘಟನೆಯನ್ನು ಅದರ ಮಾದರಿ ರೂಪದಲ್ಲಿ, ಮೋರ್ಗನ್[26]ರು, ಜೆನ್‌ಗಳ (gens) ನಿಜಸ್ವರೂಪವನ್ನೂ ಬಣದೊಂದಿಗೆ (tribe) ಅದರ ಸಂಬಂಧವನ್ನೂ ಪತ್ತೆಹಚ್ಚುವ ಮುಕುಟಪ್ರಾಯವಾದ ಸಾಧನೆಯ ಮೂಲಕ ಪ್ರಕಟಪಡಿಸಿದರು. ಈ ಪ್ರಾಚೀನ ಸಮುದಾಯಗಳ ವಿಸರ್ಜನೆಯೊಂದಿಗೆ ಸಮಾಜವು ಬೇರೆ ಬೇರೆಯಾದ, ಕೊನೆಗೆ ಪರಸ್ಪರ ವಿರೋಧವಾದ ವರ್ಗಗಳು ಳಿದ್ದಾಗಿ ವಿಭಾಗಗೊಳ್ಳತೊಡಗಿತು. ನಾನು ಈ ವಿಸರ್ಜನೆಯ ಪ್ರಕ್ರಿಯೆಯನ್ನು "ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯದ ಉಗಮ" (*Der Ursprung der Familie, des Privateigentums und des Staats, 2. Aufl., Stuttgart, 1886*) ಎಂಬ ಗ್ರಂಥದಲ್ಲಿ ಆಮೂಲಾಗ್ರವಾಗಿ ಪರಿಶೀಲಿಸಲು ಯತ್ನಿಸಿದ್ದೇನೆ. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

* ಗಿಲ್ಡ್ ಮಾಸ್ಟರ್. ಅಂದರೆ ಗಿಲ್ಡ್ (ವೃತ್ತಿಸಂಘ) ಒಂದರ ಪೂರ್ಣ ಸದಸ್ಯ, ಸಂಘದೊಳಗೆ ಮೇಸ್ತ್ರಿ. ಆದರೆ ಸಂಘದ ಅಧಿಪತಿಯಲ್ಲ. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಸಾಮಂತಶಾಹಿ ಸಮಾಜದ ಭಗ್ನಾವಶೇಷಗಳಿಂದ ಹುಟ್ಟಿಬಂದಿರುವ ಆಧುನಿಕ ಬೂರ್ಷ್ವಾ ಸಮಾಜವು ವರ್ಗವೈರುಧ್ಯತೆಗಳನ್ನೇನೂ ತೊಡೆದುಹಾಕಿಲ್ಲ. ಬದಲು ಅದು ಹಳೆಯವುಗಳ ಸ್ಥಳದಲ್ಲಿ ಹೊಸ ವರ್ಗಗಳನ್ನು, ಹೊಸ ದಬ್ಬಾಳಿಕೆಯ ಪರಿಸ್ಥಿತಿಗಳನ್ನು ಮತ್ತು ಹೊಸ ಹೋರಾಟ ರೂಪಗಳನ್ನು ಅಸ್ತಿತ್ವಕ್ಕೆ ತಂದಿದೆ.

ಆದರೆ ನಮ್ಮ ಯುಗವು, ಬೂರ್ಷ್ವಾ ಯುಗವು, ಒಂದು ವಿಶಿಷ್ಟ ಲಕ್ಷಣವನ್ನು ಹೊಂದಿದೆ. ಅದೆಂದರೆ – ಅದು ವರ್ಗವೈರುಧ್ಯತೆಗಳನ್ನು ಸರಳಗೊಳಿಸಿರುವುದಾಗಿದೆ. ಸಮಾಜವು ಇಡೀಯಾಗಿ ಹಾಗೂ ಹೆಚ್ಚುಹೆಚ್ಚಾಗಿ ಎರಡು ಭಾರಿ ವಿರುದ್ಧ ಶಿಬಿರಗಳಾಗಿ, ಪರಸ್ಪರ ನೇರವಾಗಿ ಎದುರಿಸುತ್ತಿರುವ ಎರಡು ಮಹಾ ವರ್ಗಗಳಾಗಿ – ಬೂರ್ಷ್ವಾಸೀ ಹಾಗೂ ಶ್ರಮಜೀವಿ ವರ್ಗಗಳಾಗಿ – ವಿಭಜನೆಗೊಳ್ಳುತ್ತಿದೆ.

ಮಧ್ಯಯುಗದ ಜೀತದಾಳುಗಳ ಮಧ್ಯದಿಂದ ಮೊಟ್ಟಮೊದಲ ನಗರಗಳ ಸ್ವತಂತ್ರ ಪಟ್ಟಣಿಗರು ಉದ್ಭವಿಸಿದರು. ಈ ಪಟ್ಟಣಿಗರ ಮಧ್ಯದಿಂದ ಬೂರ್ಷ್ವಾಸೀಯ ಮೊದಲ ಮೂಲ ಪುರುಷರು ಹುಟ್ಟಿಕೊಂಡರು.

ಅಮೆರಿಕವನ್ನು ಕಂಡುಹಿಡಿದುದು, (ಗುಡ್ ಹೋಪ್) ಭೂಶಿರವನ್ನು ಬಳಸಿ ಸಮುದ್ರಯಾನ ಮಾಡಿದುದು, ಪ್ರವರ್ಧಮಾನಕ್ಕೆ ಬರುತ್ತಿದ್ದ ಬೂರ್ಷ್ವಾಸೀಗೆ ಹೊಸ ಕ್ಷೇತ್ರಗಳನ್ನು ತೆರೆದುಕೊಟ್ಟವು. ಈಸ್ಟ್ ಇಂಡಿಯಾ ಹಾಗೂ ಚೀಣೀ ಮಾರುಕಟ್ಟೆಗಳು, ಅಮೆರಿಕವನ್ನು ವಸಾಹತೀಕರಿಸಿದುದು, ನೆಲಸು ನಾಡುಗಳೊಂದಿಗೆ ವ್ಯಾಪಾರ, ವಿತರಣಾ ಸಾಧನಗಳಲ್ಲಿ ಒಟ್ಟಿನ ಮೇಲೆ ವಸ್ತು ಸಾಮಗ್ರಿಗಳಲ್ಲಿ ಹೆಚ್ಚಳ, ಇವು ವಾಣಿಜ್ಯಕ್ಕೆ, ಸಮುದ್ರಯಾನಕ್ಕೆ, ಕೈಗಾರಿಕೆಗೆ ಹಿಂದೆಂದೂ ಕಂಡರಿಯದಷ್ಟು ಉತ್ತೇಜನ ನೀಡಿದವು, ತನ್ಮೂಲಕ ತತ್ತರಿಸುತ್ತಿದ್ದ ಸಾಮಂತಶಾಹಿ ಸಮಾಜದಲ್ಲಿದ್ದ ಕ್ರಾಂತಿಕಾರೀ ಅಂಶಗಳಿಗೆ ತ್ವರಿತವಾಗಿ ಬೆಳೆಯುವುದಕ್ಕೆ ಉತ್ತೇಜನ ನೀಡಿದವು.

ಸಾಮಂತಶಾಹಿ ಕೈಗಾರಿಕಾ ಪದ್ಧತಿಯಲ್ಲಿ ಕೈಗಾರಿಕೋತ್ಪಾದನೆ ಸಂವೃತ್ತ ವೃತ್ತಿಸಂಘಗಳ ಏಕಸ್ವಾಮ್ಯಕ್ಕೊಳಪಟ್ಟಿದ್ದಿತು. ಅದು ಹೊಸ ಮಾರುಕಟ್ಟೆಗಳ ಹೆಚ್ಚುತ್ತಿದ್ದ ಕೇಳಿಕೆಗಳನ್ನು ಪೂರೈಸಲು ಎಷ್ಟು ಮಾತ್ರವೂ ಸಾಲುತ್ತಿರಲಿಲ್ಲ. ಹಾಗಾಗಿ ಅದರ ಸ್ಥಳದಲ್ಲಿ ಕೈಗೆಲಸದ ಕಾರ್ಖಾನೆ ಪದ್ಧತಿಯು (manufacture) ಜಾರಿಗೆ ಬಂದಿತು. ಈ ಹೊಸ ತಯಾರಿಕಾ ಪದ್ಧತಿಯ ಮಧ್ಯಮ ವರ್ಗದವರು ಗಿಲ್ಡ್ ಮಾಸ್ಟರುಗಳನ್ನು ತಳ್ಳಿಹಾಕಿದರು. ಪ್ರತಿಯೊಂದು ಕಾರ್ಖಾನೆಯಲ್ಲೂ ಶ್ರಮ ವಿಭಜನೆ ಉಂಟಾದುದರ ಫಲವಾಗಿ ವಿಭಿನ್ನ ಸಂಸ್ಥಾ ಗಿಲ್ಡ್‌ಗಳ ನಡುವಿನ ಶ್ರಮ ವಿಭಜನೆಯು ಕಣ್ಮರೆಯಾಯಿತು.

ಈ ಮಧ್ಯೆ ಮಾರುಕಟ್ಟೆಗಳು ಸತತವಾಗಿ ಹೆಚ್ಚುತ್ತ ಹೋದವು, ಕೇಳಿಕೆಯೂ ಸತತವಾಗಿ ಹೆಚ್ಚುತ್ತ ಹೋಯಿತು. ಕೈಗೆಲಸದ ಕಾರ್ಖಾನೆ ಪದ್ಧತಿಯೂ ಸಾಲ ದಾಯಿತು. ಅದಾದ ಮೇಲೆ ಆವಿ ಹಾಗೂ ಯಂತ್ರಗಳು ಕೈಗಾರಿಕೋತ್ಪಾದನೆಯಲ್ಲಿ ಕ್ರಾಂತಿಯನ್ನು ಉಂಟುಮಾಡಿದವು. ಕೈಗೆಲಸದ ಕಾರ್ಖಾನೆಯ ಸ್ಥಳದಲ್ಲಿ ಬೃಹತ್ ಪ್ರಮಾಣದ ಆಧುನಿಕ ಕೈಗಾರಿಕೆಯು ಬಂದಿತು. ಕೈಗಾರಿಕೆಯ ಮಧ್ಯಮ ವರ್ಗದ ಸ್ಥಳದಲ್ಲಿ ಕೈಗಾರಿಕೆಯ ಲಕ್ಷಾಧಿಪತಿಗಳು ಬಂದರು. ಇವರೇ ಇಡೀ ಕೈಗಾರಿಕಾ ಸೇನೆಗಳ ನಾಯಕರಾದರು, ಆಧುನಿಕ ಬೂರ್ಷ್ವಾಗಳಾದರು.

ಆಧುನಿಕ ಕೈಗಾರಿಕೆಯು ಜಾಗತಿಕ ಮಾರುಕಟ್ಟೆಯೊಂದನ್ನು ಸ್ಥಾಪಿಸಿದೆ. ಅಮೆರಿಕದ ಆವಿಷ್ಕರಣವು ಇದಕ್ಕೆ ದಾರಿ ಮಾಡಿಕೊಟ್ಟಿತು. ಈ ಜಾಗತಿಕ ಮಾರುಕಟ್ಟೆಯು ವಾಣಿಜ್ಯ, ಸಮುದ್ರಯಾನ, ಹಾಗೂ ಭೂಮಾರ್ಗ ಸಂಪರ್ಕಗಳನ್ನು ಅಪಾರವಾಗಿ ಅಭಿವೃದ್ಧಿಗೊಳಿಸಿದೆ. ಈ ಅಭಿವೃದ್ಧಿಯು, ತನ್ನ ಸರದಿಯಲ್ಲಿ, ಕೈಗಾರಿಕೆಯ ವಿಸ್ತರಣೆಯ ಮೇಲೆ ಪ್ರಭಾವ ಬೀರಿದೆ; ಕೈಗಾರಿಕೆ, ವಾಣಿಜ್ಯ, ಸಮುದ್ರಯಾನ ಹಾಗೂ ರೈಲು ಮಾರ್ಗಗಳು ಅಭಿವೃದ್ಧಿಗೊಂಡಂತೆ ಅದೇ ಪ್ರಮಾಣದಲ್ಲಿ ಬೂರ್ಷ್ವಾಸೀಯೂ ಅಭಿವೃದ್ಧಿಗೊಂಡಿತು, ತನ್ನ ಬಂಡವಾಳವನ್ನು ಹೆಚ್ಚಿಸಿಕೊಂಡಿತು. ಮಧ್ಯಯುಗದಿಂದ ಇದ್ದುಕೊಂಡು ಬಂದಿದ್ದ ಬೇರೆಲ್ಲ ವರ್ಗಗಳನ್ನೂ ಹಿನ್ನೆಲೆಗೆ ತಳ್ಳಿತು.

ಆದ್ದರಿಂದ ಆಧುನಿಕ ಬೂರ್ಷ್ವಾಸೀಯೇ ಹೇಗೆ ಬಹುಕಾಲದ ಬೆಳವಣಿಗೆಯ ಮತ್ತು ಉತ್ಪಾದನಾ ವಿಧಾನ ಹಾಗೂ ವಿನಿಮಯ ವಿಧಾನಗಳಲ್ಲಿ ಉಂಟಾದ ಕ್ರಾಂತಿಗಳ ಸರಮಾಲೆಯ ಪರಿಣಾಮವಾಗಿದೆ ಎಂಬುದನ್ನು ನಾವು ಕಾಣುತ್ತೇವೆ.

ಬೂರ್ಷ್ವಾಸೀಯು ಒಂದೊಂದು ಹೆಜ್ಜೆ ಅಭಿವೃದ್ಧಿಗೊಂಡ ಹಾಗೂ, ಅದಕ್ಕನುಗುಣವಾಗಿ, ಆ ವರ್ಗದ ರಾಜಕೀಯ ಮುನ್ನಡೆಯೂ ಉಂಟಾಯಿತು. ಸಾಮಂತಶಾಹಿ ಶ್ರೀಮಂತರ ಆಳ್ವಿಕೆಯಲ್ಲಿ ಮರ್ದಿತ ವರ್ಗ; ಮಧ್ಯಯುಗದ ಕಮ್ಯೂನ್*ಗಳಲ್ಲಿ ಶಸ್ತ್ರಸಜ್ಜಿತವಾದ ಸ್ವಯಮಾಡಳಿತ ಸಂಸ್ಥೆ; ಇಲ್ಲಿ ಸ್ವತಂತ್ರ ನಾಗರಿಕ ಗಣತಂತ್ರ (ಇಟಲಿ ಹಾಗೂ ಜರ್ಮನಿಗಳಲ್ಲಿರುವಂತೆ), ಅಲ್ಲಿ ರಾಜಪ್ರಭುತ್ವದ ತೆರಿಗೆದಾರ "ತೃತೀಯ ಅಂತಸ್ತು" (ಫ್ರಾನ್ಸ್‌ನಲ್ಲಿದ್ದಂತೆ), ಅನಂತರ

---

*ಫ್ರಾನ್ಸಿನಲ್ಲಿ ಅದೇ ತಾನೇ ಉದ್ಭವಿಸಿದ್ದ ನಗರಗಳು, ಸಾಮಂತಶಾಹಿ ಭೂಮಾಲಿಕರೂ ಪ್ರಭುಗಳೂ "ತೃತೀಯ ಅಂತಸ್ತಿ"ನವರಾಗಿ ರಾಜಕೀಯ ಹಕ್ಕುಗಳನ್ನೂ ಸ್ಥಳೀಯ ಸ್ವಯಮಾಡಳಿತವನ್ನೂ ಗಳಿಸಿಕೊಳ್ಳುವುದಕ್ಕೂ ಮುನ್ನ, "ಕಮ್ಯೂನ್" ಎಂಬ ಹೆಸರು ಹೊಂದಿದ್ದವು. ಸಾಮಾನ್ಯವಾಗಿ ಬೂರ್ಷ್ವಾ ಆರ್ಥಿಕ ಬೆಳವಣಿಗೆಗೆ ಇಂಗ್ಲೆಂಡನ್ನು ಮಾದರಿ ದೇಶವನ್ನಾಗಿ ಇಲ್ಲಿ ತೆಗೆದುಕೊಳ್ಳ

ಕೈಗೆಲಸದ ಕಾರ್ಖಾನೆಯ ಘಟ್ಟದಲ್ಲಿ ಕುಲೀನ ವರ್ಗಕ್ಕೆ ವಿರುದ್ಧವಾಗಿ ಅವರ ಪ್ರಭಾವವನ್ನು ಸರಿಗಟ್ಟುವುದಕ್ಕಾಗಿ ಅರೆಸಾಮಂತಶಾಹಿ ಇಲ್ಲವೇ ನಿರಂಕುಶ ರಾಜಪ್ರಭುತ್ವಕ್ಕೆ ಸೇವೆ ಸಲ್ಲಿಸುವ ವರ್ಗ; ವಾಸ್ತವವಾಗಿ ಒಟ್ಟಿನಲ್ಲಿ ಭಾರಿ ರಾಜ ಪ್ರಭುತ್ವಗಳ ಮೂಲಾಧಾರ – ಹೀಗೆ ನಾನಾ ಘಟ್ಟಗಳ ಬೆಳವಣಿಗೆಯನ್ನು ಕಂಡ ಬೂರ್ಷ್ವಾಸೀಯು ಕೊನೆಗೆ ಆಧುನಿಕ ಕೈಗಾರಿಕೆ ಹಾಗೂ ಜಾಗತಿಕ ಮಾರು ಕಟ್ಟೆ ಸ್ಥಾಪಿತವಾದಂದಿನಿಂದ ಆಧುನಿಕ ಪ್ರಾತಿನಿಧಿಕ ರಾಜ್ಯದಲ್ಲಿ ತನ್ನದೇ ಪ್ರತ್ಯೇಕ ರಾಜಕೀಯ ಅಧಿಕಾರವನ್ನು ಗಳಿಸಿಕೊಂಡಿದೆ. ಆಧುನಿಕ ರಾಜ್ಯಾಧಿಕಾರವು ಇಡೀ ಬೂರ್ಷ್ವಾಸೀಯ ಸಾಮಾನ್ಯ ವ್ಯವಹಾರಗಳನ್ನು ನಿರ್ವಹಿಸಲು ಏರ್ಪಡಿಸಿದ ಒಂದು ಕಾರ್ಯಕಾರಿ ಸಮಿತಿಯಷ್ಟೆ ಆಗಿದೆ.

ಚಾರಿತ್ರಿಕವಾಗಿ ಬೂರ್ಷ್ವಾಸೀಯು ಅತ್ಯಂತ ಕ್ರಾಂತಿಕಾರಿ ಪಾತ್ರವನ್ನು ನಿರ್ವಹಿಸಿದೆ.

ಎಲ್ಲೆಲ್ಲಿ ಮೇಲುಗೈ ಪಡೆಯಿತೋ ಅಲ್ಲೆಲ್ಲ ಬೂರ್ಷ್ವಾಸೀಯು ಎಲ್ಲ ಸಾಮಂತ ಶಾಹಿಯ, ಕುಲಪತಿ ಆಡಳಿತ ಪದ್ಧತಿಯ, ಭಾವುಕತೆಯ ಸಂಬಂಧಗಳನ್ನು ಕೊನೆಗಾಣಿಸಿದೆ. ಮನುಷ್ಯನನ್ನು ಅವನ "ಸಹಜವಾದ ಮೇಲು ವರ್ಗದವ ರೊಂದಿಗೆ" ಬಂಧಿಸಿದ್ದ ಬಗೆಬಗೆಯ ಸಾಮಂತಶಾಹಿ ಬಂಧನಗಳನ್ನು ಅದು ನಿಷ್ಕ ರುಣೆಯಿಂದ ಹರಿದು ಚೆಲ್ಲಿದೆ. ಮನುಷ್ಯ– ಮನುಷ್ಯರ ನಡುವೆ ನಗ್ನ ಸ್ವಾರ್ಥಪರತೆ ಹೊರತು, ನಿರ್ದಯ "ನಗದು ನೀಡಿಕೆ"ಯ ಸಂಬಂಧ ಹೊರತು, ಬೇರಾವ ಸಂಬಂಧವನ್ನೂ ಅದು ಉಳಿಯಗೊಡಿಸಿಲ್ಲ. ಅದು ಧಾರ್ಮಿಕ ಉತ್ಸಾಹದ ಅತ್ಯಂತ ದಿವ್ಯ ಹರ್ಷೋನ್ಮಾದಗಳನ್ನೂ, ವೀರೋಚಿತ ಉತ್ಸಾಹ ಭಾವನೆ ಗಳನ್ನೂ, ಸಂಕುಚಿತಬುದ್ಧಿಯ ಭಾವಾತಿರೇಕಗಳನ್ನೂ ಸ್ವಾರ್ಥ ಸಾಧನೆಯ ಲೆಕ್ಕಾ ಚಾರದ ಶೀತಲಜಲದಲ್ಲಿ ಮುಳುಗಿಸಿಬಿಟ್ಟಿದೆ. ಅದು ವೈಯಕ್ತಿಕ ಯೋಗ್ಯತೆಯನ್ನು ವಿನಿಮಯ ಮೌಲ್ಯದ ರೂಪಕ್ಕೆ ಇಳಿಸಿದೆ. ಶಾಸನದತ್ತವಾದ, ರದ್ದು ಮಾಡ ಲಾಗದಂಥ ಅನೇಕಾನೇಕ ಸ್ವಾತಂತ್ರ್ಯಗಳ ಸ್ಥಳದಲ್ಲಿ ಅದು ಯಾವುದಕ್ಕೂ ಹೇಸದ ಆ ಏಕೈಕ ಸ್ವಾತಂತ್ರ್ಯವನ್ನು – ಸ್ವಚ್ಛಂದ ವ್ಯಾಪಾರವನ್ನು – ಸ್ಥಾಪಿಸಿದೆ. ಒಂದು

---

ಲಾಗಿದೆ; ರಾಜಕೀಯ ಬೆಳವಣಿಗೆಗೆ ಫ್ರಾನ್ಸನ್ನು ಮಾದರಿ ದೇಶವನ್ನಾಗಿ ತೆಗೆದು ಕೊಳ್ಳಲಾಗಿದೆ. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಇಟಲಿ ಹಾಗೂ ಫ್ರಾನ್ಸ್‌ಗಳ ನಗರ ನಿವಾಸಿಗಳು ತಮ್ಮ ಸಾಮಂತಶಾಹೀ ಒಡೆಯರಿಂದ ಸ್ವಯಮಾಡಳಿತದ ಆರಂಭಿಕ ಹಕ್ಕುಗಳನ್ನು ಕೊಂಡ ಅಥವಾ ಕಸಿದುಕೊಂಡ ನಂತರ ತಮ್ಮ ನಾಗರಿಕ ಸಮುದಾಯಗಳಿಗೆ "ಕಮ್ಯೂನ್" ಎಂಬ ಹೆಸರನ್ನು ನೀಡಿದ್ದರು. (1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಮಾತಿನಲ್ಲಿ, ರಾಜಕೀಯ ಹಾಗೂ ಧಾರ್ಮಿಕ ಭ್ರಾಂತಿಗಳ ತೆರೆಮರೆಯಲ್ಲಿ ನಡೆಸು ತ್ತಿದ್ದ ಶೋಷಣೆಯ ಸ್ಥಳದಲ್ಲಿ ಅದು ನೇರವಾದ ನಾಚಿಕೆಗೆಟ್ಟ ಮೃಗೀಯ ನಗ್ನ ಶೋಷಣೆಯನ್ನು ಸ್ಥಾಪಿಸಿದೆ.

ಇದುವರೆವಿಗೂ ಗೌರವಿಸಲ್ಪಡುತ್ತಿದ್ದ, ಭಯ ಭಕ್ತಿಗಳಿಂದ ಆವರಿಸಲ್ಪಡು ತ್ತಿದ್ದ ಪ್ರತಿಯೊಂದು ವೃತ್ತಿಯ ಪ್ರಭೆ ಪ್ರಭಾವಗಳನ್ನೂ ಬೂರ್ಷ್ವಾಸೀಯು ಕಿತ್ತೂ ಗೆದಿದೆ. ಅದು ವೈದ್ಯರನ್ನೂ ವಕೀಲರನ್ನೂ ಪಾದ್ರಿಯನ್ನೂ ಕವಿಯನ್ನೂ ಮತ್ತು ವಿಜ್ಞಾನಿಯನ್ನೂ ತನ್ನ ತೊತ್ತಿನ ಕೂಲಿಯಾಳುಗಳನ್ನಾಗಿ ಪರಿವರ್ತಿಸಿದೆ.

ಕುಟುಂಬವನ್ನು ಆವರಿಸಿದ್ದ ಭಾವನಾತ್ಮಕ ತೆರೆಯನ್ನು ಹರಿದು ಚೆಲ್ಲಿ ಬೂರ್ಷ್ವಾಸೀಯು ಕುಟುಂಬ ಸಂಬಂಧವನ್ನು ಕೇವಲ ಹಣ ಸಂಬಂಧದ ಮಟ್ಟಕ್ಕಿಳಿಸಿದೆ.

ಪ್ರತಿಗಾಮಿಗಳು ಅಷ್ಟೊಂದು ಮೆಚ್ಚುವಂಥ ಮಧ್ಯಯುಗದಲ್ಲಿನ ಮೃಗೀಯ ಶೌರ್ಯ ಪ್ರದರ್ಶನದ ಜೊತೆಗೇ, ಅದಕ್ಕೆ ಯೋಗ್ಯಪೂರಕವಾಗಿ ಅತ್ಯಂತ ಹೆಚ್ಚಿನ ಪ್ರಮಾಣದ ಸೋಮಾರಿತನವೂ ನಿಷ್ಕ್ರಿಯತೆಯೂ ಇರುವಂತಾಗಿದ್ದಿತೆಂಬುದನ್ನು ಬೂರ್ಷ್ವಾಸೀಯು ಒಡೆದು ತೋರಿಸಿದೆ. ಮಾನವನ ಚಟುವಟಿಕೆಯು ಏನು ತರಬಲ್ಲುದು ಎಂಬುದನ್ನು ಅದು ಮೊದಲ ಬಾರಿಗೆ ತೋರಿಸಿಕೊಟ್ಟಿದೆ. ಅದು ಈಜಿಪ್ಟಿನ ಪಿರಮಿಡ್ಡುಗಳನ್ನೂ, ರೋಮ್‌ನ ಕಲ್ಲಿನ ನೀರುಕಾಲುವೆಗಳನ್ನೂ, ಗಾಥಿಕ್ ಕಥೇಡ್ರಲ್‌ಗಳನ್ನೂ ಬಹುವಾಗಿ ಮೀರಿಸುವಂಥ ಅದ್ಭುತಗಳನ್ನು ಸಾಧಿಸಿದೆ; ಅದು ಹಿಂದೆ ಅನೇಕ ಜನತೆಗಳು ಕೈಕೊಂಡ ವಲಸೆಗಳನ್ನೂ ನಡೆಸಿದ ಧರ್ಮ ಯುದ್ಧಗಳನ್ನೂ ನಾಚಿಸುವಂಥ ಘೋರ ಆಕ್ರಮಣಗಳನ್ನು[27] ನಡೆಸಿದೆ.

ಉತ್ಪಾದನಾ ಸಲಕರಣೆಗಳನ್ನು, ತನ್ಮೂಲಕ ಉತ್ಪಾದನಾ ಸಂಬಂಧ ಗಳನ್ನು ಮತ್ತು ಅವುಗಳೊಂದಿಗೆ ಇಡೀ ಸಮಾಜದ ಸಂಬಂಧಗಳನ್ನು ಸತತ ವಾಗಿ ಕ್ರಾಂತಿಕಾರಿಗೊಳಿಸದೆ ಇರಲು ಬೂರ್ಷ್ವಾಸೀಗೆ ಸಾಧ್ಯವೇ ಇಲ್ಲ. ಇದಕ್ಕೆ ವಿರುದ್ಧವಾಗಿ ಹಳೆಯ ಉತ್ಪಾದನಾ ವಿಧಾನಗಳನ್ನು ಬದಲಾಗದ ರೀತಿ ಯಲ್ಲೇ ಕಾಪಾಡಿಕೊಂಡು ಹೋಗುವುದು ಆ ಮುನ್ನಿನ ಎಲ್ಲ ಕೈಗಾರಿಕಾ ವರ್ಗ ಗಳಿಗೂ ಅಸ್ತಿತ್ವದಲ್ಲಿರಲು ಅನುಸರಿಸಬೇಕಾಗಿದ್ದ ಮೊದಲ ನೀತಿಯಾಗಿದ್ದಿತು. ನಿರಂತರವಾಗಿ ಉತ್ಪಾದನೆಯನ್ನು ಕ್ರಾಂತಿಕಾರಿಗೊಳಿಸುವುದು, ಎಲ್ಲ ಸಾಮಾಜಿಕ ಸಂಬಂಧಗಳನ್ನೂ ಎಡಬಿಡದೆ ಅಸ್ತವ್ಯಸ್ತಗೊಳಿಸುವುದು, ಶಾಶ್ವತವಾದ ಅನಿಶ್ಚಿತತೆ ಹಾಗೂ ಆಂದೋಳನ ಇವು ಎಲ್ಲ ಮುನ್ನಿನ ಕಾಲಘಟ್ಟಗಳಲ್ಲೂ ಕಾಣಬರದಿದ್ದ ಬೂರ್ಷ್ವಾ ಕಾಲಘಟ್ಟದ ಮುಖ್ಯ ಲಕ್ಷಣ. ಸ್ಥಿರವಾದ, ಪೂರ್ವನಿಶ್ಚಿತವಾದ ಎಲ್ಲ ಸಂಬಂಧಗಳೂ ಅವುಗಳ ಹಿಂದೆಯೇ ಬಂದ ಪುರಾತನ ಹಾಗೂ ಗೌರವಾರ್ಹ ಪೂರ್ವನಂಬಿಕೆಗಳೂ ಮತ್ತು ಅಭಿಪ್ರಾಯ

ಗಳೂ ಈ ಕಾಲಘಟ್ಟದಲ್ಲಿ ಕೊಚ್ಚಿಹೋದವು. ಹೊಸದಾಗಿ ರೂಪಿತಗೊಂಡವುಗಳೂ ಸಹ ರೂಢಿಯಿಂದ ಜಡವಾಗುವುದಕ್ಕೆ ಮುನ್ನವೇ ಹಳೆಯವಾಗುತ್ತಿವೆ. ಗಟ್ಟಿ ಎನಿಸಿಕೊಂಡುವೆಲ್ಲ ಗಾಳಿಯಲ್ಲಿ ತೂರಿ ಹೋಗುತ್ತಿವೆ. ಪವಿತ್ರವಾದುವೆಲ್ಲವೂ ಅಪವಿತ್ರಗೊಳ್ಳುತ್ತಿವೆ. ಮನುಷ್ಯನು ಕಟ್ಟಕಡೆಗೆ ಭ್ರಮೆಗಳನ್ನು ತೊಲಗಿಸಿಕೊಂಡು ತನ್ನ ಜೀವನದ ನಿಜ ಪರಿಸ್ಥಿತಿಗಳನ್ನೂ ಇತರರೊಂದಿಗೆ ತನ್ನ ಸಂಬಂಧಗಳನ್ನೂ ನೇರವಾಗಿ ಎದುರಿಸುವಂತಾಗಿದ್ದಾನೆ.

ತನ್ನ ಉತ್ಪನ್ನಗಳ ಮಾರಾಟಕ್ಕಾಗಿ ಸತತವಾಗಿ ಮಾರುಕಟ್ಟೆಯನ್ನು ವಿಸ್ತರಿಸುವ ಅವಶ್ಯಕತೆಯಿಂದ ಪ್ರಚೋದಿತವಾಗಿ ಬೂರ್ಷ್ವಾಸೀಯು ಭೂಮಂಡಲದ ಮೇಲೆಲ್ಲ ಹರಿದಾಡುತ್ತದೆ. ಅದು ಎಲ್ಲೆಡೆಗಳಲ್ಲೂ ಗೂಡು ಕಟ್ಟಿಕೊಳ್ಳಲೇಬೇಕು; ಪ್ರತಿಯೊಂದು ಸ್ಥಳದಲ್ಲೂ ತಳ ಊರಲೇಬೇಕು, ಎಲ್ಲೆಲ್ಲೂ ಸಂಬಂಧಗಳನ್ನು ಕಲ್ಪಿಸಿಕೊಳ್ಳಲೇಬೇಕು.

ಬೂರ್ಷ್ವಾಸೀಯು ಜಾಗತಿಕ ಮಾರುಕಟ್ಟೆಯನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಳ್ಳುವ ಮೂಲಕ ಪ್ರತಿಯೊಂದು ದೇಶದಲ್ಲೂ ಉತ್ಪಾದನೆ ಹಾಗೂ ಬಳಕೆಗಳಿಗೆ ವಿಶ್ವವಿಶಾಲತೆಯ ಲಕ್ಷಣವನ್ನು ನೀಡಿದೆ. ಪ್ರತಿಗಾಮಿಗಳಿಗೆ ವ್ಯಥೆ ಉಂಟುಮಾಡುವಂತೆ ಅದು ಕೈಗಾರಿಕೆಯ ರಾಷ್ಟ್ರೀಯ ಅಡಿಪಾಯವನ್ನು ಕಿತ್ತುಹಾಕಿದೆ. ಬಹಳ ಹಿಂದಿನಿಂದ ಸ್ಥಾಪಿತವಾಗಿದ್ದ ಎಲ್ಲ ರಾಷ್ಟ್ರೀಯ ಕೈಗಾರಿಕೆಗಳೂ ನಾಶಗೊಂಡಿವೆ ಇಲ್ಲವೇ ಅನುದಿನವೂ ನಾಶಗೊಳ್ಳುತ್ತಿವೆ. ಅವನ್ನು ಹೊಸ ಕೈಗಾರಿಕೆಗಳು ತಳ್ಳಿಹಾಕುತ್ತಿವೆ. ಈ ಹೊಸ ಕೈಗಾರಿಕೆಗಳ ಸ್ಥಾಪನೆಯು ಎಲ್ಲ ನಾಗರಿಕ ರಾಷ್ಟ್ರಗಳಿಗೂ ಅಳಿವುಉಳಿವಿನ ಪ್ರಶ್ನೆಯಾಗಿದೆ. ಈ ಹೊಸ ಕೈಗಾರಿಕೆಗಳು ಸ್ಥಳೀಯ ಕಚ್ಚಾ ಪದಾರ್ಥಗಳಿಂದಷ್ಟೆ ಎಷ್ಟು ಮಾತ್ರವೂ ಕೆಲಸ ಮಾಡುತ್ತಿಲ್ಲ. ಇವು ದೂರ ದೂರ ಪ್ರದೇಶಗಳಿಂದೆಲ್ಲ ಕಚ್ಚಾ ಪದಾರ್ಥಗಳನ್ನು ತರಿಸಿಕೊಳ್ಳುತ್ತಿವೆ. ಈ ಕೈಗಾರಿಕೆಗಳ ಉತ್ಪನ್ನಗಳನ್ನು ಸ್ವದೇಶದಲ್ಲಷ್ಟೇ ಅಲ್ಲ ಭೂಮಂಡಲದ ಪ್ರತಿಯೊಂದು ಭಾಗದಲ್ಲಿಯೂ ಬಳಸಲಾಗುತ್ತಿದೆ. ಆಯಾ ದೇಶದ ಉತ್ಪಾದನೆಯಿಂದಲೇ ಪೂರೈಕೆಗೊಳ್ಳುತ್ತಿದ್ದ ಹಳೆಯ ಅವಶ್ಯಕತೆಗಳ ಸ್ಥಳದಲ್ಲಿ ಹೊಸ ಅವಶ್ಯಕತೆಗಳು ತಲೆದೋರಿರುವುದನ್ನು ನಾವು ಕಾಣುತ್ತೇವೆ. ಈ ಅವಶ್ಯಕತೆಗಳ ಪೂರೈಕೆಗೆ ದೂರ ದೇಶಗಳ ಹಾಗೂ ಪ್ರದೇಶಗಳ ಉತ್ಪನ್ನಗಳು ಅಗತ್ಯವಾಗಿವೆ. ಹಳೆಯ ಸ್ಥಳೀಯ ಹಾಗೂ ರಾಷ್ಟ್ರೀಯ ಪ್ರತ್ಯೇಕತೆ ಹಾಗೂ ಸ್ವಯಂಪೂರ್ಣತೆಯ ಸ್ಥಳದಲ್ಲಿ ನಾವು ಎಲ್ಲ ದಿಶೆಯಲ್ಲೂ ಪರಸ್ಪರ ಸಂಬಂಧ, ಮತ್ತು ರಾಷ್ಟ್ರಗಳ ಸಾರ್ವತ್ರಿಕ ಅಂತರ-ಅವಲಂಬನೆಯನ್ನು ಕಾಣುತ್ತೇವೆ. ವಸ್ತುಗಳ ಉತ್ಪಾದನೆಯಲ್ಲಿನಂತೆಯೇ ಬೌದ್ಧಿಕ ಉತ್ಪಾದನೆಯಲ್ಲಿಯೂ ಇದೇ ಪರಿಸ್ಥಿತಿಯನ್ನು ಕಾಣುತ್ತೇವೆ. ವೈಯಕ್ತಿಕ ರಾಷ್ಟ್ರಗಳ ಬೌದ್ಧಿಕ ಸೃಷ್ಟಿಗಳು ಸರ್ವ

ಸಾಮಾನ್ಯ ಸ್ವತ್ತಾಗಿ ಪರಿಣಮಿಸುತ್ತಿವೆ. ರಾಷ್ಟ್ರೀಯ ಏಕಪಕ್ಷೀಯತೆ ಹಾಗೂ ಸಂಕುಚಿತ ಮನೋಭಾವಗಳು ಹೆಚ್ಚು ಹೆಚ್ಚು ಅಸಾಧ್ಯವಾಗಿವೆ. ಅನೇಕಾನೇಕ ರಾಷ್ಟ್ರೀಯ ಹಾಗೂ ಸ್ಥಳೀಯ ಸಾಹಿತ್ಯಗಳಿಂದ ವಿಶ್ವಸಾಹಿತ್ಯವು ಉದಯವಾಗುತ್ತಿದೆ.

ಬೂರ್ಷ್ವಾಸೀಯು ಎಲ್ಲ ಉತ್ಪಾದನಾ ಸಲಕರಣೆಗಳ ಶೀಘ್ರ ಸುಧಾರಣೆಯ ಮೂಲಕ, ಅತ್ಯಂತ ಹೆಚ್ಚಿನ ಸೌಲಭ್ಯದ ಸಂಪರ್ಕ ಸಾಧನಗಳ ಮೂಲಕ, ಎಲ್ಲ ರಾಷ್ಟ್ರಗಳನ್ನೂ, ಅತ್ಯಂತ ಅನಾಗರಿಕ ರಾಷ್ಟ್ರಗಳನ್ನೂ ಸಹ, ನಾಗರಿಕತೆಯತ್ತ ಸೆಳೆಯುತ್ತದೆ. ಅದು ಉತ್ಪಾದಿಸುವ ಸರಕುಗಳ ಅಗ್ಗದ ಬೆಲೆಗಳೇ ಅದರ ಭಾರಿ ಫಿರಂಗಿ ದಳ. ಇದರಿಂದ ಅದು ಅಡ್ಡ ನಿಲ್ಲುವ ಎಲ್ಲ ಚೀಣೀ ಗೋಡೆಗಳನ್ನೂ ಪುಡಿಗುಟ್ಟುತ್ತದೆ, ವಿದೇಶೀಯರ ಬದ್ಧದ್ವೇಷಿಯಾದ ಅನಾಗರಿಕ ರಾಷ್ಟ್ರಗಳನ್ನೂ ಶರಣಾಗತವಾಗುವಂತೆ ಮಾಡುತ್ತದೆ. ಅದು ಎಲ್ಲ ರಾಷ್ಟ್ರಗಳಿಗೂ ಸರ್ವನಾಶದ ಬೆದರಿಕೆ ಹಾಕಿ ಬೂರ್ಷ್ವಾ ಉತ್ಪಾದನಾ ವಿಧಾನವನ್ನು ಅನುಸರಿಸುವಂತೆ ಒತ್ತಾಯಿಸುತ್ತದೆ; ತಾನು ಏನನ್ನು ನಾಗರಿಕತೆ ಎಂದು ಕರೆಯುತ್ತದೆಯೋ ಅದನ್ನು ಅವುಗಳ ಮಧ್ಯೆಯೂ ಜಾರಿಗೆ ತರುವಂತೆ, ಅಂದರೆ ಅವುಗಳೂ ಬೂರ್ಷ್ವಾಸೀಯಾಗುವಂತೆ, ಅವುಗಳನ್ನು ಬಲಾತ್ಕರಿಸುತ್ತದೆ. ಒಂದು ಮಾತಿನಲ್ಲಿ ಅದು ಇಡೀ ಜಗತ್ತನ್ನು ತನ್ನ ಬಿಂಬದಂತೆ ಇರುವಂತೆ ಸೃಷ್ಟಿಸುತ್ತದೆ.

ಬೂರ್ಷ್ವಾಸೀಯು ಗ್ರಾಮಗಳನ್ನು ಪಟ್ಟಣಗಳ ಆಳ್ವಿಕೆಗೆ ಒಳಪಡಿಸಿದೆ. ಅದು ಬಹು ದೊಡ್ಡ ನಗರಗಳನ್ನು ನಿರ್ಮಿಸಿದೆ, ಗ್ರಾಮಾಂತರಕ್ಕೆ ಹೋಲಿಸಿದಂತೆ ನಗರಗಳ ಜನಸಂಖ್ಯೆಯನ್ನು ಬಹಳಮಟ್ಟಿಗೆ ಹೆಚ್ಚಿಸಿದೆ. ಹಾಗೆ ಅದು ಜನಸಂಖ್ಯೆಯ ಗಣನೀಯ ಭಾಗವನ್ನು ಗ್ರಾಮಾಂತರ ಜೀವನದ ಮೌಢ್ಯತೆಯಿಂದ ಪಾರು ಮಾಡಿದೆ. ಗ್ರಾಮವು ಪಟ್ಟಣಗಳ ಮೇಲೆ ಅವಲಂಬಿಸಿರುವಂತೆ ಮಾಡಿರುವಂತೆಯೇ ಅದು ಅನಾಗರಿಕ ಹಾಗೂ ಅರೆ-ಅನಾಗರಿಕ ದೇಶಗಳು ನಾಗರಿಕ ದೇಶಗಳ ಮೇಲೆ, ರೈತ ಜನತೆಗಳು ಬೂರ್ಷ್ವಾ ಜನತೆಗಳ ಮೇಲೆ, ಪೌರ್ವಾತ್ಯ ದೇಶಗಳು ಪಾಶ್ಚಿಮಾತ್ಯ ದೇಶಗಳ ಮೇಲೆ ಅವಲಂಬಿಸಿರುವಂತೆ ಮಾಡಿದೆ.

ಜನರೂ, ಉತ್ಪಾದನಾ ಸಾಧನಗಳೂ, ಆಸ್ತಿಪಾಸ್ತಿಗಳೂ ವಿವಿಧ ಭಾಗಗಳಲ್ಲಿ ಹಂಚಿಹೋಗಿರುವ ಪರಿಸ್ಥಿತಿಯನ್ನು ಬೂರ್ಷ್ವಾಸೀಯು ಹೆಚ್ಚುಹೆಚ್ಚಾಗಿ ನಾಶ ಮಾಡುತ್ತ ಹೋಗುತ್ತದೆ. ಅದು ಜನರನ್ನೆಲ್ಲ ಒಂದೇ ಕಡೆ ಸೇರಿಸಿದೆ, ಉತ್ಪಾದನಾ ಸಾಧನಗಳನ್ನು ಕೇಂದ್ರೀಕರಿಸಿದೆ ಮತ್ತು ಆಸ್ತಿಯನ್ನು ಕೆಲವೇ ವ್ಯಕ್ತಿಗಳ ಕೈಯಲ್ಲಿ ಏಕತ್ರಗೊಳಿಸಿದೆ. ಇದರ ಅನಿವಾರ್ಯ ಪರಿಣಾಮವೆಂದರೆ ರಾಜಕೀಯ ಕೇಂದ್ರೀಕರಣ. ಪ್ರತ್ಯೇಕ ಹಿತಾಸಕ್ತಿಗಳು, ಕಾನೂನುಗಳು, ಸರಕಾರಗಳು ಮತ್ತು ತೆರಿಗೆ ಪದ್ಧತಿಗಳು ಇವುಗಳಿದ್ದ ಸ್ವತಂತ್ರವಾದ ಇಲ್ಲವೇ ಸಡಿಲವಾದ ಸಂಬಂಧ ಹೊಂದಿದ್ದ ಪ್ರಾಂತಗಳೆಲ್ಲ ಒಂದೇ ರಾಷ್ಟ್ರವಾಗಿ ಒಂದು ಕಡೆ ಕೂಡಿವೆ. ಅವರಲ್ಲಿ

ಒಂದೇ ಸರಕಾರ, ಒಂದೇ ಶಾಸನ ಸಂಹಿತೆ, ಒಂದೇ ರಾಷ್ಟ್ರೀಯ ವರ್ಗಹಿತ, ಒಂದೇ ಗಡಿ ಹಾಗೂ ಒಂದೇ ಸುಂಕ ಪದ್ಧತಿ ಜಾರಿಗೆ ಬಂದಿವೆ.

ಕೇವಲ ಒಂದು ನೂರು ವರ್ಷಗಳೂ ಆಗಿರದ ತನ್ನ ಆಳ್ವಿಕೆಯ ಅವಧಿಯಲ್ಲಿ ಬೂರ್ಷ್ವಾಸೀಯು ಆ ಮುನ್ನಿನ ಎಲ್ಲ ಪೀಳಿಗೆಗಳೂ ಒಟ್ಟಿಗೆ ನಿರ್ಮಿಸಿದ್ದುದ ಕ್ಕಿಂತ ಹೆಚ್ಚು ಭಾರಿಯಾದ ಹಾಗೂ ಬೃಹತ್ ಪ್ರಮಾಣದ ಉತ್ಪಾದಕ ಶಕ್ತಿ ಗಳನ್ನು ಸೃಜಿಸಿದೆ. ನಿಸರ್ಗ ಶಕ್ತಿಗಳನ್ನು ಮಾನವನಿಗೆ ಅಧೀನಪಡಿಸುವುದು, ಯಂತ್ರೋಪಕರಣಗಳು, ಕೃಷಿ ಕೈಗಾರಿಕೆಗಳಿಗೆ ರಸಾಯನಶಾಸ್ತ್ರದ ಅನ್ವಯ, ಉಗಿ ನೌಕಾಯಾನ, ರೈಲು ಮಾರ್ಗಗಳು, ವಿದ್ಯುತ್ ಟೆಲಿಗ್ರಾಫ್‌ಗಳು, ಭಾರಿ ಭೂಭಾಗ ಗಳನ್ನೇ ಬೇಸಾಯಕ್ಕಾಗಿ ಅನುಗೊಳಿಸಿದುದು, ನದಿಗಳ ನೀರನ್ನು ಯಾನಯೋಗ್ಯ ಗೊಳಿಸಿದುದು, ಭೂಮಿಯಿಂದ ಮಾಂತ್ರಿಕಶಕ್ತಿಯಿಂದ ಹೊರತರಲಾಗಿದೆಯೋ ಎಂಬಂತೆ ಭಾರಿ ಜನಸಮುದಾಯಗಳನ್ನು ಒಂದೆಡೆ ಕೂಡಿಸಿದುದು – ಸಾಮಾಜಿಕ ಶ್ರಮದ ಮಡಿಲಲ್ಲಿ ಇಂಥ ಉತ್ಪಾದಕ ಶಕ್ತಿಗಳು ಸುಪ್ತಾವಸ್ಥೆಯಲ್ಲಿದ್ದವೆಂದು ಆ ಮುನ್ನಿನ ಯಾವ ಶತಮಾನ ತಾನೆ ಪೂರ್ವಇಂಗಿತವನ್ನಾದರೂ ಹೊಂದಿದ್ದಿತು?

ಆದ್ದರಿಂದ ನಾವೀಗ ಕಾಣುತ್ತಿರುವುದೇನೆಂದರೆ ಬೂರ್ಷ್ವಾಸೀಯು ಯಾವ ಅಡಿಪಾಯದ ಮೇಲೆ ತನ್ನನ್ನು ತಾನೇ ನಿರ್ಮಿಸಿಕೊಂಡಿತೋ ಆ ಉತ್ಪಾದನಾ ಹಾಗೂ ವಿನಿಮಯ ಸಾಧನಗಳು ಸಾಮಂತಶಾಹಿ ಸಮಾಜದಲ್ಲೇ ಉದ್ಭವಿಸಿದವು. ಈ ಉತ್ಪಾದನಾ ಹಾಗೂ ವಿನಿಮಯ ಸಾಧನಗಳ ಬೆಳವಣಿಗೆಯ ಒಂದು ವಿಶಿಷ್ಟ ಘಟ್ಟದಲ್ಲಿ, ಸಾಮಂತಶಾಹಿ ಸಮಾಜವು ಉತ್ಪಾದಿಸಿ ವಿನಿಮಯ ಮಾಡುತ್ತಿದ್ದ ಪರಿಸ್ಥಿತಿಗಳು, ಕೃಷಿ ಹಾಗೂ ಕೈಗೆಲಸ ಕಾರ್ಖಾನೆಯ ಸಾಮಂತಶಾಹಿ ಸಂಘಟ ನೆಯು, ಒಂದು ಮಾತಿನಲ್ಲಿ, ಆಸ್ತಿಯ ಸಾಮಂತಶಾಹಿ ಸಂಬಂಧಗಳು, ಆಗಲೇ ಅಭಿವೃದ್ಧಿಗೊಂಡಿದ್ದ ಉತ್ಪಾದಕ ಶಕ್ತಿಗಳೊಂದಿಗೆ ಎಷ್ಟು ಮಾತ್ರವೂ ಸರಿಹೊಂದ ದಾದವು; ಅವೆಲ್ಲ ಕೇವಲ ಸಂಕೋಲೆಗಳೇ ಆದುವು. ಅವನ್ನು ಮುರಿದುಹಾಕಲೇ ಬೇಕಾಯಿತು; ಅಂತೆಯೇ ಅವನ್ನು ಮುರಿದುಹಾಕಲಾಯಿತು.

ಅವುಗಳ ಸ್ಥಾನದಲ್ಲಿ ಮುಕ್ತ ಸ್ಪರ್ಧೆ ಮೂಡಿ ಬಂದಿತು. ಅದರೊಂದಿಗೇ ಅದಕ್ಕನುಗುಣವಾದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯೂ ಬೂರ್ಷ್ವಾ ವರ್ಗದ ಆರ್ಥಿಕ ಹಾಗೂ ರಾಜಕೀಯ ಆಧಿಪತ್ಯವೂ, ಬಂದವು.

ಇದೇ ರೀತಿಯ ಬೆಳವಣಿಗೆ ನಮ್ಮ ಕಣ್ಣ ಮುಂದೆಯೇ ಜರುಗುತ್ತಿದೆ. ತನ್ನದೇ ಆದ ಉತ್ಪಾದನಾ, ವಿನಿಮಯ ಹಾಗೂ ಆಸ್ತಿ ಸಂಬಂಧಗಳೊಂದಿಗೆ ಆಧುನಿಕ ಬೂರ್ಷ್ವಾ ಸಮಾಜವು, ಬಹು ಭಾರಿಪ್ರಮಾಣದ ಉತ್ಪಾದನಾ ಸಾಧನಗಳನ್ನೂ ವಿನಿಮಯ ಸಾಧನಗಳನ್ನೂ ಅದ್ಭುತ ಸೃಷ್ಟಿಗಯ್ದಿರುವ ಸಮಾ ಜವು, ಒಬ್ಬ ಮಂತ್ರವಾದಿಯಂತಿದೆ. ಆದರೆ ಅದು ತನ್ನ ಮಂತ್ರ ಶಕ್ತಿಯಿಂದ

ಪಾತಾಳದಿಂದ ಹೊರತಂದ ಶಕ್ತಿಗಳನ್ನು ತನ್ನ ಹತೋಟಿಯಲ್ಲಿರಿಸಿಕೊಳ್ಳಲು ಅಸಮರ್ಥವಾಗಿದೆ. ಅನೇಕ ಗತ ದಶಕಗಳ ಕೈಗಾರಿಕೆ ಹಾಗೂ ವಾಣಿಜ್ಯದ ಇತಿಹಾಸವು, ಆಧುನಿಕ ಉತ್ಪಾದನಾ ಸಂಬಂಧಗಳ ವಿರುದ್ಧ, ಬೂರ್ಷ್ವಾಸೀಯ ಮತ್ತವರ ಆಧಿಪತ್ಯದ ಅಸ್ತಿತ್ವಕ್ಕೆ ಉಪಾಧಿಗಳಾದ ಆಸ್ತಿ ಸಂಬಂಧಗಳ ವಿರುದ್ಧ, ಆಧುನಿಕ ಉತ್ಪಾದಕ ಶಕ್ತಿಗಳ ಬಂಡಾಯದ ಇತಿಹಾಸವೇ ಆಗಿದೆ. ಇಲ್ಲಿ ವಾಣಿಜ್ಯ ಮುಗ್ಗಟ್ಟುಗಳ ವಿಷಯ ತಿಳಿಸಿದರೆ ಸಾಕು. ಅವು ಆಗಾಗ್ಗೆ ತಲೆದೋರುತ್ತ ಒಂದೊಂದು ಬಾರಿಯೂ ಹೆಚ್ಚು ಹೆಚ್ಚು ಭೀಕರವಾಗಿ ಇಡೀ ಬೂರ್ಷ್ವಾ ಸಮಾಜದ ಅಸ್ತಿತ್ವವನ್ನೇ ಪರೀಕ್ಷೆಗೊಳಪಡಿಸುತ್ತಿವೆ. ಈ ಮುಗ್ಗಟ್ಟುಗಳಲ್ಲಿ ಈಗ ತಯಾರಿಸಿರುವ ಉತ್ಪನ್ನಗಳ ಹೆಚ್ಚಿನ ಭಾಗವಷ್ಟೆ ಅಲ್ಲ, ಹಿಂದೆ ಸೃಜಿಸಲಾದ ಉತ್ಪಾದಕ ಶಕ್ತಿಗಳ ಬಹುಭಾಗ ಕೂಡ ಆಗಿಂದಾಗ್ಗೆ ನಾಶಗೊಳ್ಳುತ್ತಿವೆ. ಈ ಮುಗ್ಗಟ್ಟುಗಳ ಸಮಯದಲ್ಲಿ ಒಂದು ಅಂಟುಜಾಡ್ಯ ಹೊಮ್ಮತೊಡಗುತ್ತದೆ. ಈ ಮುನ್ನಿನ ಎಲ್ಲ ಕಾಲಘಟ್ಟಗಳಲ್ಲೂ ಅರ್ಥಶೂನ್ಯವೆಂದು ಕಂಡುಬರಬಹುದಾಗಿದ್ದಂಥ ಅತ್ಯುತ್ಪಾದನೆಯ ಅಂಟುಜಾಡ್ಯವೇ ಅದಾಗಿದೆ. ಸಮಾಜವು ಇದ್ದಕ್ಕಿದ್ದಂತೆ ಕ್ಷಣಿಕ ಅನಾಗರಿಕ ಸ್ಥಿತಿಗೆ ಹಿಂದಿರುಗಿದಂತೆ ಕಾಣುತ್ತದೆ; ಕ್ಷಾಮವೋ ವಿನಾಶಕರ ವಿಶ್ವಯುದ್ಧವೋ ಪ್ರತಿಯೊಂದು ಜೀವನೋಪಾಯ ಸಾಧನದ ಸರಬರಾಜನ್ನೂ ಕಡಿದು ಹಾಕಿದಂತೆ ತೋರಿಬರುತ್ತದೆ; ಕೈಗಾರಿಕೆ ಹಾಗೂ ವಾಣಿಜ್ಯ ನಾಶಗೊಂಡಂತೆ ಕಾಣಬರುತ್ತದೆ; ಏತಕ್ಕಾಗಿ? ಏಕೆಂದರೆ ನಾಗರಿಕತೆ ಅತಿಯಾಗಿರುವುದರಿಂದ, ಜೀವನೋಪಾಯ ಸಾಧನ ಅತಿಯಾಗಿರುವುದರಿಂದ, ಕೈಗಾರಿಕೆ ವಾಣಿಜ್ಯ ಅತಿಹೆಚ್ಚಾಗಿರುವುದರಿಂದ. ಸಮಾಜದ ವಶದಲ್ಲಿರುವ ಉತ್ಪಾದಕ ಶಕ್ತಿಗಳು ಬೂರ್ಷ್ವಾ ಆಸ್ತಿ ಸಂಬಂಧಗಳ ಅಭಿವೃದ್ಧಿಗೆ ಎಷ್ಟು ಮಾತ್ರವೂ ಸಹಾಯ ಮಾಡದಂತಾಗಿವೆ; ತದ್ವಿರುದ್ಧವಾಗಿ ಅವು ತಮ್ಮನ್ನು ಬಂಧಿಸಿರುವಂಥ ಈ ಸಂಬಂಧಗಳಿಗೂ ಮೀರಿ ಶಕ್ತಿಯುತವಾಗಿವೆ. ಅವು ಈ ಬಂಧನಗಳಿಂದ ಬಿಡಿಸಿಕೊಂಡ ಕೂಡಲೇ ಇಡೀ ಬೂರ್ಷ್ವಾ ಸಮಾಜದಲ್ಲಿ ಅವ್ಯವಸ್ಥೆಯನ್ನು ಉಂಟುಮಾಡುತ್ತವೆ, ಬೂರ್ಷ್ವಾ ಆಸ್ತಿಯ ಅಸ್ತಿತ್ವಕ್ಕೆ ಅಪಾಯ ತರುತ್ತವೆ. ಬೂರ್ಷ್ವಾ ಸಮಾಜದ ಸಂಬಂಧಗಳು ಎಷ್ಟು ಸಂಕುಚಿತವಾಗಿರುತ್ತವೆಂದರೆ ಅವು ತಾವೇ ನಿರ್ಮಿಸಿದ ಸಂಪತ್ತನ್ನು ಒಳಗೊಳ್ಳದಾಗುತ್ತವೆ. ಹೀಗಿರುವಾಗ ಬೂರ್ಷ್ವಾಸೀಯು ಈ ಎಲ್ಲ ಮುಗ್ಗಟ್ಟುಗಳನ್ನೂ ಹೇಗೆ ನಿವಾರಿಸಿಕೊಳ್ಳುತ್ತದೆ? ಒಂದು ಕಡೆ ಉತ್ಪಾದಕ ಶಕ್ತಿಗಳ ಇಡೀ ಸಮೂಹವನ್ನೇ ಬಲಾತ್ಕಾರವಾಗಿ ನಾಶಗೊಳಿಸುವುದರಿಂದ. ಮತ್ತೊಂದು ಕಡೆ ಹೊಸ ಮಾರುಕಟ್ಟೆಗಳನ್ನು ಗಳಿಸುವುದರಿಂದ ಮತ್ತು ಹಳೆಯವನ್ನು ಹೆಚ್ಚು ಸಮಗ್ರವಾಗಿ ಶೋಷಿಸುವುದರಿಂದ. ಅಂದರೆ ಹೆಚ್ಚು ವಿನಾಶಕರವಾದ ಮುಗ್ಗಟ್ಟುಗಳಿಗೆ ದಾರಿ ಮಾಡಿಕೊಡುವ

ಮೂಲಕ ಮತ್ತು ಮುಗ್ಗಟ್ಟುಗಳನ್ನು ತಪ್ಪಿಸುವಂಥ ಸಾಧನಗಳನ್ನು ಕಮ್ಮಿ ಮಾಡುವ ಮೂಲಕ.

ಬೂರ್ಷ್ವಾಸೀಯು ಯಾವ ಆಯುಧಗಳಿಂದ ಸಾಮಂತಶಾಹಿಯನ್ನು ಉರುಳಿಸಿತೋ ಅದೇ ಆಯುಧಗಳನ್ನು ಈಗ ಬೂರ್ಷ್ವಾಸೀಯ ವಿರುದ್ಧವೇ ತಿರುಗಿಸಲಾಗಿದೆ.

ಬೂರ್ಷ್ವಾಸೀಯು ತನಗೇ ಸಾವು ತರುವ ಆಯುಧಗಳನ್ನು ರೂಪಿಸಿದೆಯಷ್ಟೆ ಅಲ್ಲ, ಈ ಆಯುಧಗಳನ್ನು ಬಳಸುವ ಜನರನ್ನೂ – ಆಧುನಿಕ ಕಾರ್ಮಿಕ ವರ್ಗವನ್ನೂ – ಶ್ರಮಜೀವಿಗಳನ್ನೂ ಸಹ ಅಸ್ತಿತ್ವಕ್ಕೆ ತಂದಿದೆ.

ಬೂರ್ಷ್ವಾಸೀಯು, ಅಂದರೆ ಬಂಡವಾಳವು, ಯಾವ ಪ್ರಮಾಣದಲ್ಲಿ ಬೆಳೆಯುತ್ತದೆಯೋ ಅದೇ ಪ್ರಮಾಣದಲ್ಲಿ ಶ್ರಮಜೀವಿ ವರ್ಗವೂ, ಅಂದರೆ ಆಧುನಿಕ ಕಾರ್ಮಿಕ ವರ್ಗವೂ, ಬೆಳೆಯುತ್ತಿದೆ. ಈ ಕಾರ್ಮಿಕ ವರ್ಗದವರು ಎಷ್ಟು ಕಾಲ ಕೆಲಸ ಕಂಡುಕೊಳ್ಳುವರೋ ಅಷ್ಟು ಕಾಲ ಬಾಳುವರು; ಅವರ ಶ್ರಮವು ಎಷ್ಟು ಕಾಲ ಬಂಡವಾಳವನ್ನು ಹೆಚ್ಚಿಸುತ್ತದೋ ಅಷ್ಟೇ ಕಾಲ ಅವರಿಗೆ ಕೆಲಸ ದೊರೆಯುವುದು. ಸ್ವಲ್ಪಸ್ವಲ್ಪವಾಗಿ ತಮ್ಮನ್ನು ತಾವೇ ಮಾರಿಕೊಳ್ಳಬೇಕಾದ ಈ ಕೂಲಿಗಾರರು ಒಂದು ಸರಕಿದ್ದಂತೆ, ವ್ಯಾಪಾರದ ಇತರ ವಿವಿಧ ವಸ್ತುಗಳಿದ್ದಂತೆ. ಹಾಗಾಗಿ ಇವರೂ ಸಹ ಪೈಪೋಟಿಯ ಎಲ್ಲ ಏರುಪೇರುಗಳಿಗೂ, ಮಾರುಕಟ್ಟೆಯ ಎಲ್ಲ ಏರಿಳಿತಗಳಿಗೂ ಗುರಿಯಾಗಿರುತ್ತಾರೆ.

ಯಂತ್ರಗಳ ವಿಸ್ತೃತ ಬಳಕೆಯ ಹಾಗೂ ಶ್ರಮವಿಭಜನೆಯ ಫಲವಾಗಿ ಶ್ರಮಜೀವಿಗಳ ಕೆಲಸವು ಎಲ್ಲ ವೈಯಕ್ತಿಕ ಲಕ್ಷಣವನ್ನೂ ಕಳೆದುಕೊಂಡಿರುತ್ತದೆ, ತತ್ಫಲವಾಗಿ ಕೆಲಸಗಾರ ತನ್ನ ಕೆಲಸದ ಬಗೆಗೆ ಎಲ್ಲ ಆಕರ್ಷಣೆಯನ್ನೂ ಕಳೆದುಕೊಂಡಿರುತ್ತಾನೆ. ಅವನು ಯಂತ್ರಕ್ಕೆ ಜೋಡಿಸಿದ ಮತ್ತೊಂದು ಯಂತ್ರ. ಅವನಿಂದ ಆಗಬೇಕಾದುದೆಲ್ಲ ತೀರ ಸರಳವಾದ, ತೀರ ಬೇಸರ ಹಿಡಿಸುವ ಮತ್ತು ತೀರ ಸುಲಭವಾಗಿ ಪಡೆದುಕೊಂಡ ಕಾರ್ಯಕೌಶಲ ಅಷ್ಟೆ. ಆದ್ದರಿಂದ ಕೆಲಸಗಾರನೊಬ್ಬನ ನೇಮಕಕ್ಕೆ ತಗಲುವ ವೆಚ್ಚವು ಬಹುಮಟ್ಟಿಗೆ ಅವನ ಜೀವನಾಧಾರಕ್ಕೆ ಮತ್ತು ಅವನ ಸಂತಾನಾಭಿವೃದ್ಧಿಗೆ ಬೇಕಾಗುವಷ್ಟು ಅಷ್ಟೆ ಆಗಿರುತ್ತದೆ. ಆದರೆ ಉತ್ಪಾದಿತ ವಸ್ತುವೊಂದರ ಬೆಲೆ, ಅದರಿಂದಾಗಿ ಶ್ರಮದ ಬೆಲೆ,[28] ಅದರ ಉತ್ಪಾದನಾ ವೆಚ್ಚಕ್ಕೆ ಸಮನಾಗಿರುತ್ತದೆ. ಆದ್ದರಿಂದ ಕೆಲಸದ ಬಗೆಗೆ ವಿಕರ್ಷಣೆ ಹೆಚ್ಚಿದಂತೆ ಅಷ್ಟೇ ಪ್ರಮಾಣದಲ್ಲಿ ಕೂಲಿಯೂ ಕಮ್ಮಿಯಾಗುತ್ತ ಹೋಗುತ್ತದೆ. ಅಷ್ಟೇ ಅಲ್ಲ, ಯಂತ್ರದ ಬಳಕೆ ಹಾಗೂ ಶ್ರಮವಿಭಜನೆ ಹೆಚ್ಚಿದಂತೆ, ಅದೇ ಪ್ರಮಾಣದಲ್ಲಿ ದುಡಿಮೆಯ ಹೊರೆಯೂ ಹೆಚ್ಚುತ್ತ ಹೋಗುತ್ತದೆ. ಇದನ್ನು ಕೆಲಸದ ವೇಳೆಯನ್ನು ಹೆಚ್ಚಿಸುವುದರ ಮೂಲಕ, ಇಲ್ಲವೇ ಒಂದು

ನಿರ್ದಿಷ್ಟ ಕಾಲಾವಧಿಯಲ್ಲೇ ಹೆಚ್ಚುಹೆಚ್ಚು ಪ್ರಮಾಣದ ಕೆಲಸ ಪಡೆಯುವ ಮೂಲಕ, ಅಥವಾ ಯಂತ್ರಸಾಮಗ್ರಿಗಳ ಕಾರ್ಯ ವೇಗವನ್ನು ಹೆಚ್ಚಿಸುವ ಮೂಲಕ, ಇತ್ಯಾದಿ ವಿಧಾನಗಳಲ್ಲಿ ಸಾಧಿಸಲಾಗುತ್ತದೆ.

ಆಧುನಿಕ ಕೈಗಾರಿಕೆಯು ಕುಲಪತಿ ಆಡಳಿತ ಪದ್ಧತಿ ಸಮಾಜದಲ್ಲಿ ಮೇಸ್ತ್ರಿಯ ಅಧೀನದಲ್ಲಿದ್ದ ಪುಟ್ಟ ಕರ್ಮಶಾಲೆಯನ್ನು ಕೈಗಾರಿಕಾ ಬಂಡವಾಳ ಗಾರನ ಭಾರಿ ಕಾರ್ಖಾನೆಯನ್ನಾಗಿ ಪರಿವರ್ತಿಸಿದೆ. ಕಾರ್ಖಾನೆಯೊಳಗೆ ತುಂಬ ಲಾದ ಕಾರ್ಮಿಕ ಜನಸಮೂಹಗಳನ್ನು ಸೈನಿಕರಂತೆ ಸಂಘಟಿಸಲಾಗಿರುತ್ತದೆ. ಕೈಗಾ ರಿಕಾ ಸೈನ್ಯದ ಈ ಸಿಪಾಯಿಗಳನ್ನು ಮೇಲಧಿಕಾರಿಗಳ ಹಾಗೂ ಸಾರ್ಜಂಟರ ಸುವ್ಯವಸ್ಥಿತ ಶ್ರೇಣಿಯ ಆಧಿಪತ್ಯಕ್ಕೆ ಒಳಪಡಿಸಲಾಗಿರುತ್ತದೆ. ಕಾರ್ಮಿಕರು ಬೂರ್ಷ್ವಾ ವರ್ಗದ ಹಾಗೂ ಬೂರ್ಷ್ವಾ ರಾಜ್ಯದ ಗುಲಾಮರಷ್ಟೆ ಅಲ್ಲ; ಅವರು ಪ್ರತಿ ದಿನವೂ ಪ್ರತಿ ಗಂಟೆಯೂ ಯಂತ್ರದ, ಮೇಲ್ವಿಚಾರಕನ ಮತ್ತು ಎಲ್ಲಕ್ಕೂ ಮಿಗಿಲಾಗಿ ವೈಯಕ್ತಿಕ ಬೂರ್ಷ್ವಾ ತಯಾರಿಕೆಗಾರನ ದಾಸ್ಯಕ್ಕೊಳಗಾ ಗುತ್ತಲೇ ಇರುತ್ತಾರೆ. ಗಳಿಕೆಯೇ ತನ್ನ ಗುರಿ ಎಂದು ಈ ನಿರಂಕುಶ ವ್ಯವಸ್ಥೆಯು ಎಷ್ಟು ಹೆಚ್ಚು ಬಹಿರಂಗವಾಗಿ ಘೋಷಿಸುತ್ತದೋ, ಅದು ಅಷ್ಟೂ ಹೆಚ್ಚು ತುಚ್ಛವೂ ದ್ವೇಷಪೂರ್ಣವೂ ಹಾಗೂ ಉದ್ರೇಕಕಾರಿಯೂ ಆಗುತ್ತದೆ.

ದೈಹಿಕ ಶ್ರಮದಲ್ಲಿನ ಕಾರ್ಯಕೌಶಲ ಹಾಗೂ ಶಕ್ತಿ ಬಳಕೆ ಕಮ್ಮಿಯಾದಷ್ಟೂ, ಅಂದರೆ ಆಧುನಿಕ ಕೈಗಾರಿಕೆಯು ಹೆಚ್ಚು ಅಭಿವೃದ್ಧಿಗೊಂಡಷ್ಟೂ, ಪುರುಷರ ಶ್ರಮದ ಸ್ಥಳದಲ್ಲಿ ಹೆಚ್ಚುಹೆಚ್ಚಾಗಿ ಸ್ತ್ರೀಯರ ಹಾಗೂ ಬಾಲರ ಶ್ರಮವು ಬಳಕೆಗೆ ಬರತೊಡಗುತ್ತದೆ. ಕಾರ್ಮಿಕ ವರ್ಗಕ್ಕೀಗ ವಯಸ್ಸಿನ ಅಥವಾ ಲಿಂಗದ ವ್ಯತ್ಯಾಸ ಗಳು ಎಲ್ಲ ಸಾಮಾಜಿಕ ಮಹತ್ವವನ್ನೂ ಕಳೆದುಕೊಳ್ಳುತ್ತವೆ. ಇವರು ಎಲ್ಲರೂ ಶ್ರಮ ಸಾಧನಗಳೇ. ಇವರ ವಯಸ್ಸು ಹಾಗೂ ಲಿಂಗಕ್ಕೆ ತಕ್ಕಂತೆ ಇವರ ಬಳ ಕೆಯು ಬಂಡವಾಳಗಾರನಿಗೆ ಹೆಚ್ಚು ಅಥವಾ ಕಮ್ಮಿ ಖರ್ಚಿನದಾಗಿರುತ್ತದೆ.

ಕಾರ್ಖಾನೆಯ ಮಾಲಿಕನಿಂದ ಶ್ರಮಜೀವಿಯ ಶೋಷಣೆಯು ಹಣದ ರೂಪದಲ್ಲಿ ನಿಗದಿತ ವೇತನ ಕೊಡುವುದರೊಂದಿಗೆ ಕೊನೆಗೊಂಡ ಕೂಡಲೇ, ಬೂರ್ಷ್ವಾಸೀಯ ಇತರ ವಿಭಾಗಗಳ ಜನರು – ಮನೆ ಮಾಲಿಕ, ಅಂಗಡಿಗಾರ, ಬಡ್ಡಿ ವ್ಯಾಪಾರಿ ಇವರೇ ಮೊದಲಾದವರು – ಶ್ರಮಜೀವಿಯ ಬೆನ್ನು ಹತ್ತು ತ್ತಾರೆ.

ಮಧ್ಯಮ ವರ್ಗದ ಕೆಳಗಿನ ಸ್ತರದ ಜನರು – ಪುಟ್ಟ ಕೈಗಾರಿಕೆಗಾರರು, ಪುಟ್ಟ ವ್ಯಾಪಾರಗಾರರು, ಅಂಗಡಿಗಾರರು ಮತ್ತು ಸಾಮಾನ್ಯವಾಗಿ ನಿವೃತ್ತ ವ್ಯಾಪಾರಿಗಳು, ಕೈಕಸುಬಿನ ಜನರು ಹಾಗೂ ರೈತರು – ಇವರೆಲ್ಲರೂ ಕ್ರಮೇಣ ಶ್ರಮಜೀವಿಗಳ ಮಟ್ಟಕ್ಕೆ ಕುಸಿಯುತ್ತಾರೆ. ಇವರ ಪುಟ್ಟ ಪ್ರಮಾಣದ ಬಂಡವಾ

ಳವು ಆಧುನಿಕ ಕೈಗಾರಿಕೆಯನ್ನು ನಡೆಸುವಂಥ ಪ್ರಮಾಣಕ್ಕೆ ಸಾಲದೆ ಹೋಗಿ ದೊಡ್ಡ ಬಂಡವಾಳಗಾರರೊಂದಿಗೆ ಸ್ಪರ್ಧೆಯಲ್ಲಿ ಇವರು ಮುಳುಗಿಹೋಗುವುದು ಇದಕ್ಕೆ ಭಾಗಶಃ ಕಾರಣವಾದರೆ, ಉತ್ಪಾದನೆಯ ಹೊಸ ವಿಧಾನಗಳಿಂದಾಗಿ ಇವರ ವಿಶಿಷ್ಟ ಕೌಶಲವು ಬೆಲೆಯಿಲ್ಲದಂತಾಗುವುದೂ ಭಾಗಶಃ ಕಾರಣ. ಹೀಗೆ ಶ್ರಮಜೀವಿ ವರ್ಗಕ್ಕೆ ಎಲ್ಲ ವರ್ಗಗಳಿಂದಲೂ ಜನರು ಬಂದು ಸೇರುತ್ತಿರುತ್ತಾರೆ.

ಶ್ರಮಜೀವಿ ವರ್ಗವೂ ಬೆಳವಣಿಗೆಯ ನಾನಾ ಘಟ್ಟಗಳ ಮೂಲಕ ಹಾದು ಬರುತ್ತದೆ. ಹುಟ್ಟಿನಿಂದಲೇ ಬೂರ್ಷ್ವಾಸೀಯ ವಿರುದ್ಧ ಅದರ ಹೋರಾಟವು ಪ್ರಾರಂಭವಾಗುತ್ತದೆ.

ಮೊದಲು ಈ ಹೋರಾಟವನ್ನು ಬಿಡಿ ಕೆಲಸಗಾರರು ನಡೆಸುತ್ತಾರೆ, ಅನಂತರ ಕಾರ್ಖಾನೆಯ ಇಡೀ ಕಾರ್ಮಿಕ ಜನರು ನಡೆಸುತ್ತಾರೆ. ಆಮೇಲೆ ಒಂದು ಪ್ರದೇಶದಲ್ಲಿ ಒಂದು ವೃತ್ತಿಗೆ ಸೇರಿದ ಕಾರ್ಮಿಕರಿಂದ ಅವರನ್ನು ನೇರವಾಗಿ ಶೋಷಿಸುವ ಒಬ್ಬ ಬೂರ್ಷ್ವಾ ವ್ಯಕ್ತಿಯ ವಿರುದ್ಧ ಹೋರಾಟ ನಡೆಯುತ್ತದೆ. ಅವರು ತಮ್ಮ ದಾಳಿಯನ್ನು ಬೂರ್ಷ್ವಾ ಉತ್ಪಾದನಾ ಸಂಬಂಧಗಳ ವಿರುದ್ಧವಷ್ಟೆ ಅಲ್ಲ, ಉತ್ಪಾದನಾ ಸಲಕರಣೆಗಳ ವಿರುದ್ಧವೂ ಹರಿಬಿಡುತ್ತಾರೆ; ಅವರು ತಮ್ಮ ಶ್ರಮದೊಂದಿಗೆ ಸ್ಪರ್ಧಿಸುವ ಆಮದಾದ ವಸ್ತುಗಳನು ನಾಶಪಡಿಸುತ್ತಾರೆ, ಯಂತ್ರಸಾಮಗ್ರಿಗಳನ್ನು ಕುಟ್ಟಿ ಪುಡಿ ಮಾಡುತ್ತಾರೆ, ಕಾರ್ಖಾನೆಗಳಿಗೆ ಬೆಂಕಿ ಹಚ್ಚುತ್ತಾರೆ. ಅವರು ಮಧ್ಯಯುಗದ ಕೆಲಸಗಾರನ ನಶಿಸಿಹೋದ ಸ್ಥಾನಮಾನವನ್ನು ಬಲಾತ್ಕಾರದಿಂದ ಪುನಃ ಸ್ಥಾಪಿಸಲು ಹವಣಿಸುತ್ತಾರೆ.

ಈ ಘಟ್ಟದಲ್ಲಿ ಕಾರ್ಮಿಕರು ಇನ್ನೂ ಇಡೀ ದೇಶದಾದ್ಯಂತ ಹರಡಿಹೋದ, ತಮ್ಮೊಳಗಿನ ಪರಸ್ಪರ ಸ್ಪರ್ಧೆಯಿಂದ ವಿಭಜಿತರಾದ, ಅಸಂಘಟಿತ ಸಮೂಹದ ರೂಪದಲ್ಲೇ ಇರುತ್ತಾರೆ. ಎಲ್ಲಾದರೂ ಅವರು ಹೆಚ್ಚು ಸಂಘಟಿತವಾದ ಸಂಸ್ಥೆ ನಿರ್ಮಿಸಲು ಒಂದುಗೂಡಿದ್ದಲ್ಲಿ ಅದು ಇನ್ನೂ ಅವರ ಸ್ವಂತ ಕ್ರಿಯಾಶೀಲ ಒಗ್ಗಟ್ಟಿನ ಫಲವಾಗಿಯೇನೂ ಅಲ್ಲ, ಆದರೆ ಬೂರ್ಷ್ವಾಸೀಯೇ ಒಂದುಗೂಡಿಸಿ ದುದರ ಫಲವಾಗಿರುತ್ತದೆ. ಬೂರ್ಷ್ವಾ ವರ್ಗವು ತನ್ನ ಸ್ವಂತ ರಾಜಕೀಯ ಗುರಿ ಸಾಧನೆಗಾಗಿ ಇಡೀ ಶ್ರಮಜೀವಿ ವರ್ಗವನ್ನೇ ಕಾರ್ಯವಾಸಿಗಳಾಗುವಂತೆ ಮಾಡುವ ಒತ್ತಾಯಕ್ಕೊಳಗಾಗುತ್ತದೆ. ಅದು ಇನ್ನೂ ಸ್ವಲ್ಪ ಕಾಲದವರೆಗೆ ಈ ರೀತಿ ಮಾಡುವ ಶಕ್ತಿಯನ್ನು ಹೊಂದಿರುತ್ತದೆ. ಆದ್ದರಿಂದ ಆ ಘಟ್ಟದಲ್ಲಿ ಶ್ರಮಜೀವಿಗಳು ತಮ್ಮ ಶತ್ರುಗಳ ವಿರುದ್ಧ ಹೋರಾಡುವುದಿಲ್ಲ ಆದರೆ ತಮ್ಮ ಶತ್ರುವಿನ ಶತ್ರುವಿನ ವಿರುದ್ಧ, ಅಂದರೆ ನಿರಂಕುಶ ರಾಜಪ್ರಭುತ್ವ, ಭೂಮಾಲಿಕರು, ಕೈಗಾರಿಕೆಗೆ ಸಂಬಂಧಿಸದ ಬೂರ್ಷ್ವಾಸೀ, ಪುಟ್ಟ ಬೂರ್ಷ್ವಾಸೀ, ಇವರ ವಿರುದ್ಧ ಹೋರಾಟ ನಡೆಸುತ್ತಾರೆ. ಹೀಗೆ ಇಡೀ ಐತಿಹಾಸಿಕ ಚಳವಳಿಯು

ಬೂರ್ಷ್ವಾಸೀಯ ಕೈಗಳಲ್ಲೇ ಕೇಂದ್ರೀಕೃತವಾಗಿರುತ್ತದೆ; ಹಾಗೆ ಗಳಿಸಿದ ಪ್ರತಿಯೊಂದು ವಿಜಯವೂ ಬೂರ್ಷ್ವಾಸೀಯ ವಿಜಯವೇ ಆಗಿರುತ್ತದೆ.

ಆದರೆ ಕೈಗಾರಿಕೆಯ ಬೆಳವಣಿಗೆ ಆದ ಹಾಗೆ ಶ್ರಮಜೀವಿ ವರ್ಗವು ಸಂಖ್ಯೆಯಲ್ಲಿ ಹೆಚ್ಚುವುದಷ್ಟೆ ಅಲ್ಲ, ಹೆಚ್ಚು ಭಾರಿ ಸಮೂಹಗಳಾಗಿ ಕೇಂದ್ರೀಕೃತವಾಗತೊಡಗುತ್ತದೆ. ಅದರ ಶಕ್ತಿಯೂ ಹೆಚ್ಚುತ್ತ ಹೋಗುತ್ತದೆ ಮತ್ತು ತನ್ನ ಈ ಹೆಚ್ಚಿದ ಶಕ್ತಿಯ ಭಾವನೆಯನ್ನೂ ಅದು ಹೆಚ್ಚಾಗಿ ಪಡೆಯುತೊಡಗುತ್ತದೆ. ಯಂತ್ರಸಾಮಗ್ರಿಗಳು ಎಲ್ಲ ಶ್ರಮ ವ್ಯತ್ಯಾಸಗಳನ್ನೂ ತೊಡೆದುಹಾಕಿ ಸುಮಾರಾಗಿ ಎಲ್ಲೆಲ್ಲೂ ಕೂಲಿಗಳನ್ನು ಒಂದೇ ಸಮನಾದ ಕೆಳಮಟ್ಟಕ್ಕೆ ಇಳಿಸುವ ಪ್ರಮಾಣಕ್ಕನುಗುಣವಾಗಿ, ಶ್ರಮಜೀವಿ ವರ್ಗದ ದಳಗಳ ಮಧ್ಯೆಯೇ ವಿವಿಧ ಹಿತಾಸಕ್ತಿಗಳೂ ಜೀವನ ಪರಿಸ್ಥಿತಿಗಳೂ ಹೆಚ್ಚು ಹೆಚ್ಚಾಗಿ ಒಂದೇ ಆಗತೊಡಗುತ್ತವೆ. ಬೂರ್ಷ್ವಾಗಳ ನಡುವೆಯೇ ಸ್ಪರ್ಧೆ ಹೆಚ್ಚುವುದೂ, ಅದರ ಫಲವಾಗಿ ಆಗುವ ವಾಣಿಜ್ಯ ಮುಗ್ಗಟ್ಟುಗಳೂ ಕಾರ್ಮಿಕರ ಕೂಲಿಗಳಲ್ಲಿ ಸತತವಾಗಿ ಏರುಪೇರುಗಳನ್ನುಂಟುಮಾಡುತ್ತವೆ. ಸತತವಾಗಿ ಹೆಚ್ಚು ಶೀಘ್ರವಾಗಿ ಅಭಿವೃದ್ಧಿಗೊಳ್ಳುತ್ತಿರುವ ಯಂತ್ರಸಾಮಗ್ರಿಗಳ ಕೊನೆಯಿಲ್ಲದ ಸುಧಾರಣೆಯು ಅವರ ಜೀವನೋಪಾಯವನ್ನು ಹೆಚ್ಚು ಹೆಚ್ಚಾಗಿ ಅನಿಶ್ಚಿತಗೊಳಿಸುತ್ತದೆ; ವೈಯಕ್ತಿಕ ಮಟ್ಟದಲ್ಲಿ ಕಾರ್ಮಿಕ ಮತ್ತು ಬೂರ್ಷ್ವಾಗಳ ನಡುವೆ ಜರುಗುವ ಸಂಘರ್ಷವು ಹೆಚ್ಚು ಹೆಚ್ಚಾಗಿ ಎರಡು ವರ್ಗಗಳ ನಡುವಿನ ಸಂಘರ್ಷದ ರೂಪ ಪಡೆದು ಕೊಳ್ಳತೊಡಗುತ್ತದೆ. ಆಮೇಲೆ ಕಾರ್ಮಿಕರು ಬೂರ್ಷ್ವಾಸೀಯ ವಿರುದ್ಧ ಸಂಘಗಳನ್ನು (ಟ್ರೇಡ್‌ಯೂನಿಯನ್‌ಗಳನ್ನು) ಸ್ಥಾಪಿಸತೊಡಗುತ್ತಾರೆ; ಕೂಲಿಗಳ ದರ ತಗ್ಗದಿರುವಂತೆ ಮಾಡಲೋಸುಗ ಅವರು ಒಂದುಗೂಡುತ್ತಾರೆ; ಹೀಗೆ ಆಗಾಗ್ಗೆ ಜರುಗುವ ಸಂಘರ್ಷಗಳಿಗೆ ಪೂರ್ವಭಾವಿ ವ್ಯವಸ್ಥೆ ಮಾಡಲೋಸುಗ ಅವರು ಶಾಶ್ವತ ಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. ಅಲ್ಲಿ ಇಲ್ಲಿ ಈ ಹೋರಾಟವು ದಂಗೆಯಾಗಿಯೂ ಪರಿಣಮಿಸುತ್ತದೆ.

ಆಗಾಗ್ಗೆ ಕಾರ್ಮಿಕರು ಜಯಶಾಲಿಗಳಾಗುತ್ತಾರೆ, ಆದರೆ ಕೆಲ ಕಾಲದವರೆಗಷ್ಟೆ. ಅವರ ಕದನಗಳ ನಿಜವಾದ ಫಲ ಇರುವುದು ತಾತ್ಕಾಲಿಕ ಫಲಿತಾಂಶವಲ್ಲಲ್ಲ, ಆದರೆ ಕಾರ್ಮಿಕರ ಸತತವಾಗಿ ವಿಸ್ತಾರವಾಗುವ ಒಗ್ಗಟ್ಟಿನಲ್ಲಿ. ಈ ಒಗ್ಗಟ್ಟಿಗೆ ಆಧುನಿಕ ಕೈಗಾರಿಕೆಯು ನಿರ್ಮಿಸಿರುವ ಸುಧಾರಿತ ಸಂಪರ್ಕ ಸಾಧನಗಳು ವಿಭಿನ್ನ ಪ್ರದೇಶಗಳ ಕಾರ್ಮಿಕರ ನಡುವೆ ಪರಸ್ಪರ ಸಂಪರ್ಕ ಏರ್ಪಡಿಸುವ ಮೂಲಕ ನೆರವು ನೀಡುತ್ತವೆ. ಅಸಂಖ್ಯಾತ ಸ್ಥಳೀಯ ಹೋರಾಟಗಳನ್ನು ಕೇಂದ್ರೀಕರಿಸಿ ಒಂದೇ ಲಕ್ಷಣದ ಅವೆಲ್ಲವನ್ನೂ ವರ್ಗಗಳ ನಡುವಿನ ಒಂದು ರಾಷ್ಟ್ರೀಯ ಹೋರಾಟವನ್ನಾಗಿ ಪರಿವರ್ತಿಸಲು ಈ ಸಂಪರ್ಕವೇ ಅವಶ್ಯವಾಗಿದ್ದಿತು. ಆದರೆ ಪ್ರತಿಯೊಂದು

ವರ್ಗ ಹೋರಾಟವೂ ಒಂದು ರಾಜಕೀಯ ಹೋರಾಟವೇ. ಮಧ್ಯಯುಗದಲ್ಲಿ ಹೆದ್ದಾರಿಗಳು ದುಸ್ಥಿತಿಯಲ್ಲಿದ್ದುದರಿಂದಾಗಿ ಪಟ್ಟಣಿಗರಿಗೆ ಒಕ್ಕೂಟ ಏರ್ಪಡಿಸಿ ಕೊಳ್ಳಲು ಅನೇಕ ಶತಮಾನಗಳು ಬೇಕಾದರೆ, ಆಧುನಿಕ ಶ್ರಮಜೀವಿಗಳು ರೈಲು ಮಾರ್ಗಗಳ ವ್ಯವಸ್ಥೆಯ ಫಲವಾಗಿ ಆ ಒಕ್ಕೂಟವನ್ನು ಕೆಲವೇ ವರ್ಷ ಗಳಲ್ಲಿ ಸಾಧಿಸುತ್ತಿದ್ದಾರೆ.

ಶ್ರಮಜೀವಿಗಳು ಒಂದು ವರ್ಗವಾಗಿ, ತತ್ಫಲವಾಗಿ ಒಂದು ರಾಜಕೀಯ ಪಕ್ಷವಾಗಿ ಸಂಘಟನೆಯಾಗುವುದಕ್ಕೆ ಕಾರ್ಮಿಕರ ನಡುವಿನ ಪೈಪೋಟಿಯು ನಿರಂತರ ವಾಗಿ ಅಡ್ಡಿ ಬರುತ್ತಿರುತ್ತದೆ. ಆದರೂ ಈ ಸಂಘಟನೆಯು ಮತ್ತೆ ಮೇಲೇ ಳುತ್ತದೆ, ಹೆಚ್ಚು ಶಕ್ತಿಯುತವಾಗಿ, ದೃಢತರವಾಗಿ ಹಾಗೂ ಬಲಿಷ್ಠವಾಗಿ. ಅದು ಬೂರ್ಷ್ವಾಸೀಯ ಮಧ್ಯೆಯೇ ಇರುವ ಒಡಕುಗಳ ಪ್ರಯೋಜನ ಪಡೆದುಕೊಂಡು ಕಾರ್ಮಿಕರ ವಿಶಿಷ್ಟ ಹಿತಗಳಿಗೆ ಶಾಸನಬದ್ಧ ಮಾನ್ನಣೆಯನ್ನು ಒತ್ತಾಯಪೂರ್ವಕ ವಾಗಿ ಪಡೆಯುತ್ತದೆ. ಇಂಗ್ಲೆಂಡಿನಲ್ಲಿ ಹತ್ತು ಗಂಟೆಗಳ ಕೆಲಸದ ದಿನದ ಮಸೂದೆ ಅಂಗೀಕೃತವಾದುದು ಹೀಗೆಯೇ.

ಒಟ್ಟಿನಲ್ಲಿ ಹಳೆಯ ಸಮಾಜದ ವರ್ಗಗಳ ನಡುವಿನ ಸಂಘರ್ಷಗಳು ಅನೇಕ ರೀತಿಗಳಲ್ಲಿ ಶ್ರಮಜೀವಿ ವರ್ಗದ ಬೆಳವಣಿಗೆಯನ್ನೇ ಹೆಚ್ಚಿಸುತ್ತದೆ. ಬೂರ್ಷ್ವಾ ಸೀಯು ನಿರಂತರವಾದ ಕದನದಲ್ಲಿ ಸಿಕ್ಕಿಬೀಳುತ್ತದೆ. ಮೊದಲು ಶ್ರೀಮಂತಶಾಹಿ ಯೊಂದಿಗೆ; ಅನಂತರ ಕೈಗಾರಿಕಾ ಪ್ರಗತಿಗೆ ವಿರೋಧವಾದ ಹಿತಗಳುಳ್ಳ ಬೂರ್ ಷ್ವಾಸೀಯ ವಿಭಾಗಗಳೊಂದಿಗೇ; ಎಲ್ಲ ಸಮಯಗಳಲ್ಲೂ ಹೊರ ದೇಶಗಳ ಬೂರ್ಷ್ವಾಸೀಯೊಂದಿಗೆ. ಈ ಎಲ್ಲ ಕದನಗಳಲ್ಲೂ ಅದು ಶ್ರಮಜೀವಿ ವರ್ಗಕ್ಕೆ ಮನವಿ ಮಾಡಿಕೊಳ್ಳುವ, ಅದರ ನೆರವು ಕೇಳುವ ಮತ್ತು ಹಾಗೆ ಅದನ್ನು ರಾಜ ಕೀಯ ಕ್ಷೇತ್ರದೊಳಕ್ಕೆ ಸೆಳೆಯುವ ಬಲಾತ್ಕಾರಕ್ಕೊಳಗಾಗುತ್ತದೆ. ಆದ್ದರಿಂದ ಬೂರ್ ಷ್ವಾಸೀಯೇ ಶ್ರಮಜೀವಿ ವರ್ಗಕ್ಕೆ ತನ್ನದೇ ರಾಜಕೀಯ ಹಾಗೂ ಸಾರ್ವತ್ರಿಕ ಶಿಕ್ಷಣದ ಮೂಲ ಅಂಶಗಳನ್ನು ಒದಗಿಸುತ್ತದೆ. ಬೇರೆ ಮಾತುಗಳಲ್ಲಿ, ಅದು ತನ್ನ ವಿರುದ್ಧವೇ ಹೋರಾಡಲು ಶ್ರಮಜೀವಿ ವರ್ಗಕ್ಕೆ ಅಸ್ತ್ರಗಳನ್ನು ಒದಗಿಸಿ ಕೊಡುತ್ತದೆ.

ಇದೂ ಅಲ್ಲದೆ, ನಾವು ಈಗಾಗಲೇ ಕಂಡಂತೆ, ಆಳುವ ವರ್ಗಗಳ ಕೆಲವು ಇಡೀ ವಿಭಾಗಗಳೇ ಕೈಗಾರಿಕೆಯ ಮುನ್ನಡೆಯಿಂದಾಗಿ ಒತ್ತರಿಸಲ್ಪಟ್ಟು ಶ್ರಮಜೀವಿ ವರ್ಗಕ್ಕೆ ಬಂದು ಸೇರುತ್ತವೆ, ಇಲ್ಲವೇ ಕೊನೆಯ ಪಕ್ಷ ಅವುಗಳ ಅಸ್ತಿತ್ವದ ಪರಿಸ್ಥಿತಿಗಳೇ ಗಂಡಾಂತರಕ್ಕೆ ಗುರಿಯಾಗುತ್ತವೆ. ಇವುಗಳೂ ಸಹ ಶ್ರಮಜೀವಿ ವರ್ಗಕ್ಕೆ ಹೊಸ ತಿಳಿವಳಿಕೆ ಹಾಗೂ ಪ್ರಗತಿಯ ಮೂಲಾಂಶಗಳನ್ನು ಒದಗಿಸುತ್ತವೆ.

ಕೊನೆಯದಾಗಿ, ವರ್ಗ ಹೋರಾಟವು ನಿರ್ಧಾರಕ ಘಳಿಗೆ ಸಮೀಪಿಸಿದಾಗ, ಆಳುವ ವರ್ಗದೊಳಗೆ, ಅಷ್ಟೇ ಏಕೆ ಹಳೆಯ ಸಮಾಜದಾದ್ಯಂತ, ಜರುಗುತ್ತಿರುವ ವಿಸರ್ಜನೆಯ ಪ್ರಕ್ರಿಯೆಯು ಎಂಥ ತೀವ್ರವಾದ ಹಾಗೂ ಉಜ್ವಲವಾದ ಸ್ವರೂಪವನ್ನು ಪಡೆದುಕೊಳ್ಳುತ್ತದೆಂದರೆ, ಆಳುವ ವರ್ಗದ ಒಂದು ಸಣ್ಣ ವಿಭಾಗವು ಪ್ರತ್ಯೇಕಗೊಂಡು ಹೊರಬಂದು ಕ್ರಾಂತಿಕಾರೀ ವರ್ಗವನ್ನು – ಭವಿಷ್ಯತ್ತನ್ನು ತನ್ನ ಕೈಲೇ ಇರಿಸಿಕೊಂಡಿರುವ ವರ್ಗವನ್ನು – ಸೇರಿಕೊಳ್ಳುತ್ತದೆ. ಆದ್ದರಿಂದ ಆ ಮುನ್ನಿನ ಕಾಲಾವಧಿಯಲ್ಲಿ ಕುಲೀನ ವರ್ಗದ ಒಂದು ಭಾಗವು ಬೂರ್ಷ್ವಾ ಪಕ್ಷದ ಕಡೆಗೆ ಹೋದಂತೆ ಈಗ ಬೂರ್ಷ್ವಾಸೀಯ ಒಂದು ಭಾಗವು, ಅದರಲ್ಲೂ ವಿಶೇಷವಾಗಿ ಐತಿಹಾಸಿಕ ಚಳವಳಿಯನ್ನು ಸೈದ್ಧಾಂತಿಕವಾಗಿ ಇಡೀಯಾಗಿ ಗ್ರಹಿಸುವ ಮಟ್ಟಕ್ಕೆ ಏರಿಬಂದ ಬೂರ್ಷ್ವಾ ಸಿದ್ಧಾಂತವಾದಿಗಳ ಒಂದು ಭಾಗವು, ಶ್ರಮಜೀವಿಗಳ ಪಕ್ಷವನ್ನು ಸೇರಿಕೊಳ್ಳುತ್ತದೆ.

ಇಂದು ಬೂರ್ಷ್ವಾಸೀಯ ಎದುರಿಗೆ ಮುಖಾಮುಖಿಯಾಗಿ ನಿಂತಿರುವ ಎಲ್ಲ ವರ್ಗಗಳಲ್ಲೂ ಶ್ರಮಜೀವಿ ವರ್ಗವೇ ನಿಜಕ್ಕೂ ಕ್ರಾಂತಿಕಾರಿಯಾದ ವರ್ಗವಾಗಿದೆ. ಇತರ ವರ್ಗಗಳು ಆಧುನಿಕ ಕೈಗಾರಿಕೆಯ ಮುಂದೆ ನಶಿಸಿ ಕೊನೆಗೆ ಕಣ್ಮರೆಯಾಗುತ್ತವೆ; ಶ್ರಮಜೀವಿ ವರ್ಗವು ಮಾತ್ರ ಆಧುನಿಕ ಕೈಗಾರಿಕೆಯ ವಿಶೇಷ ಉತ್ಪನ್ನವಾಗಿದೆ, ಅಗತ್ಯ ಉತ್ಪನ್ನವಾಗಿದೆ.

ಮಧ್ಯಮ ವರ್ಗ, ಪುಟ್ಟ ತಯಾರಿಕೆಗಾರ, ಅಂಗಡಿಗಾರ, ಕೈಕಸುಬುದಾರ, ರೈತ, ಇವರೆಲ್ಲರೂ ಮಧ್ಯಮ ವರ್ಗದ ತುಣುಕುಗಳಾಗಿ ತಮ್ಮ ಅಸ್ತಿತ್ವವು ನಾಶವಾಗುವುದರಿಂದ ರಕ್ಷಿಸಿಕೊಳ್ಳಲೋಸುಗ ಬೂರ್ಷ್ವಾಸೀಯ ವಿರುದ್ಧ ಹೋರಾಡುತ್ತಾರೆ. ಆದ್ದರಿಂದ ಅವರು ಕ್ರಾಂತಿಕಾರಿಗಳಲ್ಲ, ಆದರೆ ಸಂಪ್ರದಾಯಶರಣರು. ಅಲ್ಲ ಇನ್ನೂ ಹೆಚ್ಚು – ಅವರು ಪ್ರತಿಗಾಮಿಗಳೂ ಹೌದು, ಏಕೆಂದರೆ, ಅವರು ಇತಿಹಾಸದ ಚಕ್ರವನ್ನು ಹಿಂದಕ್ಕೆ ಉರುಳಿಸಯತ್ನಿಸುತ್ತಾರೆ. ಅಕಸ್ಮಾತ್ತಾಗಿ ಅವರು ಕ್ರಾಂತಿಕಾರಿಗಳಾಗಿದ್ದರೆ, ಅವರು ಬಹು ಬೇಗನೆಯೇ ಶ್ರಮಜೀವಿಗಳಾಗಿ ಪರಿವರ್ತನೆಗೊಳ್ಳುವ ಕಾರಣದಿಂದಾಗಿಯಷ್ಟೆ ಹಾಗಿರುತ್ತಾರೆ. ಆದ್ದರಿಂದ ಅವರು ರಕ್ಷಣೆ ಮಾಡಿಕೊಳ್ಳುವುದು ತಮ್ಮ ವರ್ತಮಾನದ ಹಿತಗಳನ್ನಲ್ಲ ಆದರೆ ಭವಿಷ್ಯತ್ತಿನ ಹಿತಗಳನ್ನು. ಅವರು ಶ್ರಮಜೀವಿ ವರ್ಗದ ದೃಷ್ಟಿಕೋನ ಸ್ವೀಕರಿಸಲು ತಮ್ಮ ಸ್ವಂತ ದೃಷ್ಟಿಕೋನವನ್ನೇ ತ್ಯಜಿಸುತ್ತಾರೆ.

ಹಳೆಯ ಸಮಾಜದ ಅತ್ಯಂತ ಕೆಳ ಸ್ತರಗಳಿಂದ ಹೊರ ಹಾಕಲ್ಪಟ್ಟ ಕ್ರಿಯಾಶೂನ್ಯವಾಗಿ ಕೊಳೆಯುತ್ತಿರುವ ಜನಸಮೂಹವು, ಸಾಮಾಜಿಕ ತಿರಸ್ಕೃತ ಜನರು – ಆ "ಅಪಾಯಕಾರೀ ವರ್ಗ"ವು[29] – ಅಲ್ಲಿ ಇಲ್ಲಿ ಶ್ರಮಜೀವಿ ಕ್ರಾಂತಿಯಿಂದ ಚಳವಳಿಯೊಳಕ್ಕೆ ಸೆಳೆಯಲ್ಪಡಬಹುದು. ಆದರೆ ಈ ವರ್ಗದ ಜೀವನ ಪರಿಸ್ಥಿತಿ

ಗಳು ಅದನ್ನು ಹೆಚ್ಚಾಗಿ ಪ್ರತಿಗಾಮಿ ಒಳಸಂಚಿನ ಲಂಚಕೋರ ಸಾಧನ ವನ್ನಾಗಿಯೇ ಸಿದ್ಧಗೊಳಿಸುತ್ತವೆ.

ಶ್ರಮಜೀವಿ ವರ್ಗದ ಜೀವನ ಪರಿಸ್ಥಿತಿಗಳಲ್ಲಿ ಸಾಮಾನ್ಯವಾಗಿ ಹಳೆಯ ಸಮಾಜಕ್ಕೆ ಸಂಬಂಧಿಸಿದ ಅಂಶಗಳು ಆಗಲೇ ವಸ್ತುತಃ ಇಲ್ಲದಂತಾಗಿರುತ್ತವೆ. ಶ್ರಮಜೀವಿಗೆ ಆಸ್ತಿ ಎನ್ನುವುದು ಇರುವುದಿಲ್ಲ; ಹೆಂಡತಿ ಮಕ್ಕಳೊಂದಿಗೆ ಅವನ ಸಂಬಂಧಗಳು ಬೂರ್ಷ್ವಾ ಕೌಟುಂಬಿಕ ಸಂಬಂಧಗಳಿಗೆ ಎಷ್ಟು ಮಾತ್ರವೂ ಹೋಲು ವಂತಿರುವುದಿಲ್ಲ; ಆಧುನಿಕ ಕೈಗಾರಿಕಾ ಶ್ರಮವು, ಫ್ರಾನ್ಸಿನಲ್ಲಿದ್ದಂತೆ ಇಂಗ್ಲೆಂಡಿ ನಲ್ಲಿಯೂ, ಜರ್ಮನಿಯಲ್ಲಿದ್ದಂತೆ ಅಮೆರಿಕದಲ್ಲಿಯೂ ಆಧುನಿಕ ಬಂಡವಾ ಳಕ್ಕೆ ಅಧೀನತೆಯು, ಶ್ರಮಜೀವಿಯಲ್ಲಿ ರಾಷ್ಟ್ರೀಯ ಲಕ್ಷಣವನ್ನು ಗುರುತು ಸಹ ಇರದಂತೆ ಅಳಿಸಿಹಾಕಿರುತ್ತದೆ. ಕಾನೂನು, ನೈತಿಕತೆ, ಧರ್ಮ ಇವೆಲ್ಲ ಅವ ನಿಗೆ ಹಲವಾರು ಬೂರ್ಷ್ವಾ ಪೂರ್ವನಂಬಿಕೆಗಳಷ್ಟೆ. ಅವುಗಳ ಹಿಂದೆ ಹಲ ವಾರು ಬೂರ್ಷ್ವಾ ಹಿತಗಳು ಹೊಂಚು ಹಾಕಿ ಕುಳಿತಿರುತ್ತವೆ.

ಮೇಲುಗೈ ಪಡೆದ ಈ ಮುನ್ನಿನ ವರ್ಗಗಳೆಲ್ಲವೂ ಇಡೀ ಸಮಾಜವನ್ನು ತಮ್ಮ ಸ್ವಂತ ವಿತರಣೆಯ ರೀತಿಗಳಿಗೆ ಅಧೀನಗೊಳಿಸುವ ಮೂಲಕ ತಾವು ಆಗಲೇ ಗಳಿಸಿಕೊಂಡ ಸ್ಥಾನಮಾನವನ್ನು ದೃಢಪಡಿಸಿಕೊಳ್ಳಲು ಹವಣಿ ಸಿದವು. ಆದರೆ ಶ್ರಮಜೀವಿಗಳು ತಮ್ಮ ಈಗಿನ ವಿತರಣೆಯ ವಿಧಾನ ವನ್ನೂ ತನ್ಮೂಲಕ ಹಿಂದಿನ ಇತರ ಎಲ್ಲ ವಿತರಣೆಯ ವಿಧಾನಗಳನ್ನೂ ತೆಗೆದುಹಾಕುವ ಮೂಲಕವಲ್ಲದೆ ಸಮಾಜದ ಉತ್ಪಾದಕ ಶಕ್ತಿಗಳ ಪ್ರಭುಗಳಾ ಗಲಾರರು. ಅವರು ರಕ್ಷಿಸಿ ದೃಢಪಡಿಸಿಕೊಳ್ಳಲು ತಮ್ಮದೇ ಆದ ಏನನ್ನೂ ಹೊಂದಿರುವುದಿಲ್ಲ; ಎಲ್ಲ ಹಿಂದಿನ ಖಾಸಗಿ ಆಸ್ತಿಯ ಭದ್ರತೆಗಳನ್ನೂ ವಿಮೆ ಗಳನ್ನೂ ನಾಶಪಡಿಸುವುದೇ ಅವರ ಧ್ಯೇಯಕಾರ್ಯ.

ಇದಕ್ಕೆ ಮುನ್ನಿನ ಎಲ್ಲ ಐತಿಹಾಸಿಕ ಚಳವಳಿಗಳೂ ಅಲ್ಪಸಂಖ್ಯಾತರ ಚಳ ವಳಿಗಳೇ ಆಗಿದ್ದವು ಅಥವಾ ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವಂಥವೇ ಆಗಿದ್ದವು. ಶ್ರಮಜೀವಿ ಚಳವಳಿಯು ಅಪಾರ ಬಹುಸಂಖ್ಯಾತರ ಹಿತವೃಷ್ಟಿಯ ಅಪಾರ ಬಹುಸಂಖ್ಯಾತರ ಸ್ವಯಂಪ್ರಜ್ಞೆಯ ಸ್ವತಂತ್ರ ಚಳವಳಿಯಾಗಿದೆ. ಶ್ರಮ ಜೀವಿ ವರ್ಗವು, ನಮ್ಮ ಇಂದಿನ ಸಮಾಜದ ಅತ್ಯಂತ ಕೆಳ ಸ್ತರದ ಜನರನ್ನೊಳ ಗೊಂಡಿದೆ. ತಮ್ಮ ಮೇಲಿರುವ ಇಡೀ ಅಧಿಕೃತ ಸಮಾಜದ ಸ್ತರಗಳನ್ನು ಗಾಳಿಗೆ ತೂರಿಹಾಕಿದ ಹೊರತು ಅದು ತಾನೇ ಎಚ್ಚರಗೊಳ್ಳಲಾರದು, ಎದ್ದು ನಿಲ್ಲ ಲಾರದು.

ಒಳ ತಿರುಳಿನಲ್ಲಲ್ಲದಿದ್ದರೂ, ಹೊರ ರೂಪದಲ್ಲಾದರೂ ಸರಿ, ಶ್ರಮಜೀವಿ ಗಳು ಬೂರ್ಷ್ವಾಸೀಯೊಂದಿಗೆ ನಡೆಸುವ ಹೋರಾಟವು ಮೊದಲು ರಾಷ್ಟ್ರೀಯ

ಹೋರಾಟವಾಗಿರುತ್ತದೆ. ಪ್ರತಿಯೊಂದು ದೇಶದ ಶ್ರಮಜೀವಿಗಳೂ ಮೊಟ್ಟ ಮೊದಲಿಗೆ ತಮ್ಮ ಸ್ವಂತ ಬೂರ್ಷ್ವಾಸೀಯೊಂದಿಗೇ ತಮ್ಮ ವಿಷಯವನ್ನು ಬಗೆಹರಿಸಿಕೊಳ್ಳಬೇಕಾದುದು ನಿಜ.

ಶ್ರಮಜೀವಿ ವರ್ಗದ ಬೆಳವಣಿಗೆಯ ಅತ್ಯಂತ ಸ್ಥೂಲವಾದ ಮಜಲುಗಳನ್ನು ಚಿತ್ರಿಸುವಾಗ ನಾವು ಹೆಚ್ಚು ಕಮ್ಮಿ ಇಂದಿನ ಸಮಾಜದೊಳಗೆ ಮುಸುಕಿನ ಮರೆಯಲ್ಲಿ ನಡೆಯುತ್ತಿರುವ ಅಂತರ್ಯುದ್ಧವನ್ನೇ ಗುರುತಿಸಿದೆವು. ಈ ಯುದ್ಧವು ಬಹಿರಂಗ ಕ್ರಾಂತಿಯಾಗಿ ಹೊರಹೊಮ್ಮಿ, ಬೂರ್ಷ್ವಾಸೀಯನ್ನು ಬಲಪ್ರಯೋಗದಿಂದ ಉರುಳಿಸುವುದು ಶ್ರಮಜೀವಿ ವರ್ಗದ ಆಳ್ವಿಕೆಗೆ ಅಡಿಪಾಯ ಹಾಕಿಕೊಡುತ್ತದೆ.

ಇಲ್ಲಿಯವರೆಗೂ ಪ್ರತಿಯೊಂದು ಸಮಾಜ ಸ್ವರೂಪವೂ, ನಾವೀಗಾಗಲೇ ಕಂಡಿರುವಂತೆ, ಪೀಡಕ ಹಾಗೂ ಪೀಡಿತ ವರ್ಗಗಳ ವೈರದ ಮೇಲೆಯೇ ಆಧರಿಸಿಕೊಂಡಿದ್ದಿತು. ಆದರೆ ವರ್ಗವೊಂದನ್ನು ಪೀಡನೆಗೊಳಪಡಿಸಲು ಅದಕ್ಕೆ ಕೊನೆಯ ಪಕ್ಷ ಅದರ ದಾಸ್ಯದ ಅಸ್ತಿತ್ವವನ್ನಾದರೂ ಮುಂದುವರಿಸಿಕೊಂಡು ಹೋಗಲು ಸಾಧ್ಯವಿರುವಂಥ ಕೆಲವೊಂದು ಪರಿಸ್ಥಿತಿಗಳನ್ನು ಖಚಿತಗೊಳಿಸಬೇಕು. ಜೀತದಾಳು ವ್ಯವಸ್ಥೆಯ ಕಾಲಾವಧಿಯಲ್ಲಿ ಜೀತದಾಳು ಕಮ್ಯೂನ್‌ನ ಸದಸ್ಯತ್ವವನ್ನು ಪಡೆದುಕೊಳ್ಳುವ ಮಟ್ಟಕ್ಕೇರಿದಂತೆ ಪುಟ್ಟ ಬೂರ್ಷ್ವಾ ಸಾಮಂತಶಾಹಿ ನಿರಂಕುಶಾಧಿಕಾರದಲ್ಲಿ ಬೂರ್ಷ್ವಾ ಆಗಿ ಅಭಿವೃದ್ಧಿ ಪಡೆಯಬಲ್ಲವನಾದ. ಇದಕ್ಕೆ ವಿರುದ್ಧವಾಗಿ ಆಧುನಿಕ ಕಾರ್ಮಿಕನು ಕೈಗಾರಿಕೆಯ ಪ್ರಗತಿಯೊಂದಿಗೆ ತಾನೂ ಮೇಲೇರುವ ಬದಲು ತನ್ನ ವರ್ಗವು ಅಸ್ತಿತ್ವದಲ್ಲಿರಲು ಅವಶ್ಯವಾದ ಪರಿಸ್ಥಿತಿಗಳಿಗಿಂತಲೂ ಕೆಳಕ್ಕೆ ಹೆಚ್ಚು ಹೆಚ್ಚು ಆಳಕ್ಕೆ ಕುಸಿಯುತ್ತ ಹೋಗುತ್ತಾನೆ. ಅವನು ದಟ್ಟ ದರಿದ್ರನಾಗುತ್ತಾನೆ. ಈ ದಟ್ಟದರಿದ್ರತನವು ಜನಸಂಖ್ಯೆ ಹಾಗೂ ಸಂಪತ್ತಿಗಿಂತ ಹೆಚ್ಚು ತ್ವರಿತವಾಗಿ ಬೆಳೆಯತೊಡಗುತ್ತದೆ. ಬೂರ್ಷ್ವಾಸೀಯು ಇನ್ನೆಷ್ಟು ಮಾತ್ರವೂ ಸಮಾಜದಲ್ಲಿ ಆಳುವ ವರ್ಗವಾಗಲು, ತನ್ನ ಅಸ್ತಿತ್ವದ ಪರಿಸ್ಥಿತಿಗಳನ್ನೇ ಸಮಾಜದ ಮೇಲೆ ನಿರ್ಬಂಧ ಶಾಸನವನ್ನಾಗಿ ಹೇರಲು, ಅಸಮರ್ಥ ಎಂಬುದು ಈಗ ಸ್ಪಷ್ಟಗೊಳ್ಳುತ್ತದೆ. ಅದು ಆಳಲು ಅಸಮರ್ಥವಾಗುತ್ತದೆ, ಏಕೆಂದರೆ, ಅದು ತನ್ನ ದಾಸನಿಗೆ ಅವನ ದಾಸ್ಯತನದಲ್ಲೇ ಉಳಿದುಕೊಂಡಿರುವುದನ್ನೂ ಖಾತರಿ ಮಾಡಿಕೊಡಲು ಅಸಮರ್ಥವಾಗುತ್ತದೆ; ಮತ್ತು ಅದು ಅವನಿಂದ ಹೊಟ್ಟೆ ತುಂಬಿಸಿಕೊಳ್ಳುವ ಬದಲು ಅವನ ಹೊಟ್ಟೆಯನ್ನೇ ತಾನು ತುಂಬಬೇಕಾದಂಥ ದುಸ್ಥಿತಿಗೆ ಅವನು ಇಳಿಯುವುದನ್ನು ತಪ್ಪಿಸಲು ಅದು ಅಸಮರ್ಥವಾಗುತ್ತದೆ. ಸಮಾಜವು ಇನ್ನೆಷ್ಟು ಮಾತ್ರವೂ ಈ ಬೂರ್ಷ್ವಾಸೀಯಡಿ ಬಾಳಲಾರದಾಗುತ್ತದೆ. ಬೇರೆ ಮಾತುಗಳಲ್ಲಿ, ಅದರ ಅಸ್ತಿತ್ವವು ಸಮಾಜದೊಂದಿಗೆ ಎಷ್ಟು ಮಾತ್ರವೂ ಸರಿಹೊಂದದಾಗುತ್ತದೆ.

ಬೂರ್ಷ್ವಾ ವರ್ಗದ ಅಸ್ತಿತ್ವಕ್ಕೆ ಹಾಗೂ ಆಳ್ವಿಕೆಗೆ ಅತ್ಯಗತ್ಯ ಉಪಾಧಿ ಎಂದರೆ ಬಂಡವಾಳದ ರಚನೆ ಹಾಗೂ ವಿಸ್ತರಣೆ. ಬಂಡವಾಳಕ್ಕೆ ಉಪಾಧಿ, ಕೂಲಿ ಕೆಲಸ. ಕೂಲಿ ಕೆಲಸವು ಸಂಪೂರ್ಣವಾಗಿ ಕೂಲಿಕಾರರ ನಡುವಿನ ಪೈಪೋಟಿಯ ಮೇಲೆ ಆಧರಿಸಿರುತ್ತದೆ. ಬೂರ್ಷ್ವಾ ವರ್ಗವು ಅನೈಚ್ಛಿಕವಾಗಿಯೇ ಕೈಗಾರಿಕೆಯ ಮುನ್ನಡೆಗೆ ಕಾರಣವಾಗುತ್ತದೆ. ಈ ಮುನ್ನಡೆಯು ಕೆಲಸಗಾರರನ್ನು ಸ್ಪರ್ಧೆಯಿಂದಾಗಿ ದೂರ ದೂರ ಉಳಿದಿರುವುದರ ಬದಲು ಸಂಘದಿಂದಾಗಿ ಕ್ರಾಂತಿಕಾರೀ ಸಂಯೋಜನೆ ಪಡೆಯುವಂತೆ ಮಾಡುತ್ತದೆ. ಆದ್ದರಿಂದ ಆಧುನಿಕ ಕೈಗಾರಿಕೆಯ ಅಭಿವೃದ್ಧಿಯು, ಬೂರ್ಷ್ವಾಸೀಯು ಯಾವ ಆಧಾರದ ಮೇಲೆ ಉತ್ಪಾದಿಸುತ್ತಾನೋ, ಉತ್ಪನ್ನಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾನೋ ಆ ಆಧಾರವನ್ನೇ ಕೊಚ್ಚಿಹಾಕುತ್ತದೆ. ಆದ್ದರಿಂದ ಬೂರ್ಷ್ವಾಸೀಯು ಎಲ್ಲಕ್ಕೂ ಮಿಗಿಲಾಗಿ ಉಂಟುಮಾಡುವುದು ತನ್ನ ಸ್ವಂತ ಸಮಾಧಿಯ ಗುಂಡಿ ತೋಡುವವರನ್ನೇ. ಬೂರ್ಷ್ವಾಸೀಯ ಪತನವೂ ಶ್ರಮಜೀವಿ ವರ್ಗದ ವಿಜಯವೂ ಒಂದೇ ಸಮನಾಗಿ ಅನಿವಾರ್ಯವಾದವು.

# II

# ಶ್ರಮಜೀವಿಗಳು ಮತ್ತು ಕಮ್ಯೂನಿಸ್ಟರು

ಕಮ್ಯೂನಿಸ್ಟರು ಇಡೀ ಶ್ರಮಜೀವಿಗಳೊಂದಿಗೆ ಯಾವ ಸಂಬಂಧ ಹೊಂದಿರುತ್ತಾರೆ?

ಕಮ್ಯೂನಿಸ್ಟರು ಕಾರ್ಮಿಕ ವರ್ಗದ ಇತರ ಪಕ್ಷಗಳಿಗೆ ವಿರೋಧವಾದ ಮತ್ತೊಂದು ಪ್ರತ್ಯೇಕ ಪಾರ್ಟಿಯಾಗಿ ಇರುವುದಿಲ್ಲ.

ಅವರಿಗೆ ಇಡೀ ಶ್ರಮಜೀವಿಗಳ ಹಿತಗಳಿಂದ ಪ್ರತ್ಯೇಕವಾದ ಮತ್ತು ಹೊರತಾದ ಹಿತಾಸಕ್ತಿಗಳು ಯಾವುವೂ ಇಲ್ಲ.

ಅವರು ಶ್ರಮಜೀವಿ ಚಳವಳಿಗೆ ಆಕೃತಿ ನೀಡಿ ರೂಪಿಸಲು ತಮ್ಮದೇ ಆದ ಸಂಕುಚಿತ ಪ್ರತ್ಯೇಕ ನೀತಿ ನಿಯಮಗಳನ್ನೇನೂ ಹೊಂದಿರುವುದಿಲ್ಲ.

ಈ ಕೆಳಗಿನ ಅಂಶಗಳಷ್ಟೆ ಕಮ್ಯೂನಿಸ್ಟರನ್ನು ಕಾರ್ಮಿಕ ವರ್ಗದ ಇತರ ಪಕ್ಷಗಳಿಂದ ಪ್ರತ್ಯೇಕಿಸಿ ತಿಳಿಸುವುದು: 1. ವಿವಿಧ ದೇಶಗಳ ಶ್ರಮಜೀವಿಗಳು ನಡೆಸುವ ರಾಷ್ಟ್ರೀಯ ಹೋರಾಟಗಳಲ್ಲಿ ಕಮ್ಯೂನಿಸ್ಟರು ಎಲ್ಲ ಜನಾಂಗ ಪ್ರಜ್ಞೆಯಿಂದಲೂ ಸ್ವತಂತ್ರವಾದ, ಇಡೀ ಶ್ರಮಜೀವಿ ವರ್ಗಕ್ಕೆ ಸಾಮಾನ್ಯವಾದ, ಹಿತಗಳನ್ನು ಮುಂದೆ ತರುತ್ತಾರೆ ಮತ್ತು ಅವನ್ನೇ ಎತ್ತಿ ತೋರಿಸುತ್ತಾರೆ; 2. ಬೂರ್ಷ್ವಾಸೀಯ ವಿರುದ್ಧ ನಡೆಸುವ ಹೋರಾಟದ ಬೆಳವಣಿಗೆಯಲ್ಲಿ ಕಾರ್ಮಿಕ ವರ್ಗವು ಹಾದುಹೋಗಬೇಕಾದ ವಿವಿಧ ಘಟ್ಟಗಳಲ್ಲಿ ಅವರು ಯಾವತ್ತೂ ಮತ್ತು ಎಲ್ಲೆಲ್ಲೂ ಇಡೀ ಚಳವಳಿಯ ಹಿತಗಳನ್ನೇ ಪ್ರತಿನಿಧಿಸುತ್ತಾರೆ.

ಆದ್ದರಿಂದ ಕಮ್ಯೂನಿಸ್ಟರು, ಒಂದು ಕಡೆ, ಪ್ರತಿಯೊಂದೂ ದೇಶದ ಕಾರ್ಮಿಕ ವರ್ಗ ಪಕ್ಷಗಳ ನಿಜಕ್ಕೂ ಅತ್ಯಂತ ಮುಂದುವರೆದ ಹಾಗೂ ದೃಢಸಂಕಲ್ಪದ ವಿಭಾಗವಾಗಿದ್ದಾರೆ, ಇತರ ಎಲ್ಲರನ್ನೂ ಮುಂದಕ್ಕೆ ಕರೆದೊಯ್ಯುವಂಥ ವಿಭಾಗವಾಗಿದ್ದಾರೆ; ಮತ್ತೊಂದು ಕಡೆ, ಸೈದ್ಧಾಂತಿಕವಾಗಿ ಅವರು ಶ್ರಮಜೀವಿ ಚಳ

ವಳಿಯ ಮುನ್ನಡೆಯ ಮಾರ್ಗ, ಪರಿಸ್ಥಿತಿಗಳು ಅಂತಿಮ ಹಾಗೂ ಸಾರ್ವತ್ರಿಕ ಪರಿಣಾಮಗಳು ಇವುಗಳ ಸ್ಪಷ್ಟ ತಿಳಿವಳಿಕೆಯನ್ನು ಶ್ರಮಜೀವಿಗಳ ಬೃಹತ್ ಸಮೂಹಕ್ಕಿಂತಲೂ ಹೆಚ್ಚು ಹೆಚ್ಚಾಗಿ ಹೊಂದಿರುವ ಅನುಕೂಲತೆ ಹೊಂದಿರುತ್ತಾರೆ.

ಕಮ್ಯೂನಿಸ್ಟರ ಸದ್ಯದ ಗುರಿಯು ಇತರೆಲ್ಲ ಶ್ರಮಜೀವಿ ಪಕ್ಷಗಳ ಗುರಿಯೇ ಆಗಿದೆ: ಶ್ರಮಜೀವಿಗಳನ್ನು ಒಂದು ವರ್ಗವಾಗಿ ರೂಪಿಸುವುದು, ಬೂರ್ಷ್ವಾ ವರ್ಗದ ಪರಮಾಧಿಕಾರವನ್ನು ಉರುಳಿಸುವುದು, ಶ್ರಮಜೀವಿಗಳು ರಾಜಕೀಯ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವಂತೆ ಮಾಡುವುದು.

ಕಮ್ಯೂನಿಸ್ಟರ ಸೈದ್ಧಾಂತಿಕ ತೀರ್ಮಾನಗಳು ಯಾವುದೇ ರೀತಿಯಲ್ಲೂ ಯಾವುದೇ ಭಾವೀ ಸಾರ್ವತ್ರಿಕ ಸುಧಾರಕನು ಪತ್ತೆ ಹಚ್ಚಿದ ಅಥವಾ ಆವಿಷ್ಕರಿಸಿದ ವಿಚಾರ ಅಥವಾ ಸೂತ್ರಗಳ ಮೇಲೆ ಆಧರಿತವಾಗಿಲ್ಲ.

ಅವು ಅಸ್ತಿತ್ವದಲ್ಲಿರುವ ವರ್ಗ ಹೋರಾಟದಿಂದ, ನಮ್ಮ ಕಣ್ಮುಂದೆಯೇ ಜರುಗುತ್ತಿರುವ ಐತಿಹಾಸಿಕ ಚಳವಳಿಯಿಂದ, ಉದ್ಭವಿಸುವ ವಾಸ್ತವಿಕ ಸಂಬಂಧಗಳನ್ನು ಸಾಮಾನ್ಯ ಮಾತುಗಳಲ್ಲಿ ವ್ಯಕ್ತಪಡಿಸುತ್ತವಷ್ಟೆ. ಅಸ್ತಿತ್ವದಲ್ಲಿರುವ ಆಸ್ತಿ ಸಂಬಂಧಗಳನ್ನು ತೊಡೆದುಹಾಕುವುದೇ ಕಮ್ಯೂನಿಸಂನ ವಿಶಿಷ್ಟ ಲಕ್ಷಣವೇನೂ ಅಲ್ಲ.

ಗತಕಾಲದ ಎಲ್ಲ ಆಸ್ತಿ ಸಂಬಂಧಗಳೂ ಐತಿಹಾಸಿಕ ಪರಿಸ್ಥಿತಿಗಳಲ್ಲಾದ ಬದಲಾವಣೆಯ ಫಲವಾಗಿ ಉಂಟಾದ ಐತಿಹಾಸಿಕ ಬದಲಾವಣೆಗಳಿಗೆ ಸತತವಾಗಿ ಗುರಿಯಾಗಿವೆ.

ಉದಾಹರಣೆಗೆ, ಫ್ರೆಂಚ್ ಕ್ರಾಂತಿಯು ಸಾಮಂತಶಾಹಿ ಆಸ್ತಿಯನ್ನು ತೊಡೆದುಹಾಕಿ ಬೂರ್ಷ್ವಾ ಆಸ್ತಿಗೆ ಎಡೆ ಮಾಡಿಕೊಟ್ಟಿತು.

ಕಮ್ಯೂನಿಸಂನ ವಿಶಿಷ್ಟ ಲಕ್ಷಣವೆಂದರೆ, ಇಡೀಯಾಗಿ ಆಸ್ತಿಯನ್ನೇ ತೊಡೆದುಹಾಕುವುದಲ್ಲ, ಆದರೆ ಬೂರ್ಷ್ವಾ ಆಸ್ತಿಯನ್ನು ತೊಡೆದುಹಾಕುವುದು.

ಆಧುನಿಕ ಬೂರ್ಷ್ವಾ ಖಾಸಗಿ ಆಸ್ತಿಯು, ವರ್ಗ ವಿರೋಧಗಳ ಮೇಲೂ, ಕೆಲವರು ಅನೇಕರನ್ನು ಶೋಷಿಸುವುದರ ಮೇಲೂ ಆಧರಿತವಾದ ಉತ್ಪಾದನೆ ಹಾಗೂ ಉತ್ಪನ್ನಗಳ ಬಳಕೆಯ ಪದ್ಧತಿಯ ಚರಮ ಮತ್ತು ಅತಿ ಪರಿಪೂರ್ಣ ಅಭಿವ್ಯಕ್ತಿಯಾಗಿದೆ.

ಈ ಅರ್ಥದಲ್ಲಿ ಕಮ್ಯೂನಿಸ್ಟರ ಸಿದ್ಧಾಂತವನ್ನು ಈ ಒಂದು ವಾಕ್ಯದಲ್ಲೇ ಕ್ರೋಡೀಕರಿಸಿ ಹೇಳಬಹುದು: ಖಾಸಗಿ ಆಸ್ತಿಯನ್ನು ತೊಡೆದುಹಾಕುವುದು.

ವ್ಯಕ್ತಿಯೊಬ್ಬನು ತನ್ನ ಸ್ವಂತ ಶ್ರಮದ ಫಲವಾಗಿ ಆಸ್ತಿಯನ್ನು ಪಡೆದುಕೊಳ್ಳುವ ಹಕ್ಕನ್ನು ನಾವು ಕಮ್ಯೂನಿಸ್ಟರು ತೊಡೆದುಹಾಕಲು ಬಯಸುತ್ತೇವೆಂದು

ಆರೋಪಿಸಲಾಗಿದೆ ಮತ್ತು ಈ ಆಸ್ತಿಯೇ ಎಲ್ಲ ವ್ಯಕ್ತಿಗತ ಸ್ವಾತಂತ್ರ್ಯ, ಚಟುವಟಿಕೆ ಹಾಗೂ ನಿರಾವಲಂಬನೆಗೆ ನೆಲಗಟ್ಟು ಎಂದು ಹೇಳಲಾಗುತ್ತದೆ.

ಕಷ್ಟಪಟ್ಟು ಗಳಿಸಿದ, ಸ್ವಂತ ಪರಿಶ್ರಮದಿಂದ ಪಡೆದ, ಸ್ವಯಮಾರ್ಜಿತ ಆಸ್ತಿ ! ಹೀಗೆ ಹೇಳುವಾಗ ನೀವು ಪುಟ್ಟ ಕೈಕಸುಬುದಾರನ ಹಾಗೂ ಸಣ್ಣ ರೈತನ ಆಸ್ತಿ, ಬೂರ್ಷ್ವಾ ರೂಪ ಬರುವುದಕ್ಕೆ ಮುನ್ನ ಇದ್ದ ರೂಪದ ಆಸ್ತಿ, ಎಂಬ ಅರ್ಥದಲ್ಲಿ ಹೇಳುವಿರಾ? ಹಾಗಿದ್ದರೆ ಅದನ್ನು ತೊಡೆದುಹಾಕುವ ಅಗತ್ಯವೇ ಇಲ್ಲ; ಕೈಗಾರಿಕಾ ಬೆಳವಣಿಗೆಯು ತುಂಬ ಮಟ್ಟಿಗೆ ಅದನ್ನಾಗಲೇ ನಾಶಮಾಡಿದೆ ಮತ್ತು ಇನ್ನೂ ದಿನದಿನವೂ ನಾಶಮಾಡುತ್ತಿದೆ.

ಅಥವಾ ನೀವು ಹೇಳುವುದು ಆಧುನಿಕ ಬೂರ್ಷ್ವಾ ಖಾಸಗಿ ಆಸ್ತಿಯೇ?

ಆದರೆ ಕೂಲಿ ಕೆಲಸವು ಶ್ರಮಜೀವಿಗೆ ಏನಾದರೂ ಆಸ್ತಿಯನ್ನು ಉಂಟುಮಾಡಿಕೊಡುತ್ತದೆಯೇ? ಸ್ವಲ್ಪವೂ ಇಲ್ಲ. ಅದು ಬಂಡವಾಳವನ್ನು, ಅಂದರೆ ಕೂಲಿ ಕೆಲಸವನ್ನು ಶೋಷಿಸುವ ಆಸ್ತಿಯನ್ನು, ಹೊಸ ಶೋಷಣೆಗಾಗಿ ಹೊಸ ಕೂಲಿ ಕೆಲಸವನ್ನು ಸರಬರಾಜು ಮಾಡುವ ಪರಿಸ್ಥಿತಿಯಲ್ಲಷ್ಟೆ ಅಧಿಕವಾಗಬಲ್ಲ ಆಸ್ತಿಯನ್ನು, ಸೃಜಿಸುತ್ತದೆ. ಇಂದಿನ ರೂಪದಲ್ಲಿ ಆಸ್ತಿಯು ಬಂಡವಾಳ ಹಾಗೂ ಕೂಲಿ ಕೆಲಸದ ವಿರೋಧದ ಮೇಲೆ ಆಧರಿತವಾಗಿದೆ. ಈ ವಿರೋಧದ ಎರಡು ಮುಖಗಳನ್ನೂ ಪರಿಶೀಲಿಸಿ ನೋಡೋಣ.

ಯಾರೇ ಆಗಲಿ ಬಂಡವಾಳಶಾಹಿ ಆಗಬೇಕಾದರೆ ವಸ್ತು ಉತ್ಪಾದನೆಯಲ್ಲಿ ಶುದ್ಧ ಖಾಸಗಿಯಷ್ಟೆ ಅಲ್ಲ ಸಾಮಾಜಿಕವೂ ಆದ ಸ್ಥಾನಮಾನ ಹೊಂದಿರಬೇಕು. ಬಂಡವಾಳವು ಒಂದು ಸಾಮೂಹಿಕ ಉತ್ಪನ್ನ. ಸಮಾಜದ ಅನೇಕ ಸದಸ್ಯರ ಐಕ್ಯ ಕಾರ್ಯಾಚರಣೆಯಿಂದಷ್ಟೆ ಅಲ್ಲ, ಅಂತಿಮ ವಿಶ್ಲೇಷಣೆಯಲ್ಲಿ, ಸಮಾಜದ ಎಲ್ಲ ಸದಸ್ಯರ ಐಕ್ಯ ಕಾರ್ಯಾಚರಣೆಯಿಂದಲೇ, ಅದನ್ನು ಚಾಲನೆಗೆ ತರಲು ಸಾಧ್ಯ.

ಆದ್ದರಿಂದ ಬಂಡವಾಳವು ಖಾಸಗಿ ಶಕ್ತಿಯಲ್ಲ, ಅದೊಂದು ಸಾಮಾಜಿಕ ಶಕ್ತಿ.

ಆದ್ದರಿಂದ ಬಂಡವಾಳವನ್ನು ಸರ್ವಜನರ ಆಸ್ತಿಯನ್ನಾಗಿ, ಸಮಾಜದ ಎಲ್ಲ ಸದಸ್ಯರ ಆಸ್ತಿಯನ್ನಾಗಿ ಪರಿವರ್ತಿಸಿದಾಗ, ಖಾಸಗಿ ಆಸ್ತಿಯನ್ನು ಸಾಮಾಜಿಕ ಆಸ್ತಿಯನ್ನಾಗಿ ಪರಿವರ್ತಿಸಿದಂತಾಗದು. ಬದಲಾದುದು ಆಸ್ತಿಯ ಸಾಮಾಜಿಕ ಸ್ವರೂಪವಷ್ಟೆ. ಅದು ತನ್ನ ವರ್ಗ ಸ್ವರೂಪವನ್ನು ಕಳೆದುಕೊಳ್ಳುತ್ತದೆ.

ಈಗ ಕೂಲಿ ಕೆಲಸವನ್ನು ತೆಗೆದುಕೊಳ್ಳೋಣ.

ಕೂಲಿ ಕೆಲಸದ ಸರಾಸರಿ ಬೆಲೆ – ಕನಿಷ್ಠ ಕೂಲಿ. ಅಂದರೆ ಕೆಲಸಗಾರನು ಕೇವಲ ಕೆಲಸಗಾರನಾಗಿ ಉಳಿಯುವಂತೆ ಇರಿಸಲು ತೀರ ಅವಶ್ಯವಾದ ಜೀವನಾಧಾರ ಪ್ರಮಾಣ. ಆದ್ದರಿಂದ ಕೂಲಿ ಕೆಲಸಗಾರನು ತನ್ನ ದುಡಿಮೆಯ ಮೂಲಕ

ಏನನ್ನು ಪಡೆದುಕೊಳ್ಳುತ್ತಾನೋ ಅದು ಕೇವಲ ಅಸ್ತಿತ್ವವನ್ನು ಮುಂದುವರಿಸಿ ಕೊಂಡು ಹೋಗಲು ಮತ್ತು ಪುನರುತ್ಪಾದಿಸಲು ಸಾಲುತ್ತದಷ್ಟೆ. ಈ ಶ್ರಮದ ಉತ್ಪನ್ನಗಳನ್ನು ಖಾಸಗಿಯಾಗಿ ಬಳಸಿಕೊಳ್ಳುವುದನ್ನು ನಾವು ತೊಡೆದುಹಾಕುವ ಯಾವ ಉದ್ದೇಶವನ್ನೂ ಹೊಂದಿಲ್ಲ. ಈ ರೀತಿ ವಿನಿಯೋಗ ಮಾಡಿಕೊಳ್ಳುವುದು ಮಾನವ ಜೀವನದ ಪೋಷಣೆ ಹಾಗೂ ಪುನರುತ್ಪಾದನೆಗಾಗಿ ಅಷ್ಟೆ. ಅದು ಇತರರ ಶ್ರಮದ ಮೇಲೆ ಅಧಿಕಾರ ಸ್ಥಾಪಿಸಲು ಹೆಚ್ಚಿಗೆ ಏನನ್ನೂ ಉಳಿಸುವುದಿಲ್ಲ. ಈಗಿನ ವಿತರಣೆಯ ಪದ್ಧತಿಯಲ್ಲಿ ಕೂಲಿಕಾರನು ಕೇವಲ ಬಂಡವಾಳ ವನ್ನು ಹೆಚ್ಚಿಸಲಷ್ಟೆ ಬಾಳುತ್ತಾನೆ. ಆಳುವ ವರ್ಗದ ಹಿತಕ್ಕೆ ಎಲ್ಲಿಯವರೆಗೆ ಅಗತ್ಯವಾಗುತ್ತದೋ ಅಲ್ಲಿಯವರೆಗಷ್ಟೆ ಅವನಿಗೆ ಬಾಳಲು ಅವಕಾಶ ನೀಡಲಾ ಗುತ್ತದೆ. ನಾವು ನಾಶಮಾಡ ಬಯಸುವುದೆಲ್ಲ ಈ ರೀತಿಯ ವಿತರಣೆಯ ದಾರುಣ ಸ್ವರೂಪವನ್ನಷ್ಟೆ.

ಬೂರ್ಷ್ವಾ ಸಮಾಜದಲ್ಲಿ ಜೀವಂತ ಶ್ರಮವು ಸಂಗ್ರಹಿತ ಶ್ರಮವನ್ನು ಹೆಚ್ಚಿಸುವ ಸಾಧನವಷ್ಟೆ. ಕಮ್ಯೂನಿಸ್ಟ್ ಸಮಾಜದಲ್ಲಿ ಸಂಗ್ರಹಿತ ಶ್ರಮವು ಕಾರ್ಮಿಕರ ಅಸ್ತಿತ್ವವನ್ನು ವಿಸ್ತಾರಗೊಳಿಸುವ, ಸಿರಿವಂತಗೊಳಿಸುವ ಹಾಗೂ ಉತ್ತೇಜನಗೊಳಿಸುವ ಸಾಧನವಾಗುವುದು.

ಆದ್ದರಿಂದ ಬೂರ್ಷ್ವಾ ಸಮಾಜದಲ್ಲಿ ಗತಕಾಲವು ವರ್ತಮಾನ ಕಾಲದ ಮೇಲೆ ಅಧಿಕಾರ ಚಲಾಯಿಸುತ್ತದೆ; ಕಮ್ಯೂನಿಸ್ಟ್ ಸಮಾಜದಲ್ಲಿ ವರ್ತಮಾನ ಕಾಲವು ಗತಕಾಲದ ಮೇಲೆ ಅಧಿಕಾರ ಚಲಾಯಿಸುತ್ತದೆ. ಬೂರ್ಷ್ವಾ ಸಮಾ ಜದಲ್ಲಿ ಬಂಡವಾಳವು ಸ್ವತಂತ್ರವಾಗಿರುತ್ತದೆ, ಸ್ವಂತ ವ್ಯಕ್ತಿತ್ವವನ್ನು ಹೊಂದಿ ರುತ್ತದೆ. ಜೀವಂತ ವ್ಯಕ್ತಿಯಾದರೋ ಪರಾಧೀನನಾಗಿರುತ್ತಾನೆ ಮತ್ತು ಸ್ವಂತ ವ್ಯಕ್ತಿತ್ವವನ್ನು ಹೊಂದಿರುವುದಿಲ್ಲ.

ಈ ವಸ್ತುಸ್ಥಿತಿಯನ್ನು ತೊಡೆದುಹಾಕುವುದನ್ನು ಬೂರ್ಷ್ವಾಸೀಯು ವ್ಯಕ್ತಿ ತ್ವದ ಹರಣ ಹಾಗೂ ಸ್ವಾತಂತ್ರ್ಯದ ಹರಣ ಎಂದು ಕರೆಯುತ್ತದೆ ! ಅದು ಸರಿಯೂ ಹೌದು. ಬೂರ್ಷ್ವಾ ವ್ಯಕ್ತಿತ್ವ, ಬೂರ್ಷ್ವಾ ನಿರಾವಲಂಬನೆ ಹಾಗೂ ಬೂರ್ಷ್ವಾ ಸ್ವಾತಂತ್ರ್ಯ ಇವನ್ನು ತೊಡೆದುಹಾಕುವುದೇ ನಿಸ್ಸಂದೇಹವಾಗಿಯೂ ನಮ್ಮ ಗುರಿ.

ಸ್ವಾತಂತ್ರ್ಯ ಎಂದರೆ, ಇಂದಿನ ಬೂರ್ಷ್ವಾ ಉತ್ಪಾದನಾ ಸಂಬಂಧಗಳಲ್ಲಿ, ಸ್ವಚ್ಛಂದ ವ್ಯಾಪಾರ, ಸ್ವತಂತ್ರ ಮಾರಾಟ ಕೊಳ್ಳಾಟ ಎಂದರ್ಥ.

ಆದರೆ ಮಾರಾಟ ಕೊಳ್ಳಾಟ ಇಲ್ಲವಾದರೆ, ಸ್ವತಂತ್ರ ಮಾರಾಟ ಕೊಳ್ಳಾ ಟವೂ ಇಲ್ಲವಾಗುತ್ತದೆ. ಸ್ವತಂತ್ರ ಮಾರಾಟ ಕೊಳ್ಳಾಟದ ಬಗೆಗೆ ಈ ಮಾತು, ಮತ್ತು ಒಟ್ಟಿನ ಮೇಲೆ ಸ್ವಾತಂತ್ರ್ಯದ ಬಗೆಗೆ ನಮ್ಮ ಬೂರ್ಷ್ವಾಸೀಯ ಇತರ ಎಲ್ಲ "ಅಟಾಟೋಪದ ಮಾತುಗಳೂ" ಏನಾದರೂ ಅರ್ಥ ಹೊಂದಿದ್ದರೆ, ಅದು

ಮಧ್ಯಯುಗದ ಬಂಧನಗಳಿಗೊಳಗಾದ ವ್ಯಾಪಾರಗಾರರೊಂದಿಗೆ, ಪರಿಮಿತ ಮಾರಾಟ ಕೊಳ್ಳಾಟದೊಂದಿಗೆ ವೈದೃಶ್ಯವಾಗಿ ನೋಡಿದರಷ್ಟೆ ತಿಳಿಯಬರುತ್ತದೆ. ಅದಿಲ್ಲದೆ ಕಮ್ಯೂನಿಸ್ಟ್ ಸಮಾಜದಲ್ಲಿ ಮಾರಾಟ ಕೊಳ್ಳಾಟವನ್ನು ತೊಡೆದುಹಾಕುವುದಕ್ಕೆ, ಬೂರ್ಷ್ವಾ ಉತ್ಪಾದನಾ ಸಂಬಂಧಗಳನ್ನು ಹಾಗೂ ಬೂರ್ಷ್ವಾಸೀಯನ್ನೇ ತೊಡೆದುಹಾಕುವುದಕ್ಕೆ ಎದುರಾಗಿ ಬೂರ್ಷ್ವಾಗಳ ಈ ಮಾತುಗಳನ್ನು ಪರಿಶೀಲಿಸಿದಲ್ಲಿ ಅವಕ್ಕೆ ಅರ್ಥವೇ ಇರುವುದಿಲ್ಲ.

ಖಾಸಗಿ ಆಸ್ತಿಯನ್ನು ನಾಶಗೊಳಿಸಲು ನಾವು ಉದ್ದೇಶಿಸಿರುವುದನ್ನು ಕಂಡು ನೀವು ಭಯಭ್ರಾಂತರಾಗಿದ್ದೀರಿ. ಆದರೆ ನಿಮ್ಮ ಇಂದು ಅಸ್ತಿತ್ವದಲ್ಲಿರುವ ಸಮಾಜದಲ್ಲಿ ಜನ ಸಂಖ್ಯೆಯ ಹತ್ತನೇ ಒಂಬತ್ತು ಭಾಗ ಜನರಿಗೆ ಸಂಬಂಧಿಸಿ ಖಾಸಗಿ ಆಸ್ತಿ ಆಗಲೇ ತೊಡೆದುಹಾಕಲ್ಪಟ್ಟಿದೆ; ಕೆಲವರ ಹತ್ತಿರವಷ್ಟೆ ಅದು ಇರುವುದಕ್ಕೆ, ಆ ಹತ್ತನೇ ಒಂಬತ್ತು ಭಾಗದ ಜನರ ಕೈಯಲ್ಲಿ ಅದು ಇಲ್ಲದೇ ಇರುವುದೇ ಮುಖ್ಯ ಕಾರಣ. ಆದ್ದರಿಂದ ಆಸ್ತಿಯ ಒಂದು ಸ್ವರೂಪವನ್ನು – ಯಾವುದರ ಅಸ್ತಿತ್ವಕ್ಕೆ ಸಮಾಜದ ಅಪಾರ ಬಹುಸಂಖ್ಯಾತರಲ್ಲಿ ಯಾವುದೇ ಆಸ್ತಿ ಇಲ್ಲದಿರುವುದು ಆಧಾರವೋ ಅಂಥ ಆಸ್ತಿಯ ಸ್ವರೂಪವನ್ನು – ತೊಡೆದು ಹಾಕಲು ನಾವು ಉದ್ದೇಶಿಸಿರುವುದಕ್ಕಾಗಿ ನೀವು ನಮ್ಮನ್ನು ನಿಂದಿಸುತ್ತೀರಿ.

ಒಂದೇ ಮಾತಿನಲ್ಲಿ, ನಾವು ನಿಮ್ಮ ಆಸ್ತಿಯನ್ನು ತೊಡೆದುಹಾಕಲು ಉದ್ದೇಶಿಸಿದ್ದೇವೆಂದು ನೀವು ನಮ್ಮನ್ನು ನಿಂದಿಸುತ್ತೀರಿ. ಹೌದು, ಅದು ಹಾಗೆಯೇ; ನಾವು ಉದ್ದೇಶಿಸಿರುವುದು ಅದನ್ನೇ.

ಶ್ರಮವನ್ನು ಬಂಡವಾಳವಾಗಿ, ಹಣವಾಗಿ, ಗೇಣಿಯಾಗಿ, ಅಥವಾ ಏಕ ಸ್ವಾಮ್ಯಕ್ಕೆ ಒಳಪಡಿಸಲು ಸಾಧ್ಯವಿರುವಂಥ ಸಾಮಾಜಿಕ ಶಕ್ತಿಯಾಗಿ ಪರಿವರ್ತಿಸಲು ಯಾವ ಘಳಿಗೆಯಲ್ಲಿ ಎಷ್ಟು ಮಾತ್ರವೂ ಸಾಧ್ಯವಾಗುವುದಿಲ್ಲವೋ ಆ ಘಳಿಗೆಯಿಂದ, ಅಂದರೆ, ವೈಯಕ್ತಿಕ ಆಸ್ತಿಯನ್ನು ಬೂರ್ಷ್ವಾ ಆಸ್ತಿಯನ್ನಾಗಿ, ಬಂಡವಾಳವನ್ನಾಗಿ, ಪರಿವರ್ತಿಸಲು ಎಷ್ಟು ಮಾತ್ರವೂ ಸಾಧ್ಯವಾಗುವುದಿಲ್ಲವೋ ಆ ಘಳಿಗೆಯಿಂದ, ವೈಯಕ್ತಿಕತೆ ಮಾಯವಾಗುತ್ತದೆ ಎಂದು ನೀವು ಹೇಳುತ್ತೀರಿ.

ಆದ್ದರಿಂದ "ವೈಯಕ್ತಿಕ" ಎಂದರೆ ನಿಮ್ಮ ಅರ್ಥದಲ್ಲಿ ಬೂರ್ಷ್ವಾ ಅಲ್ಲದೆ, ಆಸ್ತಿಯ ಮಧ್ಯಮ ವರ್ಗದ ಮಾಲಿಕನಲ್ಲದೆ ಬೇರಾರೂ ಅಲ್ಲ ಎಂಬುದನ್ನು ನೀವು ಒಪ್ಪಿಕೊಳ್ಳಲೇಬೇಕು. ಈ ವ್ಯಕ್ತಿಯನ್ನು ನಿಜಕ್ಕೂ ಹಾದಿಯಿಂದ ಹೊರಕ್ಕೆ ತಳ್ಳಲೇಬೇಕು, ಅವನು ಇರುವುದಕ್ಕೆ ಅವಕಾಶ ಇಲ್ಲದಂತೆ ಮಾಡಲೇಬೇಕು.

ಕಮ್ಯೂನಿಸಂ ಯಾರಿಂದಲೂ ಸಮಾಜದ ಉತ್ಪನ್ನಗಳನ್ನು ವಿನಿಯೋಗಿಸಿಕೊಳ್ಳುವ ಅಧಿಕಾರವನ್ನು ಕಸಿದುಕೊಳ್ಳುವುದಿಲ್ಲ; ಅದು ಮಾಡುವುದೆಲ್ಲ, ಹಾಗೆ ವಿನಿಯೋಗಿಸಿಕೊಳ್ಳುವುದರ ಮೂಲಕ ಇತರರ ಶ್ರಮವನ್ನು ತಮ್ಮ ಅಧೀನಪಡಿಸಿಕೊಳ್ಳುವ ಅಧಿಕಾರವನ್ನು ಯಾರಿಗೂ ಇಲ್ಲದಂತೆ ಮಾಡುವುದು.

ಖಾಸಗಿ ಆಸ್ತಿಯ ಪದ್ಧತಿಯನ್ನು ತೊಡೆದುಹಾಕುವುದರೊಂದಿಗೆ ಎಲ್ಲ ಕೆಲಸವೂ ನಿಂತುಹೋಗುತ್ತದೆ, ಸಾರ್ವತ್ರಿಕ ಸೋಮಾರಿತನವು ನಮ್ಮನ್ನು ಆವರಿಸುತ್ತದೆ, ಎಂದು ಆಕ್ಷೇಪಿಸಲಾಗಿದೆ.

ಇದರ ಪ್ರಕಾರ, ಬೂರ್ಷ್ವಾ ಸಮಾಜವು ಬಹು ಹಿಂದೆಯೇ ಶುದ್ಧ ಸೋಮಾರಿತನದಿಂದ ನಾಶವಾಗಬೇಕಿದ್ದಿತು; ಏಕೆಂದರೆ ಅದರಲ್ಲಿ ಕೆಲಸ ಮಾಡುವ ಸದಸ್ಯರು ಏನನ್ನೂ ಗಳಿಸುವುದಿಲ್ಲ, ಗಳಿಸುವವರು ಕೆಲಸ ಮಾಡುವುದಿಲ್ಲ. ಆದ್ದರಿಂದ ಈ ಆಕ್ಷೇಪಣೆಯೆಲ್ಲ ಪುನರುಕ್ತಿಯ – ಬಂಡವಾಳವೇ ಇಲ್ಲದಿರುವಾಗ ಕೂಲಿ ಕೆಲಸ ಇರುವುದೂ ಸಾಧ್ಯವಿಲ್ಲ ಎಂಬ ಪುನರುಕ್ತಿಯ – ಮತ್ತೊಂದು ಅಭಿವ್ಯಕ್ತಿ ಅಷ್ಟೆ.

ಇದೇ ರೀತಿ ಕಮ್ಯೂನಿಸ್ಟ್ ವಿಧಾನದ ವಸ್ತು ಉತ್ಪನ್ನಗಳ ಉತ್ಪಾದನೆ ಹಾಗೂ ವಿತರಣೆಯ ವಿರುದ್ಧ ಎತ್ತುವ ಆಕ್ಷೇಪಣೆಗಳನ್ನೇ ಕಮ್ಯೂನಿಸ್ಟ್ ವಿಧಾನದ ಬೌದ್ಧಿಕ ಉತ್ಪನ್ನಗಳ ಉತ್ಪಾದನೆ ಹಾಗೂ ವಿತರಣೆಯ ವಿರುದ್ಧವೂ ಎತ್ತಲಾಗುತ್ತದೆ. ಬೂರ್ಷ್ವಾ ವ್ಯಕ್ತಿಗೆ ವರ್ಗ ಆಸ್ತಿಯು ಕಣ್ಮರೆಯಾಗುವುದು ಉತ್ಪಾದನೆಯೇ ಕಣ್ಮರೆಯಾದಂತೆ, ಹಾಗೆಯೇ ವರ್ಗಸಂಸ್ಕೃತಿ ಕಣ್ಮರೆಯಾಗುವುದು ಅವನಿಗೆ ಎಲ್ಲ ಸಂಸ್ಕೃತಿಯೂ ಕಣ್ಮರೆಯಾಗುವುದಕ್ಕೆ ಸಮನಾಗಿರುತ್ತದೆ.

ಯಾವ ಸಂಸ್ಕೃತಿಯು ನಷ್ಟವಾಯಿತೆಂದು ಅವನು ಶೋಕಿಸುತ್ತಾನೋ ಆ ಸಂಸ್ಕೃತಿಯು ಅಪರಿಮಿತ ಬಹುಸಂಖ್ಯಾತರಿಗೆ, ಕೇವಲ ಯಂತ್ರದಂತೆ ವರ್ತಿಸಲು ನೀಡುವ ತರಬೇತಷ್ಟೆ ಆಗಿರುತ್ತದೆ.

ಆದರೆ, ಎಲ್ಲಿಯವರೆಗೆ ನೀವು ಬೂರ್ಷ್ವಾ ಆಸ್ತಿಯನ್ನು ರದ್ದುಮಾಡುವ ನಮ್ಮ ಉದ್ದೇಶವನ್ನು ನಿಮ್ಮ ಸ್ವಾತಂತ್ರ್ಯ, ಸಂಸ್ಕೃತಿ, ಕಾಯಿದೆ ಇತ್ಯಾದಿಗಳ ಮಾನದಂಡದಿಂದ ಅಳೆಯಲು ಯತ್ನಿಸುತ್ತೀರೋ ಅಲ್ಲಿಯವರೆಗೆ ನಮ್ಮೊಡನೆ ವಿವಾದಕ್ಕೆ ಬರಬೇಡಿ. ನಿಮ್ಮ ವಿಚಾರಗಳು ನಿಮ್ಮ ಬೂರ್ಷ್ವಾ ಉತ್ಪಾದನೆ ಹಾಗೂ ಬೂರ್ಷ್ವಾ ಆಸ್ತಿ ಸಂಬಂಧಗಳಿಂದ ಹುಟ್ಟಿದವೇ ಆಗಿವೆ. ಅದೇ ರೀತಿ ನಿಮ್ಮ ನ್ಯಾಯಶಾಸ್ತ್ರವೂ ನಿಮ್ಮ ವರ್ಗದ ಸಂಕಲ್ಪವನ್ನೇ ಎಲ್ಲರಿಗೂ ಶಾಸನವನ್ನಾಗಿ ಮಾಡಿರುವುದಾಗಿದೆ. ಈ ಸಂಕಲ್ಪದ ವಿಶಿಷ್ಟ ಲಕ್ಷಣವನ್ನೂ ಅದರ ದಿಶೆಯನ್ನೂ ನಿಮ್ಮ ವರ್ಗ ಅಸ್ತಿತ್ವದ ಆರ್ಥಿಕ ಪರಿಸ್ಥಿತಿಗಳೇ ನಿರ್ಧರಿಸುತ್ತವೆ.

ಇಂದಿನ ಉತ್ಪಾದನಾ ಸಂಬಂಧ ಹಾಗೂ ಆಸ್ತಿ ಸಂಬಂಧಗಳಿಂದ ಉದ್ಭವಿಸುವ ಸಾಮಾಜಿಕ ಸ್ವರೂಪಗಳನ್ನೇ – ಉತ್ಪಾದನೆಯ ಪ್ರಗತಿಯಲ್ಲಿ ಕಾಣಿಸಿಕೊಳ್ಳುವ ಹಾಗೂ ಕಣ್ಮರೆಯಾಗುವ ಐತಿಹಾಸಿಕ ಸಂಬಂಧಗಳನ್ನೇ – ನಿಸರ್ಗದ ಹಾಗೂ ವಿವೇಚನೆಯ ಶಾಶ್ವತ ನಿಯಮಗಳನ್ನಾಗಿ ಪರಿವರ್ತಿಸುವಂತೆ ನಿಮ್ಮನ್ನು ಪ್ರೇರಿ

ಸುತ್ತಿರುವ ನಿಮ್ಮ ಸ್ವಾರ್ಥಪರ ಕುಗ್ರಹಿಕೆಯು ನಿಮಗೇನೂ ವಿಶಿಷ್ಟವಾದುದಲ್ಲ. ನಿಮಗೆ ಮುನ್ನ ಇದ್ದ ಪ್ರತಿಯೊಂದು ಆಳುವ ವರ್ಗವೂ ಇದೇ ಕುಗ್ರಹಿಕೆ ಹೊಂದಿದ್ದಿತು. ಪುರಾತನ ಆಸ್ತಿ ವಿಷಯದಲ್ಲಿ ನೀವು ಏನನ್ನು ಸ್ಪಷ್ಟವಾಗಿ ಕಾಣುತ್ತೀರೋ, ಸಾಮಂತಶಾಹಿ ಆಸ್ತಿ ವಿಷಯದಲ್ಲಿ ನೀವು ಏನನ್ನು ಒಪ್ಪಿಕೊಳ್ಳುತ್ತೀರೋ ಅದನ್ನೇ ನಿಮ್ಮ ಸ್ವಂತ ಬೂರ್ಷ್ವಾ ಆಸ್ತಿ ರೂಪದ ವಿಷಯದಲ್ಲಿ ಒಪ್ಪಿಕೊಳ್ಳಲು ನಿಮಗೆ ಅಳುಕೆನಿಸುತ್ತದೆ.

ಕುಟುಂಬದ ನಾಶ! ಕಮ್ಯೂನಿಸ್ಟರ ಈ ನೀಚ ಸಲಹೆಯನ್ನು ಕೇಳಿ ಅತ್ಯಂತ ಉಗ್ರವಾದಿಯೂ ಕೆರಳುತ್ತಾನೆ.

ಇಂದಿನ ಕುಟುಂಬ – ಬೂರ್ಷ್ವಾ ಕುಟುಂಬ – ಯಾವ ಅಡಿಪಾಯದ ಮೇಲೆ ಆಧರಿಸಿದೆ? ಬಂಡವಾಳದ ಮೇಲೆ, ಖಾಸಗಿ ಲಾಭದ ಮೇಲೆ. ಸಂಪೂರ್ಣವಾಗಿ ವಿಕಾಸಗೊಂಡ ರೂಪದಲ್ಲಿ ಈ ಕುಟುಂಬವು ಬೂರ್ಷ್ವಾಸೀಯ ಮಧ್ಯೆಯಷ್ಟೆ ಇದೆ. ಆದರೆ ಈ ವಸ್ತುಸ್ಥಿತಿಗೆ ಪೂರಕವಾಗಿ ಎರಡು ಅಂಶಗಳಿವೆ: ಒಂದು, ಶ್ರಮಜೀವಿಗಳ ಮಧ್ಯೆ ಕುಟುಂಬತ್ವ ಇಲ್ಲದಿರುವುದು, ಇನ್ನೊಂದು ಬಹಿರಂಗ ವೇಶ್ಯಾವೃತ್ತಿ.

ಈ ಪೂರಕ ಮಾಯವಾದಂತೆ ಬೂರ್ಷ್ವಾ ಕುಟುಂಬವೂ ಸಹಜವಾಗಿಯೇ ಮಾಯವಾಗುತ್ತದೆ ಮತ್ತು ಬಂಡವಾಳವು ಕಣ್ಮರೆಯಾಗುವುದರೊಂದಿಗೆ ಇವೆರಡೂ ಕಣ್ಮರೆಯಾಗುತ್ತವೆ.

ಮಕ್ಕಳನ್ನು ಅವರ ತಾಯಿ ತಂದೆಯರು ಶೋಷಿಸುವುದನ್ನು ನಿಲ್ಲಿಸುವುದು ನಮ್ಮ ಬಯಕೆ ಎಂದು ನೀವು ನಮ್ಮ ಮೇಲೆ ಆಪಾದನೆ ಹೊರಿಸುತ್ತೀರಾ? ಹೌದು, ನಾವು ಈ ಅಪರಾಧವನ್ನು ಒಪ್ಪಿಕೊಳ್ಳುತ್ತೇವೆ.

ಗೃಹಶಿಕ್ಷಣದ ಬದಲು ನಾವು ಸಾಮಾಜಿಕ ಶಿಕ್ಷಣವನ್ನು ಸ್ಥಾಪಿಸಿ ಅತ್ಯಂತ ಪವಿತ್ರವೆಂದು ಪರಿಗಣಿಸಲ್ಪಟ್ಟ ಸಂಬಂಧಗಳನ್ನು ನಾಶ ಮಾಡುತ್ತಿದ್ದೇವೆಂದು ನೀವು ಆಕ್ಷೇಪಿಸುತ್ತೀರಿ.

ಆದರೆ ನಿಮ್ಮ ಶಿಕ್ಷಣ! ಅದೂ ಸಾಮಾಜಿಕವೇ ಅಲ್ಲವೇ? ಅದು ನೀವು ಶಿಕ್ಷಣ ನೀಡುವ ಸಾಮಾಜಿಕ ಪರಿಸ್ಥಿತಿಗಳಿಂದಲೂ, ಶಾಲೆಗಳು ಇತ್ಯಾದಿ ಸಾಧನಗಳ ಮೂಲಕ ಸಮಾಜವು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಮಧ್ಯೆ ಪ್ರವೇಶಿಸುವುದರಿಂದಲೂ, ನಿರ್ಧರಿಸಲ್ಪಡುತ್ತದಲ್ಲವೇ? ಸಮಾಜವು ಶಿಕ್ಷಣದಲ್ಲಿ ಹಸ್ತಕ್ಷೇಪ ಮಾಡುವುದು ಕಮ್ಯೂನಿಸ್ಟರ ನೂತನ ಸೃಷ್ಟಿಯೇನೂ ಅಲ್ಲ; ಆದರೆ ಅವರು ಈ ಹಸ್ತಕ್ಷೇಪದ ಸ್ವರೂಪವನ್ನು ಬದಲಿಸ ಬಯಸುತ್ತಾರೆ ಮತ್ತು ಶಿಕ್ಷಣವನ್ನು ಆಳುವ ವರ್ಗದ ಪ್ರಭಾವದಿಂದ ಪಾರು ಮಾಡಲು ಬಯಸುತ್ತಾರೆ.

ಕುಟುಂಬ ಹಾಗೂ ಶಿಕ್ಷಣದ ಬಗೆಗೆ, ತಾಯಿ ತಂದೆಯರ ಮತ್ತು ಮಗುವಿನ ಮಧ್ಯೆ ಇರುವ ಪವಿತ್ರ ಪರಸ್ಪರ ಸಂಬಂಧದ ಬಗೆಗೆ ಬೂರ್ಷ್ವಾಗಳು ಆಡುವ ರಂಜನೆಯ ಮಾತು ಕೇಳಿದಾಗ, ನಮಗೆ ಬೇಸರ ಉಂಟಾಗುತ್ತದೆ. ಆಧುನಿಕ ಕೈಗಾರಿಕೆಯು ಶ್ರಮಜೀವಿಗಳ ನಡುವಿನ ಎಲ್ಲ ಕುಟುಂಬ ಬಾಂಧವ್ಯಗಳನ್ನೂ ಭಂಗಗೊಳಿಸುತ್ತಿರುವುದನ್ನೂ, ಅವರ ಮಕ್ಕಳನ್ನು ಕೇವಲ ವ್ಯಾಪಾರದ ಸರಕುಗಳನ್ನಾಗಿ, ಶ್ರಮದ ಸಾಧನಗಳನ್ನಾಗಿ ಪರಿವರ್ತಿಸುತ್ತಿರುವುದನ್ನೂ ಕಂಡಾಗ, ಆ ಬೇಸರ ಇನ್ನೂ ಹೆಚ್ಚಾಗುತ್ತದೆ.

ಆದರೆ ನೀವು, ಕಮ್ಯೂನಿಸ್ಟರು, ಸ್ತ್ರೀಯರನ್ನು ಸಾರ್ವಜನಿಕ ಸ್ವತ್ತನ್ನಾಗಿ ಮಾಡುತ್ತೀರಿ, ಎಂದು ಇಡೀ ಬೂರ್ಷ್ವಾಸೀಯು ಒಕ್ಕೊರಲಿನಿಂದ ಬೊಬ್ಬೆ ಹಾಕುತ್ತದೆ.

ಬೂರ್ಷ್ವಾ ವ್ಯಕ್ತಿಯು ತನ್ನ ಪತ್ನಿಯಲ್ಲಿ ಉತ್ಪಾದನೆಯ ಸಲಕರಣೆಯನ್ನಷ್ಟೆ ಕಾಣುತ್ತಾನೆ. ಉತ್ಪಾದನಾ ಸಲಕರಣೆಗಳನ್ನು ಸಾರ್ವಜನಿಕವಾಗಿ ಒಟ್ಟಿಗೇ ಶೋಷಿಸಬೇಕೆಂಬ ಮಾತನ್ನು ಅವನು ಕೇಳುತ್ತಾನೆ, ಮತ್ತು ಸಹಜವಾಗಿಯೇ, ಸಕಲರ ಸಾಮಾನ್ಯ ಸ್ವತ್ತಾಗಿರುವ ಸ್ಥಿತಿಯು ಮಹಿಳೆಯರ ಪಾಲಿಗೂ ಅನ್ವಯಿಸುತ್ತದೆಂಬುದಲ್ಲದೆ ಬೇರಾವ ತೀರ್ಮಾನಕ್ಕೂ ಅವನು ಬರಲಾರನು.

ಮಹಿಳೆಯರು ಕೇವಲ ಉತ್ಪಾದನಾ ಸಲಕರಣೆಗಳಾಗಿರುವ ಸ್ಥಿತಿಯನ್ನು ತೊಡೆದುಹಾಕುವುದೇ ನಮ್ಮ ನಿಜವಾದ ಉದ್ದೇಶ ಮತ್ತು ಗುರಿ ಎಂಬ ಬಗೆಗೆ ಅವನಿಗೆ ಸಂದೇಹ ಕೂಡ ಇರಲಾರದು.

ಕಮ್ಯೂನಿಸ್ಟರು ಬಹಿರಂಗವಾಗಿಯೂ ಅಧಿಕೃತವಾಗಿಯೂ ಮಹಿಳೆಯರನ್ನು ಎಲ್ಲರಿಗೂ ಸಾಮಾನ್ಯವಾದ ಸಾರ್ವಜನಿಕ ಸ್ವತ್ತನ್ನಾಗಿ ಮಾಡುತ್ತಾರೆ ಎಂದು ನಮ್ಮ ಬೂರ್ಷ್ವಾಗಳು ಸೋಗಿನ ಬೊಬ್ಬೆ ಹಾಕುತ್ತಿರುವುದಕ್ಕಿಂತ, ಅದರ ಬಗೆಗೆ ಧಾರ್ಮಿಕ ರೋಷ ವ್ಯಕ್ತಪಡಿಸುತ್ತಿರುವುದಕ್ಕಿಂತ ಹೆಚ್ಚು ಹಾಸ್ಯಾಸ್ಪದವಾದುದು ಬೇರೊಂದಿಲ್ಲ. ಕಮ್ಯೂನಿಸ್ಟರಿಗೆ ಮಹಿಳೆಯರ ಮೇಲೆ ಕೂಡು ಒಡೆತನ ವ್ಯವಸ್ಥೆಗೊಳಿಸುವ ಅಗತ್ಯವೇನೂ ಇಲ್ಲ; ಅದು ಹೆಚ್ಚು ಕಡಮೆ ಅನಾದಿ ಕಾಲದಿಂದ ಹಾಗೆಯೇ ಇದ್ದುಕೊಂಡು ಬಂದಿದೆ.

ನಮ್ಮ ಬೂರ್ಷ್ವಾಗಳು ತಮ್ಮ ಅಧೀನದಲ್ಲಿರುವ ಶ್ರಮಜೀವಿಗಳ ಹೆಂಡತಿಯರನ್ನೂ ಮತ್ತು ಅವರ ಹೆಣ್ಣು ಮಕ್ಕಳನ್ನೂ ತಮ್ಮ ವಶದಲ್ಲಿ ಹೊಂದಿರುವುದಷ್ಟರಿಂದಲೇ ತೃಪ್ತರಾಗರು. ಸಾಮಾನ್ಯ ವೇಶ್ಯೆಯರ ವಿಷಯ ಹಾಗಿರಲಿ ಅವರು ಪರಸ್ಪರರ ಪತ್ನಿಯರ ಸತೀತ್ವ ಭಂಗಪಡಿಸುವುದರಲ್ಲಿಯೂ ಅತ್ಯಂತ ಹೆಚ್ಚಿನ ಸುಖ ಕಂಡುಕೊಳ್ಳುತ್ತಾರೆ.

ಬೂರ್ಷ್ವಾ ಮದುವೆಯು ವಾಸ್ತವಿಕವಾಗಿ ಕೂಡು ಒಡೆತನದ ಪತ್ನಿಯರ ಒಂದು ವ್ಯವಸ್ಥೆಯುಷ್ಟೆ. ಆದ್ದರಿಂದ ಕಮ್ಯೂನಿಸ್ಟರ ಮೇಲೆ ಆರೋಪಿಸಲು ಸಾಧ್ಯವಿರಬಹುದಾದುದೆಲ್ಲ, ಹೆಚ್ಚೆಂದರೆ, ಅವರು ಮಹಿಳೆಯರ ಮೇಲೆ ಕೂಡು ಒಡೆತನ ವ್ಯವಸ್ಥೆಗೊಳಿಸುವ ಪದ್ಧತಿಯನ್ನು ಬೂಟಾಟಿಕೆಯಿಂದ ಮುಚ್ಚಿಡುವುದರ ಬದಲು ಬಹಿರಂಗವಾಗಿಯೇ, ಶಾಸನಬದ್ಧವಾಗಿಯೇ ಜಾರಿಗೆ ತರಬಯಸುತ್ತಾರೆ, ಎಂಬುದಷ್ಟೆ. ಉಳಿದುದೆಲ್ಲ ಸ್ವಯಂಸ್ಪಷ್ಟ – ಇಂದಿನ ಉತ್ಪಾದನಾ ಸಂಬಂಧಗಳು ಇಲ್ಲವಾದಾಗ ಅದರೊಟ್ಟಿಗೇ ಆ ಸಂಬಂಧಗಳಿಂದ ಹೊರಬಂದ ಮಹಿಳೆಯರ ಮೇಲೆ ಕೂಡು ಒಡೆತನ ವ್ಯವಸ್ಥೆಗೊಳಿಸುವ ಪದ್ಧತಿಯೂ, ಅಂದರೆ ಅಧಿಕೃತ ಹಾಗೂ ಅನಧಿಕೃತ ವೇಶ್ಯಾ ಪದ್ಧತಿಯೂ, ಇಲ್ಲವಾಗಲೇ ಬೇಕು.

ಕಮ್ಯೂನಿಸ್ಟರು ದೇಶಗಳನ್ನೂ ರಾಷ್ಟ್ರೀಯತೆಯನ್ನೂ ನಾಶಗೊಳಿಸಬಯಸುತ್ತಾರೆ ಎಂದೂ ಅವರ ಮೇಲೆ ಆರೋಪ ಹೊರಿಸಲಾಗುತ್ತದೆ.

ಕಾರ್ಮಿಕರಿಗೆ ದೇಶವೇ ಇಲ್ಲ. ಅವರ ಬಳಿ ಇಲ್ಲದುದನ್ನು ನಾವು ಅವರಿಂದ ತೆಗೆದುಕೊಳ್ಳಲಾರೆವು. ಶ್ರಮಜೀವಿ ವರ್ಗವು ಮೊಟ್ಟಮೊದಲನೆಯದಾಗಿ ರಾಜಕೀಯ ಪರಮಾಧಿಕಾರವನ್ನು ಪಡೆದುಕೊಳ್ಳಬೇಕಾದುದರಿಂದ, ರಾಷ್ಟ್ರದ ಅಗ್ರಗಾಮಿ ವರ್ಗವಾಗಿ ಏರಬೇಕಾದುದರಿಂದ, ತಾನೇ ರಾಷ್ಟ್ರವಾಗಿ ಆಗಬೇಕಾದುದರಿಂದ, ಅದು ಇದುವರೆವಿಗೂ ರಾಷ್ಟ್ರೀಯವಾಗಿದ್ದುಕೊಂಡಿದೆ. ಆದರೆ ಬೂರ್ಷ್ವಾಸೀಯು ಈ ಪದಕ್ಕೆ ನೀಡುವ ಅರ್ಥದಲ್ಲಲ್ಲ.

ಬೂರ್ಷ್ವಾಸೀಯ ಬೆಳವಣಿಗೆಯ ಕಾರಣದಿಂದಾಗಿ, ವಾಣಿಜ್ಯ ಸ್ವಾತಂತ್ರ್ಯದ ಫಲವಾಗಿ, ಜಾಗತಿಕ ಮಾರುಕಟ್ಟೆಯ ಕಾರಣದಿಂದಾಗಿ, ಉತ್ಪಾದನೆಯ ವಿಧಾನದಲ್ಲೂ ಅದಕ್ಕನುಗುಣವಾಗಿ ಜೀವನ ಪರಿಸ್ಥಿತಿಗಳಲ್ಲೂ ಉಂಟಾಗಿರುವ ಏಕರೂಪತೆಯ ಪರಿಣಾಮವಾಗಿ, ಜನತೆಗಳ ಮಧ್ಯೆ ರಾಷ್ಟ್ರೀಯ ಭಿನ್ನತೆಗಳೂ ವೈರಗಳೂ ದಿನದಿನವೂ ಹೆಚ್ಚು ಹೆಚ್ಚಾಗಿ ಕಣ್ಮರೆಯಾಗುತ್ತಿವೆ.

ಶ್ರಮಜೀವಿ ವರ್ಗವು ಪರಮಾಧಿಕಾರ ಪಡೆಯುವುದು, ಅವು ಇನ್ನೂ ಹೆಚ್ಚು ಶೀಘ್ರವಾಗಿ ಕಣ್ಮರೆಯಾಗುವಂತೆ ಮಾಡುತ್ತದೆ. ಶ್ರಮಜೀವಿ ವರ್ಗದ ವಿಮೋಚನೆಗೆ ಕೊನೆಯ ಪಕ್ಷ ಅಗ್ರಸ್ಥಾನದಲ್ಲಿರುವ ನಾಗರಿಕ ರಾಷ್ಟ್ರಗಳ ಐಕ್ಯ ಕಾರ್ಯಾಚರಣೆಯು ಅವಶ್ಯವಾದ ಮೊದಲ ಉಪಾಧಿಗಳಲ್ಲೊಂದಾಗಿದೆ.

ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಶೋಷಿಸುವುದನ್ನು ಯಾವ ಪ್ರಮಾಣದಲ್ಲಿ ಇಲ್ಲವಾಗಿಸಲಾಗುತ್ತದೋ ಆ ಪ್ರಮಾಣದಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಶೋಷಿಸುವುದನ್ನೂ ಕೊನೆಗಾಣಿಸಲಾಗುತ್ತದೆ.

ಒಂದೇ ರಾಷ್ಟ್ರದೊಳಗೇ ವಿವಿಧ ವರ್ಗಗಳ ನಡುವೆ ವೈರವು ಯಾವ ಪ್ರಮಾಣದಲ್ಲಿ ಅದೃಶ್ಯವಾಗುತ್ತದೋ ಅದೇ ಪ್ರಮಾಣದಲ್ಲಿ ರಾಷ್ಟ್ರರಾಷ್ಟ್ರಗಳ ನಡುವಿನ ವೈರವೂ ಕೊನೆಗೊಳ್ಳುತ್ತದೆ.

ಕಮ್ಯೂನಿಸಂ ವಿರುದ್ಧ ಧಾರ್ಮಿಕ. ತಾತ್ವಿಕ ಹಾಗೂ ಒಟ್ಟಿನ ಮೇಲೆ ಸೈದ್ಧಾಂತಿಕ ದೃಷ್ಟಿಕೋನದಿಂದ ಮಾಡುವ ಆಪಾದನೆಗಳು ಅಷ್ಟೇನೂ ಗಹನವಾದ ಪರಿಶೀಲನೆಗೆ ಅರ್ಹವಾದವುಗಳಲ್ಲ.

ಮಾನವನ ವಿಚಾರಗಳು, ಅಭಿಪ್ರಾಯಗಳು ಮತ್ತು ಕಲ್ಪನೆಗಳು – ಒಂದು ಮಾತಿನಲ್ಲಿ ಹೇಳುವುದಾದರೆ ಮಾನವನ ಪ್ರಜ್ಞೆ – ಅವನ ಭೌತಿಕ ಅಸ್ತಿತ್ವದ ಪರಿಸ್ಥಿತಿಗಳಲ್ಲಾಗುವ, ಅವನ ಸಾಮಾಜಿಕ ಸಂಬಂಧಗಳಲ್ಲೂ ಮತ್ತು ಅವನ ಸಾಮಾಜಿಕ ಜೀವನದಲ್ಲೂ ಆಗುವ ಪ್ರತಿಯೊಂದು ಬದಲಾವಣೆಯಿಂದಲೂ ಬದಲಾಗುತ್ತದೆ. ಎಂಬುದನ್ನು ತಿಳಿದುಕೊಳ್ಳಲು ಗಾಢವಾದ ಇಂಗಿತ ಜ್ಞಾನ ಅವಶ್ಯವೇ ?

ವಸ್ತು ಉತ್ಪಾದನೆಯು ಬದಲಾಗುವ ಪ್ರಮಾಣಕ್ಕನುಗುಣವಾಗಿ ಬೌದ್ಧಿಕ ಉತ್ಪಾದನೆಯು ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತದೆ ಎಂಬುದನ್ನಲ್ಲದೆ ವಿಚಾರಗಳ ಇತಿಹಾಸವು ಬೇರೇನನ್ನು ತೋರಿಸುತ್ತದೆ? ಪ್ರತಿಯೊಂದು ಯುಗದ ಪ್ರಧಾನ ವಿಚಾರಗಳು ಯಾವತ್ತೂ ಅದರ ಆಳುವ ವರ್ಗದ ವಿಚಾರಗಳೇ ಆಗಿವೆ.

ಇಡೀ ಸಮಾಜವನ್ನು ಕ್ರಾಂತಿಗೊಳಿಸುವ ವಿಚಾರಗಳ ಬಗೆಗೆ ಜನರು ಮಾತನಾಡುವಾಗ, ಹಳೆಯ ಸಮಾಜದೊಳಗೇ ಹೊಸ ಸಮಾಜದ ಅಂಶಗಳು ಹುಟ್ಟಿಕೊಂಡಿರುತ್ತವೆ, ಹಳೆಯ ವಿಚಾರಗಳು ವಿಸರ್ಜನೆಗೊಳ್ಳುವುದು ಹಳೆಯ ಅಸ್ತಿತ್ವದ ಪರಿಸ್ಥಿತಿಗಳ ವಿಸರ್ಜನೆಯೊಂದಿಗೆ ಸರಿ ಹೆಜ್ಜೆ ಹಾಕಿಕೊಂಡು ಹೋಗುತ್ತದೆ, ಎಂಬ ವಾಸ್ತವಾಂಶವನ್ನೇ ಅವರು ವ್ಯಕ್ತಪಡಿಸುತ್ತಾರೆ.

ಪುರಾತನ ಜಗತ್ತು ಮರಣಸಂಕಟವನ್ನನುಭವಿಸುತ್ತಿದ್ದಾಗ ಪುರಾತನ ಧರ್ಮಗಳು ಕ್ರಿಶ್ಚಿಯನ್ ಧರ್ಮಕ್ಕೆ ಶರಣಾದವು. 18ನೆಯ ಶತಮಾನದಲ್ಲಿ ಕ್ರಿಶ್ಚಿಯನ್ ಧ್ಯೇಯಗಳು ಜ್ಞಾನೋದ್ದೀಪಕರ ಭಾವನೆಗಳಿಗೆ ಮಣಿದಾಗ ಸಾಮಂತಶಾಹಿ ಸಮಾಜವು ಕ್ರಾಂತಿಕಾರಿಯಾಗಿದ್ದ ಬೂರ್ಷ್ವಾಸೀಯೊಂದಿಗೆ ಜೀವನ್ಮರಣ ಹೋರಾಟ ನಡೆಸಿತು. ಧಾರ್ಮಿಕ ಸ್ವಾತಂತ್ರ್ಯ ಹಾಗೂ ಮನಸ್ಸಾಕ್ಷಿ ಸ್ವಾತಂತ್ರ್ಯ ಎಂಬ ವಿಚಾರಗಳು, ಜ್ಞಾನಕ್ಷೇತ್ರದೊಳಗೆ ಮುಕ್ತ ಸ್ಪರ್ಧೆಯು ಮೇಲುಗೈ ಪಡೆದುದಕ್ಕೆ ಸೂಚಕವಾಗಿದ್ದವಷ್ಟೆ.

"ಚಾರಿತ್ರಿಕ ಬೆಳವಣಿಗೆಯಾಗುತ್ತಿದ್ದಂತೆ, ನಿಸ್ಸಂದೇಹವಾಗಿಯೂ, ಧಾರ್ಮಿಕ, ನೈತಿಕ, ತಾತ್ವಿಕ, ರಾಜಕೀಯ ಹಾಗೂ ನ್ಯಾಯಶಾಸ್ತ್ರ ವಿಚಾರಗಳು ಮಾರ್ಪಾಟಾಗಿವೆ. ಆದರೆ ಧರ್ಮ, ನೀತಿಶಾಸ್ತ್ರ, ತತ್ವಶಾಸ್ತ್ರ, ರಾಜಕೀಯ ವಿಜ್ಞಾನ ಹಾಗೂ ಕಾನೂನು ಇವುಗಳು ಈ ಮಾರ್ಪಾಟುಗಳನ್ನೂ ಸತತವಾಗಿ ಮೀರಿ ನಿಂತಿವೆ" ಎಂದು ಯಾರಾದರೂ ಹೇಳಬಹುದು.

"ಇದಲ್ಲದೆ ಎಲ್ಲ ಸಮಾಜ ಸ್ಥಿತಿಗಳಿಗೂ ಸಾಮಾನ್ಯವಾದಂಥ, ಸ್ವಾತಂತ್ರ್ಯ, ನ್ಯಾಯ ಇವೇ ಮುಂತಾದ ನಿತ್ಯಸತ್ಯಗಳಿವೆ. ಕಮ್ಯೂನಿಸಂ ಈ ನಿತ್ಯಸತ್ಯಗಳನ್ನು ನಾಶಮಾಡುತ್ತದೆ, ಎಲ್ಲ ಧರ್ಮವನ್ನೂ ಎಲ್ಲ ನೈತಿಕತೆಯನ್ನೂ ಹೊಸ ಆಧಾರದ ಮೇಲೆ ರಚಿಸುವುದರ ಬದಲು ಅವನ್ನು ರದ್ದು ಮಾಡುತ್ತದೆ; ಆದ್ದರಿಂದ ಅದು ಎಲ್ಲ ಗತ ಐತಿಹಾಸಿಕ ಅನುಭವಕ್ಕೂ ವಿರೋಧವಾಗಿ ವರ್ತಿಸುತ್ತದೆ" ಎಂದೂ ಹೇಳಬಹುದು.

ಈ ಆಪಾದನೆಯ ತಥ್ಯಾಂಶವೇನು? ಎಲ್ಲ ಗತ ಸಮಾಜ ಇತಿಹಾಸವೂ ವರ್ಗ ವಿರೋಧಗಳನ್ನು ಅಭಿವೃದ್ಧಿಗೊಳಿಸುವುದೇ ಆಗಿದ್ದಿತು. ಈ ವಿರೋಧಗಳು ವಿಭಿನ್ನ ಕಾಲಘಟ್ಟಗಳಲ್ಲಿ ವಿಭಿನ್ನ ಸ್ವರೂಪಗಳನ್ನು ತಳೆದಿದ್ದವು.

ಆದರೆ ಅವು ಯಾವುದೇ ಸ್ವರೂಪ ತಳೆದಿರಲಿ ಒಂದು ಸತ್ಯಾಂಶ ಎಲ್ಲ ಕಾಲಘಟ್ಟಗಳಿಗೂ ಸಾಮಾನ್ಯವಾದುದಾಗಿದೆ. ಅದೆಂದರೆ ಸಮಾಜದ ಒಂದು ಭಾಗವು ಮತ್ತೊಂದನ್ನು ಶೋಷಿಸುವುದು. ಆದ್ದರಿಂದ ಗತ ಯುಗಗಳ ಸಾಮಾಜಿಕ ಪ್ರಜ್ಞೆಯು, ಅದು ಎಷ್ಟೇ ಬಹುರೂಪತೆ ಹಾಗೂ ವೈವಿಧ್ಯತೆ ತೋರಿದರೂ ಸಹ, ಕೆಲವು ಸಾಮಾನ್ಯ ಸ್ವರೂಪಗಳೊಳಗೇ – ವರ್ಗ ವೈರುಧ್ಯತೆಗಳು ಸಂಪೂರ್ಣವಾಗಿ ಕಣ್ಮರೆಯಾದಾಗಷ್ಟೆ ಸಂಪೂರ್ಣವಾಗಿ ಅದೃಶ್ಯವಾಗುವ ಸಾರ್ವತ್ರಿಕ ವಿಚಾರಗಳೊಳಗೇ – ಸಂಚರಿಸುತ್ತದೆ, ಎಂಬುದರಲ್ಲಿ ಆಶ್ಚರ್ಯವೇನಿಲ್ಲ.

ಕಮ್ಯೂನಿಸ್ಟ್ ಕ್ರಾಂತಿಯು ಪಾರಂಪರಿಕ ಆಸ್ತಿ ಸಂಬಂಧಗಳೊಂದಿಗೆ ಉಂಟಾಗುವ ಅತ್ಯಂತ ಆಮೂಲಾಗ್ರ ವಿಚ್ಛೇದವಾಗಿದೆ. ಆದ್ದರಿಂದ ಅದರ ಬೆಳವಣಿಗೆಯಾದ ಹಾಗೆ ಸಾಂಪ್ರದಾಯಿಕ ವಿಚಾರಗಳೊಂದಿಗೆ ಅತ್ಯಂತ ಆಮೂಲಾಗ್ರ ವಿಚ್ಛೇದವೂ ಆಗುತ್ತದೆ, ಎಂಬುದರಲ್ಲೂ ಸಂದೇಹವಿಲ್ಲ.

ಆದರೆ ಕಮ್ಯೂನಿಸಂ ಬಗೆಗೆ ಬೂರ್ಷ್ವಾಗಳು ಮಾಡುವ ಆಕ್ಷೇಪಣೆಗಳನ್ನು ಇಲ್ಲಿಗೆ ಮುಗಿಸೋಣ.

ಕಾರ್ಮಿಕ ವರ್ಗದ ಕ್ರಾಂತಿಯಲ್ಲಿ ಮೊದಲ ಹೆಜ್ಜೆ ಎಂದರೆ ಶ್ರಮಜೀವಿಗಳನ್ನು ಆಳುವ ವರ್ಗದ ಸ್ಥಾನಕ್ಕೇರಿಸುವುದು, ಪ್ರಜಾಪ್ರಭುತ್ವಕ್ಕಾಗಿನ ಹೋರಾಟದಲ್ಲಿ ವಿಜಯ ಗಳಿಸುವುದು ಆಗಿದೆ ಎಂಬುದನ್ನು ನಾವು ಮೇಲೆ ಕಂಡಿದ್ದೇವೆ.

ಶ್ರಮಜೀವಿ ವರ್ಗವು ಬೂರ್ಷ್ವಾಸೀಯಿಂದ ಎಲ್ಲ ಬಂಡವಾಳವನ್ನೂ ಸ್ವಲ್ಪ ಸ್ವಲ್ಪ ಪ್ರಮಾಣಗಳಲ್ಲಿ ಕಸಿದುಕೊಳ್ಳಲು, ಉತ್ಪಾದನಾ ಸಾಧನಗಳೆಲ್ಲವನ್ನೂ ರಾಜ್ಯದ, ಅಂದರೆ ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗದ, ಕೈಗಳಲ್ಲಿ ಕೇಂದ್ರೀಕರಿಸಲು, ಮತ್ತು ಉತ್ಪಾದಕ ಶಕ್ತಿಗಳ ಮೊತ್ತವನ್ನು ಸಾಧ್ಯವಾದಷ್ಟೂ ಶೀಘ್ರವಾಗಿ ಹೆಚ್ಚಿಸಲು, ತನ್ನ ರಾಜಕೀಯ ಪರಮಾಧಿಕಾರವನ್ನು ಬಳಸಿಕೊಳ್ಳುವುದು.

ನಿಜ, ಆರಂಭದಲ್ಲಿ ಇದನ್ನು ಆಸ್ತಿ ಹಕ್ಕುಗಳ ಮೇಲೆ ಮತ್ತು ಬೂರ್ಷ್ವಾ ಉತ್ಪಾದನಾ ಸಂಬಂಧಗಳ ಮೇಲೆ ಕ್ರೂರವಾದ ರೀತಿಯಲ್ಲಿ ದಾಳಿ ನಡೆಸುವ ಮೂಲಕವಲ್ಲದೆ ಬೇರೆ ರೀತಿಯಲ್ಲಿ ಸಾಧಿಸಲು ಸಾಧ್ಯವಿಲ್ಲ. ಅಂದರೆ ಆರ್ಥಿಕ ವಾಗಿ ಅಸಮರ್ಪಕ ಹಾಗೂ ಅಸ್ಥಿರ ಎಂದು ಕಾಣಬರುವ, ಆದರೂ ಚಳವಳಿಯ ಬೆಳವಣಿಗೆಯ ಅವಧಿಯಲ್ಲಿ ತಮ್ಮನ್ನು ತಾವೇ ಮೀರಿ ನಿಂತು ಹಳೆಯ ಸಾಮಾ ಜಿಕ ವ್ಯವಸ್ಥೆಯ ಮೇಲೆ ಮತ್ತಷ್ಟು ದಾಳಿ ಮಾಡುವುದನ್ನು ಅವಶ್ಯವನ್ನಾಗಿ ಮಾಡುವ, ಮತ್ತು ಉತ್ಪಾದನಾ ವಿಧಾನವನ್ನು ಇಡೀಯಾಗಿ ಕ್ರಾಂತಿಕಾರಿಗೊ ಳಿಸುವ ಸಾಧನವಾಗಿ ಅನಿವಾರ್ಯವಾದ, ಕ್ರಮಗಳ ಮೂಲಕವಷ್ಟೆ ಅದನ್ನು ಈಡೇರಿಸಲು ಸಾಧ್ಯ.

ಈ ಕ್ರಮಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾಗಿರುತ್ತವೆನ್ನಿ.

ಆದಾಗ್ಯೂ ಅತ್ಯಂತ ಮುಂದುವರಿದ ದೇಶಗಳಲ್ಲಿ ಕೆಳಗಿನ ಕ್ರಮಗಳು ಸಾಮಾ ನ್ಯವಾಗಿ ಅನ್ವಯಾರ್ಹವಾಗಿವೆ:

1. ಭೂಮಿ ರೂಪದಲ್ಲಿ ಹೊಂದಿರುವ ಆಸ್ತಿಯನ್ನು ಮುಟ್ಟುಗೋಲು ಹಾಕಿ ಕೊಳ್ಳುವುದು ಮತ್ತು ಭೂಮಿಯಿಂದ ಬರುವ ಎಲ್ಲ ಗೇಣಿಗಳನ್ನೂ ಸಾರ್ವಜ ನಿಕ ಉದ್ದೇಶಗಳಿಗಾಗಿ ಬಳಸುವುದು.

2. ಭಾರಿ ಪ್ರಮಾಣದ, ಕ್ರಮಕ್ರಮವಾಗಿ ಹೆಚ್ಚುತ್ತ ಹೋಗುವ ಅಥವಾ ವರ್ಗೀಕೃತವಾದ ವರಮಾನ ತೆರಿಗೆ.

3. ಪಿತ್ರಾರ್ಜಿತವಾಗಿ ಆಸ್ತಿ ಪಡೆಯುವ ಎಲ್ಲ ಹಕ್ಕನ್ನೂ ರದ್ದುಪಡಿಸುವುದು.

4. ಎಲ್ಲ ವಲಸೆ ಹೋದವರ ಹಾಗೂ ಬಂಡಾಯಗಾರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

5. ರಾಜ್ಯ ಬಂಡವಾಳ ಹಾಗೂ ಪ್ರತ್ಯೇಕ ಏಕಸ್ವಾಮ್ಯ ಉಳ್ಳ ರಾಷ್ಟ್ರೀಯ ಬ್ಯಾಂಕ್ ಒಂದರ ಮೂಲಕ ರಾಜ್ಯದ ಕೈಗಳಲ್ಲೇ ಎಲ್ಲ ಸಾಲ ವ್ಯವಸ್ಥೆಯನ್ನು ಕೇಂದ್ರೀಕರಿಸುವುದು.

6. ಸಾರಿಗೆ ಸಂಪರ್ಕ ಸಾಧನಗಳನ್ನು ರಾಜ್ಯದ ಕೈಗಳಲ್ಲೇ ಕೇಂದ್ರೀಕರಿಸುವುದು.

7. ರಾಜ್ಯ ಮಾಲಿಕತ್ವದ ಕಾರ್ಖಾನೆ ಹಾಗೂ ಉತ್ಪಾದನಾ ಸಲಕರಣೆಗಳ ವಿಸ್ತರಣೆ; ಬೀಡು ಭೂಮಿಗಳನ್ನು ಕೃಷಿಯೋಗ್ಯಗೊಳಿಸುವುದು ಮತ್ತು ಸಾಮಾನ್ಯ ಯೋಜನೆಯೊಂದಕ್ಕನುಗುಣವಾಗಿ ಮಣ್ಣಿನ ಸಾರವನ್ನು ಸುಧಾರಿಸುವುದು.

8. ಎಲ್ಲರೂ ದುಡಿಯಬೇಕೆಂಬ ಸೂತ್ರಕ್ಕೆ ಎಲ್ಲರೂ ಸಮಾನವಾಗಿ ಬದ್ಧರಾ ಗಿರುವುದು, ಕೈಗಾರಿಕಾ ಸೇನೆಗಳ ಸ್ಥಾಪನೆ, ವಿಶೇಷವಾಗಿ ವ್ಯವಸಾಯದಲ್ಲಿ ಬಳಸುವುದಕ್ಕಾಗಿ.

9. ಕೃಷಿಯನ್ನು ಕೈಗಾರಿಕೆಯೊಂದಿಗೆ ಸಂಯೋಜಿಸುವುದು, ಜನಸಂಖ್ಯೆಯನ್ನು ದೇಶದಾದ್ಯಂತ ಹೆಚ್ಚು ಸಮನಾಗಿ ಹಂಚುವುದರ ಮೂಲಕ ನಗರ ಗ್ರಾಮಗಳ ನಡುವಿನ ಅಂತರವನ್ನು ಕ್ರಮಕ್ರಮವಾಗಿ ರದ್ದುಗೊಳಿಸುವುದು.

10. ಸಾರ್ವಜನಿಕ ಶಾಲೆಗಳಲ್ಲಿ ಎಲ್ಲ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸ. ಈಗಿರುವಂತೆ ಕಾರ್ಖಾನೆಗಳಲ್ಲಿ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದನ್ನು ರದ್ದು ಪಡಿಸುವುದು. ಶಿಕ್ಷಣವನ್ನು ಕೈಗಾರಿಕಾ ಉತ್ಪಾದನೆಯೊಂದಿಗೆ ಜೊತೆಗೂಡಿಸುವುದು; ಇತ್ಯಾದಿ, ಇತ್ಯಾದಿ.

ಬೆಳವಣಿಗೆಯಾಗುತ್ತ ಹೋದ ಹಾಗೆ ವರ್ಗ ವ್ಯತ್ಯಾಸಗಳು ಕಣ್ಮರೆಯಾಗಿ ಉತ್ಪಾದನೆಯೆಲ್ಲ ಇಡೀ ರಾಷ್ಟ್ರದ ಒಂದು ವಿಶಾಲ ಸಂಸ್ಥೆಯ ಕೈಯಲ್ಲಿ ಕೂಡಿಕೊಂಡಾಗ, ಸಾರ್ವಜನಿಕ ಅಧಿಕಾರವು ತನ್ನ ರಾಜಕೀಯ ಸ್ವರೂಪವನ್ನು ಕಳೆದುಕೊಳ್ಳುವುದು. ರಾಜಕೀಯ ಅಧಿಕಾರ ಎಂದು ಯಾವುದನ್ನು ಕರೆಯಲಾಗುವುದೋ ಅದು ಕೇವಲ ಒಂದು ವರ್ಗವು ಮತ್ತೊಂದರ ಮೇಲೆ ದಬ್ಬಾಳಿಕೆ ನಡೆಸುವ ಸುಸಂಘಟಿತ ಶಕ್ತಿ ಅಷ್ಟೆ. ಶ್ರಮಜೀವಿ ವರ್ಗವು ಬೂರ್ಷ್ವಾಸೀಯೊಂದಿಗೆ ಹೋರಾಟದಲ್ಲಿ ಪರಿಸ್ಥಿತಿಗಳ ಬಲವಂತಕ್ಕೊಳಗಾಗಿ ತಾನೇ ಒಂದು ವರ್ಗವಾಗಿ ಸಂಘಟಿಸಿಕೊಳ್ಳಬೇಕಾಗಿ ಬಂದಲ್ಲಿ, ಕ್ರಾಂತಿಯ ಮೂಲಕ ಅದು ತನ್ನನ್ನು ತಾನೇ ಆಳುವ ವರ್ಗವನ್ನಾಗಿ ಮಾಡಿಕೊಂಡಲ್ಲಿ, ಮತ್ತು ಹಾಗೆ ಆಳುವ ವರ್ಗವಾಗಿ ಹಳೆಯ ಉತ್ಪಾದನಾ ಸಂಬಂಧಗಳನ್ನು ಬಲಪ್ರಯೋಗದಿಂದ ತೊಡೆದುಹಾಕಿದಲ್ಲಿ, ಆಗ ಅದು ಈ ಸಂಬಂಧಗಳ ಜೊತೆಗೇ ವರ್ಗ ವಿರೋಧಗಳ ಮತ್ತು ಒಟ್ಟಿನಲ್ಲಿ ವರ್ಗಗಳ ಅಸ್ತಿತ್ವಕ್ಕೆ ಕಾರಣವಾದ ಪರಿಸ್ಥಿತಿಗಳನ್ನೂ ತೊಡೆದುಹಾಕಿರುತ್ತದೆ ಮತ್ತು ತನ್ಮೂಲಕ ಒಂದು ವರ್ಗವಾಗಿ ತನ್ನ ಸ್ವಂತ ಪರಮಾಧಿಕಾರವನ್ನೇ ಇಲ್ಲವಾಗಿಸಿರುತ್ತದೆ.

ವರ್ಗಗಳೂ ವರ್ಗ ವಿರೋಧಗಳೂ ಇರುವ ಹಳೆಯ ಬೂರ್ಷ್ವಾ ಸಮಾಜದ ಸ್ಥಳದಲ್ಲಿ ನಾವು ಒಬ್ಬೊಬ್ಬರ ಸ್ವತಂತ್ರ ಬೆಳವಣಿಗೆಯೂ ಎಲ್ಲರ ಸ್ವತಂತ್ರ ಬೆಳವಣಿಗೆಗೆ ಉಪಾಧಿಯಾದಂಥ ಒಂದು ಸಂಘವನ್ನು ಹೊಂದುವೆವು.

# III

# ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಸಾಹಿತ್ಯ

## 1. ಪ್ರತಿಗಾಮಿ ಸಮಾಜವಾದ

### ಎ) ಸಾಮಂತಶಾಹಿ ಸಮಾಜವಾದ

ತಾವು ಪಡೆದುಕೊಂಡಿದ್ದ ಐತಿಹಾಸಿಕ ಸ್ಥಾನದಿಂದಾಗಿ ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳ ಶ್ರೀಮಂತಶಾಹಿ ಪ್ರಭುತ್ವಗಳಿಗೆ ಆಧುನಿಕ ಬೂರ್ಷ್ವಾ ಸಮಾಜವನ್ನು ತಿಣುಕಿ ಕಿರುಹೊತ್ತಗೆಗಳನ್ನು ಬರೆಯುವುದು ಒಂದು ವೃತ್ತಿಯೇ ಆಯಿತು. 1830ರ ಜುಲೈನ ಫ್ರೆಂಚ್ ಕ್ರಾಂತಿಯಲ್ಲೂ ಇಂಗ್ಲಿಷ್ ಸುಧಾರಣಾ[30] ಪ್ರಕ್ಷೋಭೆಯಲ್ಲೂ ಈ ಶ್ರೀಮಂತಶಾಹಿ ಪ್ರಭುತ್ವಗಳು ಮತ್ತೆ ತಾವು ದ್ವೇಷಿಸುತ್ತಿದ್ದ ಆ ನವವಿಭವೋದ್ಧತನಿಗೆ (ಬೂರ್ಷ್ವಾಗೆ) ಮಣಿದವು. ಅಲ್ಲಿಂದಾಚೆಗೆ ಗಹನವಾದ ರಾಜಕೀಯ ಹೋರಾಟವು ಸಂಪೂರ್ಣವಾಗಿ ಅಸಂಭವವಾಯಿತು. ಸಾಹಿತ್ಯಿಕ ಸಮರವಷ್ಟೆ ಸಾಧ್ಯವಿದ್ದಿತು. ಆದರೆ ಸಾರಸ್ವತ ಪ್ರಪಂಚದಲ್ಲೂ ಪುನರುತ್ಥಾನ (Restoration)ದ ಕಾಲಾವಧಿ*ಯ ಹಳೆಯ ಘೋಷಣೆಗಳು ಅಸಾಧ್ಯವಾಗಿದ್ದವು. ಸಹಾನುಭೂತಿಯನ್ನು ಗಳಿಸಲೋಸುಗ ಶ್ರೀಮಂತವರ್ಗದವರು ತಮ್ಮ ಸ್ವಂತ ಹಿತಗಳನ್ನೇ ಕಡೆಗಾಣಿಸಿ, ಶೋಷಣೆಗೊಳಗಾಗಿದ್ದ ಕಾರ್ಮಿಕ ವರ್ಗದ ಹಿತಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೂರ್ಷ್ವಾಸೀಯ ವಿರುದ್ಧ ತಮ್ಮ ದೋಷಾರೋಪಣೆಗಳನ್ನು ರೂಪಿಸುವ ಒತ್ತಾಯಕ್ಕೊಳಗಾದರು. ಹಾಗೆ ಈ ಶ್ರೀಮಂತ ವರ್ಗದವರು ತಮ್ಮ ಹೊಸ ಪ್ರಭುವಿನ ವಿರುದ್ಧ ಲೇವಡಿಯ ಬೈಗುಳಗಳ ಬರಹಗಳನ್ನು ರಚಿಸಿ ಹಾಡುವ ಮೂಲಕ, ಬರಲಿರುವ ಮಹಾ ಅನಾಹುತದ ಭೀಕರ ಭವಿಷ್ಯದ ನುಡಿಗಳನ್ನು ಅವನ ಕಿವಿಯಲ್ಲಿ ಪಿಸುಗುಟ್ಟುವ ಮೂಲಕ, ತಮ್ಮ ಸೇಡು ತೀರಿಸಿಕೊಂಡರು.

---

*1660-1689ರ ಇಂಗ್ಲಿಷ್ ಪುನರುತ್ಥಾನವಲ್ಲ, ಆದರೆ 1814-1830ರ ಫ್ರೆಂಚ್ ಪುನರುತ್ಥಾನ. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಹೀಗೆ ಸಾಮಂತಶಾಹಿ ಸಮಾಜವಾದ ಹುಟ್ಟಿಕೊಂಡಿತು – ಅರೆ ಗೋಳಾಟ, ಅರೆ ಬೈಗುಳ, ಅರೆ ಗತವೈಭವದ ಸ್ಮರಣೆ, ಅರೆ ಭವಿಷ್ಯತ್ತಿನ ಗಂಡಾಂತರದ ಸೂಚನೆ; ಕೆಲವೊಮ್ಮೆ ತನ್ನ ಕಟುವಾದ ವ್ಯಂಗ್ಯವಾದ ಖಾರವಾದ ಟೀಕೆಯಿಂದ ಅದು ಬೂರ್ಷ್ವಾಸೀಯ ಹೃದಯದ ಅಂತರಾಳಕ್ಕೇ ಈಟಿಯನ್ನು ನಾಟಿಸುತ್ತಿದ್ದಿತು; ಆದರೆ ಯಾವತ್ತೂ ಅದು ಪರಿಣಾಮದಲ್ಲಿ, ಆಧುನಿಕ ಇತಿಹಾಸದ ಮುನ್ನಡೆಯನ್ನು ಗ್ರಹಿಸಲು ಸಂಪೂರ್ಣ ಅಸಮರ್ಥತೆಯಿಂದಾಗಿ ಹಾಸ್ಯಾಸ್ಪದವಾಗಿಯೇ ಉಳಿಯುತ್ತಿದ್ದಿತು.

ಜನರನ್ನು ತಮ್ಮ ಸುತ್ತ ಅಣಿನೆರೆಯಿಸಲೋಸುಗ ಶ್ರೀಮಂತವರ್ಗದವರು ಶ್ರಮಜೀವಿಯ ಜೋಳಿಗೆಯನ್ನೇ ಪತಾಕೆಯನ್ನಾಗಿ ಮುಂದೆ ಹಾರಿಸಿದರು. ಆದರೆ ಜನರು ಅವರೊಡನೆ ಸೇರಿದಾಗಲೆಲ್ಲ ಅವರ ಬೆನ್ನಿನ ಮೇಲೆ ಹಳೆಯ ಸಾಮಂತ ಶಾಹಿ ಬಿರುದಾವಳಿಗಳ ಲಾಂಛನವನ್ನೇ ಕಂಡು ಗಟ್ಟಿಯಾಗಿ ಗಹಗಹಿಸಿ ನಗುತ್ತ ಅವರ ಪಕ್ಷವನ್ನು ತ್ಯಜಿಸುತ್ತಿದ್ದರು.

ಫ್ರೆಂಚ್ ಲೆಜಿಟಿಮಿಸ್ಟರ ಮತ್ತು "ಯಂಗ್ ಇಂಗ್ಲೆಂಡ್"[31]ನ ಒಂದು ವಿಭಾಗವು ಇದಕ್ಕೆ ದೃಷ್ಟಾಂತವಾಗಿದ್ದಿತು.

ತಮ್ಮ ಶೋಷಣಾ ವಿಧಾನವು ಬೂರ್ಷ್ವಾ ವಿಧಾನದಿಂದ ಭಿನ್ನವಾದುದೆಂಬುದನ್ನು ತೋರಿಸಿಕೊಡುವಲ್ಲಿ ಈ ಸಾಮಂತಶಾಹಿಗಳು ತಾವು ತೀರ ಭಿನ್ನವೇ ಆದ ಪರಿಸ್ಥಿತಿಗಳಲ್ಲಿ ಹಾಗೂ ಸಂದರ್ಭಗಳಲ್ಲಿ ಶೋಷಿಸುತ್ತಿದ್ದರು, ಅವೀಗ ಹಳತಾಗಿವೆ, ಎಂಬುದನ್ನು ಮರೆಯುತ್ತಾರೆ. ತಮ್ಮ ಆಳ್ವಿಕೆಯಲ್ಲಿ ಆಧುನಿಕ ಶ್ರಮಜೀವಿ ವರ್ಗವು ಇರಲೇ ಇಲ್ಲ ಎಂಬುದನ್ನು ತೋರಿಸುವಾಗ ಅವರು, ಆಧುನಿಕ ಬೂರ್ಷ್ವಾಸೀಯು ತಮ್ಮದೇ ಸಮಾಜ ರೂಪದಿಂದ ಜನಿಸಿದ ಅವಶ್ಯ ಸಂತಾನವೆಂಬುದನ್ನು ಮರೆಯುತ್ತಾರೆ.

ಉಳಿದುದಕ್ಕೆ ಸಂಬಂಧಿಸಿ, ಅವರು ತಮ್ಮ ಟೀಕೆಯ ಪ್ರತಿಗಾಮಿ ಸ್ವರೂಪವನ್ನು ಮುಚ್ಚಿಡಲು ಎಷ್ಟು ಮಾತ್ರವೂ ಯತ್ನಿಸುವುದಿಲ್ಲ. ಬೂರ್ಷ್ವಾಸೀಯ ವಿರುದ್ಧ ಅವರ ಆಪಾದನೆಯೆಲ್ಲ, ಬೂರ್ಷ್ವಾ ಆಳ್ವಿಕೆಯಡಿ ಹಳೆಯ ಸಮಾಜ ವ್ಯವಸ್ಥೆಯ ಬುಡಶಾಖೆಗಳನ್ನೆಲ್ಲ ಕತ್ತರಿಸಿ ಹಾಕುವ ಗುರಿಯುಳ್ಳ ವರ್ಗವೊಂದು ಬೆಳೆಯುತ್ತಿದೆ, ಎಂಬುದೇ ಆಗಿದೆ.

ಅವರು ಬೂರ್ಷ್ವಾಸೀಯನ್ನು ಖಂಡಿಸುವುದು ಅದು ಶ್ರಮಜೀವಿ ವರ್ಗವನ್ನು ಉಂಟುಮಾಡುತ್ತಿದೆ ಎಂಬುದಕ್ಕಾಗಿ ಅಷ್ಟಾಗಿ ಅಲ್ಲ, ಅದು ಕ್ರಾಂತಿಕಾರಿ ಶ್ರಮಜೀವಿ ವರ್ಗವನ್ನು ಉಂಟುಮಾಡುತ್ತಿದೆ ಎಂಬುದಕ್ಕಾಗಿ.

ಆದ್ದರಿಂದ ರಾಜಕೀಯ ಕಾರ್ಯಾಚರಣೆಯಲ್ಲಿ ಅವರು ಕಾರ್ಮಿಕ ವರ್ಗದ ವಿರುದ್ಧ ಕೈಗೊಳ್ಳಲಾದ ಎಲ್ಲ ಬಲಾತ್ಕಾರದ ದಬ್ಬಾಳಿಕೆಯ ಕ್ರಮಗಳಲ್ಲೂ

ಬೂರ್ಷ್ವಾಸೀಯ ಜೊತೆಗೂಡುತ್ತಾರೆ. ಮತ್ತೆ ಸಾಮಾನ್ಯ ಜೀವನದಲ್ಲಿ ಶಬ್ದಾಡಂಬರದ ಮಾತುಗಳನ್ನಾಡುತ್ತಿದ್ದರೂ ಕೈಗಾರಿಕೆಯ ಮರದಿಂದ ಉದುರಿದ ಚಿನ್ನದ ಸೇಬುಗಳನ್ನು ಆಯ್ದುಕೊಳ್ಳಲು ನೆಲಮಟ್ಟಕ್ಕೆ ಬಗ್ಗುತ್ತಾರೆ; ಉಣ್ಣೆ, ಬೀಟ್‌ರೂಟ್ ಸಕ್ಕರೆ ಹಾಗೂ ಆಲೂಗೆಡ್ಡೆಮದ್ಯ*ಗಳ ಮಾರಾಟದಿಂದ ಬರುವ ಲಾಭಕ್ಕಾಗಿ ಸತ್ಯ, ಪ್ರೇಮ ಹಾಗೂ ಗೌರವಗಳನ್ನೇ ಪಣ ಒಡ್ಡುವ ಕೀಳು ಮಟ್ಟಕ್ಕಿಳಿಯುತ್ತಾರೆ.

ಪಾದ್ರಿಯು ಯಾವತ್ತೂ ಭೂಮಾಲಿಕನೊಂದಿಗೆ ಕೈ ಕೈಹಿಡಿದು ಹೋಗುವಂತೆಯೇ ಕ್ರೈಸ್ತಪುರೋಹಿತ ಸಮಾಜವಾದವೂ ಸಾಮಂತಶಾಹಿ ಸಮಾಜವಾದದೊಂದಿಗೆ ಹೋಗುತ್ತದೆ.

ಕ್ರಿಶ್ಚಿಯನ್ ವಿರಕ್ತತೆಗೆ ಸಮಾಜವಾದದ ರಂಗು ನೀಡುವುದಕ್ಕಿಂತ ಸುಲಭವಾದುದು ಬೇರೊಂದಿಲ್ಲ. ಕ್ರಿಶ್ಚಿಯನ್ ಧರ್ಮವು ಖಾಸಗಿ ಆಸ್ತಿಯ ವಿರುದ್ಧ, ವಿವಾಹದ ವಿರುದ್ಧ, ರಾಜ್ಯದ ವಿರುದ್ಧ ಘೋಷಣೆ ಮಾಡಿಲ್ಲವೇ? ಇವುಗಳ ಸ್ಥಳದಲ್ಲಿ ದಾನಧರ್ಮ, ಬಡತನ, ಬ್ರಹ್ಮಚರ್ಯ, ದೇಹದಂಡನೆ, ಸನ್ಯಾಸಿ ಜೀವನ ಹಾಗೂ ಚರ್ಚ್‌ಮಾತೆ ಇವುಗಳನ್ನು ಬೋಧಿಸಿಲ್ಲವೇ? ಕ್ರಿಶ್ಚಿಯನ್ ಸಮಾಜವಾದವು, ಪಾದ್ರಿಯು ಶ್ರೀಮಂತನ ಹೊಟ್ಟೆಯುರಿಯನ್ನು ಪವಿತ್ರಗೊಳಿಸಲು ಸಂಪ್ರೋಕ್ಷಿಸುವ ಪವಿತ್ರ ಜಲವಷ್ಟೆ ಆಗಿದೆ.

---

* ಇದು ಮುಖ್ಯವಾಗಿ ಜರ್ಮನಿಗೆ ಅನ್ವಯವಾಗುತ್ತದೆ. ಅಲ್ಲಿ ಭೂಮಿಕಾಣಿ ಹೊಂದಿದ್ದ ಶ್ರೀಮಂತವರ್ಗದವರೂ ಯುಂಕರ್‌ಗಳೂ (ಜಮೀನುದಾರರು) ಸ್ವಂತ ಉಪಯೋಗಕ್ಕಾಗಿ ತಮ್ಮ ಎಸ್ಟೇಟುಗಳ ಬಹುಭಾಗವನ್ನು ಪಾರುಪತ್ಯಗಾರರಿಂದ ಸಾಗುವಳಿ ಮಾಡಿಸುತ್ತಾರೆ. ಅದೂ ಅಲ್ಲದೆ ಅವರು ವಿಸ್ತೃತ ಬೀಟ್‌ರೂಟ್ ಸಕ್ಕರೆ ತಯಾರಕರೂ, ಆಲೂಗೆಡ್ಡೆಮದ್ಯಗಳ ಭಟ್ಟಿ ಇಳಿಸುವವರೂ ಆಗಿದ್ದಾರೆ. ಇವರಿಗಿಂತ ಹೆಚ್ಚು ಶ್ರೀಮಂತರಾದ ಬ್ರಿಟಿಷ್ ಕುಲೀನರು ಇನ್ನೂ ಇಷ್ಟು ಕೀಳುಮಟ್ಟಕ್ಕಿಳಿದಿಲ್ಲ; ಆದರೆ ಅವರೂ ಸಹ ಹೆಚ್ಚು ಕಡಮೆ ಸಂಶಯಾಸ್ಪದವಾದ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸ್ಥಾಪಕರಿಗೆ ತಮ್ಮ ಹೆಸರುಗಳನ್ನು ಎರವಲು ನೀಡುವ ಮೂಲಕ, ಇಳಿಮುಖವಾಗುತ್ತಿರುವ ತಮ್ಮ ಗೇಣಿಗಳ ನಷ್ಟವನ್ನು ಹೇಗೆ ತುಂಬಿಕೊಳ್ಳಬೇಕೆಂಬುದನ್ನು ಬಲ್ಲರು. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

## (ಬಿ) ಪೆಟಿ ಬೂರ್ಷ್ವಾ ಸಮಾಜವಾದ

ಸಾಮಂತಶಾಹಿ ಶ್ರೀಮಂತ ವರ್ಗವು ಬೂರ್ಷ್ವಾಸೀಯಿಂದ ನಾಶಗೊಂಡ ಏಕೈಕ ವರ್ಗವೇನೂ ಆಗಿರಲಿಲ್ಲ, ಆಧುನಿಕ ಬೂರ್ಷ್ವಾ ಸಮಾಜದ ವಾತಾವರಣದಲ್ಲಿ ಕ್ಷಯಿಸಿ ನಾಶಗೊಂಡ ಜೀವನ ಪರಿಸ್ಥಿತಿಗಳನ್ನು ಹೊಂದಿದ್ದ ಏಕೈಕ ವರ್ಗವೇನೂ ಆಗಿರಲಿಲ್ಲ. ಮಧ್ಯಯುಗದ ಪಟ್ಟಣಿಗರು ಹಾಗೂ ಸಣ್ಣ ರೈತ ಮಾಲಿಕರು ಆಧುನಿಕ ಬೂರ್ಷ್ವಾಸೀಯ ಪೂರ್ವಜರಾಗಿದ್ದರು. ಕೈಗಾರಿಕಾ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ಅಷ್ಟಾಗಿ ಅಭಿವೃದ್ಧಿಗೊಂಡಿರದ ದೇಶಗಳಲ್ಲಿ ಈ ಎರಡು ವರ್ಗಗಳೂ ಪ್ರವರ್ಧಮಾನಕ್ಕೆ ಬರುತ್ತಿರುವ ಬೂರ್ಷ್ವಾಸೀಯೊಂದಿಗೆ ಪಕ್ಕಪಕ್ಕದಲ್ಲೇ ಜಡವಾಗಿ ಇದ್ದುಕೊಂಡು ಬಂದಿವೆ.

ಆಧುನಿಕ ನಾಗರಿಕತೆಯು ಸಂಪೂರ್ಣವಾಗಿ ಅಭಿವೃದ್ಧಿಗೊಂಡ ದೇಶಗಳಲ್ಲಿ ಪೆಟಿ ಬೂರ್ಷ್ವಾಸೀಯ ಒಂದು ಹೊಸ ವರ್ಗವು ರೂಪುಗೊಂಡಿದೆ. ಇದು ಶ್ರಮಜೀವಿ ವರ್ಗ ಹಾಗೂ ಬೂರ್ಷ್ವಾಸೀಯ ನಡುವೆ ತೂಗಾಡುತ್ತ ಸತತವಾಗಿ ಬೂರ್ಷ್ವಾ ಸಮಾಜದ ಅನುಬಂಧಕ ಭಾಗವಾಗಿ ತನ್ನನ್ನು ತಾನೇ ಪುನರ್ ನವೀಕರಿಸಿಕೊಳ್ಳುತ್ತಿರುತ್ತದೆ. ಆದರೆ ಈ ವರ್ಗದ ವೈಯಕ್ತಿಕ ಸದಸ್ಯರು ಪೈಪೋಟಿಯ ಪರಿಣಾಮವಾಗಿ ಸತತವಾಗಿ ಶ್ರಮಜೀವಿ ವರ್ಗಕ್ಕೆ ದೂಡಲ್ಪಡುತ್ತಿರುತ್ತಾರೆ ಮತ್ತು ಆಧುನಿಕ ಕೈಗಾರಿಕೆಯು ಅಭಿವೃದ್ಧಿಗೊಂಡಂತೆ ಇವರು ಆಧುನಿಕ ಸಮಾಜದ ಸ್ವತಂತ್ರ ವಿಭಾಗವಾಗಿ ಸಂಪೂರ್ಣವಾಗಿ ಕಣ್ಮರೆಯಾಗುವ ಸಮಯ ಸಮೀಪಿಸುತ್ತಿರುವುದನ್ನೂ, ಕೈಗಾರಿಕೆ, ಕೃಷಿ ಹಾಗೂ ವಾಣಿಜ್ಯದಲ್ಲಿ ತಮ್ಮ ಸ್ಥಳಗಳನ್ನು ಮೇಲ್ವಿಚಾರಕರು ಹಾಗೂ ಅಮೀನರು ಪಡೆದುಕೊಳ್ಳುವುದನ್ನೂ ಕಾಣುತ್ತಾರೆ.

ರೈತರೇ ಜನಸಂಖ್ಯೆಯ ಅರ್ಧಕ್ಕೂ ಹೆಚ್ಚು ಭಾಗವಿರುವ ಫ್ರಾನ್ಸ್‌ನಂಥ ದೇಶಗಳಲ್ಲಿ ಬೂರ್ಷ್ವಾ ವಿರುದ್ಧ ಶ್ರಮಜೀವಿ ವರ್ಗದ ಪರವಹಿಸಿದ ಲೇಖಕರು ಬೂರ್ಷ್ವಾ ಆಳ್ವಿಕೆಯ ಟೀಕೆಯಲ್ಲಿ ಪುಟ್ಟ ರೈತ ಹಾಗೂ ಪೆಟಿ ಬೂರ್ಷ್ವಾ ಪತಾಕೆಯನ್ನು ಬಳಸಿದುದು ಮತ್ತು ಈ ಮಧ್ಯಂತರ ವರ್ಗಗಳ ದೃಷ್ಟಿಕೋನದಿಂದ ಕಾರ್ಮಿಕ ವರ್ಗದ ಪರವಾಗಿ ಹೋರಾಡಿದುದು ಸಹಜವೇ ಆಗಿದ್ದಿತು. ಹೀಗೆ ಪೆಟಿ ಬೂರ್ಷ್ವಾ ಸಮಾಜವಾದದ ಉದ್ಭವವಾಯಿತು. ಸಿಸ್ಮೊಂದಿ[32]ಯವರು ಫ್ರಾನ್ಸಿನಲ್ಲಷ್ಟೇ ಅಲ್ಲ ಇಂಗ್ಲೆಂಡಿನಲ್ಲೂ ಈ ಪಂಥದ ನೇತೃವಾಗಿದ್ದರು.

ಸಮಾಜವಾದದ ಈ ಪಂಥವು ಆಧುನಿಕ ಉತ್ಪಾದನಾ ಸಂಬಂಧಗಳಲ್ಲಿನ ವೈರುಧ್ಯತೆಗಳ ಕಡೆಗೆ ತುಂಬ ತೀಕ್ಷ್ಣತೆಯ ಗಮನ ಸೆಳೆಯಿತು. ಅದು ಅರ್ಥಶಾಸ್ತ್ರಜ್ಞರ ಬೂಟಾಟಿಕೆಯ ಸಮರ್ಥನೆಗಳನ್ನು ಬಯಲು ಮಾಡಿತು. ಅದು ಯಂತ್ರ ಸಾಮಗ್ರಿಗಳ ಹಾಗೂ ಶ್ರಮವಿಭಜನೆಯ ವಿಪತ್ಕಾರಕ ಪರಿಣಾಮಗಳನ್ನೂ,

ಬಂಡವಾಳ ಹಾಗೂ ಭೂಮಿಯು ಕೆಲವೇ ಕೈಗಳಲ್ಲಿ ಕೇಂದ್ರೀಕೃತವಾಗಿರುವುದು, ಅತಿ ಉತ್ಪಾದನೆ ಹಾಗೂ ಮುಗ್ಗಟ್ಟುಗಳು ಇವುಗಳನ್ನೂ ನಿರ್ವಿವಾದಾತ್ಮಕ ರೀತಿಯಲ್ಲಿ ಸಾಧಿಸಿ ತೋರಿತು; ಪೆಟಿ ಬೂರ್ಷ್ವಾ ಹಾಗೂ ರೈತರ ಅನಿವಾರ್ಯ ವಿನಾಶವನ್ನೂ, ಶ್ರಮಜೀವಿ ವರ್ಗದ ದಾರಿದ್ರ್ಯತೆಯನ್ನೂ, ಉತ್ಪಾದನೆಯಲ್ಲಿನ ಅರಾಜಕತೆಯನ್ನೂ, ಸಂಪತ್ತಿನ ವಿತರಣೆಯಲ್ಲಿದ್ದ ಕಣ್ಣು ಕುಕ್ಕುವಂಥ ಅಸಮತೆಗಳನ್ನೂ, ರಾಷ್ಟ್ರಗಳ ನಡುವಿನ ವಿನಾಶಕರ ಕೈಗಾರಿಕಾ ಯುದ್ಧಗಳನ್ನೂ, ಹಳೆಯ ನೈತಿಕ ಬಾಂಧವ್ಯಗಳ, ಹಳೆಯ ಕೌಟುಂಬಿಕ ಸಂಬಂಧಗಳ, ಹಳೆಯ ಜನಾಂಗಗಳ ವಿಸರ್ಜನೆಯನ್ನೂ ಅದು ಎತ್ತಿ ತೋರಿಸಿತು.

ಅದರೆ ತನ್ನ ಧನಾತ್ಮಕ ಗುರಿಗಳಲ್ಲಿ ಈ ಸ್ವರೂಪದ ಸಮಾಜವಾದವು, ಹಳೆಯ ಉತ್ಪಾದನಾ ಹಾಗೂ ವಿನಿಮಯ ಸಾಧನಗಳನ್ನೂ ಮತ್ತು ಅವುಗಳೊಂದಿಗೇ ಹಳೆಯ ಆಸ್ತಿ ಸಂಬಂಧಗಳನ್ನೂ, ಹಾಗೂ ಹಳೆಯ ಸಮಾಜವನ್ನೂ ಪುನಃ ಜಾರಿಗೆ ತರಬಯಸುತ್ತದೆ; ಇಲ್ಲವೇ ಆಧುನಿಕ ಉತ್ಪಾದನಾ ಹಾಗೂ ವಿನಿಮಯ ಸಾಧನಗಳನ್ನು, ಆ ಸಾಧನಗಳೇ ಸ್ಫೋಟಗೊಳಿಸಿರುವ ಹಾಗೂ ಸ್ಫೋಟಗೊಳಿಸುವುದು ಖಂಡಿತವಿರುವ ಹಳೆಯ ಆಸ್ತಿ ಸಂಬಂಧಗಳ ಚೌಕಟ್ಟಿನೊಳಗೇ ಇಡುಕಿಸಿ ತುರುಕಿಸಲು ಬಯಸುತ್ತದೆ. ಈ ಯಾವುದೇ ಪ್ರಸಂಗದಲ್ಲೂ ಅದು ಪ್ರತಿಗಾಮಿಯೂ ಆಗಿರುತ್ತದೆ, ಅಸಾಧ್ಯಾದರ್ಶಾತ್ಮಕವೂ ಆಗಿರುತ್ತದೆ.

ಅದರ ಅಂತಿಮ ನುಡಿಗಳು ಹೀಗಿವೆ – ಕೈಗೆಲಸದ ಕಾರ್ಖಾನೆಯಲ್ಲಿ ಸಮ್ಮಿಳಿತ ಗಿಲ್ಡ್‌ಗಳು, ಕೃಷಿಯಲ್ಲಿ ಕುಲಪತಿಯಾಡಳಿತ ಸಂಬಂಧಗಳು.

ಆಖೈರಿನಲ್ಲಿ, ದೃಢವಾದ ಐತಿಹಾಸಿಕ ಸತ್ಯಸಂಗತಿಗಳು ಈ ಆತ್ಮವಂಚನೆಯ ಎಲ್ಲ ಮಾದಕ ಪರಿಣಾಮಗಳನ್ನೂ ಹೋಗಲಾಡಿಸಿದಾಗ, ಈ ರೂಪದ ಸಮಾಜವಾದವು ಉತ್ಸಾಹಶೂನ್ಯತೆಯ ದುರ್ದೆಶೆಗೊಳಗಾಗಿ ಅವಸಾನಗೊಂಡಿತು.

### (ಸಿ) ಜರ್ಮನ್ ಅಥವಾ "ನೈಜ" ಸಮಾಜವಾದ

ಫ್ರಾನ್ಸಿನ ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಸಾಹಿತ್ಯವು, ಆಧಿಪತ್ಯದಲ್ಲಿದ್ದ ಬೂರ್ಷ್ವಾಸೀಯ ದಬ್ಬಾಳಿಕೆಯ ಪರಿಸ್ಥಿತಿಯಲ್ಲಿ ಉದ್ಭವಿಸಿದ ಸಾಹಿತ್ಯವು, ಆ ಆಧಿಪತ್ಯದ ವಿರುದ್ಧ ಹೋರಾಟದ ಅಭಿವ್ಯಕ್ತಿಯಾಗಿದ್ದಿತು. ಈ ಸಾಹಿತ್ಯವನ್ನು ಜರ್ಮನಿಯೊಳಕ್ಕೆ, ಆ ದೇಶದಲ್ಲಿ ಬೂರ್ಷ್ವಾಸೀಯು ಅದೇ ತಾನೆ ಸಾಮಂತಶಾಹಿ ನಿರಂಕುಶಾಧಿಕಾರದ ವಿರುದ್ಧ ಹೋರಾಟ ಪ್ರಾರಂಭಿಸಿದ್ದಾಗ, ತರಲಾಯಿತು.

ಜರ್ಮನ್ ತತ್ವಶಾಸ್ತ್ರಜ್ಞರೂ, ಅರೆ-ತತ್ವಶಾಸ್ತ್ರಜ್ಞರೂ ಬುದ್ಧಿಜೀವಿಗಳೂ ಈ ಸಾಹಿತ್ಯವನ್ನು ಉತ್ಸುಕತೆಯಿಂದ ಸ್ವೀಕರಿಸಿದರು. ಆದರೆ ಈ ಬರವಣಿಗೆಗಳು ಫ್ರಾನ್ಸಿನಿಂದ ಜರ್ಮನಿಗೆ ವಲಸೆ ಬಂದಾಗ ಅವುಗಳೊಂದಿಗೆ ಫ್ರೆಂಚ್ ಸಾಮಾಜಿಕ ಪರಿಸ್ಥಿತಿಗಳೂ ವಲಸೆ ಬರಲಿಲ್ಲ ಎಂಬುದನ್ನು ಮಾತ್ರ ಅವರು ಮರೆತರು. ಜರ್ಮನ್ ಸಾಮಾಜಿಕ ಪರಿಸ್ಥಿತಿಗಳಲ್ಲಿ ಈ ಫ್ರೆಂಚ್ ಸಾಹಿತ್ಯವು ತನ್ನ ತಕ್ಷಣದ ಪ್ರಾಯೋಗಿಕ ಮಹತ್ವವನ್ನೆಲ್ಲ ಕಳೆದುಕೊಂಡಿತು ಮತ್ತು ಶುದ್ಧ ಸಾಹಿತ್ಯವಾಗಷ್ಟೆ ಉಳಿಯಿತು. ಹಾಗಾಗಿ ಹದಿನೆಂಟನೆಯ ಶತಮಾನದ ಜರ್ಮನ್ ತತ್ವಶಾಸ್ತ್ರಜ್ಞರಿಗೆ ಮೊದಲ ಫ್ರೆಂಚ್ ಕ್ರಾಂತಿಯ ಕೇಳಿಕೆಗಳು ಒಟ್ಟಿನಲ್ಲಿ "ಪ್ರಾಯೋಗಿಕ ವಿವೇಚನೆ"ಯ ಕೇಳಿಕೆಗಳಿಗಿಂತ ಹೆಚ್ಚಿಗೇನೂ ಆಗಿರಲಿಲ್ಲ. ಕ್ರಾಂತಿಕಾರೀ ಫ್ರೆಂಚ್ ಬೂರ್ಷ್ವಾಸೀಯ ಸಂಕಲ್ಪ ಸೂಚಕ ಮಾತುಗಳು ಈ ಜರ್ಮನ್ ತತ್ವಶಾಸ್ತ್ರಜ್ಞರಿಗೆ ಶುದ್ಧ ಸಂಕಲ್ಪದ, ಹೇಗೆ ಇರಬೇಕೋ ಹಾಗೆ ಇರಲಿದ್ದ ಸಂಕಲ್ಪದ, ಒಟ್ಟಿನಲ್ಲಿ ನಿಜವಾದ ಮಾನವ ಸಂಕಲ್ಪದ, ನಿಯಮಗಳಾಗಿ ಕಂಡುಬಂದವು.

ಜರ್ಮನ್ ಲೇಖಕರ ಕೆಲಸವೆಲ್ಲ ಪ್ರಮುಖವಾಗಿ, ಈ ಹೊಸ ಫ್ರೆಂಚ್ ವಿಚಾರಗಳು ತಮ್ಮ ಪುರಾತನ ತತ್ವಶಾಸ್ತ್ರ ಪ್ರಜ್ಞೆಯೊಂದಿಗೆ ಸಾಮರಸ್ಯವಾಗಿ ಕೂಡಿಕೊಳ್ಳುವಂತೆ ಮಾಡುವುದಾಗಿದ್ದಿತು; ಅಥವಾ ತಮ್ಮ ಸ್ವಂತ ತಾತ್ವಿಕ ದೃಷ್ಟಿಕೋನವನ್ನು ಬಿಟ್ಟುಕೊಡದೆಯೇ ಅದಕ್ಕೆ ಫ್ರೆಂಚ್ ವಿಚಾರಗಳನ್ನು ಸೇರಿಸುವುದಾಗಿದ್ದಿತು.

ಈ ರೀತಿಯ ಸೇರಿಸುವಿಕೆಯು ವಿದೇಶೀ ಭಾಷೆಯೊಂದನ್ನು ಸ್ವೀಕರಿಸುವಾಗ ಅನುಸರಿಸುತ್ತಿದ್ದ ರೀತಿಯಲ್ಲಿ, ಅಂದರೆ ಭಾಷಾಂತರದ ಮೂಲಕ, ನಡೆಯಿತು.

ಪುರಾತನ "ಹೀದನ್" ಪ್ರಪಂಚದ ಶ್ರೇಷ್ಠ ಕೃತಿಗಳು ರಚಿತವಾಗಿದ್ದ ಹಸ್ತಪ್ರತಿಗಳ ಮೇಲೆ ಕ್ರೈಸ್ತ ಸನ್ಯಾಸಿಗಳು ಹೇಗೆ ಕ್ಯಾಥೊಲಿಕ್ ಸಂತರ ಕ್ಷುದ್ರ ಜೀವನ ಕಥೆಗಳನ್ನು ಬರೆದರೆಂಬುದು ಸುವಿದಿತ. ಜರ್ಮನ್ ಲೇಖಕರು ಫ್ರೆಂಚ್ ಲೌಕಿಕ ಸಾಹಿತ್ಯಕ್ಕೆ ಸಂಬಂಧಿಸಿ ಈ ಪ್ರಕ್ರಿಯೆಯನ್ನು ವಿಪರ್ಯಸ್ತಗೊಳಿಸಿದರು. ಅವರು ತಮ್ಮ ತಾತ್ವಿಕ ಅಸಂಬದ್ಧ ಕಲ್ಪನೆಗಳನ್ನು ಫ್ರೆಂಚ್ ಮೂಲದ ಕೆಳಗೆ ಬರೆದರು. ಉದಾಹರಣೆಗೆ, ಹಣದ ಆರ್ಥಿಕ ವಹಿವಾಟುಗಳ ಬಗೆಗೆ ಫ್ರೆಂಚ್ ವಿಮರ್ಶೆಯ ಕೆಳಗೆ ಅವರು "ಮಾನವತ್ವದ ಅನ್ಯತ್ರೀಕರಣ" ಎಂದು ಬರೆದರು. ಬೂರ್ಷ್ವಾ ರಾಜ್ಯದ ಕುರಿತು ಫ್ರೆಂಚ್ ವಿಮರ್ಶೆಯ ಕೆಳಗೆ ಅವರು "ಸಾಮಾನ್ಯತೆಯ ತತ್ವದ ಸಿಂಹಾಸನ ಚ್ಯುತಿ" ಎಂದು ಮುಂತಾಗಿ ಬರೆದರು.

ಹೀಗೆ ಫ್ರೆಂಚ್ ಐತಿಹಾಸಿಕ ವಿಮರ್ಶೆಗಳ ಹಿಂಬದಿಯಲ್ಲಿ ಈ ತಾತ್ವಿಕ ನುಡಿಕಟ್ಟುಗಳನ್ನು ಬರೆದುದನ್ನು ಅವರು "ಕ್ರಿಯಾತ್ಮಕ ತತ್ವಶಾಸ್ತ್ರ," "ನೈಜ ಸಮಾಜವಾದ," "ಜರ್ಮನ್ ಸಮಾಜವಾದ ವಿಜ್ಞಾನ," "ಸಮಾಜವಾದದ ತಾತ್ವಿಕ ತಳಹದಿ" ಎಂದು ಮುಂತಾದ ಹೆಸರುಗಳನ್ನಿಟ್ಟು ಕರೆದರು.

ಹೀಗೆ ಫ್ರೆಂಚ್ ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಸಾಹಿತ್ಯವನ್ನು ಸಂಪೂರ್ಣವಾಗಿ ನಿರ್ವೀರ್ಯಗೊಳಿಸಲಾಯಿತು ಮತ್ತು ಅದು ಜರ್ಮನನ ಕೈಯಲ್ಲಿ ಒಂದು ವರ್ಗವು ಮತ್ತೊಂದರ ವಿರುದ್ಧ ನಡೆಸುವ ಹೋರಾಟವನ್ನು ವ್ಯಕ್ತಪಡಿಸುವುದನ್ನು ನಿಲ್ಲಿಸಿದ ಕಾರಣ, ಜರ್ಮನನು ತಾನು "ಫ್ರೆಂಚರ ಏಕಪಕ್ಷೀಯತೆ"ಯನ್ನು ನಿವಾರಿಸಿಕೊಂಡು, ಸತ್ಯವಾದ ಅಗತ್ಯತೆಗಳನ್ನಲ್ಲ ಸತ್ಯದ ಅಗತ್ಯತೆಗಳನ್ನು, ಶ್ರಮಜೀವಿ ವರ್ಗದ ಹಿತಗಳನ್ನಲ್ಲ ಆದರೆ ಮಾನವ ಸ್ವಭಾವದ ಹಿತಗಳನ್ನು, ಒಟ್ಟಿನ ಮೇಲೆ ಯಾವ ವರ್ಗಕ್ಕೂ ಸೇರದ, ವಾಸ್ತವಿಕ ಜಗತ್ತಿನಲ್ಲಿರದ, ತಾತ್ವಿಕ ಅತೀತ ಕಲ್ಪನೆಯ ಮಸುಕು ಪ್ರಪಂಚದಲ್ಲಷ್ಟೆ ಇರುವ, ಮಾನವನ ಹಿತಗಳನ್ನು ಪ್ರತಿಪಾದಿಸಿರುವುದಾಗಿ ಭಾವಿಸಿಕೊಂಡನು.

ತನ್ನ ಈ ಬಾಲಿಶ ಕಾರ್ಯವನ್ನೇ ತುಂಬ ಗಹನವಾದುದೆಂದು, ಗಂಭೀರವಾದುದೆಂದು ಭಾವಿಸಿಕೊಂಡು, ತನ್ನ ಅಲ್ಪ ವಸ್ತುಸಂಪತ್ತನ್ನೇ ಅಳಲೆಕಾಯಿ ಪಂಡಿತನ ರೀತಿಯಲ್ಲಿ ಹೊಗಳಿಕೊಂಡ ಈ ಜರ್ಮನ್ ಸಮಾಜವಾದವು ಕ್ರಮೇಣ ತನ್ನ ಶುಷ್ಕ ಪಾಂಡಿತ್ಯದ ಗಾಂಪತನವನ್ನು ಕಳೆದುಕೊಂಡಿತು.

ಸಾಮಂತಶಾಹಿ ಶ್ರೀಮಂತವರ್ಗದವರ ಹಾಗೂ ನಿರಂಕುಶ ರಾಜಪ್ರಭುತ್ವದ ವಿರುದ್ಧ ಜರ್ಮನ್ ಅದರಲ್ಲೂ ವಿಶೇಷವಾಗಿ ಪ್ರಷ್ಯನ್ ಬೂರ್ಷ್ವಾಸೀಯ ಹೋರಾಟವು, ಬೇರೆ ಮಾತುಗಳಲ್ಲಿ, ಉದಾರವಾದಿ ಚಳವಳಿಯು, ಹೆಚ್ಚು ಶ್ರದ್ಧಾಪೂರ್ವಕವಾಯಿತು.

ಇದರಿಂದಾಗಿ "ನೈಜ" ಸಮಾಜವಾದಕ್ಕೆ ಬಹುಕಾಲದಿಂದ ಬಯಸುತ್ತಿದ್ದ ಅವಕಾಶ ಲಭಿಸಿತು. ಅದು ರಾಜಕೀಯ ಚಳವಳಿಯ ಮುಂದೆ ಸಮಾಜವಾದಿ ಕೇಳಿಕೆಗಳನ್ನು ಇಡತೊಡಗಿತು; ಉದಾರವಾದದ ವಿರುದ್ಧ, ಪ್ರಾತಿನಿಧಿಕ ಸರಕಾರದ ವಿರುದ್ಧ, ಬೂರ್ಷ್ವಾ ಸ್ಪರ್ಧೆಯ ವಿರುದ್ಧ, ಬೂರ್ಷ್ವಾ ಪತ್ರಿಕಾ ಸ್ವಾತಂತ್ರ್ಯದ ವಿರುದ್ಧ, ಬೂರ್ಷ್ವಾ ನ್ಯಾಯಶಾಸ್ತ್ರ, ಬೂರ್ಷ್ವಾ ಸ್ವಾತಂತ್ರ್ಯ ಹಾಗೂ ಸಮಾನತೆಗಳ ವಿರುದ್ಧ ಪಾರಂಪರಿಕವಾದ ಖಂಡನೆಯ ಸುರಿಮಳೆ ಸುರಿಸತೊಡಗಿತು. ಈ ಬೂರ್ಷ್ವಾ ಚಳವಳಿಯಿಂದ ಗಳಿಸುವುದು ಏನೂ ಇಲ್ಲ, ಆದರೆ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂದು ಜನಸಮೂಹಗಳಿಗೆ ಬೋಧಿಸತೊಡಗಿತು. ಯಾವುದರ ಕ್ಷುದ್ರ ಅನುಕರಣೆ ತಾನಾಗಿದ್ದಿತೋ ಆ ಫ್ರೆಂಚ್ ವಿಮರ್ಶೆಯು ಆಧುನಿಕ ಬೂರ್ಷ್ವಾ ಸಮಾಜದ ಅಸ್ತಿತ್ವವನ್ನೂ ಅದಕ್ಕನುಗುಣವಾದ ಜೀವನದ ಆರ್ಥಿಕ ಪರಿಸ್ಥಿತಿಗಳ ಅಸ್ತಿತ್ವವನ್ನೂ ಮತ್ತು ಅದಕ್ಕೆ ಅನುಗೊಳಿಸಿದ್ದ ರಾಜಕೀಯ ರಚನೆಯ ಅಸ್ತಿತ್ವವನ್ನೂ ಪೂರ್ವಭಾವಿಯಾಗಿಯೇ ಕಲ್ಪಿಸಿಕೊಂಡಿದ್ದಿತು ಎಂಬುದನ್ನು ಜರ್ಮನ್ ಸಮಾಜವಾದವು ಸಕಾಲದಲ್ಲಿ ಮರೆತಿತು. ಜರ್ಮನಿಯಲ್ಲಿ ನಡೆಯಲಿದ್ದ

ಹೋರಾಟದ ಉದ್ದೇಶವು ವಾಸ್ತವವಾಗಿ ಇವುಗಳನ್ನು ಸಾಧಿಸುವುದೇ ಆಗಿದ್ದಿತು.

ಪಾದ್ರಿಗಳು, ಪ್ರಾಧ್ಯಾಪಕರು, ಯುಂಕರ್[33] (ಜಮೀನುದಾರರು) ಹಾಗೂ ಅಧಿಕಾರಿಗಳು ಇವರನ್ನು ಹಿಂಬಾಲಕರನ್ನಾಗಿ ಹೊಂದಿದ್ದ ನಿರಂಕುಶ ಸರಕಾರಗಳಿಗೆ ಇದು, ಅವನ್ನು ಭೀತಿಗೊಳಗಾಗಿಸಿದ್ದ ಬೂರ್ಷ್ವಾಸೀಯ ವಿರುದ್ಧ ಬೆದರು ಗುಮ್ಮನನ್ನಾಗಿ ಉಪಯೋಗಿಸಲು ಸಾಧನವಾಗಿ ಸಹಾಯಕವಾಯಿತು.

ಅದೇ ಸಮಯದಲ್ಲೇ ಜರ್ಮನ್ ಕಾರ್ಮಿಕ ವರ್ಗದ ಬಂಡಾಯಗಳನ್ನು ಛಡಿಹೊಡೆತ ಹಾಗೂ ತುಪಾಕಿ ಗುಂಡುಗಳ ಕಹಿ ಗುಳಿಗೆಗಳಿಂದ ಹತ್ತಿಕ್ಕುತ್ತಿದ್ದ ಈ ಸರಕಾರಗಳಿಗೆ ಅಂತ್ಯದಲ್ಲಿ ಸಿಹಿಕಜ್ಜಾಯವಾಗಿ ನೀಡಲೂ ಇದು ಪ್ರಯೋಜನಕ್ಕೆ ಬಂದಿತು.

ಹೀಗೆ ಈ "ನೈಜ" ಸಮಾಜವಾದವು ಸರಕಾರಗಳಿಗೆ ಜರ್ಮನ್ ಬೂರ್ಷ್ವಾಸೀಯ ವಿರುದ್ಧ ಹೋರಾಡಲು ಆಯುಧವಾಗಿ ಉಪಯೋಗವಾದಾಗಲೇ ಅದು ಅದೇ ಕಾಲದಲ್ಲಿ ಪ್ರತಿಗಾಮಿ ಹಿತವೊಂದನ್ನೂ, ಜರ್ಮನ್ ಪೆಟಿ ಬೂರ್ಷ್ವಾಗಳ ಹಿತವನ್ನೂ ನೇರವಾಗಿ ಪ್ರತಿಬಿಂಬಿಸುತ್ತಿದ್ದಿತು. ಹದಿನಾರನೆಯ ಶತಮಾನದ ಅವಶೇಷವಾದ ಮತ್ತು ಅಂದಿನಿಂದ ಸತತವಾಗಿ ನಾನಾ ರೂಪಗಳಲ್ಲಿ ತಲೆ ಎತ್ತಿಕೊಂಡು ಬರುತ್ತಿರುವ ಪೆಟಿ ಬೂರ್ಷ್ವಾ ವರ್ಗವು ಜರ್ಮನಿಯಲ್ಲಿ ಇಂದು ಅಸ್ತಿತ್ವದಲ್ಲಿರುವ ವಸ್ತುಸ್ಥಿತಿಗೆ ನಿಜವಾದ ಸಾಮಾಜಿಕ ಬುನಾದಿಯಾಗಿದೆ.

ಈ ವರ್ಗವನ್ನು ಸಂರಕ್ಷಿಸುವುದೆಂದರೆ ಇಂದು ಜರ್ಮನಿಯಲ್ಲಿ ಅಸ್ತಿತ್ವದಲ್ಲಿರುವ ವಸ್ತುಸ್ಥಿತಿಯನ್ನು ಸಂರಕ್ಷಿಸಿದಂತೆಯೇ. ಬೂರ್ಷ್ವಾಸೀಯ ಕೈಗಾರಿಕಾ ಹಾಗೂ ರಾಜಕೀಯ ಪರಮಾಧಿಕಾರವು ಈ ವರ್ಗಕ್ಕೆ ಖಂಡಿತವಾದ ವಿನಾಶದ ಭೀತಿ ಹಾಕುತ್ತದೆ. ಒಂದು ಕಡೆ ಬಂಡವಾಳದ ಕೇಂದ್ರೀಕರಣದಿಂದ; ಮತ್ತೊಂದು ಕಡೆ ಕ್ರಾಂತಿಕಾರಿ ಕಾರ್ಮಿಕ ವರ್ಗಕ್ಕೆ ಜನ್ಮ ನೀಡುವುದರಿಂದ. "ನೈಜ" ಸಮಾಜವಾದವು ಈ ಎರಡು ಹಕ್ಕಿಗಳನ್ನೂ ಒಂದೇ ಕಲ್ಲಿನಿಂದ ಕೊನೆಗಾಣಿಸುವಂತೆ ಕಂಡು ಬಂದಿತು. ಅದು ಸಾಂಕ್ರಾಮಿಕ ರೋಗದಂತೆ ಹರಡಿತು.

ಕಾಲ್ಪನಿಕ ತತ್ವಗಳ ಜೇಡರ ಬಲೆಗಳಿಂದ ನೇಯ್ದು, ವಾಗಾಡಂಬರದ ಕುಸುಮಗಳ ಕಸೂತಿ ಹಾಕಿದ, ಓಕರಿಕೆ ಬರಿಸುವ ಅತಿಭಾವುಕತೆಯ ತಿಳಿಮಂಜಿನ ಹನಿಗಳಲ್ಲಿ ಅದ್ದಿದ ದಿವ್ಯ ದುಕೂಲದಿಂದ ಜರ್ಮನ್ ಸಮಾಜವಾದಿಗಳು ಚರ್ಮ ಮೂಳೆ ಬಿಟ್ಟುಕೊಂಡಿದ್ದ ತಮ್ಮ ದಾರುಣ "ನಿತ್ಯ ಸತ್ಯ"ಗಳನ್ನು ಅಲಂಕರಿಸಿ ಜನರ ಮುಂದಿರಿಸಿದರು. ಇದರಿಂದಾಗಿ ಅವರ ಸರಕುಗಳ ಮಾರಾಟವು ಆ ಜನರ ಮಧ್ಯೆ ಅದ್ಭುತವಾಗಿ ಹೆಚ್ಚಿತು.

ಜರ್ಮನ್ ಸಮಾಜವಾದವೂ ತನ್ನ ಮಟ್ಟಿಗೆ ತಾನು ಪೆಟಿ ಬೂರ್ಷ್ವಾ ಸಂಕುಚಿತಮತಿಗಳ ಬಡಾಯಿಗಾರ ಪ್ರತಿನಿಧಿಯಾಗಿರುವುದೇ ತನ್ನ ಜೀವನದ ಕರೆ ಎಂದು ಹೆಚ್ಚು ಹೆಚ್ಚಾಗಿ ಗ್ರಹಿಸಿಕೊಳ್ಳತೊಡಗಿತು.

ಅದು ಜರ್ಮನ್ ರಾಷ್ಟ್ರವು ಆದರ್ಶ ರಾಷ್ಟ್ರವೆಂದೂ ಜರ್ಮನ್ ಪೆಟಿ ಬೂರ್ಷ್ವಾ ಆದರ್ಶಪುರುಷನೆಂದೂ ಘೋಷಿಸಿತು. ಈ ಆದರ್ಶಪುರುಷನ ಪ್ರತಿಯೊಂದು ನೀಚ ಅಲ್ಪತನಕ್ಕೂ ಅದು ಯಾವುದೋ ಅಂತರ್ಗತ ಉನ್ನತ ಸಮಾಜವಾದಿ ವ್ಯಾಖ್ಯಾನವನ್ನು – ಅದರ ನಿಜವಾದ ಸ್ವರೂಪಕ್ಕೆ ತದ್ವಿರುದ್ಧವಾದ ವ್ಯಾಖ್ಯಾನವನ್ನು – ನೀಡಿತು. ಅದು ಕಮ್ಯೂನಿಸಂನ "ಮೃಗೀಯ ವಿನಾಶಾತ್ಮಕ" ಪ್ರವೃತ್ತಿಯನ್ನು ನೇರವಾಗಿ ವಿರೋಧಿಸುವ ಮತ್ತು ಎಲ್ಲ ವರ್ಗ ಹೋರಾಟಗಳ ಬಗೆಗೂ ತನ್ನ ಮಹತ್ತರವಾದ ಹಾಗೂ ನಿಷ್ಪಕ್ಷಪಾತವಾದ ತುಚ್ಛೀಕಾರ ಪ್ರಕಟಪಡಿಸುವ ವಿಪರೀತಕ್ಕೂ ಹೋಯಿತು. ಕೆಲವಷ್ಟನ್ನೆ ಬಿಟ್ಟು ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಎಂದು ಕರೆದುಕೊಂಡು ಈಗ (1847) ಜರ್ಮನಿಯಲ್ಲಿ ಪ್ರಸಾರದಲ್ಲಿರುವ ಎಲ್ಲ ಪ್ರಕಟಣೆಗಳೂ ಈ ದುರ್ಗಂಧದ, ಮನುಷ್ಯರನ್ನು ನಿರ್ವೀರ್ಯಗೊಳಿಸುವಂಥ, ಸಾಹಿತ್ಯ ಶ್ರೇಣಿಗೆ ಸೇರಿದವೇ ಆಗಿವೆ.*

---

*1848ರ ಕ್ರಾಂತಿಕಾರಿ ಬಿರುಗಾಳಿಯು ಈ ಇಡೀ ಕೊಳಕು ಪ್ರವೃತ್ತಿಯನ್ನು ಕೊಚ್ಚಿಹಾಕಿತು ಮತ್ತು ಸಮಾಜವಾದದಲ್ಲಿ ಇನ್ನೆಷ್ಟು ಮಾತ್ರವೂ ಕೈಹಾಕದಂತೆ ಅದರ ಪ್ರತಿಪಾದಕರ ದುಷ್ಕಟವನ್ನು ಹೋಗಲಾಡಿಸಿತು. ಈ ಪ್ರವೃತ್ತಿಯ ಪ್ರಧಾನ ಪ್ರತಿನಿಧಿ ಹಾಗೂ ಮಾದರಿ ದೃಷ್ಟಾಂತ ಎಂದರೆ ಹೆರ್ ಕಾರ್ಲ್ ಗ್ರೂನ್.[34] (1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

## 2. ಸಂಪ್ರದಾಯಶರಣ ಅಥವಾ ಬೂರ್ಷ್ವಾ ಸಮಾಜವಾದ

ಬೂರ್ಷ್ವಾ ಸಮಾಜವು ಮುಂದೆಯೂ ಇದ್ದುಕೊಂಡೇ ಹೋಗುವುದನ್ನು ಖಚಿತಗೊಳಿಸಲೋಸುಗ ಬೂರ್ಷ್ವಾಸೀಯ ಒಂದು ಭಾಗವು ಸಾಮಾಜಿಕ ಕುಂದು ಕೊರತೆಗಳನ್ನು ನಿವಾರಿಸುವ ಬಯಕೆ ಹೊಂದಿರುತ್ತದೆ.

ಅರ್ಥಶಾಸ್ತ್ರಜ್ಞರು, ಜನೋಪಕಾರಿಗಳು, ಮಾನವತಾವಾದಿಗಳು, ಕಾರ್ಮಿಕ ವರ್ಗದ ಪರಿಸ್ಥಿತಿಗಳ ಸುಧಾರಕರು, ದಾನಧರ್ಮ ಸಂಘಟಕರು, ಪ್ರಾಣಿಹಿಂಸಾ ನಿವಾರಣಾ ಸಂಸ್ಥೆಯ ಸದಸ್ಯರು, ಮದ್ಯ ವರ್ಜನೆಯ ಉನ್ಮತ್ತಾಭಿಮಾನಿಗಳು, ಊಹಿಸಲು ಸಾಧ್ಯವಿರುವ ಇನ್ನೂ ಅನೇಕ ರೀತಿಯ ಮೋಸದ ಸುಧಾರಕರು ಈ ವಿಭಾಗಕ್ಕೆ ಸೇರಿದ್ದಾರೆ. ಅಷ್ಟೇ ಅಲ್ಲ ಈ ರೀತಿಯ ಸಮಾಜವಾದವನ್ನು ಅವರು ಸಂಪೂರ್ಣ ಶಾಸ್ತ್ರ ವ್ಯವಸ್ಥೆಗಳನ್ನಾಗಿ ರೂಪಿಸಿದ್ದಾರೆ.

ನಾವು ಈ ರೂಪಕ್ಕೆ ನಿದರ್ಶನವಾಗಿ ಪ್ರುದೋನ್‌ರ "ದಾರಿದ್ರ್ಯತೆಯ ತತ್ವಶಾಸ್ತ್ರ" (*Philosophie de la Misère*)ವನ್ನು ಉಲ್ಲೇಖಿಸಬಹುದು.

ಸಮಾಜವಾದಿ ಬೂರ್ಷ್ವಾಗಳು ಆಧುನಿಕ ಸಾಮಾಜಿಕ ಪರಿಸ್ಥಿತಿಗಳಿಂದ ಅವಶ್ಯವಾಗಿಯೇ ಉದ್ಭವಿಸುವ ಹೋರಾಟಗಳೂ ಅಪಾಯಗಳೂ ಇಲ್ಲದೆಯೇ ಆ ಪರಿಸ್ಥಿತಿಗಳ ಎಲ್ಲ ಅನುಕೂಲತೆಗಳನ್ನೂ ಪಡೆಯಬಯಸುತ್ತಾರೆ. ಅವರು ಸಮಾಜದ ಇಂದಿನ ಸ್ಥಿತಿಯೇ, ಅದರ ಕ್ರಾಂತಿಕಾರಿ ಹಾಗೂ ವಿಘಟನಕಾರಿ ಅಂಶಗಳಿಲ್ಲದೆಯೇ, ಯಾವತ್ತೂ ಇರಬೇಕೆಂದು ಬಯಸುತ್ತಾರೆ. ಅವರು ಶ್ರಮಜೀವಿಗಳಿಲ್ಲದೆಯೇ ಬೂರ್ಷ್ವಾಸೀ ಇರಬೇಕೆಂದು ಕೋರುತ್ತಾರೆ. ತಾನು ಸರ್ವೋಚ್ಚ ಸ್ಥಾನದಲ್ಲಿರುವ ಜಗತ್ತೇ ಅತ್ಯುತ್ತಮವಾದುದು ಎಂದು ಬೂರ್ಷ್ವಾಸೀ ಸಹಜವಾಗಿಯೇ ಭಾವಿಸುತ್ತದೆ; ಮತ್ತೆ ಬೂರ್ಷ್ವಾ ಸಮಾಜವಾದವು ಈ ಸುಖಕರವಾದ ಪ್ರಕಲ್ಪನೆಯನ್ನು ನಾನಾ ರೀತಿಯ ಹೆಚ್ಚುಕಮ್ಮಿ ಸಂಪೂರ್ಣವಾದ ವ್ಯವಸ್ಥೆ

ಗಳನ್ನಾಗಿ ವಿಕಾಸಗೊಳಿಸುತ್ತದೆ. ಅಂಥ ಒಂದು ವ್ಯವಸ್ಥೆಯನ್ನು ಆಗುಗೊಳಿಸಿ ಶ್ರಮಜೀವಿ ವರ್ಗವು ತನ್ಮೂಲಕ ನೇರವಾಗಿ ಸಾಮಾಜಿಕ "ನ್ಯೂ ಜೆರುಸಲೆಮ್"ಗೆ ಮುನ್ನಡೆಯಬೇಕೆಂದು ಇಷ್ಟಪಡುವಾಗ ಬೂರ್ಷ್ವಾ ಸಮಾಜವಾದವು ವಾಸ್ತವವಾಗಿ ಏನು ಇಷ್ಟಪಡುತ್ತೇಂದರೆ – ಶ್ರಮಜೀವಿ ವರ್ಗವು ಪ್ರಸ್ತುತ ಸಮಾಜದ ಸರಹದ್ದಿನೊಳಗೇ ಇರಬೇಕು, ಆದರೆ ಬೂರ್ಷ್ವಾಸೀಗೆ ಸಂಬಂಧಿಸಿ ತನ್ನೆಲ್ಲ ದ್ವೇಷಪೂರಿತ ವಿಚಾರಗಳನ್ನೂ ಬಿಟ್ಟುಕೊಡಬೇಕು, ಎಂದಷ್ಟೆ.

ಈ ಸಮಾಜವಾದದ ಮತ್ತೊಂದು ಹೆಚ್ಚು ಪ್ರಾಯೋಗಿಕವಾದ ಆದರೆ ಅಷ್ಟು ವ್ಯವಸ್ಥಾಬದ್ಧವಲ್ಲದ ರೂಪವು ಕಾರ್ಮಿಕ ವರ್ಗದ ಮುಂದೆ, ಅವರಿಗೆ ಕೇವಲ ರಾಜಕೀಯ ಸುಧಾರಣೆಯಲ್ಲ ಆದರೆ ಜೀವನದ ವಸ್ತುಸ್ಥಿತಿಗಳ ಹಾಗೂ ಆರ್ಥಿಕ ಸಂಬಂಧಗಳ ಬದಲಾವಣೆಯಷ್ಟೆ ಯಾವುದೇ ರೀತಿಯಲ್ಲಿ ಅನುಕೂಲವಾಗಬಲ್ಲುದೆಂದು ತೋರಿಸುವ ಮೂಲಕ, ಪ್ರತಿಯೊಂದು ಕ್ರಾಂತಿಕಾರಿ ಚಳವಳಿಯನ್ನೂ ಕೆಲಸಕ್ಕೆ ಬಾರದುದೆಂದು ಹಳಿಯ ಯತ್ನಿಸಿತು. ಜೀವನದ ವಸ್ತುಸ್ಥಿತಿಗಳಲ್ಲಿ ಬದಲಾವಣೆಗಳು ಎನ್ನುವಾಗ ಈ ವಿಧದ ಸಮಾಜವಾದವು ಬೂರ್ಷ್ವಾ ಉತ್ಪಾದನಾ ಸಂಬಂಧಗಳ ಅಳಿಸುವಿಕೆ – ಕ್ರಾಂತಿಯಷ್ಟೆ ನೆರವೇರಿಸಬಲ್ಲಂಥ ಅಳಿಸುವಿಕೆ – ಎಂದೇನೂ ಅರ್ಥ ಮಾಡುವುದಿಲ್ಲ. ಅದು ಹೇಳುವುದೆಲ್ಲ ಈ ಸಂಬಂಧಗಳು ಇದ್ದುಕೊಂಡಿರುವುದರ ಮೇಲೆಯೇ ಆಧರಿಸಿರುವ ಆಡಳಿತ ಸುಧಾರಣೆಗಳು; ಬಂಡವಾಳ ಮತ್ತು ಶ್ರಮದ ನಡುವಿನ ಸಂಬಂಧಗಳಿಗೆ ಯಾವ ರೀತಿಯಲ್ಲೂ ಬಾಧಕ ಉಂಟುಮಾಡದ, ಆದರೆ ಹೆಚ್ಚೆಂದರೆ ಬೂರ್ಷ್ವಾ ಸರಕಾರದ ಖರ್ಚನ್ನು ಕಮ್ಮಿ ಮಾಡುವ ಮತ್ತು ಆಡಳಿತ ಕಾರ್ಯವನ್ನು ಸರಳಗೊಳಿಸುವ ಸುಧಾರಣೆಗಳು, ಅಷ್ಟೆ.

ಬೂರ್ಷ್ವಾ ಸಮಾಜವಾದ ಎಂಬುದು ಕೇವಲ ಅಲಂಕಾರೋಕ್ತಿಯಾದಾಗ ಮಾತ್ರವೇ, ಆಗ ಮಾತ್ರವೇ, ಅದಕ್ಕೆ ಸೂಕ್ತವಾದ ಅರ್ಥ ಲಭಿಸುತ್ತದೆ.

ಸ್ವಚ್ಛಂದ ವ್ಯಾಪಾರ – ಕಾರ್ಮಿಕ ವರ್ಗದ ಪ್ರಯೋಜನಕ್ಕಾಗಿ; ರಕ್ಷಣಾತ್ಮಕ ಸುಂಕಗಳು – ಕಾರ್ಮಿಕ ವರ್ಗದ ಪ್ರಯೋಜನಕ್ಕಾಗಿ; ಸೆರೆಮನೆ ಸುಧಾರಣೆ – ಕಾರ್ಮಿಕ ವರ್ಗದ ಪ್ರಯೋಜನಕಾ ಗಿ. ಇದೇ ಬೂರ್ಷ್ವಾ ಸಮಾಜದ ಕೊನೆಯ ಮಾತು; ಇದೊಂದೇ ಗಹನವಾದ ಅರ್ಥದೊಂದಿಗೆ ಹೇಳಿದ ಮಾತು.

ಇದನ್ನೇ ಈ ಮಾತುಗಳಲ್ಲಿ ಸಂಗ್ರಹಿಸಿ ಹೇಳಬಹುದು – ಬೂರ್ಷ್ವಾಸೀಯು ಬೂರ್ಷ್ವಾಸೀಯಾಗಿಯೇ ಇರುವುದು, ಕಾರ್ಮಿಕ ವರ್ಗದ ಪ್ರಯೋಜನಕ್ಕಾಗಿ.

# 3. ವಿಮರ್ಶಾತ್ಮಕ-ಅಸಾಧ್ಯಾದರ್ಶ ಸಮಾಜವಾದ ಹಾಗೂ ಕಮ್ಯೂನಿಸಂ

ಪ್ರತಿಯೊಂದು ಆಧುನಿಕ ಮಹಾಕ್ರಾಂತಿಯಲ್ಲೂ ಶ್ರಮಜೀವಿಗಳ ಕೇಳಿಕೆಗಳಿಗೆ ಯಾವತ್ತೂ ಧ್ವನಿಕೊಟ್ಟಿರುವ, ಬಾಬೇಫ್[35] ಮತ್ತಿತರರ ಬರವಣಿಗೆಗಳಂಥ ಸಾಹಿತ್ಯಕ್ಕೆ ನಾವಿಲ್ಲಿ ಉಲ್ಲೇಖಿಸುತ್ತಿಲ್ಲ.

ಸಾಮಂತಶಾಹಿ ಸಮಾಜವನ್ನು ಉರುಳಿಸಲಾಗುತ್ತಿದ್ದ ಸಾರ್ವತ್ರಿಕ ಉದ್ರೇಕದ ಸಮಯದಲ್ಲಿ ಶ್ರಮಜೀವಿ ವರ್ಗವು ತನ್ನ ಸ್ವಂತ ಗುರಿಗಳನ್ನು ಸಾಧಿಸಿಕೊಳ್ಳಲು ಮಾಡಿದ ಮೊದಲ ನೇರ ಯತ್ನಗಳು ಅವಶ್ಯವಾಗಿಯೇ ವಿಫಲಗೊಂಡವು. ಏಕೆಂದರೆ ಆಗ ಶ್ರಮಜೀವಿ ವರ್ಗವು ಇನ್ನೂ ಅನಭಿವೃದ್ಧಿಗೊಂಡ ಸ್ಥಿತಿಯಲ್ಲಿದ್ದಿತು, ಮತ್ತು ಅದರ ವಿಮೋಚನೆಗೆ ಅವಶ್ಯವಾದ ಆರ್ಥಿಕ ಪರಿಸ್ಥಿತಿಗಳು ಇರಲಿಲ್ಲ. ಆ ಪರಿಸ್ಥಿತಿಗಳನ್ನು ಇನ್ನೂ ಸೃಜಿಸಬೇಕಿದ್ದಿತು. ಅವನ್ನು ಸದ್ಯದಲ್ಲೇ ಬರಲಿದ್ದ ಬೂರ್ಷ್ವಾ ಯುಗವಷ್ಟೆ ಸೃಜಿಸಬಲ್ಲುದಿದ್ದಿತು. ಶ್ರಮಜೀವಿ ವರ್ಗದ ಈ ಮೊದಲ ಚರ್ಯೆಗಳ ಜೊತೆಗೆ ಬಂದ ಕ್ರಾಂತಿಕಾರಿ ಸಾಹಿತ್ಯವು ಅವಶ್ಯವಾಗಿಯೇ ಪ್ರತಿಗಾಮಿ ಲಕ್ಷಣವನ್ನು ಹೊಂದಿದ್ದಿತು. ಅದು ಸಾರ್ವತ್ರಿಕ ವಿರಕ್ತತೆಯನ್ನೂ ಸಾಮಾಜಿಕ ಸಮಾನೀಕರಣವನ್ನೂ ಅತ್ಯಂತ ಪ್ರಾಕೃತ ರೀತಿಯಲ್ಲಿ ಪ್ರತಿಪಾದಿಸಿತು.

ಸೆಂತ್-ಸಿಮೋನ್, ಫೂರಿಯೇ, ಓವೆನ್[36] ಮತ್ತಿತರರ, ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಎಂದು ಸೂಕ್ತವಾಗಿಯೇ ಕರೆದ ವ್ಯವಸ್ಥೆಗಳು ಮೇಲೆ ವಿವರಿಸಿದಂಥ ಬೂರ್ಷ್ವಾ ಹಾಗೂ ಶ್ರಮಜೀವಿಗಳ ನಡುವಿನ ಹೋರಾಟದ ಆರಂಭಿಕ ಅನಭಿವೃದ್ಧಿಗೊಂಡ ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದವು ("ಬೂರ್ಷ್ವಾಗಳು ಹಾಗೂ ಶ್ರಮಜೀವಿಗಳು," ವಿಭಾಗ 1, ನೋಡಿ).

ಈ ವ್ಯವಸ್ಥೆಗಳ ಸಂಸ್ಥಾಪಕರು ಪ್ರಚಲಿತ ಸಮಾಜ ರೂಪದಲ್ಲಿರುವ ವರ್ಗ ವೈರುಧ್ಯತೆಗಳನ್ನೂ ವಿನಾಶಗೊಳಿಸುತ್ತಿರುವ ಶಕ್ತಿಗಳ ಕಾರ್ಯಾಚರಣೆಯನ್ನೂ ಕಾಣುತ್ತಾರೆ, ನಿಜ. ಆದರೆ ಶ್ರಮಜೀವಿ ವರ್ಗವು ಅವರ ಕಣ್ಣಿಗೆ ಯಾವುದೇ ಐತಿಹಾಸಿಕ ಉಪಕ್ರಮವಿಲ್ಲದ ಅಥವಾ ಯಾವುದೇ ಸ್ವತಂತ್ರ ರಾಜಕೀಯ ಚಳವಳಿ ಇಲ್ಲದ ವರ್ಗವೆಂದೇ ಕಂಡುಬರುತ್ತದೆ.

ವರ್ಗವೈರುಧ್ಯತೆಗಳ ಬೆಳವಣಿಗೆಯು ಕೈಗಾರಿಕೆಯ ಬೆಳವಣಿಗೆಯೊಂದಿಗೆ

ಸರಿಪೆಟ್ಟಿ ಹಾಕಿಕೊಂಡು ಹೋಗುವುದರಿಂದ. ಆರ್ಥಿಕ ಪರಿಸ್ಥಿತಿಯು ಶ್ರಮಜೀವಿ ವರ್ಗದ ವಿಮೋಚನೆಗೆ ಇನ್ನೂ ಭೌತಿಕ ಪರಿಸ್ಥಿತಿಗಳನ್ನು ಒದಗಿಸಿ ಕೊಟ್ಟಿಲ್ಲ ವೆಂದೇ ಅವರಿಗೆ ಕಂಡುಬರುತ್ತದೆ. ಆದ್ದರಿಂದ ಅವರು ಆ ಪರಿಸ್ಥಿತಿಗಳನ್ನು ಸೃಜಿಸಿಕೊಡುವ ಒಂದು ಹೊಸ ಸಾಮಾಜಿಕ ವಿಜ್ಞಾನಕ್ಕಾಗಿ, ಹೊಸ ಸಾಮಾಜಿಕ ಶಾಸನಗಳಿಗಾಗಿ ಹುಡುಕ ಹೊರಡುತ್ತಾರೆ.

ಸಾಮಾಜಿಕ ಕ್ರಿಯೆಯು, ಇವರ ಪ್ರಕಾರ, ಇವರ ವೈಯಕ್ತಿಕ ಕಲ್ಪನೆಯ ಕ್ರಿಯೆಗೆ ಶರಣಾಗಬೇಕು, ಚಾರಿತ್ರಿಕವಾಗಿ ಸೃಷ್ಟಿಗೊಂಡ ವಿಮೋಚನ ಪರಿಸ್ಥಿತಿಗಳು ಇವರ ಅತಿಕಲ್ಪನೆಯ ಪರಿಸ್ಥಿತಿಗಳಿಗೆ, ಕ್ರಮಕ್ರಮವಾಗಿ ಸಹಜಸ್ಫೂರ್ತಿಯಿಂದ ಬೆಳೆಯುವ ವರ್ಗ ಸಂಘಟನೆಯು ಈ ಆವಿಷ್ಕರಣಕಾರರು ವಿಶೇಷವಾಗಿ ಕಲ್ಪಿಸಿದ ಸಮಾಜ ಸಂಘಟನೆಗೆ ಶರಣಾಗಬೇಕು. ಇವರ ದೃಷ್ಟಿಯಲ್ಲಿ, ಇವರ ಸಾಮಾಜಿಕ ಯೋಜನೆಗಳನ್ನು ಪ್ರಚಾರ ಮಾಡಿ ಅನುಷ್ಠಾನಕ್ಕೆ ತರುವುದೇ ಭವಿಷ್ಯತ್ತಿನ ಇತಿಹಾಸದ ಎಲ್ಲ ಕಾರ್ಯಭಾರ.

ತಮ್ಮ ಯೋಜನೆಗಳನ್ನು ರೂಪಿಸುವಾಗ ಇವರು ಅತ್ಯಂತ ಕಷ್ಟವನ್ನು ಅನುಭವಿಸುತ್ತಿರುವ ಕಾರ್ಮಿಕ ವರ್ಗದ ಹಿತಗಳ ಬಗೆಗೇ ತಾವು ಪ್ರಧಾನವಾಗಿ ಕಾಳಜಿ ವಹಿಸುತ್ತಿರುವುದು ಎಂಬ ಮನವರಿಕೆಯನ್ನು ಹೊಂದಿರುತ್ತಾರೆ. ಅತ್ಯಂತ ಕಷ್ಟ ಅನುಭವಿಸುತ್ತಿರುವ ವರ್ಗ ಎಂಬ ದೃಷ್ಟಿಕೋನದಿಂದಷ್ಟೆ ಇವರು ಕಾರ್ಮಿಕ ವರ್ಗದ ಅಸ್ತಿತ್ವವನ್ನು ಮನಗಾಣುವುದು.

ವರ್ಗ ಹೋರಾಟವು ಅನಭಿವೃದ್ಧಿಗೊಂಡ ಸ್ಥಿತಿಯಲ್ಲಿರುವುದೂ ಮತ್ತು ಸುತ್ತಮುತ್ತಲ ಪರಿಸ್ಥಿತಿಗಳೂ ಈ ರೀತಿಯ ಸಮಾಜವಾದಿಗಳಿಗೆ ತಾವು ಎಲ್ಲ ವರ್ಗವೈರುಧ್ಯತೆಗಳಿಗೂ ತೀರ ಮೇಲಿರುವವರೆಂದು ಕಂಡುಕೊಳ್ಳುವಂತೆ ಮಾಡುತ್ತವೆ. ಸಮಾಜದ ಪ್ರತಿಯೊಬ್ಬ ಸದಸ್ಯನ ಪರಿಸ್ಥಿತಿಯನ್ನೂ, ಅತ್ಯಂತ ಅನುಗ್ರಹೀತ ವ್ಯಕ್ತಿಗಳ ಪರಿಸ್ಥಿತಿಯನ್ನೂ ಸಹ, ಸುಧಾರಿಸುವುದೇ ಇವರ ಹಂಬಲ. ಆದ್ದರಿಂದಲೇ ಇವರು ಸತತವಾಗಿ ವರ್ಗ ವ್ಯತ್ಯಾಸಗಳಿರದ ಇಡೀ ಸಮಾಜಕ್ಕೆ ಮನವಿ ಮಾಡಿಕೊಳ್ಳುತ್ತಾರೆ; ಇಲ್ಲ, ಆದ್ಯತೆ ನೀಡಿ, ಆಳುವ ವರ್ಗಕ್ಕೆ ಮನವಿ ಮಾಡಿಕೊಳ್ಳುತ್ತಾರೆ. ಏಕೆಂದರೆ, ಜನರು ಒಮ್ಮೆ ಇವರ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡರೆಂದರೆ, ಅದೇ ಸಾಧ್ಯವಾದಷ್ಟೂ ಹೆಚ್ಚು ಉತ್ತಮವಾದ ಸಮಾಜ ವ್ಯವಸ್ಥೆ ಹಾಗೂ ಸಾಧ್ಯವಾದಷ್ಟೂ ಹೆಚ್ಚು ಉತ್ತಮವಾದ ಯೋಜನೆ ಎಂದು ಕಾಣದೆ ಹೋಗುವುದು ಹೇಗೆ ಸಾಧ್ಯ?

ಆದ್ದರಿಂದ ಈ ರೀತಿಯ ಸಮಾಜವಾದಿಗಳು ಎಲ್ಲ ರಾಜಕೀಯ, ಅದರಲ್ಲೂ ವಿಶೇಷವಾಗಿ ಕ್ರಾಂತಿಕಾರಿ ಕಾರ್ಯಾಚರಣೆಯನ್ನೂ ತಿರಸ್ಕರಿಸುತ್ತಾರೆ, ಇವರು ತಮ್ಮ ಗುರಿಗಳನ್ನು ಶಾಂತಿಯುತ ಸಾಧನಗಳ ಮೂಲಕ ಪಡೆದುಕೊಳ್ಳಬಯಸುತ್ತಾರೆ ಮತ್ತು ಅವಶ್ಯಕವಾಗಿಯೇ ವಿಫಲಗೊಳ್ಳುವಂಥ ಸಣ್ಣಪುಟ್ಟ ಪ್ರಯೋಗ

ಗಳ ಮೂಲಕ ಮತ್ತು ದೃಷ್ಟಾಂತದ ಮೂಲಕ ಹೊಸ ಸಾಮಾಜಿಕ ಸುವಾರ್ತೆಗೆ ಹಾದಿ ಮಾಡಿಕೊಡಲು ಯತ್ನಿಸುತ್ತಾರೆ.

ಶ್ರಮಜೀವಿ ವರ್ಗವು ಇನ್ನೂ ತುಂಬ ಅನಭಿವೃದ್ಧಿಗೊಂಡ ಸ್ಥಿತಿಯಲ್ಲಿದ್ದಾಗ ಮತ್ತು ತನ್ನ ಸ್ಥಾನದ ಬಗೆಗೇ ಅದು ಭ್ರಾಮಕ ಕಲ್ಪನೆಯನ್ನಷ್ಟೆ ಹೊಂದಿದ್ದಾಗ ರಚಿಸಿದ ಇಂತಹ ಭಾವೀ ಸಮಾಜದ ಅದ್ಭುತ ಕಲ್ಪನೆಯ ಚಿತ್ರಗಳು, ಸಮಾಜದ ಸಮಗ್ರ ಪುನರ್ನಿರ್ಮಾಣಕ್ಕಾಗಿ ಈ ವರ್ಗದ ಮೊದಲ ಸಹಜಸ್ಫುರಣ ಹಂಬಲ ಗಳೇ ಆಗಿವೆ.

ಆದರೆ ಈ ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಪ್ರಕಟಣೆಗಳು ಒಂದು ವಿಮರ್ಶಾತ್ಮಕ ಅಂಶವನ್ನೂ ಒಳಗೊಂಡಿವೆ. ಇವು ಅಸ್ತಿತ್ವದಲ್ಲಿರುವ ಸಮಾಜದ ಪ್ರತಿಯೊಂದು ಸೂತ್ರವನ್ನೂ ವಿರೋಧಿಸುತ್ತವೆ. ಆದ್ದರಿಂದ ಇವು ಕಾರ್ಮಿಕ ವರ್ಗಕ್ಕೆ ಜ್ಞಾನೋದಯ ನೀಡಬಲ್ಲ ಅತ್ಯಂತ ಅಮೂಲ್ಯ ಸಾಮಗ್ರಿಗಳಿಂದ ತುಂಬಿವೆ. ಪಟ್ಟಣ ಗ್ರಾಮಗಳ ನಡುವಣ ವ್ಯತ್ಯಾಸವನ್ನು ತೊಡೆದುಹಾಕುವುದು, ಕುಟುಂಬವನ್ನು, ಖಾಸಗಿ ಲಾಭಗಳಿಕೆಗಾಗಿ ಕೈಗಾರಿಕೆಗಳನ್ನು ನಡೆಸುವುದನ್ನು ಹಾಗೂ ಕೂಲಿ ಪದ್ಧತಿಯನ್ನು ತೊಡೆದುಹಾಕುವುದು, ಸಾಮಾಜಿಕ ಸಾಮರಸ್ಯ ತೆಯ ಘೋಷಣೆ, ರಾಜ್ಯದ ಕಾರ್ಯಕಲಾಪಗಳನ್ನು ಕೇವಲ ಉತ್ಪಾದನೆಯ ಮೇಲ್ವಿಚಾರಣೆಯನ್ನಾಗಿ ಪರಿವರ್ತಿಸುವುದು, ಇವೇ ಮುಂತಾದ, ಈ ಪ್ರಕಟಣೆ ಗಳಲ್ಲಿ ಸಲಹೆ ಮಾಡಲಾಗಿರುವ ವ್ಯಾವಹಾರಿಕ ಕ್ರಮಗಳು, ಈ ಎಲ್ಲ ಸಲಹೆಗಳು, ಆ ಕಾಲದಲ್ಲಿ ಅದೇ ತಾನೆ ತಲೆ ಎತ್ತುತ್ತಿದ್ದ ವರ್ಗ ವಿರೋಧಗಳನ್ನು ನಿವಾರಿಸುವ ಅವಶ್ಯಕತೆಯನ್ನೇ ತಿಳಿಸುತ್ತವೆ. ಈ ಪ್ರಕಟಣೆಗಳಲ್ಲಿ ಅವನ್ನು ಅವುಗಳ ಅತ್ಯಂತ ಆರಂಭಿಕ ಅಸ್ಪಷ್ಟ ಹಾಗೂ ಅನಿರ್ದಿಷ್ಟ ರೂಪಗಳಲ್ಲಷ್ಟೆ ಕಾಣಲಾಗಿದೆ. ಆದ್ದರಿಂದ ಈ ಸಲಹೆಗಳು ಶುದ್ಧ ಅಸಾಧ್ಯಾದರ್ಶ ಸ್ವರೂಪದ್ದಾಗಿವೆ.

ವಿಮರ್ಶಾತ್ಮಕ - ಅಸಾಧ್ಯಾದರ್ಶ ಸಮಾಜವಾದ ಹಾಗೂ ಕಮ್ಯೂನಿಸಂನ ಮಹತ್ವವು ಚಾರಿತ್ರಿಕ ಬೆಳವಣಿಗೆಯೊಂದಿಗೆ ವಿಪರ್ಯಯವಾದ ಸಂಬಂಧ ಹೊಂದಿದೆ. ಆಧುನಿಕ ವರ್ಗ ಹೋರಾಟವು ಅಭಿವೃದ್ಧಿಗೊಂಡು ನಿರ್ದಿಷ್ಟ ರೂಪ ಪಡೆಯುವ ಪ್ರಮಾಣಕ್ಕನುಗುಣವಾಗಿ, ಹೋರಾಟದಿಂದ ಹೊರನಿಲ್ಲುವ ಈ ರೀತಿಯ ವಿಲಕ್ಷಣ ಭಾವನೆಯೂ, ಹೋರಾಟದ ಮೇಲೆ ಮಾಡುವ ಈ ವಿಲ ಕ್ಷಣ ದಾಳಿಗಳು, ತಮ್ಮ ಎಲ್ಲ ವ್ಯಾವಹಾರಿಕ ಮೌಲ್ಯವನ್ನೂ ಎಲ್ಲ ಸೈದ್ಧಾಂತಿಕ ಸಮರ್ಥನೆಯನ್ನೂ ಕಳೆದುಕೊಳ್ಳುತ್ತವೆ. ಆದ್ದರಿಂದ ಈ ವ್ಯವಸ್ಥೆಗಳ ಮೂಲ ಪುರುಷರು ಅನೇಕ ರೀತಿಯಲ್ಲಿ ಕ್ರಾಂತಿಕಾರಿಯಾಗಿದ್ದರೂ, ಅವರ ಶಿಷ್ಯರು ಪ್ರತಿ ಯೊಂದು ಪ್ರಸಂಗದಲ್ಲೂ ಕೇವಲ ಪ್ರತಿಗಾಮಿ ಗುಂಪುಗಳನ್ನಷ್ಟೆ ರೂಪಿಸಿದ್ದಾರೆ. ಅವರು ಶ್ರಮಜೀವಿಗಳ ಪುರೋಗಾಮಿ ಚಾರಿತ್ರಿಕ ಬೆಳವಣಿಗೆಯನ್ನು ಗಮನಿ

ಸದೆ ತಮ್ಮ ಗುರುಗಳ ಮೂಲ ಅಭಿಪ್ರಾಯಗಳಿಗೇ ಜೋತುಬಿದ್ದಿರುತ್ತಾರೆ. ಆದ್ದರಿಂದ ಅವರು ವರ್ಗ ಹೋರಾಟವನ್ನು ನಿಶ್ಚೇತನಗೊಳಿಸಲು ಮತ್ತು ವರ್ಗ ವಿರೋಧಗಳನ್ನು ಸರಿ ಹೊಂದಾಣಿಸಲು ಸತತವಾಗಿ ಯತ್ನಿಸುತ್ತಾರೆ. ಅವರು ಇನ್ನೂ ತಮ್ಮ ಸಾಮಾಜಿಕ ಅಸಾಧ್ಯಾದರ್ಶದ ಪದ್ಧತಿಗಳನ್ನು (Utopias) ಪ್ರಯೋಗ ರೀತಿಯಲ್ಲಿ ಆಗುಮಾಡುವ, ಪ್ರತ್ಯೇಕವಾದ "ಫಲಾನ್‌ಸ್ಟೇರ್"ಗಳನ್ನು ಸ್ಥಾಪಿಸುವ, "ಗೃಹ ವಸಾಹತು" ("Home-colonies")ಗಳನ್ನು ಸ್ಥಾಪಿಸುವ "ಪುಟ್ಟ ಇಕಾರಿಯ"* – ಹೊಸ ಜೆರುಸಲೆಮ್‌ನ ಪುಟ್ಟ ಆವೃತ್ತಿಯನ್ನು – ಸ್ಥಾಪಿಸುವ ಕನಸು ಕಾಣುತ್ತಾರೆ. ಈ ಎಲ್ಲ ಗಾಳಿಗೋಪುರಗಳನ್ನು ಕೃತಿಗಿಳಿಸಲು ಅವರು ಬೂರ್ಷ್ವಾಗಳಿಗೇ ಸಹಾನುಭೂತಿಗಾಗಿ, ಹಣಕಾಸಿಗಾಗಿ ಮನವಿ ಮಾಡಿಕೊಳ್ಳುವ ಒತ್ತಾಯಕ್ಕೊಳಗಾಗುತ್ತಾರೆ. ಸ್ವಲ್ಪಸ್ವಲ್ಪವಾಗಿ ಅವರು ಮೇಲೆ ವಿವರಿಸಿರುವ ಪ್ರತಿಗಾಮಿ ಸಂಪ್ರದಾಯಶರಣ ಸಮಾಜವಾದಿಗಳ ಗುಂಪಿಗೆ ಕುಸಿಯುತ್ತಾರೆ. ಹೆಚ್ಚು ವ್ಯವಸ್ಥಾಬದ್ಧವಾದ ಶುಷ್ಕಪಾಂಡಿತ್ಯ, ತಮ್ಮ ಸಾಮಾಜಿಕ ವಿಜ್ಞಾನವು ತರಬಹುದಾದಂಥ ಅದ್ಭುತ ಪರಿಣಾಮಗಳಲ್ಲಿ ಅಂಧ ಶ್ರದ್ಧೆ ಮತ್ತು ಮೂಢನಂಬಿಕೆ – ಇವೇ ಇವರಿಗೂ ಅವರಿಗೂ ಇರುವ ವ್ಯತ್ಯಾಸ.

ಆದ್ದರಿಂದ ಇವರು ಕಾರ್ಮಿಕ ವರ್ಗದ ಎಲ್ಲ ರಾಜಕೀಯ ಕಾರ್ಯಾಚರಣೆಯನ್ನೂ ಉಗ್ರವಾಗಿ ವಿರೋಧಿಸುತ್ತಾರೆ; ಅಂಥ ಕಾರ್ಯಾಚರಣೆಯು, ಇವರ ಪ್ರಕಾರ, ಹೊಸ ಸುವಾರ್ತೆಯನ್ನು ಕುರುಡಾಗಿ ನಂಬದೆ ಹೋಗುವುದರಿಂದಷ್ಟೆ ಉಂಟಾಗಲು ಸಾಧ್ಯ.

ಇಂಗ್ಲೆಂಡಿನ ಓವೆನ್‌ವಾದಿಗಳೂ, ಫ್ರಾನ್ಸಿನ ಫೂರಿಯೇವಾದಿಗಳೂ ಅನುಕ್ರಮವಾಗಿ ಚಾರ್ಟಿಸ್ಟರನ್ನೂ[37] ರಿಫಾರ್ಮಿಸ್ಟರನ್ನೂ[38] ವಿರೋಧಿಸುತ್ತಾರೆ.

---

*ಫಲಾನ್‌ಸ್ಟೇರ್‌ಗಳು ಚಾರ್ಲ್ಸ್ ಫೂರಿಯೇರ ಯೋಜನೆಯ ಸಮಾಜವಾದಿ ವಸಾಹತುಗಳು; ಇಕಾರಿಯ ಎಂಬುದು ಕಾಬೇ ತನ್ನ ಅಸಾಧ್ಯಾದರ್ಶ ಪದ್ಧತಿಗೆ, ಅನಂತರ ತನ್ನ ಅಮೆರಿಕನ್ ಕಮ್ಯೂನಿಸ್ಟ್ ಕಾಲೊನಿಗೆ ನೀಡಿದ ಹೆಸರು. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

"ಗೃಹ ವಸಾಹತುಗಳು" ("Home-colonies") ಓವೆನ್‌ರು ಸೃಜಿಸಿದ ಕಮ್ಯೂನಿಸ್ಟ್ ಮಾದರಿ ಸಮಾಜಗಳು. ಫಲಾನ್‌ಸ್ಟೇರ್‌ಗಳು ಎಂಬುದು ಫೂರಿಯೇರವರು ಯೋಜಿಸಿದ ಸಾರ್ವಜನಿಕ ಪ್ರಾಸಾದಗಳಿಗೆ ನೀಡಿದ ಹೆಸರು. ಇಕಾರಿಯ ಎಂಬುದು ಅಸಾಧ್ಯಾದರ್ಶದ ಭ್ರಾಮಕ ರಾಜ್ಯಕ್ಕೆ ಕಾಬೇ ನೀಡಿದ ಹೆಸರು. ಆ ರಾಜ್ಯದ ಕಮ್ಯೂನಿಸ್ಟ್ ಸಂಸ್ಥೆಗಳನ್ನು ಕಾಬೇ ಚಿತ್ರಿಸಿದರು. (1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

# IV

# ಅಸ್ತಿತ್ವದಲ್ಲಿರುವ ನಾನಾ ವಿರೋಧ ಪಕ್ಷಗಳಿಗೆ ಸಂಬಂಧಿಸಿ ಕಮ್ಯೂನಿಸ್ಟರ ನಿಲುವು

ಇಂಗ್ಲೆಂಡಿನ ಚಾರ್ಟಿಸ್ಟ್ಸ್ ಹಾಗೂ ಅಮೆರಿಕದ ಭೂ ಸುಧಾರಕರಂಥ ಅಸ್ತಿತ್ವದಲ್ಲಿರುವ ಕಾರ್ಮಿಕ ವರ್ಗ ಪಕ್ಷಗಳೊಡನೆ ಕಮ್ಯೂನಿಸ್ಟರ ಸಂಬಂಧಗಳನ್ನು ಈ ಪ್ರಣಾಳಿಕೆಯ ದ್ವಿತೀಯ ಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ.

ಕಮ್ಯೂನಿಸ್ಟರು ತಕ್ಷಣದ ಗುರಿಗಳ ಹಾಗೂ ಕಾರ್ಮಿಕ ವರ್ಗದ ಹಿತಗಳ ಈಡೇರುವಿಕೆಗಾಗಿ ಹೋರಾಡುತ್ತಾರೆ; ಆದರೂ ವರ್ತಮಾನ ಕಾಲದ ಈ ಚಳವಳಿಯಲ್ಲಿ ಅವರು ಚಳವಳಿಯ ಭವಿಷ್ಯತ್ತನ್ನೂ ಪ್ರತಿನಿಧಿಸುತ್ತಾರೆ ಮತ್ತು ಅದರ ಬಗೆಗೆ ಕಾಳಜಿ ವಹಿಸುತ್ತಾರೆ. ಫ್ರಾನ್ಸಿನಲ್ಲಿ ಕಮ್ಯೂನಿಸ್ಟರು ಸೋಷಲ್ ಡೆಮೊಕ್ರಾಟರೊಡನೆ* ಜೊತೆಕೂಡುತ್ತಾರೆ; ಸಂಪ್ರದಾಯಶರಣ ಹಾಗೂ ಉಗ್ರವಾದಿ ಬೂರ್ಷ್ವಾಸೀಯನ್ನು ವಿರೋಧಿಸುತ್ತಾರೆ. ಆದರೂ ಮಹಾ ಕ್ರಾಂತಿಯಿಂದ

---

*ಆಗ ಪಾರ್ಲಿಮೆಂಟಿನಲ್ಲಿ ಲೆದ್ರೂ-ರೊಲೆನ್‌ರಿಂದಲೂ, ಸಾಹಿತ್ಯದಲ್ಲಿ ಲುಯಿ ಬ್ಲಾಂಕ್[39]ರಿಂದಲೂ ದಿನಪತ್ರಿಕೆಗಳಲ್ಲಿ "ರಿಫೋರ್ಮ್"ಂದಲೂ ಪ್ರತಿನಿಧಿತವಾಗಿದ್ದ ಪಕ್ಷ. ಸೋಷಲ್ ಡೆಮೊಕ್ರಸಿ ಎಂಬ ಹೆಸರು, ಅದರ ಆವಿಷ್ಕರಣಕಾರರ ಪ್ರಕಾರ, ಹೆಚ್ಚು ಕಮ್ಮಿ ಸಮಾಜವಾದದ ಛಾಯೆಯುಳ್ಳ ಡೆಮೊಕ್ರಾಟಿಕ್ ಅಥವಾ ರಿಪಬ್ಲಿಕನ್ ಪಕ್ಷದ ಒಂದು ವಿಭಾಗವನ್ನು ಸೂಚಿಸುತ್ತಿದ್ದಿತು. (1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಫ್ರಾನ್ಸಿನಲ್ಲಿ ಸೋಷಲ್ ಡೆಮೊಕ್ರಾಟಿಕ್ ಎಂದು ಕರೆದುಕೊಳ್ಳುತ್ತಿದ್ದ ಪಾರ್ಟಿಯು ರಾಜಕೀಯ ಜೀವನದಲ್ಲಿ ಲೆದ್ರೂ-ರೊಲೆನ್‌ರಿಂದಲೂ ಸಾಹಿತ್ಯದಲ್ಲಿ ಲುಯಿ ಬ್ಲಾಂಕ್‌ರಿಂದಲೂ ಪ್ರತಿನಿಧಿಸಲ್ಪಟ್ಟಿದ್ದಿತು. ಹೀಗೆ ಅದು ಇಂದಿನ ಜರ್ಮನ್ ಸೋಷಲ್ ಡೆಮೊಕ್ರಸಿಯಿಂದ ತೀರ ಭಿನ್ನವಾಗಿದ್ದಿತು. (1890ರ ಜರ್ಮನ್ ಆವೃತ್ತಿಗೆ ಎಂಗೆಲ್ಸ್‌ರ ಟಿಪ್ಪಣಿ.)

ಪರಂಪರೆಯಾಗಿ ಬಂದ ನುಡಿಗಟ್ಟುಗಳ ಹಾಗೂ ಭ್ರಾಂತಕಲ್ಪನೆಗಳ ಬಗೆಗೆ ಅವರು ವಿಮರ್ಶಾತ್ಮಕ ನಿಲುವು ತಳೆಯುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಸ್ವಿಟ್ಸರ್ಲೆಂಡಿನಲ್ಲಿ ಅವರು ರ್‍ಯಾಡಿಕಲ್ಸ್‌ರಿಗೆ ಬೆಂಬಲ ನೀಡುತ್ತಾರೆ. ಆದರೆ ಈ ಪಕ್ಷದಲ್ಲಿ ವಿರೋಧಾತ್ಮಕ ಶಕ್ತಿಗಳಿವೆ, ಅವು ಭಾಗಶಃ ಫ್ರೆಂಚ್ ಅರ್ಥದಲ್ಲಿ ಡೆಮೊಕ್ರಾಟಿಕ್ ಸೋಷಲಿಸ್ಟರಿಂದಲೂ, ಭಾಗಶಃ ಉಗ್ರವಾದಿ ಬೂರ್ಷ್ವಾಗಳಿಂದಲೂ ಕೂಡಿವೆ ಎಂಬ ವಾಸ್ತವಾಂಶವನ್ನು ಅವರು ಕಾಣದೆ ಹೋಗುವುದಿಲ್ಲ.

ಪೋಲೆಂಡಿನಲ್ಲಿ ಕಮ್ಯೂನಿಸ್ಟರು ರಾಷ್ಟ್ರೀಯ ವಿಮೋಚನೆಗೆ ಭೂಕ್ರಾಂತಿಯೇ ಪ್ರಧಾನ ಉಪಾಧಿ ಎಂದು ಒತ್ತಿ ಹೇಳುವ ಪಾರ್ಟಿಗೆ, 1846ರಲ್ಲಿ ಕ್ರಾಕೊವ್ ಬಂಡಾಯ[40] ಎಬ್ಬಿಸಿದ ಪಾರ್ಟಿಗೆ ಬೆಂಬಲ ನೀಡುತ್ತಾರೆ.

ಜರ್ಮನಿಯಲ್ಲಿ ಅವರು, ಬೂರ್ಷ್ವಾಸೀಯು ಯಾವಾಗ ನಿರಂಕುಶ ರಾಜಪ್ರಭುತ್ವ, ಸಾಮಂತಶಾಹಿ ಜಮೀನುದಾರಿ ಹಾಗೂ ಪುಟ್ಟ ಬೂರ್ಷ್ವಾಸೀ* ಇವುಗಳ ವಿರುದ್ಧ ಕ್ರಾಂತಿಕಾರಿ ರೀತಿಯಲ್ಲಿ ವರ್ತಿಸುತ್ತದೋ ಆವಾಗಲೆಲ್ಲ, ಅದರೊಂದಿಗೆ ಕೂಡಿಕೊಂಡು ಹೋರಾಡುತ್ತಾರೆ.

ಆದರೆ ಅವರು ಬೂರ್ಷ್ವಾಸೀ ಮತ್ತು ಶ್ರಮಜೀವಿಗಳ ನಡುವೆ ಕಡು ವೈರವಿದೆ ಎಂಬುದನ್ನು ಕಾರ್ಮಿಕ ವರ್ಗಕ್ಕೆ ಸಾಧ್ಯವಾದಷ್ಟೂ ಹೆಚ್ಚು ಸ್ಪಷ್ಟವಾಗಿ ಮನಗಾಣಿಸುವುದನ್ನು ಒಂದು ಘಳಿಗೆಯೂ ನಿಲ್ಲಿಸುವುದಿಲ್ಲ. ಬೂರ್ಷ್ವಾಸೀಯು ತನ್ನ ಮೇಲಧಿಕಾರವನ್ನು ಸ್ಥಾಪಿಸಿಕೊಳ್ಳುವಾಗ ಅವಶ್ಯವಾಗಿಯೇ ಜಾರಿಗೆ ತರುವ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಗಳನ್ನು ಜರ್ಮನ್ ಕಾರ್ಮಿಕರು ಬೂರ್ಷ್ವಾಸೀಯ ವಿರುದ್ಧವೇ ಅಸ್ತ್ರಗಳನ್ನಾಗಿ ನೇರವಾಗಿ ಬಳಸುವಂತೆ ಮಾಡಲು ಕಮ್ಯೂನಿಸ್ಟರು ಯತ್ನಿಸುತ್ತಾರೆ. ಜರ್ಮನಿಯಲ್ಲಿ ಪ್ರತಿಗಾಮಿ ವರ್ಗಗಳ ಪತನವಾದ ನಂತರ ಬೂರ್ಷ್ವಾಸೀಯ ವಿರುದ್ಧವೇ ಹೋರಾಟವು ತಕ್ಷಣವೇ ಪ್ರಾರಂಭವಾಗುವಂತೆ ಮಾಡಲು ಯತ್ನಿಸುತ್ತಾರೆ.

ಕಮ್ಯೂನಿಸ್ಟರು ತಮ್ಮ ಗಮನವನ್ನು ಮುಖ್ಯವಾಗಿ ಜರ್ಮನಿಯತ್ತ ಹರಿಸುತ್ತಾರೆ, ಯಾಕೆಂದರೆ, ಆ ದೇಶವು ಬೂರ್ಷ್ವಾ ಕ್ರಾಂತಿಯ ಹೊಸ್ತಿಲಲ್ಲಿದೆ ಎಂಬುದರಿಂದಾಗಿ; ಯೂರೋಪಿಯನ್ ನಾಗರೀಕತೆಯು ಹೆಚ್ಚು ಮುಂದುವರೆದ ಪರಿಸ್ಥಿತಿಗಳಲ್ಲಿ ಅಲ್ಲಿ ಈ ಕ್ರಾಂತಿಯನ್ನು ನೆರವೇರಿಸುವುದು ಖಂಡಿತ ಎಂಬುದರಿಂದಾಗಿ; ಅಲ್ಲದೆ ಅಲ್ಲಿ 17ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿದ್ದುದಕ್ಕಿಂತ,

---

*ಜರ್ಮನ್ ಮೂಲದಲ್ಲಿ Kleinbürgerei ("ಕ್ಲೈನ್ ಬುರ್ಗೆರೈ"). ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಈ ಪದವನ್ನು ನಗರಗಳ ಪುಟ್ಟ ಬೂರ್ಷ್ವಾಸೀಯಲ್ಲಿದ್ದ ಪ್ರತಿಗಾಮಿ ವಿಭಾಗಗಳನ್ನು ಸೂಚಿಸಲು ಬಳಸಿದರು. – ಸಂ.

ಫ್ರಾನ್ಸಿನಲ್ಲಿ 18ನೆಯ ಶತಮಾನದಲ್ಲಿದ್ದುದಕ್ಕಿಂತ ಹೆಚ್ಚು ಪ್ರಬುದ್ಧವಾದ ಶ್ರಮ ಜೀವಿ ವರ್ಗವಿದೆ, ಎಂಬುದರಿಂದಾಗಿ; ಜರ್ಮನಿಯಲ್ಲಿ ಬೂರ್ಷ್ವಾ ಕ್ರಾಂತಿಯು ತದನಂತರ ತಕ್ಷಣವೇ ಹಿಂಬಾಲಿಸಿಕೊಂಡು ಬರುವ ಶ್ರಮಜೀವಿ ವರ್ಗ ಕ್ರಾಂತಿಗೆ ಪೂರ್ವಪೀಠಿಕೆಯಾಗುವುದು, ಎಂಬುದರಿಂದಾಗಿ.

ಒಂದು ಮಾತಿನಲ್ಲಿ, ಕಮ್ಯೂನಿಸ್ಟರು ಎಲ್ಲೆಲ್ಲೂ ಅಸ್ತಿತ್ವದಲ್ಲಿರುವ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯ ವಿರುದ್ಧ ಪ್ರತಿಯೊಂದು ಕ್ರಾಂತಿಕಾರಿ ಚಳವಳಿಗೂ ಬೆಂಬಲ ನೀಡುತ್ತಾರೆ.

ಈ ಎಲ್ಲ ಚಳವಳಿಗಳಲ್ಲೂ ಅವರು ಆಸ್ತಿಯ ಸಮಸ್ಯೆಯನ್ನು ಒಂದೊಂದರಲ್ಲೂ ಪ್ರಮುಖ ಪ್ರಶ್ನೆಯನ್ನಾಗಿ ಮುಂದೆ ತರುತ್ತಾರೆ – ಆ ಕಾಲದಲ್ಲಿ ಅದರ ಬೆಳವಣಿಗೆಯ ಪ್ರಮಾಣವು ಯಾವ ಮಟ್ಟದಲ್ಲಿದ್ದರೂ ಸರಿಯೆ.

ಕೊನೆಯದಾಗಿ ಅವರು ಎಲ್ಲೆಲ್ಲೂ ಎಲ್ಲ ದೇಶಗಳ ಪ್ರಜಾಸತ್ತಾತ್ಮಕ ಪಕ್ಷಗಳ ಒಕ್ಕೂಟಕ್ಕಾಗಿ ಹಾಗೂ ಒಮ್ಮತಕ್ಕಾಗಿ ಶ್ರಮಿಸುತ್ತಾರೆ.

ಕಮ್ಯೂನಿಸ್ಟರು ತಮ್ಮ ಅಭಿಪ್ರಾಯಗಳನ್ನೂ ಗುರಿಗಳನ್ನೂ ಮುಚ್ಚಿಡುವುದನ್ನು ತಿರಸ್ಕರಿಸುತ್ತಾರೆ. ಅಸ್ತಿತ್ವದಲ್ಲಿರುವ ಎಲ್ಲ ಸಾಮಾಜಿಕ ಪರಿಸ್ಥಿತಿಗಳನ್ನು ಬಲಪ್ರಯೋಗದಿಂದ ಉರುಳಿಸುವ ಮೂಲಕವಷ್ಟೆ ತಮ್ಮ ಗುರಿಗಳನ್ನು ಸಾಧಿಸಿಕೊಳ್ಳಲು ಸಾಧ್ಯ ಎಂದು ಅವರು ಬಹಿರಂಗವಾಗಿಯೇ ಘೋಷಿಸುತ್ತಾರೆ. ಕಮ್ಯೂನಿಸ್ಟ್ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ. ಶ್ರಮಜೀವಿಗಳು ತಮ್ಮ ದಾಸ್ಯಶೃಂಖಲೆಗಳನ್ನಲ್ಲದೆ ಬೇರೇನನ್ನೂ ಕಳೆದುಕೊಳ್ಳುವುದಿಲ್ಲ. ಆದರೆ ಗಳಿಸಲು ಅವರ ಮುಂದೆ ಒಂದು ಜಗತ್ತೇ ಇದೆ.

## ಎಲ್ಲ ದೇಶಗಳ ಶ್ರಮಜೀವಿಗಳೇ, ಒಂದಾಗಿರಿ !

ಅನುಬಂಧ

# ಫ್ರೆಡರಿಕ್ ಎಂಗೆಲ್ಸ್

# ಕಮ್ಯೂನಿಸಂನ ಮೂಲತತ್ವಗಳು[41]

ಪ್ರಶ್ನೆ 1: ಕಮ್ಯೂನಿಸಂ ಎಂದರೇನು?

ಉತ್ತರ: ಕಮ್ಯೂನಿಸಂ ಎಂಬುದು ಶ್ರಮಜೀವಿಗಳ ವಿಮೋಚನೆಗೆ ಅಗತ್ಯವಾದ ಪರಿಸ್ಥಿತಿಗಳನ್ನು ವಿವರಿಸುವ ಒಂದು ಸಿದ್ಧಾಂತ.

ಪ್ರಶ್ನೆ 2: ಶ್ರಮಜೀವಿಗಳು ಎಂದರೆ ಯಾರು?

ಉತ್ತರ: ಶ್ರಮಜೀವಿಗಳು ಸಮಾಜದ ಒಂದು ವರ್ಗ. ಅವರು ತಮ್ಮ ಜೀವನೋಪಾಯವನ್ನು ಕೇವಲ ತಮ್ಮ ಶ್ರಮವನ್ನು ಮಾರುವುದರಿಂದಷ್ಟೆ ಪಡೆದುಕೊಳ್ಳುತ್ತಾರೆ, ಯಾವುದೋ ಬಂಡವಾಳದಿಂದ ದೊರೆತ ಲಾಭದಿಂದಲ್ಲ. ಅವರ ಕಷ್ಟ-ಸುಖ, ಅವರ ಜೀವನ-ಮರಣ, ಅವರ ಬಾಳು-ಬದುಕು ಎಲ್ಲ ಅವರ ಶ್ರಮಕ್ಕೆ ಎಷ್ಟು ಕೇಳಿಕೆ ಇದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಈ ಕೇಳಿಕೆ ವ್ಯಾಪಾರ ಚೆನ್ನಾಗಿರುವ ಹಾಗೂ ಚೆನ್ನಾಗಿಲ್ಲದ ಕಾಲಗಳಿಗೆ ತಕ್ಕಂತೆ ಬದಲಾಗುತ್ತಿರುತ್ತದೆ, ಹಿಡಿತಡೆ ಇಲ್ಲದ ಪೈಪೋಟಿಯಿಂದ ಉಂಟಾಗುವ ಏರುಪೇರುಗಳಿಗೆ ತಕ್ಕಂತೆ ಬದಲಾಗುತ್ತಿರುತ್ತದೆ. ಶ್ರಮಜೀವಿಗಳು, ಅಥವಾ ಶ್ರಮಜೀವಿಗಳ ವರ್ಗ, ಒಂದು ಮಾತಿನಲ್ಲಿ, ಹತ್ತೊಂಬತ್ತನೆಯ ಶತಮಾನದ ಶ್ರಾಮಿಕ ವರ್ಗವಾಗಿದೆ.

ಪ್ರಶ್ನೆ 3: ಅಂದರೆ ಶ್ರಮಜೀವಿಗಳು ಯಾವತ್ತೂ ಇದ್ದವರಲ್ಲವೇ?

ಉತ್ತರ: ಇಲ್ಲ. ಬಡ ಜನರೂ ಶ್ರಾಮಿಕ ವರ್ಗಗಳೂ ಯಾವತ್ತೂ ಇದ್ದುಕೊಂಡು ಬಂದಿವೆ ಎಂಬುದು ನಿಜ. ಅಲ್ಲದೆ ಶ್ರಾಮಿಕ ವರ್ಗಗಳವರು ಬಹುಮಟ್ಟಿಗೆ ಬಡವರೇ ಆಗಿದ್ದುಕೊಂಡುಬಂದಿದ್ದಾರೆ. ಆದರೆ ಮೇಲೆ ತಿಳಿಸಿರುವ ಪರಿಸ್ಥಿತಿಗಳಲ್ಲಿ ಬಾಳುವ ಅಂಥ ಬಡ ಜನರು ಅಂಥ ಕಾರ್ಮಿಕರು, ಅಂದರೆ ಶ್ರಮಜೀವಿಗಳು, ಯಾವತ್ತೂ ಇದ್ದುಕೊಂಡುಬಂದವರಲ್ಲ – ಪೈಪೋಟಿಯೂ ಯಾವತ್ತೂ ಮುಕ್ತವಾಗಿ ಮಿತಿ ಇಲ್ಲದೆ ಇರದಿದ್ದಂತೆಯೇ.

ಪ್ರಶ್ನೆ 4: ಶ್ರಮಜೀವಿ ವರ್ಗ ಹುಟ್ಟಿದುದು ಹೇಗೆ?

ಉತ್ತರ: ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ ಇಂಗ್ಲೆಂಡಿನಲ್ಲಿ ಉಂಟಾದ ಮತ್ತು ಅಂದಿನಿಂದ ಜಗತ್ತಿನ ಎಲ್ಲ ನಾಗರಿಕ ದೇಶಗಳಲ್ಲೂ ಪುನರಾವೃತ್ತಿಯಾದ ಕೈಗಾರಿಕಾ ಕ್ರಾಂತಿಯ ಫಲವಾಗಿ ಶ್ರಮಜೀವಿ ವರ್ಗ ಉದ್ಭವಿಸಿತು. ಉಗಿ ಎಂಜಿನ್ನಿನ ಆವಿಷ್ಕರಣೆ, ನಾನಾ ರೀತಿಯ ನೂಲುವ ಯಂತ್ರಗಳು, ಯಾಂತ್ರಿಕ ಮಗ್ಗಗಳು ಮತ್ತು ಅಧಿಕ ಸಂಖ್ಯೆಯಲ್ಲಿ ಇತರ ಯಾಂತ್ರಿಕ ಸಾಧನಗಳು ಇವುಗಳ ಆವಿಷ್ಕರಣೆ ಕೈಗಾರಿಕಾ ಕ್ರಾಂತಿಯನ್ನು ಉಂಟುಮಾಡಿದವು. ಅತ್ಯಂತ ದುಬಾರಿಯಾದ, ತತ್ಫಲವಾಗಿ ಭಾರಿ ಬಂಡವಾಳಗಾರರಷ್ಟೆ ಕೊಳ್ಳಲು ಸಾಧ್ಯವಿದ್ದ ಈ ಯಂತ್ರಗಳು ಅದುವರೆವಿಗೂ ಅಸ್ತಿತ್ವದಲ್ಲಿದ್ದ ಇಡೀ ಉತ್ಪಾದನಾ ವಿಧಾನವನ್ನು ಬದಲಿಸಿದವು ಮತ್ತು ಅದುವರೆವಿಗೂ ಇದ್ದ ಕಾರ್ಮಿಕರನ್ನು ಹೊರಗಟ್ಟಿದವು. ಏಕೆಂದರೆ ಯಂತ್ರಗಳು ಕಾರ್ಮಿಕರಿಗಿಂತ ಹೆಚ್ಚು ಅಗ್ಗವಾದ ಹಾಗೂ ಉತ್ತಮವಾದ ಸರಕುಗಳನ್ನು ಉತ್ಪಾದಿಸಿದವು. ಈ ಯಂತ್ರಗಳು ಇಡೀ ಕೈಗಾರಿಕೆಯನ್ನು ಭಾರಿ ಬಂಡವಾಳಗಾರರಿಗೆ ವಹಿಸಿಕೊಟ್ಟವು ಮತ್ತು ಕಾರ್ಮಿಕರ ಅಲ್ಪಸ್ವಲ್ಪ ಆಸ್ತಿಯನ್ನು (ಉಪಕರಣಗಳು, ಕೈಮಗ್ಗಗಳು; ಇತ್ಯಾದಿ) ನಿಷ್ಪ್ರಯೋಜಕವನ್ನಾಗಿ ಮಾಡಿದವು. ಹಾಗಾಗಿ ಬಂಡವಾಳಗಾರರು ಬೇಗನೇ ಎಲ್ಲಕ್ಕೂ ತಾವೇ ಒಡೆಯರಾದರು, ಕಾರ್ಮಿಕರಿಗೆ ಏನೂ ಉಳಿಯಲಿಲ್ಲ. ಈ ರೀತಿ ಅರಿವೆ ಉತ್ಪಾದನೆಯ ಕ್ಷೇತ್ರದಲ್ಲಿ ಕಾರ್ಖಾನೆ ಪದ್ಧತಿಯನ್ನು ಜಾರಿಗೆ ತರಲಾಯಿತು. ಯಂತ್ರಗಳನ್ನೂ ಕಾರ್ಖಾನೆ ಪದ್ಧತಿಯನ್ನೂ ಜಾರಿಗೆ ತರುವುದಕ್ಕೆ ಹೀಗೆ ಒಮ್ಮೆ ಉತ್ತೇಜನ ದೊರೆತ ಕೂಡಲೇ, ಈ ಕಾರ್ಖಾನೆ ಪದ್ಧತಿಯು ಕೈಗಾರಿಕೆಯ ಇತರೆಲ್ಲ ಶಾಖೆಗಳಿಗೂ, ಅದರಲ್ಲೂ ಗಮನಾರ್ಹವಾಗಿ ಅರಿವೆ ತಯಾರಿಕೆ, ಪುಸ್ತಕ ಮುದ್ರಣ, ಕುಂಬಾರ ಸಾಮಾನು ತಯಾರಿಕೆ ಹಾಗೂ ಕಬ್ಬಿಣ ಸಾಮಾನು ತಯಾರಿಕೆ ಶಾಖೆಗಳಿಗೆ, ಶೀಘ್ರವಾಗಿ ವ್ಯಾಪಿಸಿತು. ಶ್ರಮವನ್ನು ಹೆಚ್ಚುಹೆಚ್ಚಾಗಿ ಅನೇಕ ಕಾರ್ಮಿಕರ ಮಧ್ಯೆ ವಿಭಜಿಸಲಾಯಿತು. ಹಾಗಾಗಿ ಹಿಂದೆ ಕಾರ್ಮಿಕನೊಬ್ಬ ಇಡೀ ವಸ್ತುವನ್ನು ಉತ್ಪಾದಿಸುತ್ತಿದ್ದಲ್ಲಿ ಈಗ ಅದರ ಒಂದು ಭಾಗವನ್ನಷ್ಟೆ ತಯಾರಿಸುವಂತಾಯಿತು. ಈ ಶ್ರಮ ವಿಭಜನೆಯು ವಸ್ತುಗಳನ್ನು ಹೆಚ್ಚು ಶೀಘ್ರವಾಗಿಯೂ ಆದ್ದರಿಂದ ಹೆಚ್ಚು ಅಗ್ಗವಾಗಿಯೂ ಸರಬರಾಜು ಮಾಡಲು ಸಾಧ್ಯಮಾಡಿಕೊಟ್ಟಿತು. ಅದು ಪ್ರತಿ ಕಾರ್ಮಿಕನ ಶ್ರಮವನ್ನೂ ತುಂಬ ಸರಳವಾದ, ಸತತವಾಗಿ ಪುನರಾವೃತ್ತಿಗೊಳ್ಳುವ ಯಾಂತ್ರಿಕ ಕಾರ್ಯಾಚರಣೆಯ ಮಟ್ಟಕ್ಕಿಳಿಸಿತು. ಅಂಥ ಕಾರ್ಯವನ್ನು ಯಂತ್ರವೊಂದು ಅಷ್ಟೇ ಚೆನ್ನಾಗಿ ಅಷ್ಟೆ ಅಲ್ಲ ಇನ್ನೂ ತುಂಬ ಮಟ್ಟಿಗೆ ಉತ್ತಮವಾಗಿ ಮಾಡಬಲ್ಲುದಿದ್ದಿತು. ಈ ರೀತಿ ಒಂದಾದ ಮೇಲೊಂದರಂತೆ ಈ ಎಲ್ಲ ಕೈಗಾರಿಕಾ ಶಾಖೆಗಳೂ ನೂಲು ಹಾಗೂ ನೇಯ್ಗೆ ಕೈಗಾರಿಕೆಗಳಂತೆಯೇ ಉಗಿ ಶಕ್ತಿ, ಯಂತ್ರೋ

ಪಕರಣಗಳು ಹಾಗೂ ಕಾರ್ಖಾನೆ ಪದ್ಧತಿ ಇವುಗಳ ಆಧಿಪತ್ಯಕ್ಕೊಳಗಾದವು. ತನ್ಮೂಲಕ ಅವೆಲ್ಲವೂ ಭಾರಿ ಬಂಡವಾಳಗಾರರ ವಶಕ್ಕೊಳಗಾದವು. ಮತ್ತೆ ಇಲ್ಲೂ ಕಾರ್ಮಿಕರು ತಮ್ಮ ಸ್ವಾತಂತ್ರ್ಯದ ಕೊನೆಯ ತಂತುವನ್ನೂ ಕಳೆದು ಕೊಂಡರು. ಕ್ರಮೇಣ, ಈ ಪ್ರತ್ಯಕ್ಷ ಕೈಗೆಲಸದ ಕಾರ್ಖಾನೆ (manufactory)ಗಳ ಜೊತೆಗೆ ಕೈಕಸಬುಗಳೂ ಅದೇ ರೀತಿ ಹೆಚ್ಚುಹೆಚ್ಚಾಗಿ ಕಾರ್ಖಾನೆ ಪದ್ಧತಿಯ ಆಧಿಪತ್ಯಕ್ಕೊಳಗಾದವು; ಏಕೆಂದರೆ, ಇಲ್ಲೂ ಸಹ ಭಾರಿ ಬಂಡವಾಳಗಾರರು ದೊಡ್ಡ ಕರ್ಮಶಾಲೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ತಯಾರಿಕೆಗಾರರನ್ನು ಹೆಚ್ಚುಹೆಚ್ಚಾಗಿ ಪಕ್ಕಕ್ಕೆ ತಳ್ಳಿದರು. ಆ ಕರ್ಮಶಾಲೆಗಳಲ್ಲಿ ಖರ್ಚೂ ಕಮ್ಮಿ ಯಾಗಿದ್ದಿತು ಮತ್ತು ಶ್ರಮವನ್ನೂ ಕೂಲಂಕಷವಾಗಿ ಕಾರ್ಮಿಕರ ಮಧ್ಯೆ ಹಂಚ ಬಹುದಿದ್ದಿತು. ಈ ರೀತಿ ಎಲ್ಲ ನಾಗರಿಕ ದೇಶಗಳಲ್ಲೂ ಬಹುಮಟ್ಟಿಗೆ ಎಲ್ಲ ಶ್ರಮ ಶಾಖೆಗಳನ್ನೂ ಕಾರ್ಖಾನೆ ಪದ್ಧತಿಯಲ್ಲಿ ನಡೆಸುವಂತಾಗಿದೆ ಮತ್ತು ಬಹು ಮಟ್ಟಿಗೆ ಈ ಎಲ್ಲ ಶಾಖೆಗಳಲ್ಲೂ ಕೈಕಸಬು ಹಾಗೂ ಕೈಗೆಲಸದ ಕಾರ್ಖಾನೆ ವಿಧಾ ನಗಳನ್ನು ಬೃಹತ್ ಪ್ರಮಾಣದ ಕೈಗಾರಿಕೆಯು ತಳ್ಳಿಹಾಕಿದೆ. ತತ್ಫಲವಾಗಿ ಹಿಂದಿನ ಮಧ್ಯಮ ವರ್ಗಗಳು, ಅದರಲ್ಲೂ ವಿಶೇಷವಾಗಿ ಸಣ್ಣಪುಟ್ಟ ಕೈಕಸ ಬುದಾರರು, ಹೆಚ್ಚುಹೆಚ್ಚಾಗಿ ನಾಶಗೊಳ್ಳುವಂತಾಗಿದ್ದಾರೆ, ಕಾರ್ಮಿಕರ ಹಿಂದಿನ ಸ್ಥಿತಿಗತಿಗಳೂ ಸಂಪೂರ್ಣವಾಗಿ ಬದಲಿವೆ, ಕ್ರಮಕ್ರಮವಾಗಿ ಇತರೆಲ್ಲ ವರ್ಗಗಳನ್ನೂ ತಮ್ಮಲ್ಲೇ ಲೀನವಾಗಿಸಿಕೊಳ್ಳುತ್ತಿರುವ ಎರಡು ಹೊಸ ವರ್ಗಗಳು ಅಸ್ತಿತ್ವಕ್ಕೆ ಬಂದಿವೆ. ಅವು –

1. ಭಾರಿ ಬಂಡವಾಳಗಾರರ ವರ್ಗ. ಈ ವರ್ಗದವರು ಎಲ್ಲ ನಾಗರಿಕ ದೇಶ ಗಳಲ್ಲೂ ಈಗಾಗಲೇ ಎಲ್ಲ ಜೀವನೋಪಾಯ ಸಾಧನಗಳನ್ನೂ ಆ ಜೀವನೋ ಪಾಯ ಸಾಧನಗಳ ತಯಾರಿಕೆಗೆ ಅವಶ್ಯವಾದ ಕಚ್ಚಾ ಪದಾರ್ಥಗಳನ್ನೂ ಉಪ ಕರಣಗಳನ್ನೂ (ಯಂತ್ರಸಾಮಗ್ರಿ, ಕಾರ್ಖಾನೆಗಳು, ಇತ್ಯಾದಿ) ಬಹುಮಟ್ಟಿಗೆ ತಮ್ಮ ಒಡೆತನದೊಳಕ್ಕೇ ತೆಗೆದುಕೊಂಡಿದ್ದಾರೆ. ಈ ವರ್ಗವೇ ಬೂರ್ಷ್ವಾ ವರ್ಗ, ಅಥವಾ ಬೂರ್ಷ್ವಾಸೀ.

2. ಏನೊಂದನ್ನೂ ಹೊಂದಿರದೆ, ಆದ್ದರಿಂದಾಗಿಯೇ ಜೀವನೋಪಾಯಕ್ಕೆ ಅವಶ್ಯವಾದ ಸಾಧನಗಳನ್ನು ಪಡೆದುಕೊಳ್ಳಲೋಸುಗ ತಮ್ಮ ಶ್ರಮವನ್ನೇ ವಿನಿಮಯವಾಗಿ ಮಾರುವಂತೆ ಬಲಾತ್ಕಾರಕ್ಕೊಳಗಾದವರ ವರ್ಗ. ಈ ವರ್ಗವನ್ನೇ ಶ್ರಮಜೀವಿ ವರ್ಗ ಅಥವಾ ಶ್ರಮಜೀವಿಗಳು ಎಂದು ಕರೆಯುವುದು.

ಪ್ರಶ್ನೆ 5: ಶ್ರಮಜೀವಿಗಳು ತಮ್ಮ ಶ್ರಮವನ್ನು ಬೂರ್ಷ್ವಾಸೀಗೆ ಯಾವ ಪರಿಸ್ಥಿತಿಗಳಲ್ಲಿ ಮಾರಾಟ ಮಾಡುವಂತಾಗುತ್ತಾರೆ?

ಉತ್ತರ: ಶ್ರಮವೂ ಇತರ ಯಾವುದೇ ಸರಕಿನಂತೆಯೇ ಒಂದು ಸರಕು.

ಅವರ ಬೆಲೆಯನ್ನು ಇತರ ಯಾವುದೇ ಸರಕಿನ ಬೆಲೆಯನ್ನು ನಿರ್ಧರಿಸುವಂಥ ನಿಯಮಗಳಿಂದಲೇ ನಿರ್ಧರಿಸಲಾಗುತ್ತದೆ. ಬೃಹತ್ ಪ್ರಮಾಣದ ಕೈಗಾರಿಕೆಯ ಆಧಿಪತ್ಯದಲ್ಲಿ ಅಥವಾ ಮುಕ್ತ ಸ್ಪರ್ಧೆಯ ಆಧಿಪತ್ಯದಲ್ಲಿ – ಇವೆರಡೂ ಒಂದೇ ಎಂಬುದನ್ನು ನಾವು ಮುಂದೆ ಕಾಣಲಿರುವೆವು – ಸರಕೊಂದರ ಬೆಲೆ ಸರಾಸರಿಯಾಗಿ ಯಾವತ್ತೂ ಆ ಸರಕಿನ ಉತ್ಪಾದನಾ ವೆಚ್ಚಕ್ಕೆ ಸಮನಾಗಿರುತ್ತದೆ. ಆದ್ದರಿಂದ ಅದೇ ರೀತಿ ಶ್ರಮದ ಬೆಲೆಯೂ ಆ ಶ್ರಮದ ಉತ್ಪಾದನಾ ವೆಚ್ಚಕ್ಕೆ ಸಮನಾಗಿರುತ್ತದೆ. ಕಾರ್ಮಿಕನು ತನ್ನ ಶ್ರಮ ಕಾರ್ಯವನ್ನು ನಿರ್ವಹಿಸಲು ಸಮರ್ಥನಾಗಿರುವಂತೆ ಮಾಡಲು ಮತ್ತು ಕಾರ್ಮಿಕ ವರ್ಗವು ನಶಿಸಿಹೋಗುವುದನ್ನು ತಪ್ಪಿಸುವಂತೆ ಮಾಡಲು ಅವಶ್ಯವಾದ ಜೀವನೋಪಾಯ ಸಾಧನಗಳ ಮೊತ್ತವೇ ಈ ಶ್ರಮ ಉತ್ಪಾದನಾ ವೆಚ್ಚ. ಹಾಗಾಗಿ ಕಾರ್ಮಿಕನು ತನ್ನ ಶ್ರಮಕ್ಕೆ ಪ್ರತಿಫಲವಾಗಿ ಈ ಉದ್ದೇಶಕ್ಕೆ ಅವಶ್ಯವಾದುದಕ್ಕಿಂತ ಹೆಚ್ಚಿಗೆ ಏನನ್ನೂ ಪಡೆದುಕೊಳ್ಳುವುದಿಲ್ಲ; ಶ್ರಮದ ಬೆಲೆ, ಅಥವಾ ಕೂಲಿ, ಅತ್ಯಂತ ಕಮ್ಮಿ ಪ್ರಮಾಣದ್ದಾಗಿರುತ್ತದೆ, ಜೀವನೋಪಾಯ ನಡೆಸಲು ಅವಶ್ಯವಾದ ಕನಿಷ್ಠ ಪ್ರಮಾಣದ್ದಾಗಿರುತ್ತದೆ. ವ್ಯಾಪಾರ ಚೆನ್ನಾಗಿದ್ದರೆ ಕಾರ್ಮಿಕನಿಗೆ ಹೆಚ್ಚಿಗೆ ಕೂಲಿ. ವ್ಯಾಪಾರ ಕೆಟ್ಟರೆ ಕಮ್ಮಿ ಕೂಲಿ. ಕಾರ್ಖಾನೆ ಮಾಲಿಕ ತನ್ನ ಸರಕಿಗೆ ಹೆಚ್ಚು ಅಥವಾ ಕಮ್ಮಿ ಪ್ರತಿಫಲ ಪಡೆಯುವಂತೆಯೇ. ಆದರೆ ಕಾರ್ಖಾನೆ ಮಾಲಿಕ ಒಳ್ಳೆಯ ಸಮಯದಲ್ಲಾಗಲೀ ಕೆಟ್ಟ ಸಮಯದಲ್ಲಾಗಲೀ ತನ್ನ ಸರಕಿಗೆ ಅದರ ಉತ್ಪಾದನಾ ವೆಚ್ಚಕ್ಕಿಂತ ಸರಾಸರಿಯಾಗಿ ಹೆಚ್ಚಾಗಲೀ ಕಮ್ಮಿಯಾಗಲೀ ಪಡೆಯದೆ ಇರುವಂತೆಯೇ, ಅದೇ ರೀತಿ, ಕಾರ್ಮಿಕನೂ ಸರಾಸರಿಯಾಗಿ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಿಗೆಯಾಗಲೀ ಕಮ್ಮಿಯಾಗಲೀ ಪಡೆಯುವುದಿಲ್ಲ. ಎಲ್ಲ ಶ್ರಮ ಶಾಖೆಗಳೂ ಹೆಚ್ಚು ಹೆಚ್ಚಾಗಿ ಬೃಹತ್ ಪ್ರಮಾಣದ ಕೈಗಾರಿಕೆಗೆ ವಶವಾದಂತೆ ಕೂಲಿಯ ಈ ಆರ್ಥಿಕ ನಿಯಮವನ್ನು ಅಷ್ಟೂ ಹೆಚ್ಚು ಕಟ್ಟುನಿಟ್ಟಾಗಿ ಅನ್ವಯಿಸಲಾಗುವುದು.

ಪ್ರಶ್ನೆ 6: ಕೈಗಾರಿಕಾ ಕ್ರಾಂತಿಗೆ ಮುನ್ನ ಯಾವ ಯಾವ ಶ್ರಾಮಿಕ ವರ್ಗಗಳಿದ್ದವು?

ಉತ್ತರ: ಸಮಾಜದ ಬೆಳವಣಿಗೆಯ ವಿಭಿನ್ನ ಘಟ್ಟಗಳ ಮೇಲೆ ಅವಲಂಬಿಸಿ ಶ್ರಾಮಿಕ ವರ್ಗಗಳು ವಿಭಿನ್ನ ಪರಿಸ್ಥಿತಿಗಳಲ್ಲಿ ಬಾಳುತ್ತಿದ್ದವು, ಆಸ್ತಿವಂತ ಹಾಗೂ ಆಳುವ ವರ್ಗಗಳೊಂದಿಗೆ ವಿಭಿನ್ನ ಸಂಬಂಧಗಳನ್ನು ಹೊಂದಿದ್ದವು. ಪುರಾತನ ಕಾಲದಲ್ಲಿ ಶ್ರಾಮಿಕ ಜನರು ಅವರ ಮಾಲಿಕರ ಗುಲಾಮರಾಗಿದ್ದರು; ಈಗಲೂ ಅನೇಕ ಹಿಂದುಳಿದ ದೇಶಗಳಲ್ಲೂ ಅಮೆರಿಕದ ದಕ್ಷಿಣ ಭಾಗದಲ್ಲೂ ಸಹ, ಇರುವಂತೆ. ಮಧ್ಯಯುಗದಲ್ಲಿ ಅವರು ಜೀತದಾಳುಗಳಾಗಿದ್ದರು, ಭೂಮಾಲಿಕ

ಕುಲೀನರಿಗೆ ಸೇರಿದವರಾಗಿದ್ದರು, ಹಂಗೇರಿ, ಪೋಲೆಂಡ್ ಹಾಗೂ ರಶಿಯುಗಳಲ್ಲಿ ಇನ್ನೂ ಇರುವಂತೆ. ಮಧ್ಯಯುಗದಲ್ಲೂ ಕೈಗಾರಿಕಾ ಕ್ರಾಂತಿಯುವರೆಗೂ ನಗರಗಳಲ್ಲಿ ಪೆಟಿ ಬೂರ್ಷ್ವಾ ಪ್ರಭುಗಳ ಸೇವೆಯಲ್ಲಿ ಕೈಕಸಬುದಾರರೂ ಇದ್ದರು. ಕೈಗೆಲಸದ ಕಾರ್ಖಾನೆ ಪದ್ಧತಿಯ ಬೆಳವಣಿಗೆಯೊಂದಿಗೆ ಕ್ರಮೇಣ ಕೈಗೆಲಸದ ಕಾರ್ಖಾನೆ ಕಾರ್ಮಿಕರು ಕಾಣಿಸಿಕೊಂಡರು. ಈಗ ಇವರನ್ನು ಹೆಚ್ಚು ಕಮ್ಮಿ ಭಾರಿ ಬಂಡವಾಳಗಾರರು ಕೆಲಸಕ್ಕೆ ಇರಿಸಿಕೊಂಡಿದ್ದಾರೆ.

ಪ್ರಶ್ನೆ 7: ಶ್ರಮಜೀವಿಗಳು ಗುಲಾಮರಿಂದ ಯಾವ ರೀತಿಯಲ್ಲಿ ಭಿನ್ನವಾಗಿದ್ದಾರೆ?

ಉತ್ತರ: ಗುಲಾಮ ಒಂದೇ ಬಾರಿಗೆ ಒಟ್ಟಿಗೇ ಮಾರಾಟವಾಗುತ್ತಾನೆ. ಶ್ರಮಜೀವಿಯು ತನ್ನನ್ನು ದಿನದಿನವೂ ಗಂಟೆಗಂಟೆಯೂ ಮಾರಾಟ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ವೈಯಕ್ತಿಕ ಗುಲಾಮನೂ ಒಬ್ಬ ನಿರ್ದಿಷ್ಟ ಒಡೆಯನ ಆಸ್ತಿ. ಅವನ ಪ್ರಭುವಿನ ಹಿತದೃಷ್ಟಿಯಿಂದಲಾದರೂ ಸರಿ ಅವನಿಗೆ ಜೀವನೋಪಾಯವನ್ನು ಖಾತರಿ ಮಾಡಿಕೊಡಲಾಗಿರುತ್ತದೆ. ಈ ಜೀವನೋಪಾಯ ಎಷ್ಟು ಕೀಳಾಗಿದ್ದರೂ ಇರಬಹುದು. ಆದರೆ ಪ್ರತಿಯೊಬ್ಬ ವೈಯಕ್ತಿಕ ಶ್ರಮಜೀವಿಯೂ ಇಡೀ ಬೂರ್ಷ್ವಾ ವರ್ಗದ ಆಸ್ತಿ. ಇವನ ಶ್ರಮವನ್ನು ಯಾರಿಗಾದರೂ ಅವಶ್ಯವಿದ್ದಾಗಲಷ್ಟೆ ಕೊಳ್ಳಲಾಗುತ್ತದೆ. ಇವನಿಗೆ ಖಾತರಿಯಾದ ಜೀವನೋಪಾಯ ಇರುವುದಿಲ್ಲ. ಈ ಜೀವನೋಪಾಯವನ್ನು ಶ್ರಮಜೀವಿ ವರ್ಗಕ್ಕೆ ಇಡೀಯಾಗಿಯಷ್ಟೆ ಖಾತರಿ ಮಾಡಿಕೊಟ್ಟಿರಲಾಗುತ್ತದೆ. ಗುಲಾಮನು ಸ್ಪರ್ಧೆಯ ಹೊರಗಿರುತ್ತಾನೆ, ಶ್ರಮಜೀವಿಯು ಅದರ ಒಳಗಿರುತ್ತಾನೆ, ಅದರ ಏರುಪೇರುಗಳನ್ನೆಲ್ಲ ಅನುಭವಿಸುತ್ತಾನೆ. ಗುಲಾಮನನ್ನು ಒಂದು ವಸ್ತುವನ್ನಾಗಿ ಪರಿಗಣಿಸಲಾಗುತ್ತದೆ, ನಾಗರಿಕ ಸಮಾಜದ ಸದಸ್ಯನನ್ನಾಗಿ ಅಲ್ಲ; ಶ್ರಮಜೀವಿಯನ್ನು ಒಬ್ಬ ವ್ಯಕ್ತಿಯನ್ನಾಗಿ, ನಾಗರಿಕ ಸಮಾಜದ ಒಬ್ಬ ಸದಸ್ಯನನ್ನಾಗಿ ಕಾಣಲಾಗುತ್ತದೆ. ಗುಲಾಮನು ಶ್ರಮಜೀವಿಗಿಂತ ಹೆಚ್ಚು ಉತ್ತಮ ಬಾಳು ಬಾಳಬಹುದು, ಆದರೆ ಶ್ರಮಜೀವಿಯು ಸಮಾಜದ ಬೆಳವಣಿಗೆಯ ಉನ್ನತ ಮಟ್ಟಕ್ಕೆ ಸೇರಿದವನು ಮತ್ತು ತಾನೇ ಗುಲಾಮನಿಗಿಂತ ಹೆಚ್ಚು ಉನ್ನತ ಮಟ್ಟದಲ್ಲಿ ನಿಂತಿರುತ್ತಾನೆ. ಗುಲಾಮನು ಎಲ್ಲ ಖಾಸಗಿ ಆಸ್ತಿ ಸಂಬಂಧಗಳಲ್ಲೂ ಗುಲಾಮಗಿರಿ ಸಂಬಂಧವೊಂದನ್ನಷ್ಟೆ ಭಂಗಗೊಳಿಸಿ ತನ್ನನ್ನು ಬಿಡುಗಡೆ ಮಾಡಿಕೊಳ್ಳುತ್ತಾನೆ, ತನ್ಮೂಲಕ ತಾನೇ ಶ್ರಮಜೀವಿಯಾಗುತ್ತಾನೆ; ಶ್ರಮಜೀವಿಯು ಖಾಸಗಿ ಆಸ್ತಿಯನ್ನು ಒಟ್ಟಾರೆ ನಾಶಗೊಳಿಸುವ ಮೂಲಕವಷ್ಟೆ ತನ್ನನ್ನು ಸ್ವತಂತ್ರವಾಗಿಸಿಕೊಳ್ಳಬಲ್ಲ.

ಪ್ರಶ್ನೆ 8: ಶ್ರಮಜೀವಿಯು ಜೀತದಾಳಿನಿಂದ ಯಾವ ರೀತಿಯಲ್ಲಿ ಭಿನ್ನವಾಗಿರುತ್ತಾನೆ?

ಉತ್ತರ: ಜೀತದಾಳು ಉತ್ಪಾದನಾ ಸಾಧನವೊಂದನ್ನು, ಒಂದು ತುಣುಕು ಭೂಮಿಯನ್ನು ಹೊಂದಿರುತ್ತಾನೆ, ಬಳಸುತ್ತಿರುತ್ತಾನೆ. ಇದಕ್ಕೆ ಪ್ರತಿಯಾಗಿ ಅವನು ತನ್ನ ಫಸಲಿನಲ್ಲಿ ಒಂದು ಭಾಗವನ್ನು ಭೂಮಾಲಿಕನಿಗೆ ಕೊಡುತ್ತಾನೆ ಇಲ್ಲವೇ ಅವನಿಗಾಗಿ ಕೆಲಸಮಾಡುತ್ತಾನೆ. ಶ್ರಮಜೀವಿಯು ಬೇರೊಬ್ಬನಿಗೆ ಸೇರಿದ ಉತ್ಪಾದನಾ ಸಲಕರಣೆಗಳೊಂದಿಗೆ ಕೆಲಸಮಾಡುತ್ತಾನೆ, ಹುಟ್ಟುವಳಿಯಲ್ಲಿ ಒಂದು ಭಾಗ ಪಡೆಯಲೋಸುಗ ಆ ಬೇರೊಬ್ಬನಿಗಾಗಿ ಕೆಲಸಮಾಡುತ್ತಾನೆ. ಜೀತದಾಳು ಕೊಡುತ್ತಾನೆ, ಶ್ರಮಜೀವಿ ಇಸಿದುಕೊಳ್ಳುತ್ತಾನೆ. ಜೀತದಾಳಿಗೆ ಖಾತರಿಯಾದ ಜೀವನೋಪಾಯವಿರುತ್ತದೆ, ಶ್ರಮಜೀವಿಗೆ ಇರುವುದಿಲ್ಲ. ಜೀತದಾಳು ಸ್ಪರ್ಧೆಯ ಹೊರಗಿರುತ್ತಾನೆ, ಶ್ರಮಜೀವಿ ಅದರೊಳಗಿರುತ್ತಾನೆ. ಜೀತದಾಳು ನಗರಕ್ಕೆ ಓಡಿಹೋಗುವ ಮೂಲಕ ಮತ್ತು ಅಲ್ಲಿ ಕೈಕಸಬುದಾರನಾಗುವ ಮೂಲಕ, ಅಥವಾ ತನ್ನ ಭೂಮಾಲಿಕನಿಗೆ ಶ್ರಮ ಹಾಗೂ ಉತ್ಪನ್ನಗಳ ಬದಲು ಹಣ ನೀಡುವ ಮೂಲಕ ಮತ್ತು ತನ್ಮೂಲಕ ಸ್ವತಂತ್ರ ಗುತ್ತಿಗೆದಾರನಾಗುವ ಮೂಲಕ ತನ್ನನ್ನು ತಾನೇ ಬಿಡುಗಡೆ ಮಾಡಿಕೊಳ್ಳುತ್ತಾನೆ; ಅಥವಾ ತನ್ನ ಸಾಮಂತ ಶಾಹಿ ಪ್ರಭುವನ್ನು ಹೊಡೆದೋಡಿಸಿ ತಾನೇ ಮಾಲಿಕನಾಗುವ ಮೂಲಕ, ಒಂದು ಮಾತಿನಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ಆಸ್ತಿವಂತ ವರ್ಗದ ದಳ ಹಾಗೂ ಸ್ಪರ್ಧೆ ಸೇರುವ ಮೂಲಕ ಸ್ವತಂತ್ರನಾಗುತ್ತಾನೆ. ಶ್ರಮಜೀವಿಯು ಸ್ಪರ್ಧೆಯನ್ನೇ ನಾಶ ಮಾಡುವ ಮೂಲಕ, ಖಾಸಗಿ ಆಸ್ತಿ ಮತ್ತು ಎಲ್ಲ ವರ್ಗ ವಿಭೇದಗಳನ್ನೂ ತೊಡೆದುಹಾಕುವ ಮೂಲಕ ತನ್ನನ್ನು ಸ್ವತಂತ್ರವಾಗಿಸಿಕೊಳ್ಳುತ್ತಾನೆ.

ಪ್ರಶ್ನೆ 9: ಶ್ರಮಜೀವಿಯು ಕೈಕಸಬುದಾರನಿಂದ ಯಾವ ರೀತಿಯಲ್ಲಿ ಭಿನ್ನವಾಗಿರುತ್ತಾನೆ?*

ಪ್ರಶ್ನೆ 10: ಶ್ರಮಜೀವಿಯು ಕೈಗೆಲಸದ ಕಾರ್ಖಾನೆಯ ಕಾರ್ಮಿಕನಿಂದ ಯಾವ ರೀತಿಯಲ್ಲಿ ಭಿನ್ನವಾಗಿರುತ್ತಾನೆ?

ಉತ್ತರ: ಹದಿನಾರರಿಂದ ಹದಿನೆಂಟನೆಯ ಶತಮಾನದವರೆಗಿನ ಕೈಗೆಲಸದ ಕಾರ್ಖಾನೆ ಕಾರ್ಮಿಕನು ಬಹುಮಟ್ಟಿಗೆ ಎಲ್ಲೆಡೆಗಳಲ್ಲೂ ಇನ್ನೂ ತನ್ನ ಉತ್ಪಾದನಾ ಸಾಧನಗಳನ್ನು – ತನ್ನ ಮಗ್ಗ, ಕುಟುಂಬದ ನೂಲುವ ರಾಟೆಗಳು ಮತ್ತು

---

*ಈ ಪ್ರಶ್ನೆಗೆ ಉತ್ತರ ನೀಡಲು ಎಂಗೆಲ್ಸ್‌ರವರು ಹಸ್ತಪ್ರತಿಯಲ್ಲಿ ಖಾಲಿ ಜಾಗ ಬಿಟ್ಟಿದ್ದಾರೆ. – ಸಂ.

ಒಂದು ತುಣುಕು ಭೂಮಿ ಇವುಗಳನ್ನು – ತನ್ನ ಒಡೆತನದಲ್ಲೇ ಹೊಂದಿದ್ದ. ಬಿಡು ವೇಳೆಯಲ್ಲಿ ತನ್ನ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದ. ಶ್ರಮಜೀವಿ ಇವಾವು ವನ್ನೂ ಹೊಂದಿರುವುದಿಲ್ಲ. ಕೈಗೆಲಸದ ಕಾರ್ಖಾನೆ ಕಾರ್ಮಿಕನು ಬಹುಮಟ್ಟಿಗೆ ಹಳ್ಳಿ ಪ್ರದೇಶಗಳಲ್ಲೇ ತನ್ನ ಭೂಮಾಲೀಕ ಅಥವಾ ಯಜಮಾನನೊಂದಿಗೆ ಹೆಚ್ಚು ಕಮ್ಮಿ ಕುಲಪತಿಯಾಡಳಿತ ಪದ್ಧತಿ ಸಮಾಜದ ಸಂಬಂಧಗಳನ್ನಿರಿಸಿಕೊಂಡು ವಾಸಿ ಸುತ್ತಾನೆ; ಶ್ರಮಜೀವಿಯು ಹೆಚ್ಚಾಗಿ ದೊಡ್ಡ ಪಟ್ಟಣಗಳಲ್ಲಿ ವಾಸಿಸುತ್ತಾನೆ ಮತ್ತು ತನ್ನ ಯಜಮಾನನೊಂದಿಗೆ ಅವನ ಸಂಬಂಧ ಶುದ್ಧ ಹಣಕಾಸಿನ ಸಂಬಂಧ ವಾಗಿರುತ್ತದೆ. ಬೃಹತ್ ಪ್ರಮಾಣದ ಕೈಗಾರಿಕೆ ಬಂದು ಈ ಕೈಗೆಲಸದ ಕಾರ್ಖಾನೆ ಕಾರ್ಮಿಕನಿಂದ ಅವನ ಕುಲಪತಿಯಾಡಳಿತ ಸಮಾಜ ಪರಿಸ್ಥಿತಿಗಳನ್ನೆಲ್ಲ ಕಸಿದು ಕೊಂಡುದರಿಂದಾಗಿ ಅವನು ಇನ್ನೂ ಹೊಂದಿದ್ದ ಅಲ್ಪ ಸ್ವಲ್ಪ ಆಸ್ತಿಯನ್ನೂ ಕಳೆದುಕೊಂಡು ತನ್ಮೂಲಕ ತಾನೇ ಶ್ರಮಜೀವಿಯಾಗುತ್ತಾನೆ.

ಪ್ರಶ್ನೆ 11: ಕೈಗಾರಿಕಾ ಕ್ರಾಂತಿಯ ಮತ್ತು ಸಮಾಜವು ಬೂರ್ಷ್ವಾ ಹಾಗೂ ಶ್ರಮಜೀವಿಗಳು ಎಂದು ವಿಭಜನೆಗೊಂಡುದರ ತಕ್ಷಣದ ಫಲಿತಾಂಶ ಗಳೇನು?

ಉತ್ತರ: ಮೊದಲನೆಯದಾಗಿ, ಯಂತ್ರ ಶ್ರಮದಿಂದಾಗಿ ಕೈಗಾರಿಕೋತ್ಪನ್ನ ಗಳ ಬೆಲೆಗಳು ಸತತವಾಗಿ ಕಮ್ಮಿಯಾದುದರಿಂದಾಗಿ ಜಗತ್ತಿನ ಎಲ್ಲ ದೇಶ ಗಳಲ್ಲೂ ಹಳೆಯ ಕೈಗೆಲಸದ ಕಾರ್ಖಾನೆ ಪದ್ಧತಿ, ಅಥವಾ ದೈಹಿಕ ಶ್ರಮದ ಮೇಲೆ ಆಧರಿತವಾದ ಕೈಗಾರಿಕಾ ಪದ್ಧತಿ, ಸಂಪೂರ್ಣವಾಗಿ ನಾಶವಾಯಿತು. ಅದುವರವಿಗೂ ಚಾರಿತ್ರಿಕ ಬೆಳವಣಿಗೆಯಿಂದ ಹೆಚ್ಚು ಕಮ್ಮಿ ದೂರ ಉಳಿದಿದ್ದ ಮತ್ತು ಕೈಗಾರಿಕೆ ಅದುವರವಿಗೂ ಕೈಗೆಲಸದ ಕಾರ್ಖಾನೆ ಪದ್ಧತಿಯ ಮೇಲೆ ಆಧರಿಸಿದ್ದ ಎಲ್ಲ ಅರೆಬರ್ಬರ ದೇಶಗಳೂ ಹೀಗೆ ತಮ್ಮ ಪ್ರತ್ಯೇಕತೆಯಿಂದ ಬಲ ವಂತವಾಗಿ ಹೊರಬರುವಂತಾದವು. ಅವು ಇಂಗ್ಲಿಷ್ ದೇಶದ ಅಗ್ಗದ ಸರಕು ಗಳನ್ನು ಕೊಂಡು ತಮ್ಮ ಸ್ವಂತ ಕೈಗೆಲಸದ ಕಾರ್ಖಾನೆ ಕಾರ್ಮಿಕರೇ ನಾಶ ವಾಗುವುದಕ್ಕೆ ಅವಕಾಶ ಮಾಡಿಕೊಟ್ಟವು. ಹೀಗೆ, ಸಹಸ್ರಾರು ವರ್ಷಗಳಿಂದ ಸ್ಥಗಿತ ವಾಗಿದ್ದ ದೇಶಗಳು, ಉದಾಹರಣೆಗೆ ಭಾರತ, ಮೇಲಿಂದ ಕೆಳಗಿನವರೆಗೆ ಕ್ರಾಂತಿ ಕಾರಕವಾಗಿ ಬದಲಾದವು ಮತ್ತು ಚೀಣಾ ಕೂಡ ಈಗ ಕ್ರಾಂತಿಯತ್ತ ಸಾಗಿ ಹೋಗುತ್ತಿದೆ. ಇಂಗ್ಲೆಂಡಿನಲ್ಲಿ ಇಂದು ಆವಿಷ್ಕಾರ ಮಾಡಲಾದ ಯಂತ್ರವೊಂದು ಒಂದು ವರ್ಷದೊಳಗೇ ಚೀಣಾದಲ್ಲಿ ಲಕ್ಷಾಂತರ ಜನರ ಜೀವನಾಧಾರವನ್ನು ಕಸಿದುಕೊಳ್ಳುವಂತಾಗಿದೆ. ಈ ರೀತಿ ಬೃಹತ್ ಪ್ರಮಾಣದ ಕೈಗಾರಿಕೆಯು ಇಳೆಯ ಮೇಲಿನ ಎಲ್ಲ ಜನತೆಗಳನ್ನೂ ಪರಸ್ಪರವಾಗಿ ಸಂಬಂಧಿಸಿದೆ, ಎಲ್ಲ ಸ್ಥಳೀಯ

ಸಣ್ಣ ಮಾರುಕಟ್ಟೆಗಳನ್ನೂ ಒಟ್ಟಿಗೆ ಸೇರಿಸಿ ಒಂದು ವಿಶ್ವ ಮಾರುಕಟ್ಟೆಯನ್ನು ಉಂಟುಮಾಡಿದೆ, ಎಲ್ಲೆಲ್ಲೂ ನಾಗರಿಕತೆ ಹಾಗೂ ಪ್ರಗತಿಗೆ ಮಾರ್ಗ ಮಾಡಿ ಕೊಟ್ಟಿದೆ. ಪರಿಸ್ಥಿತಿ ಎಂಥ ಘಟ್ಟ ಮುಟ್ಟಿದೆಯೆಂದರೆ ನಾಗರಿಕ ದೇಶಗಳಲ್ಲಿ ಜರುಗುವ ಪ್ರತಿಯೊಂದು ಘಟನೆಯೂ ಈಗ ಇತರೆಲ್ಲ ದೇಶಗಳಲ್ಲೂ ಪ್ರತಿಕ್ರಿಯೆ ಉಂಟು ಮಾಡುತ್ತಿದೆ. ಹಾಗಾಗಿ, ಇಂಗ್ಲೆಂಡಿನ ಅಥವಾ ಫ್ರಾನ್ಸಿನ ಕಾರ್ಮಿಕರು ಈಗ ಸ್ವತಂತ್ರಗೊಳಿಸಿಕೊಂಡರೆ ಅದು ಇತರೆಲ್ಲ ದೇಶಗಳಲ್ಲೂ ಕ್ರಾಂತಿಗಳನ್ನು ಪ್ರೇರಿಸ ಬೇಕು. ಅವು ಈಗಲೋ ಆಗಲೋ ಅಲ್ಲಿಯೂ ಕಾರ್ಮಿಕರ ವಿಮೋಚನೆಗೆ ದಾರಿಮಾಡಿಕೊಡುವುವು.

ಎರಡನೆಯದಾಗಿ, ಎಲ್ಲೆಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಯು ಕೈಗೆಲಸದ ಕಾರ್ಖಾನೆ ಪದ್ಧತಿಯ ಸ್ಥಳ ಪಡೆದುಕೊಂಡಿತೋ ಅಲ್ಲೆಲ್ಲ ಕೈಗಾರಿಕಾ ಕ್ರಾಂತಿ ಉಂಟಾಗಿ ಅದು ಬೂರ್ಷ್ವಾಸೀಯ ಸಂಪತ್ತು ಹಾಗೂ ಅಧಿಕಾರವನ್ನು ಅತ್ಯುನ್ನತ ಪ್ರಮಾಣಕ್ಕೆ ಅಭಿವೃದ್ಧಿಗೊಳಿಸಿ ಬೂರ್ಷ್ವಾಸೀಯನ್ನು ದೇಶದಲ್ಲೇ ಪ್ರಥಮ ವರ್ಗವನ್ನಾಗಿ ಮಾಡಿತು. ಇದರ ಫಲಿತಾಂಶವೆಂದರೆ, ಎಲ್ಲೆಲ್ಲಿ ಇದು ಜರುಗಿತೋ ಅಲ್ಲೆಲ್ಲ ಬೂರ್ಷ್ವಾಸೀ ರಾಜಕೀಯ ಆಡಳಿತವನ್ನು ತನ್ನ ಕೈಗೇ ತೆಗೆದುಕೊಂಡು, ಅದುವರೆವಿಗೂ ಇದ್ದ ಆಡಳಿತ ವರ್ಗಗಳನ್ನು – ಶ್ರೀಮಂತಶಾಹಿ, ಗಿಲ್ಡ್ ಪಟ್ಟಣಿಗರು ಮತ್ತು ಇವರಿಬ್ಬರನ್ನೂ ಪ್ರತಿನಿಧಿಸುತ್ತಿದ್ದ ನಿರಂಕುಶ ರಾಜಪ್ರಭುತ್ವ ಇವುಗಳನ್ನು – ಆಡಳಿತದಿಂದ ಹೊರತಳ್ಳಿತು. ವಂಶಪಾರಂಪರ್ಯವಾಗಿ ಉಳಿದುಕೊಂಡಿದ್ದ ಭೂಸ್ಥಿತಿಗಳನ್ನು ರದ್ದುಗೊಳಿಸುವ ಮೂಲಕ, ಇಲ್ಲವೇ ಭೂಮಿ-ಕಾಣಿ ಆಸ್ತಿಯನ್ನು ವಶಪಡಿಸಿಕೊಳ್ಳುವ ಅಸಾಧ್ಯತೆಯನ್ನು ನಿಷೇಧಿಸುವ ಮೂಲಕ, ಮತ್ತು ಕುಲೀನ ವರ್ಗದವರ ವಿಶೇಷಾಧಿಕಾರಗಳನ್ನು ತೊಡೆದುಹಾಕುವ ಮೂಲಕ, ಬೂರ್ಷ್ವಾ ಸೀಯು ಶ್ರೀಮಂತಶಾಹಿಯ ಹಾಗೂ ಕುಲೀನರ ಶಕ್ತಿಯನ್ನು ನಾಶಗೊಳಿಸಿತು. ಎಲ್ಲ ಗಿಲ್ಡ್‌ಗಳನ್ನೂ ಕಸುಬುದಾರರ ವಿಶೇಷಾಧಿಕಾರಗಳನ್ನೂ ರದ್ದುಗೊಳಿಸುವ ಮೂಲಕ ಬೂರ್ಷ್ವಾಸೀಯು ಗಿಲ್ಡ್ ಪಟ್ಟಣಿಗರ ಶಕ್ತಿಯನ್ನು ನಾಶಗೊಳಿಸಿತು. ಇವೆರಡರ ಸ್ಥಳದಲ್ಲೂ ಅದು ಮುಕ್ತ ಸ್ಪರ್ಧೆಯನ್ನು, ಅಂದರೆ ಪ್ರತಿಯೊಬ್ಬನೂ ಕೈಗಾರಿಕೆಯ ಯಾವುದೇ ಶಾಖೆಯಲ್ಲಿ ಉದ್ಯುಕ್ತನಾಗುವ ಹಕ್ಕುಳ್ಳ ಮತ್ತು ಹಾಗೆ ಮಾಡಲು ಅವನಿಗೆ ಅವಶ್ಯ ಬಂಡವಾಳದ ಅಭಾವ ಬಿಟ್ಟು ಬೇರಾವುದೂ ಅಡ್ಡಿ ಬರದಂಥ ಸಮಾಜ ಪದ್ಧತಿಯನ್ನು, ಜಾರಿಗೆ ತಂದಿತು. ಆದ್ದರಿಂದ ಮುಕ್ತ ಸ್ಪರ್ಧೆ ಜಾರಿಗೆ ತಂದುದು, ಇನ್ನು ಮುಂದೆ ಸಮಾಜದ ಸದಸ್ಯರು ಅವರವರ ಬಂಡವಾಳ ಗಳು ಅಸಮವಾಗಿರುವಂತೆ ಅವರೂ ಅಸಮರು, ಬಂಡವಾಳವೇ ನಿರ್ಧಾರಕ ಶಕ್ತಿ, ಆದ್ದರಿಂದಾಗಿಯೇ ಬಂಡವಾಳಗಾರರು, ಬೂರ್ಷ್ವಾಗಳು, ಸಮಾಜದಲ್ಲಿ ಪ್ರಥಮ ವರ್ಗದ ಸದಸ್ಯರಾಗಿದ್ದಾರೆ, ಎಂದು ಸಾರ್ವಜನಿಕವಾಗಿ ಘೋಷಿಸಿದಂತಾ

ಯಿತು. ಆದರೆ ಬೃಹತ್ ಪ್ರಮಾಣದ ಕೈಗಾರಿಕೆಯ ಆರಂಭದಲ್ಲಿ ಮುಕ್ತ ಸ್ಪರ್ಧೆ ಅವಶ್ಯ, ಏಕೆಂದರೆ, ಆ ಸಮಾಜ ಸ್ಥಿತಿಯಲ್ಲಷ್ಟೆ ಬೃಹತ್ ಪ್ರಮಾಣದ ಕೈಗಾರಿಕೆ ಬೆಳೆಯಬಲ್ಲುದು. ಹೀಗೆ ಬೂರ್ಷ್ವಾಸೀಯು ಕುಲೀನರ ಹಾಗೂ ಗಿಲ್ಡ್ ಪಟ್ಟಣಿಗರ ಸಾಮಾಜಿಕ ಶಕ್ತಿಯನ್ನು ನಾಶಗೊಳಿಸಿದ ಕೂಡಲೇ ಅದು ಅವರ ರಾಜಕೀಯ ಶಕ್ತಿಯನ್ನೂ ನಾಶಗೊಳಿಸಿತು. ಸಮಾಜದಲ್ಲಿ ಪ್ರಥಮ ವರ್ಗವಾಗಿ ಆದನಂತರ ಬೂರ್ಷ್ವಾಸೀಯು ತನ್ನನ್ನು ರಾಜಕೀಯ ಕ್ಷೇತ್ರದಲ್ಲೂ ಪ್ರಥಮ ವರ್ಗವನ್ನಾಗಿ ಘೋಷಿಸಿಕೊಂಡಿತು. ಶಾಸನ ರೀತ್ಯಾ ಬೂರ್ಷ್ವಾ ಸಮಾನತೆಯ ಮೇಲೂ ಮುಕ್ತ ಸ್ಪರ್ಧೆಗೆ ಶಾಸನಬದ್ಧ ಮನ್ನಣೆ ನೀಡುವುದರ ಮೇಲೂ ಆಧರಿಸಿದ ಪ್ರಾತಿನಿಧಿಕ ವ್ಯವಸ್ಥೆಯೊಂದನ್ನು ಸ್ಥಾಪಿಸುವ ಮೂಲಕ ಅದು ಈ ರಾಜಕೀಯ ಹೆಗ್ಗಳಿಕೆಯನ್ನು ಸಾಧಿಸಿಕೊಂಡಿತು. ಯೂರೋಪಿಯನ್ ದೇಶಗಳಲ್ಲಿ ಇದನ್ನು ಸಂವಿಧಾನಾತ್ಮಕ ರಾಜಪ್ರಭುತ್ವದ ರೂಪದಲ್ಲಿ ಜಾರಿಗೆ ತರಲಾಯಿತು. ಈ ಸಂವಿಧಾನಾತ್ಮಕ ರಾಜಪ್ರಭುತ್ವಗಳಲ್ಲಿ ಒಂದಿಷ್ಟು ಪ್ರಮಾಣದ ಬಂಡವಾಳ ಹೊಂದಿದವರಷ್ಟೆ, ಅಂದರೆ ಬೂರ್ಷ್ವಾಗಳಷ್ಟೆ, ಮತದಾರರು; ಈ ಬೂರ್ಷ್ವಾ ಮತದಾರರು ಡೆಪ್ಯೂಟಿಗಳನ್ನು (ಶಾಸನಸಭೆ ಪ್ರತಿನಿಧಿಗಳನ್ನು) ಆಯ್ಕೆ ಮಾಡುತ್ತಾರೆ. ಈ ಬೂರ್ಷ್ವಾ ಡೆಪ್ಯೂಟಿಗಳು ಸರಕಾರದ ಖರ್ಚುಗಳಿಗೆ ಹಣ ಒದಗಿಸುವುದನ್ನು ನಿರಾಕರಿಸಬಲ್ಲ ತಮ್ಮ ಹಕ್ಕನ್ನು ಅಂಕುಶವಾಗಿರಿಸಿಕೊಂಡು ಬೂರ್ಷ್ವಾ ಸರಕಾರವೊಂದನ್ನು ಆಯ್ಕೆ ಮಾಡುತ್ತಾರೆ.

ಮೂರನೆಯದಾಗಿ, ಕೈಗಾರಿಕಾ ಕ್ರಾಂತಿಯು ಬೂರ್ಷ್ವಾಸೀಯನ್ನು ನಿರ್ಮಿಸಿದಂತೆಯೇ ಅದೇ ಪ್ರಮಾಣದಲ್ಲಿ ಶ್ರಮಜೀವಿಗಳನ್ನೂ ನಿರ್ಮಿಸಿತು. ಬೂರ್ಷ್ವಾಸೀಯ ಆಸ್ತಿ ಗಳಿಕೆ ಯಾವ ಪ್ರಮಾಣದಲ್ಲಿ ಹೆಚ್ಚಿತೋ ಅದೇ ಪ್ರಮಾಣದಲ್ಲಿ ಶ್ರಮಜೀವಿಗಳ ಸಂಖ್ಯಾಬಲವೂ ಹೆಚ್ಚಿತು. ಶ್ರಮಜೀವಿಗಳಿಗೆ ಬಂಡವಾಳವಷ್ಟೆ ಕೆಲಸ ಕೊಡಲು ಸಾಧ್ಯವಾದುದರಿಂದ, ಶ್ರಮಜೀವಿಗಳನ್ನು ಕೆಲಸಕ್ಕೆ ನೇಮಿಸಿಕೊಂಡಾಗಲಷ್ಟೆ ಬಂಡವಾಳವು ಹೆಚ್ಚಲು ಸಾಧ್ಯವಾದುದರಿಂದ, ಶ್ರಮಜೀವಿಗಳ ವೃದ್ಧಿಯು ಬಂಡವಾಳದ ವೃದ್ಧಿಯೊಂದಿಗೆ ಸಮಹೆಜ್ಜೆ ಹಾಕಿಕೊಂಡು ಹೋಗುತ್ತದೆ. ಅದೇ ಕಾಲದಲ್ಲಿ ಕೈಗಾರಿಕಾ ಕ್ರಾಂತಿಯು ಬೂರ್ಷ್ವಾಗಳನ್ನೂ ಶ್ರಮಜೀವಿಗಳನ್ನೂ ದೊಡ್ಡ ನಗರಗಳಲ್ಲಿ, ಕೈಗಾರಿಕೆಯನ್ನು ಅತ್ಯಂತ ಲಾಭದಾಯಕವಾಗಿ ನಡೆಸಲು ಸಾಧ್ಯವಿರುವಂಥ ದೊಡ್ಡ ನಗರಗಳಲ್ಲಿ, ಒಟ್ಟು ಕೂಡಿಸುತ್ತದೆ. ಈ ರೀತಿ ಭಾರಿ ಜನಸಮೂಹಗಳು ಒಂದೇ ಸ್ಥಳದಲ್ಲಿ ಒಟ್ಟು ಕೂಡುವುದು ಶ್ರಮಜೀವಿಗಳಿಗೆ ಅವರ ಶಕ್ತಿಯ ಬಗೆಗೆ ಜಾಗೃತಿ ಪಡೆಯುವಂತೆ ಮಾಡುತ್ತದೆ. ಅಷ್ಟೇ ಅಲ್ಲ ಅದು ಹೆಚ್ಚು ವೃದ್ಧಿಗೊಂಡಂತೆ, ದೈಹಿಕ ಶ್ರಮವನ್ನು ಹೊರತಳ್ಳುವಂಥ ಹೆಚ್ಚು ಯಂತ್ರಗಳ ಆವಿಷ್ಕರಣವಾದಂತೆ, ಬೃಹತ್ ಪ್ರಮಾಣದ ಕೈಗಾರಿಕೆಯು

ಕೂಲಿಗಳನ್ನು. ನಾವು ಈಗಾಗಲೇ ಹೇಳಿರುವಂತೆ, ಅಷ್ಟೂ ಕನಿಷ್ಠ ಪ್ರಮಾಣಕ್ಕೆ ತಗ್ಗಿಸುತ್ತದೆ ಮತ್ತು ತನ್ಮೂಲಕ ಶ್ರಮಜೀವಿಯ ಸ್ಥಿತಿಗತಿಗಳನ್ನು ಅಷ್ಟು ಅಸಹನೀಯುವನ್ನಾಗಿ ಮಾಡುತ್ತದೆ. ಹೀಗೆ ಒಂದು ಕಡೆ ಶ್ರಮಜೀವಿಗಳ ಅತೃಪ್ತಿಯ ಹೆಚ್ಚಳ, ಇನ್ನೊಂದು ಕಡೆ ಅವರ ಶಕ್ತಿಯ ಹೆಚ್ಚಳ ಇವುಗಳಿಂದಾಗಿ ಕೈಗಾರಿಕಾ ಕ್ರಾಂತಿಯು, ಶ್ರಮಜೀವಿ ಸಾಮಾಜಿಕ ಕ್ರಾಂತಿಯನ್ನು ಮಾಡುವುದಕ್ಕೆ ದಾರಿ ಮಾಡಿಕೊಡುತ್ತದೆ.

ಪ್ರಶ್ನೆ 12: ಕೈಗಾರಿಕಾ ಕ್ರಾಂತಿಯ ಮುಂದಿನ ಪರಿಣಾಮಗಳೇನು?

ಉತ್ತರ: ಬೃಹತ್ ಪ್ರಮಾಣದ ಕೈಗಾರಿಕೆಯು ಉಗಿ ಎಂಜಿನ್ ಮತ್ತಿತರ ಯಂತ್ರಗಳನ್ನು ಸೃಜಿಸಿ ಅಲ್ಪ ಕಾಲದಲ್ಲಿ ಕಮ್ಮಿ ಖರ್ಚಿನಲ್ಲಿ ಕೈಗಾರಿಕೋತ್ಪಾದನೆಯನ್ನು ಅಪರಿಮಿತ ಪ್ರಮಾಣದಷ್ಟು ಹೆಚ್ಚಿಸಲು ಸಾಧ್ಯಮಾಡಿಕೊಟ್ಟಿತು. ಬೃಹತ್ ಕೈಗಾರಿಕೆಯ ಅಗತ್ಯ ಪರಿಣಾಮವಾದ ಮುಕ್ತ ಸ್ಪರ್ಧೆಯು, ಉತ್ಪಾದನೆಯ ಸೌಲಭ್ಯ ಹೆಚ್ಚಿದುದರ ಫಲವಾಗಿ ಬೇಗನೆಯೇ ಅತ್ಯಂತ ತೀವ್ರ ಸ್ವರೂಪ ತಳೆಯಿತು; ಬಂಡವಾಳಗಾರರು ಅಧಿಕ ಸಂಖ್ಯೆಯಲ್ಲಿ ಕೈಗಾರಿಕೆಯಲ್ಲಿ ನಿರತರಾದರು, ತುಂಬ ಬೇಗನೆಯೇ ಬಳಸಲು ಸಾಧ್ಯವಿರುವುದಕ್ಕಿಂತ ಹೆಚ್ಚಿಗೆ ಉತ್ಪನ್ನಗಳನ್ನು ತಯಾರಿಸಲಾಯಿತು. ಪರಿಣಾಮವಾಗಿ ತಯಾರಿತ ವಸ್ತುಗಳು ಮಾರಾಟವಾಗದೆ ಹೋದವು. ವ್ಯಾಪಾರ ಮುಗ್ಗಟ್ಟು ಎನ್ನುವಂತಹುದು ಉಂಟಾಯಿತು. ಕಾರ್ಖಾನೆಗಳು ಕೆಲಸ ಮಾಡದಾದವು. ಕಾರ್ಖಾನೆ ಮಾಲಿಕರು ದಿವಾಳಿ ಎದ್ದರು. ಕಾರ್ಮಿಕರು ಜೀವನೋಪಾಯ ಕಳೆದುಕೊಂಡರು. ದಟ್ಟ ದಾರಿದ್ರ್ಯ ಉಂಟಾಯಿತು. ಸ್ವಲ್ಪ ಕಾಲದ ತರುವಾಯ ಅಧಿಕವಾಗಿದ್ದ ಉತ್ಪನ್ನಗಳು ಮಾರಾಟವಾದವು, ಕಾರ್ಖಾನೆಗಳು ಮತ್ತೆ ಕೆಲಸ ಪ್ರಾರಂಭಿಸಿದವು, ಕೂಲಿಗಳು ಹೆಚ್ಚಿದವು. ವ್ಯಾಪಾರ ಕ್ರಮೇಣ ಹಿಂದೆಂದಿಗಿಂತ ಹೆಚ್ಚು ಬಿರುಸಿನಿಂದ ನಡೆಯತೊಡಗಿತು. ಆದರೆ ಮತ್ತೆ ಸ್ವಲ್ಪ ಕಾಲದಲ್ಲೇ ಅತಿ ಹೆಚ್ಚು ಸರಕುಗಳು ತಯಾರಾದವು, ಮತ್ತೊಂದು ಮುಗ್ಗಟ್ಟು ಉಂಟಾಯಿತು. ಇದೂ ಹಿಂದಿನ ಮುಗ್ಗಟ್ಟಿನ ಜಾಡನ್ನೇ ಹಿಡಿಯಿತು. ಹೀಗೆ ಈ ಶತಮಾನದ ಆದಿಯಿಂದ ಕೈಗಾರಿಕೆಯು ಸ್ಥಿತಿಗತಿ ಸಮೃದ್ಧತೆ ಮುಗ್ಗಟ್ಟು ಕಾಲಾವಧಿಗಳ ನಡುವೆ ಸತತವಾಗಿ ಏರುಪೇರು ಅನುಭವಿಸುತ್ತ ಬಂದಿದೆ. ಈ ರೀತಿಯ ಮುಗ್ಗಟ್ಟು ಐದು-ಏಳು ವರ್ಷಗಳ ಅಂತರದಲ್ಲಿ ಬಹುಮಟ್ಟಿಗೆ ಕ್ರಮಬದ್ಧವಾಗಿ ಮತ್ತೆ ಮತ್ತೆ ಉಂಟಾಗಿವೆ, ಕಾರ್ಮಿಕರಿಗೆ ಹಿಂದೆಂದಿಗಿಂತ ಹೆಚ್ಚು ಅಸಹನೀಯ ದಾರಿದ್ರ್ಯವನ್ನೂ, ಸಾರ್ವತ್ರಿಕ ಕ್ರಾಂತಿಕಾರಿ ಕ್ಷೋಭೆಯನ್ನೂ ಹಾಗೂ ಇಂದು ಅಸ್ತಿತ್ವದಲ್ಲಿರುವ ಇಡೀ ಪದ್ಧತಿಗೇ ಅತ್ಯಂತ ಹೆಚ್ಚಿನ ಅಪಾಯವನ್ನೂ ತಂದಿವೆ.

ಪ್ರಶ್ನೆ 13: ಹೀಗೆ ಕ್ರಮಬದ್ಧವಾಗಿ ಪುನರಾವೃತ್ತಿಯಾಗುವ ವ್ಯಾಪಾರ ಮುಗ್ಗಟ್ಟುಗಳಿಂದ ಯಾವ ತೀರ್ಮಾನಗಳಿಗೆ ಬರಬಹುದು?

ಉತ್ತರ: ಮೊದಲನೆಯದಾಗಿ, ಬೃಹತ್ ಪ್ರಮಾಣದ ಕೈಗಾರಿಕೆ ತನ್ನ ಬೆಳವಣಿಗೆಯ ಆರಂಭ ಘಟ್ಟಗಳಲ್ಲಿ ಮುಕ್ತ ಸ್ಪರ್ಧೆಯನ್ನು ಸೃಷ್ಟಿಸಿದರೂ, ಈಗ ಅದು ಈ ಮುಕ್ತ ಸ್ಪರ್ಧೆಯನ್ನು ಮೀರಿ ಬೆಳೆದಿದೆ. ಸ್ಪರ್ಧೆಯೂ, ಒಟ್ಟಿನಲ್ಲಿ ಬಿಡಿ ವ್ಯಕ್ತಿಗಳು ಕೈಗಾರಿಕೋತ್ಪಾದನೆ ನಡೆಸುವುದೂ, ಬೃಹತ್ ಪ್ರಮಾಣದ ಕೈಗಾರಿಕೆಗೆ ಬಂಧನವಾಗಿ ಆಗಿವೆ. ಅದು ಈ ಬಂಧನವನ್ನು ಮುರಿಯಲೇ ಬೇಕು ಮತ್ತು ಮುರಿಯುವುದು. ಬೃಹತ್ ಪ್ರಮಾಣದ ಕೈಗಾರಿಕೆಯನ್ನು ಎಲ್ಲಿಯ ವರೆಗೆ ಅದರ ಇಂದಿನ ಆಧಾರದ ಮೇಲೆ ನಡೆಸಲಾಗುತ್ತದೋ ಅಲ್ಲಿಯವರೆಗೆ ಅದು ಪ್ರತಿ ಏಳು ವರ್ಷಗಳಿಗೂ ಪುನರಾವೃತ್ತಿಯಾಗುವ ಸಾಮಾನ್ಯ ಗೊಂದಲ ವನ್ನು ಹುಟ್ಟಿಸದೆ ಇರಲಾರದು. ಪ್ರತಿ ಬಾರಿ ಉಂಟಾದಾಗಲೂ ಈ ಗೊಂದಲವು ಇಡೀ ನಾಗರಿಕತೆಯನ್ನೇ ವಿನಾಶದ ಭೀತಿಗೊಳಗಾಗಿಸುತ್ತದೆ, ಶ್ರಮಜೀವಿ ಗಳನ್ನು ಸಂಕಷ್ಟದ ಕೂಪಕ್ಕೆ ತಳ್ಳುತ್ತದೆ, ಅಷ್ಟೆ ಅಲ್ಲ ಬೂರ್ಷ್ವಾಗಳನ್ನೂ ಅಧಿಕ ಸಂಖ್ಯೆಯಲ್ಲಿ ಸರ್ವನಾಶಕ್ಕೀಡು ಮಾಡುತ್ತದೆ. ಆದ್ದರಿಂದ ಬೃಹತ್ ಪ್ರಮಾಣದ ಕೈಗಾರಿಕೆಯನ್ನೇ ಬಿಟ್ಟುಕೊಡಬೇಕು – ಇದು ತೀರ ಅಸಾಧ್ಯವಾದುದು – ಇಲ್ಲವೇ ಬಿಡಿ ಕಾರ್ಖಾನೆ ಮಾಲಿಕರು ಇನ್ನೆಷ್ಟು ಮಾತ್ರವೂ ಒಬ್ಬರ ವಿರುದ್ಧ ಒಬ್ಬರು ಸ್ಪರ್ಧಿಸದೆ ಇರುವಂಥ, ಇಡೀ ಸಮಾಜವೇ ಕೈಗಾರಿಕೋತ್ಪಾದನೆಯನ್ನು ಗೊತ್ತಾದ ಯೋಜನೆಯೊಂದಕ್ಕನುಗುಣವಾಗಿ, ಎಲ್ಲರ ಅಗತ್ಯತೆಗಳಿಗನುಗುಣವಾಗಿ ನಡೆ ಸುವಂಥ ಒಂದು ಸಂಪೂರ್ಣವಾಗಿ ಹೊಸತಾದ ಸಮಾಜವನ್ನು ಸಂಘಟಿಸುವು ದನ್ನು ಅದು ಅತ್ಯಗತ್ಯವಾದುದನ್ನಾಗಿ ಮಾಡುತ್ತದೆ.

ಎರಡನೆಯದಾಗಿ, ಬೃಹತ್ ಪ್ರಮಾಣದ ಕೈಗಾರಿಕೆಯೂ ಅದು ಸಾಧ್ಯ ಮಾಡಿಕೊಡುವ ಉತ್ಪಾದನೆಯ ಅಪರಿಮಿತ ವಿಸ್ತರಣೆಯೂ ಎಂಥ ಸಾಮಾಜಿ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಬಲ್ಲುವೆಂದರೆ, ಅದರಲ್ಲಿ ಸಮಾಜದ ಅವಶ್ಯಕ ಗಳನ್ನೆಲ್ಲ ಎಷ್ಟೊಂದು ಪ್ರಮಾಣದಲ್ಲಿ ಉತ್ಪಾದಿಸಲಾಗುವುದೆಂದರೆ, ಸಮಾಜ ಪ್ರತಿಯೊಬ್ಬ ಸದಸ್ಯನೂ ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಅತ್ಯಂತ ಸಂಪೂರ್ಣ ಸ್ವಾತಂತ್ರ್ಯ ಪರಿಸ್ಥಿತಿಗಳಲ್ಲಿ ಅಭಿವೃದ್ಧಿಗೊಳಿಸಿಕೊಳ್ಳಲು ಮತ್ತು ಅನ್ವಯಿಸಲ ಸಾಧ್ಯವಾಗುವುದು. ಹಾಗಾಗಿ, ಬೃಹತ್ ಪ್ರಮಾಣದ ಕೈಗಾರಿಕೆಯ ಯಾ ಗುಣ ಇಂದಿನ ಸಮಾಜದಲ್ಲಿ ಎಲ್ಲ ಸಂಕಷ್ಟ, ಎಲ್ಲ ವ್ಯಾಪಾರ ಮುಗ್ಗಟ್ಟುಗಳನ ಉಂಟುಮಾಡುತ್ತದೋ ಸ್ಪಷ್ಟವಾಗಿ ಅದೇ ಗುಣವೇ ಬೇರೊಂದು ಸಾಮಾಜ ಸಂಘಟನೆಯ ಪರಿಸ್ಥಿತಿಗಳಲ್ಲಿ ಆ ಸಂಕಷ್ಟಗಳನ್ನೇ, ಆ ವಿಪತ್ಕಾರಕ ಏರುಪೇ ಗಳನ್ನೇ ನಾಶಮಾಡುವುದು.

ಆದ್ದರಿಂದ ಈಗ ಹೀಗೆ ಸ್ಪಷ್ಟವಾಗಿ ಸಾಧಿಸಲಾಗಿದೆ:

1. ಇಂದಿರುವ ಸಾಮಾಜಿಕ ವ್ಯವಸ್ಥೆ ಇಂದಿನ ಪರಿಸ್ಥಿತಿಗಳಿಗೆ ಎಷ್ಟು ಮಾತ್ರವೂ ಅನುಗುಣವಾಗಿಲ್ಲ. ಈಗಿನ ಎಲ್ಲ ಕೇಡುಗಳಿಗೆ ಈ ಸಾಮಾಜಿಕ ವ್ಯವಸ್ಥೆಯೇ ಕಾರಣ;

2. ಈ ಎಲ್ಲ ಕೇಡುಗಳನ್ನೂ ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ಸಂಪೂರ್ಣವಾಗಿ ತೊಡೆದುಹಾಕಲು ಸಾಧನಗಳು ಈಗಾಗಲೇ ನಮ್ಮ ವಶದಲ್ಲಿವೆ.

ಪ್ರಶ್ನೆ 14: ಈ ಹೊಸ ಸಾಮಾಜಿಕ ವ್ಯವಸ್ಥೆಯು ಯಾವ ರೀತಿಯದಾಗಿರಬೇಕು?

ಉತ್ತರ: ಮೊಟ್ಟಮೊದಲನೆಯದಾಗಿ, ಹೊಸ ಸಾಮಾಜಿಕ ವ್ಯವಸ್ಥೆಯು ಒಟ್ಟಿನಲ್ಲಿ ಕೈಗಾರಿಕೆಯನ್ನೂ ಉತ್ಪಾದನೆಯ ಎಲ್ಲ ಶಾಖೆಗಳನ್ನೂ ನಡೆಸುವುದನ್ನು ತಮ್ಮ ತಮ್ಮೊಳಗೇ ಸ್ಪರ್ಧೆ ನಡೆಸುವ ಬಿಡಿಬಿಡಿ ವ್ಯಕ್ತಿಗಳ ಕೈಯಿಂದ ತೆಗೆದುಕೊಂಡು ಈ ಎಲ್ಲ ಉತ್ಪಾದನಾ ಶಾಖೆಗಳನ್ನೂ ಇಡೀ ಸಮಾಜದ ಪರವಾಗಿ, ಅಂದರೆ ಸಾಮಾಜಿಕ ಯೋಜನೆಯೊಂದಕ್ಕೆ ಅನುಗುಣವಾಗಿ, ಸಮಾಜದ ಸದಸ್ಯರೆಲ್ಲರೂ ಭಾಗವಹಿಸುವಂತೆ, ನಡೆಸುತ್ತದೆ. ಹೀಗೆ ಅದು ಸ್ಪರ್ಧೆಯನ್ನು ಕೊನೆಗಾಣಿಸಿ ಅದರ ಸ್ಥಳದಲ್ಲಿ ಸಹಕಾರವನ್ನು ಸ್ಥಾಪಿಸುತ್ತದೆ. ಕೈಗಾರಿಕೆಯನ್ನು ಬಿಡಿ ವ್ಯಕ್ತಿಗಳು ನಡೆಸುವುದು ಅನಿವಾರ್ಯವಾಗಿಯೇ ಖಾಸಗಿ ಮಾಲಿಕತ್ವಕ್ಕೆ ದಾರಿ ಮಾಡಿಕೊಡುವುದರಿಂದ ಮತ್ತು ಸ್ಪರ್ಧೆ ಎಂದರೆ ಕೈಗಾರಿಕೆಯನ್ನು ಬಿಡಿ ಖಾಸಗಿ ಮಾಲಿಕರು ನಡೆಸುವ ವಿಧಾನವಲ್ಲದೆ ಬೇರೇನೂ ಆಗಿರದ ಕಾರಣ, ಖಾಸಗಿ ಮಾಲಿಕತ್ವವನ್ನು ಬಿಡಿ ವ್ಯಕ್ತಿಗಳು ಕೈಗಾರಿಕೆಯನ್ನು ನಡೆಸುವುದರಿಂದಲೂ ಸ್ಪರ್ಧೆಯಿಂದಲೂ ಪ್ರತ್ಯೇಕಗೊಳಿಸುವುದು ಸಾಧ್ಯವಿಲ್ಲ. ಆದ್ದರಿಂದ ಖಾಸಗಿ ಮಾಲಿಕತ್ವವನ್ನೂ ಅಳಿಸಬೇಕಾಗುವುದು ಮತ್ತು ಅದರ ಬದಲು ಎಲ್ಲ ಉತ್ಪಾದನಾ ಸಲಕರಣೆಗಳ ಸಾಮಾನ್ಯ ಬಳಕೆ ಹಾಗೂ ಸಾಮಾನ್ಯ ಒಪ್ಪಂದಕ್ಕನುಗುಣವಾಗಿ ಎಲ್ಲ ಉತ್ಪನ್ನಗಳ ವಿತರಣೆ, ಅಥವಾ ಆಸ್ತಿಯ ಸಾಮಾನ್ಯ ಒಡೆತನ ಎನ್ನುವಂಥ ವ್ಯವಸ್ಥೆ, ಏರ್ಪಡಲಿರುವುದು. ಖಾಸಗಿ ಮಾಲಿಕತ್ವವನ್ನು ಅಳಿಸುವುದು, ಕೈಗಾರಿಕೆಯ ಬೆಳವಣಿಗೆಯಿಂದ ಅನಿವಾರ್ಯವಾಗಿಯೇ ಉಂಟಾದ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪರಿವರ್ತನೆಗೊಳಿಸುವುದನ್ನು ಅತ್ಯಂತ ಅಡಕವಾಗಿ ಅತ್ಯಂತ ವಿಶಿಷ್ಟವಾಗಿ ಹಾಗೂ ಸಂಗ್ರಹವಾಗಿ ವ್ಯಕ್ತಪಡಿಸುತ್ತದೆ. ಆದ್ದರಿಂದ ಕಮ್ಯೂನಿಸ್ಟರು ಇದನ್ನೇ ಮುಖ್ಯ ಕೇಳಿಕೆಯನ್ನಾಗಿ ಮುಂದಿಟ್ಟಿರುವುದು ಸರಿಯಾದುದೇ ಆಗಿದೆ.

ಪ್ರಶ್ನೆ 15: ಅಂದ ಮೇಲೆ ಖಾಸಗಿ ಆಸ್ತಿಯ ವ್ಯವಸ್ಥೆಯನ್ನು ತೊಡೆದುಹಾಕುವುದು ಇದಕ್ಕೆ ಮುನ್ನ ಅಸಾಧ್ಯವಾಗಿದ್ದಿತೆ?

ಉತ್ತರ: ಹೌದು. ಸಾಮಾಜಿಕ ಪದ್ಧತಿಯಲ್ಲಿನ ಪ್ರತಿಯೊಂದು ಬದಲಾವಣೆಯೂ, ಆಸ್ತಿ ಸಂಬಂಧಗಳಲ್ಲಿನ ಪ್ರತಿಯೊಂದು ಕ್ರಾಂತಿಯೂ, ಹಳೆಯ ಆಸ್ತಿ ಸಂಬಂಧಗಳಿಗೆ ಎಷ್ಟು ಮಾತ್ರವೂ ಸರಿಹೊಂದದಂಥ ಹೊಸ ಉತ್ಪಾದಕ ಶಕ್ತಿಗಳು ಸೃಷ್ಟಿಯಾದುದರ ಸಾರಭೂತ ಪರಿಣಾಮಗಳೇ ಆಗಿವೆ. ಖಾಸಗಿ ಆಸ್ತಿಯೇ ಈ ರೀತಿ ಹುಟ್ಟಿಬಂದಿತು. ಏಕೆಂದರೆ, ಖಾಸಗಿ ಆಸ್ತಿ ಯಾವತ್ತೂ ಇದ್ದುದಾಗಿರಲಿಲ್ಲ. ಮಧ್ಯಯುಗದ ಕೊನೆಯ ಭಾಗದಲ್ಲಿ ಕೈಗೆಲಸದ ಕಾರ್ಖಾನೆ ರೂಪದಲ್ಲಿ ಹೊಸ ಉತ್ಪಾದನಾ ವಿಧಾನವು ಜಾರಿಗೆ ಬಂದಾಗ ಅದು ಆಗ ಅಸ್ತಿತ್ವದಲ್ಲಿದ್ದ ಸಾಮಂತ ಶಾಹಿ ಹಾಗೂ ಗಿಲ್ಡ್ ಆಸ್ತಿ ವ್ಯವಸ್ಥೆಗೆ ಅಸಂಗತವಾಗಿದ್ದಿತು. ಹಾಗಾಗಿ ಹಳೆಯ ಆಸ್ತಿ ಸಂಬಂಧಗಳನ್ನು ಮೀರಿ ಬೆಳೆದಿದ್ದ ಕೈಗೆಲಸದ ಕಾರ್ಖಾನೆ ಪದ್ಧತಿಯು ಒಂದು ಹೊಸ ಮಾಲಿಕತ್ವ ವಿಧಾನವನ್ನು – ಖಾಸಗಿ ಮಾಲಿಕತ್ವವನ್ನು – ಸೃಷ್ಟಿಸಿತು. ಕೈಗೆಲಸದ ಕಾರ್ಖಾನೆ ಪದ್ಧತಿಯು ಕಾಲಾವಧಿಯಲ್ಲಿ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಯ ಬೆಳವಣಿಗೆಯ ಮೊದಲ ಘಟ್ಟದಲ್ಲಿ ಖಾಸಗಿ ಮಾಲಿಕತ್ವದ ಆಸ್ತಿ ಸ್ವರೂಪ ಬಿಟ್ಟು ಬೇರಾವ ಆಸ್ತಿ ಸ್ವರೂಪವೂ, ಖಾಸಗಿ ಮಾಲಿಕತ್ವದ ಮೇಲೆ ಸಂಸ್ಥಾಪಿತವಾದ ಸಮಾಜ ವ್ಯವಸ್ಥೆ ಬಿಟ್ಟು ಬೇರಾವ ಸಮಾಜ ವ್ಯವಸ್ಥೆಯೂ, ಸಾಧ್ಯವಿರಲಿಲ್ಲ. ಎಲ್ಲರಿಗೂ ಸರಬರಾಜು ಮಾಡಲಷ್ಟೆ ಅಲ್ಲ ಸಾಮಾಜಿಕ ಬಂಡವಾಳ ಹೆಚ್ಚಿಸುವುದಕ್ಕೂ ಉತ್ಪಾದಕ ಶಕ್ತಿಗಳನ್ನು ಮತ್ತಷ್ಟು ವೃದ್ಧಿಗೊಳಿಸುವುದಕ್ಕೂ ಒದಗಿಸಲು ಸಾಲುವಷ್ಟು ಉತ್ಪಾದನೆಯನ್ನು ಎಲ್ಲಿಯವರೆಗೆ ಮಾಡಲಾಗುವುದಿಲ್ಲವೋ ಅಲ್ಲಿಯವರೆಗೆ ಸಮಾಜದ ಉತ್ಪಾದಕ ಶಕ್ತಿಗಳ ಮೇಲೆ ಆಧಿಪತ್ಯ ಹೊಂದಿರುವಂಥ ಪ್ರಬಲ ವರ್ಗವೊಂದೂ ಮತ್ತು ಬಡ ಮರ್ದಿತ ವರ್ಗವೊಂದೂ ಯಾವತ್ತೂ ಇದ್ದೇ ಇರಬೇಕು. ಈ ವರ್ಗಗಳು ಯಾವ ರೀತಿ ರೂಪುಗೊಳ್ಳುತ್ತವೆಂಬುದು ಉತ್ಪಾದನೆಯ ಬೆಳವಣಿಗೆಯ ಘಟ್ಟದ ಮೇಲೆ ಅವಲಂಬಿಸಿರುವುದು. ಮಧ್ಯಯುಗದಲ್ಲಿ ಕೃಷಿಯ ಮೇಲೆ ಅವಲಂಬಿತವಾಗಿದ್ದಾಗ ನಾವು ಭೂಮಾಲಿಕನನ್ನೂ ಜೀತದಾಳನ್ನೂ ಕಾಣುತ್ತೇವೆ; ಮಧ್ಯಯುಗದಲ್ಲೇ ಆನಂತರ ಕಾಲದ ನಗರಗಳಲ್ಲಿ ನಾವು ಮಾಸ್ಟರ್ ಗಿಲ್ಡ್‌ಮನ್ ಮತ್ತವನ ಕೆಲಸದ ಅಭ್ಯಾಸಿಗಳನ್ನೂ ದಿನಗೂಲಿಯುವರನ್ನೂ ಕಾಣುತ್ತೇವೆ; ಹದಿನೇಳನೆಯ ಶತಮಾನದಲ್ಲಿ ಕೈಗೆಲಸದ ಕಾರ್ಖಾನೆಯಾಧಿಪತಿಗಳು ಹಾಗೂ ಕೈಗೆಲಸದ ಕಾರ್ಖಾನೆ ಕಾರ್ಮಿಕರು ಬಂದರು; ಹತ್ತೊಂಬತ್ತನೆಯ ಶತಮಾನದಲ್ಲಿ ನಾವು ದೊಡ್ಡ ಕಾರ್ಖಾನೆ ಮಾಲಿಕನನ್ನೂ ಶ್ರಮಜೀವಿಯನ್ನೂ ಕಾಣುತ್ತೇವೆ. ಇದು ವರೆವಿಗೂ ಉತ್ಪಾದಕ ಶಕ್ತಿಗಳು, ಎಲ್ಲರಿಗೂ ಸಾಲುವಷ್ಟು ಒದಗಿಸಲೂ, ಖಾಸಗಿ ಆಸ್ತಿಯನ್ನು ಉತ್ಪಾದಕ ಶಕ್ತಿಗಳಿಗೆ ಬಂಧನವನ್ನಾಗಿ, ಅಡಚಣೆಯನ್ನಾಗಿ ಮಾಡಲೂ ಸಾಲುವಷ್ಟು ವಿಸ್ತೃತವಾಗಿ ಇನ್ನೂ ಅಭಿವೃದ್ಧಿಗೊಂಡಿರಲಿಲ್ಲ ಎಂಬುದು ಸುಸ್ಪಷ್ಟ.

ಈಗಲಾದರೋ ಬೃಹತ್ ಪ್ರಮಾಣದ ಕೈಗಾರಿಕೆಯು ಬೆಳವಣಿಗೆಯು, ಮೊದಲನೆಯದಾಗಿ, ಇದುವರೆವಿಗೂ ಕೇಳಿ ಬರದಿದ್ದಷ್ಟು ಪ್ರಮಾಣದಲ್ಲಿ ಬಂಡವಾಳವನ್ನೂ ಉತ್ಪಾದಕ ಶಕ್ತಿಗಳನ್ನೂ ಸೃಜಿಸಿದೆ ಮತ್ತು ಈ ಉತ್ಪಾದಕ ಶಕ್ತಿಗಳನ್ನು ಅತ್ಯಲ್ಪ ಕಾಲದಲ್ಲೇ ಕೊನೆಯಿಲ್ಲದಷ್ಟು ವೃದ್ಧಿಗೊಳಿಸಲು ಸಾಧನಗಳು ಇವೆ: ಎರಡನೆಯದಾಗಿ, ಈ ಉತ್ಪಾದಕ ಶಕ್ತಿಗಳು ಕೆಲವೇ ಬೂರ್ಷ್ವಾಗಳ ಕೈಯಲ್ಲಿ ಕೇಂದ್ರೀಕೃತವಾಗಿ ಬಹುಸಂಖ್ಯಾತ ಜನರು ಸತತವಾಗಿ ಹೆಚ್ಚುಹೆಚ್ಚಾಗಿ ಶ್ರಮಜೀವಿ ವರ್ಗಕ್ಕೆ ಪತನಗೊಳ್ಳುತ್ತಿದ್ದಾರೆ ಮತ್ತು ಅವರ ಪರಿಸ್ಥಿತಿಯು ಬೂರ್ಷ್ವಾಸೀಯ ಆಸ್ತಿ ವೃದ್ಧಿಗೊಂಡಷ್ಟೇ ಪ್ರಮಾಣದಲ್ಲಿ ದರಿದ್ರವೂ ಅಸಹನೀಯವೂ ಆಗುತ್ತಿದೆ; ಮೂರನೆಯದಾಗಿ, ಈ ಭಾರಿಯಾದ ಹಾಗೂ ಸುಲಭವಾಗಿ ವೃದ್ಧಿಗೊಂಡ ಉತ್ಪಾದಕ ಶಕ್ತಿಗಳು ಖಾಸಗಿ ಆಸ್ತಿ ಹಾಗೂ ಬೂರ್ಷ್ವಾ ವ್ಯವಸ್ಥೆಯನ್ನು ಮೀರಿ ಎಷ್ಟರಮಟ್ಟಿಗೆ ಹೆಚ್ಚಾಗಿ ಬೆಳೆದಿವೆಯೆಂದರೆ ಅವು ಸಾಮಾಜಿಕ ವ್ಯವಸ್ಥೆಯಲ್ಲಿ ಸತತವಾಗಿ ತೀವ್ರತರವಾದ ಕ್ಷೋಭೆಗಳನ್ನು ಉಂಟುಮಾಡುತ್ತಿವೆ. ಇಂಥ ಪರಿಸ್ಥಿತಿಯಲ್ಲಷ್ಟೆ, ಈಗಷ್ಟೆ, ಖಾಸಗಿ ಆಸ್ತಿಯನ್ನು ತೊಡೆದುಹಾಕುವುದು ಸಾಧ್ಯವಾಗಿದೆಯಷ್ಟೆ ಅಲ್ಲ ಕಟ್ಟುನಿಟ್ಟಾಗಿ ಅಗತ್ಯವಾದುದೂ ಆಗಿದೆ.

ಪ್ರಶ್ನೆ 16: ಖಾಸಗಿ ಆಸ್ತಿಯನ್ನು ತೊಡೆದುಹಾಕುವುದನ್ನು ಶಾಂತಿಯುತ ವಿಧಾನಗಳಲ್ಲಿ ಜಾರಿಗೆ ತರಲು ಸಾಧ್ಯವಾಗುವುದೆ?

ಉತ್ತರ: ಅದು ಹಾಗೆ ಆಗಲೆಂದೇ ಎಲ್ಲರ ಬಯಕೆ. ಕಮ್ಯೂನಿಸ್ಟರಂತೂ ಖಂಡಿತ ಅದನ್ನು ಎಂದಿಗೂ ವಿರೋಧಿಸರು. ಒಳಸಂಚು ಪಿತೂರಿಗಳೆಲ್ಲ ನಿರರ್ಥಕವಷ್ಟೆ ಅಲ್ಲ ಹಾನಿಕಾರಕವೂ ಹೌದು ಎಂದು ಕಮ್ಯೂನಿಸ್ಟರು ಚೆನ್ನಾಗಿ ಬಲ್ಲರು. ಕ್ರಾಂತಿಗಳು ಬೇಕೆಂದು ಮಾಡಿದವುಗಳಲ್ಲ, ಸ್ವೇಚ್ಛಾನುಸಾರ ಆಗುವುದಿಲ್ಲ, ಅವು ಎಲ್ಲೆಲ್ಲೂ ಎಲ್ಲ ಕಾಲಗಳಲ್ಲೂ ಯಾವುದೇ ಪಾರ್ಟಿಗಳ ನಾಯಕತ್ವದ ಹಾಗೂ ಇಡೀ ವರ್ಗಗಳ ಸಂಕಲ್ಪದಿಂದ ಸಂಪೂರ್ಣವಾಗಿ ಸ್ವತಂತ್ರವಾದ ಪರಿಸ್ಥಿತಿಗಳ ಅಗತ್ಯ ಫಲಿತಾಂಶಗಳಾಗಿರುತ್ತವೆ, ಎಂಬುದನ್ನೂ ಅವರು ಚೆನ್ನಾಗಿ ಬಲ್ಲರು. ಆದರೆ ಅದೇ ವೇಳೆಯಲ್ಲಿ ಬಹುಮಟ್ಟಿಗೆ ಪ್ರತಿ ನಾಗರಿಕ ದೇಶದಲ್ಲೂ ಶ್ರಮಜೀವಿ ವರ್ಗದ ಬೆಳವಣಿಗೆಯನ್ನು ಬಲಪ್ರಯೋಗದಿಂದ ಹತ್ತಿಕ್ಕಲಾಗುತ್ತಿದೆ, ತನ್ಮೂಲಕ ಕಮ್ಯೂನಿಸ್ಟರ ವಿರೋಧಿಗಳು ಎಲ್ಲ ರೀತಿಯಲ್ಲೂ ಕ್ರಾಂತಿಗೆ ಪ್ರೋತ್ಸಾಹ ನೀಡುವತ್ತ ಚಲಿಸುತ್ತಿದ್ದಾರೆ, ಎಂಬುದನ್ನೂ ಅವರು ಕಾಣುತ್ತಾರೆ. ಮರ್ದಿತ ಶ್ರಮಜೀವಿ ವರ್ಗವು ಕೊನೆಯಲ್ಲಿ ಕ್ರಾಂತಿ ಉಂಟುಮಾಡುವಂತೆ ಪ್ರಚೋದಿತವಾದಲ್ಲಿ, ನಾವು ಕಮ್ಯೂನಿಸ್ಟರು ಈಗ ಮಾತುಗಳ ಮೂಲಕ ಮಾಡುತ್ತಿರುವಷ್ಟೆ ಚೆನ್ನಾಗಿ ಆಗ ಕೃತಿಯ ಮೂಲಕ ಶ್ರಮಜೀವಿಗಳ ಹಿತಧ್ಯೇಯಗಳನ್ನು ಸಂರಕ್ಷಿಸುವೆವು.

ಪ್ರಶ್ನೆ 17: ಖಾಸಗಿ ಆಸ್ತಿಯನ್ನು ಒಂದೇ ಏಟಿಗೆ ತೊಡೆದುಹಾಕುವುದು ಸಾಧ್ಯವೇ?

ಉತ್ತರ: ಇಲ್ಲ. ಒಂದೇ ಏಟಿಗೆ ಈಗ ಅಸ್ತಿತ್ವದಲ್ಲಿರುವ ಉತ್ಪಾದಕ ಶಕ್ತಿಗಳನ್ನು ಸಾಮುದಾಯಿಕ ಆರ್ಥಿಕತೆಗೆ ಅವಶ್ಯವಾದಷ್ಟು ಪ್ರಮಾಣಕ್ಕೆ ವೃದ್ಧಿಗೊಳಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅದೂ ಸಾಧ್ಯವಿಲ್ಲ. ಆದ್ದರಿಂದ ಎಲ್ಲ ಸೂಚನೆಗಳ ರೀತ್ಯಾ ಸಮೀಪಿಸುತ್ತಿರುವ ಶ್ರಮಜೀವಿ ಕ್ರಾಂತಿಯು ಈಗ ಅಸ್ತಿತ್ವದಲ್ಲಿರುವ ಸಮಾಜವನ್ನು ಕ್ರಮೇಣವಾಗಿಯಷ್ಟೆ ಪರಿವರ್ತಿಸಲು ಸಮರ್ಥವಾಗುವುದು ಮತ್ತು ಉತ್ಪಾದನಾ ಸಾಧನಗಳು ಅವಶ್ಯ ಪ್ರಮಾಣದಲ್ಲಿ ಸೃಷ್ಟಿಯಾದಾಗಲಷ್ಟೆ ಖಾಸಗಿ ಮಾಲಿಕತ್ವವನ್ನು ತೊಡೆದುಹಾಕಲಾಗುವುದು.

ಪ್ರಶ್ನೆ 18: ಈ ಕ್ರಾಂತಿಯು ಯಾವ ಮಾರ್ಗವನ್ನು ಹಿಡಿಯಲಿರುವುದು?

ಉತ್ತರ: ಮೊದಲು ಅದು ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉದ್ಘಾಟಿಸುವುದು, ತನ್ಮೂಲಕ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಶ್ರಮಜೀವಿಗಳ ರಾಜಕೀಯ ಆಳ್ವಿಕೆಯನ್ನು ಜಾರಿಗೆ ತರುವುದು. ಜನತೆಯಲ್ಲಿ ಬಹುಭಾಗ ಆಗಲೇ ಶ್ರಮಜೀವಿಗಳಾಗಿರುವ ಇಂಗ್ಲೆಂಡಿನಲ್ಲಿ ಇದನ್ನು ಪ್ರತ್ಯಕ್ಷವಾಗಿಯೂ ಫ್ರಾನ್ಸ್, ಜರ್ಮನಿಗಳಲ್ಲಿ ಪರೋಕ್ಷವಾಗಿಯೂ ಆಗುಮಾಡಲಾಗುವುದು. ಫ್ರಾನ್ಸ್, ಜರ್ಮನಿಗಳಲ್ಲಿ ಜನತೆಗಳ ಬಹುಭಾಗ ಶ್ರಮಜೀವಿಗಳನ್ನಲ್ಲದೆ ಪುಟ್ಟ ರೈತರುಗಳನ್ನೂ ಪಟ್ಟಣದ ಪೆಟಿ ಬೂರ್ಷ್ವಾಗಳನ್ನೂ ಒಳಗೊಂಡಿದೆ. ಇವರೀಗ ಶ್ರಮಜೀವಿಗಳಾಗುತ್ತಿದ್ದಾರೆ. ತಮ್ಮ ರಾಜಕೀಯ ಹಿತಗಳಲ್ಲಿ ಇವರು ಹೆಚ್ಚುಹೆಚ್ಚಾಗಿ ಶ್ರಮಜೀವಿಗಳ ಮೇಲೆ ಅವಲಂಬಿಸುತ್ತಿದ್ದಾರೆ. ಆದ್ದರಿಂದ ಬೇಗನೆಯೇ ಅವರು ಶ್ರಮಜೀವಿಗಳ ಕೇಳಿಕೆಗಳಿಗೆ ಮಣಿಯಲೇ ಬೇಕಾಗುವುದು. ಬಹುಶಃ ಇದಕ್ಕಾಗಿ ಇನ್ನೊಂದು ಹೋರಾಟ ನಡೆಯಬೇಕಾಗಬಹುದೇನೋ. ಅದು ಶ್ರಮಜೀವಿಯ ವಿಜಯದಲ್ಲಷ್ಟೆ ಕೊನೆಗಾಣಲಿರುವುದು.

ಶ್ರಮಜೀವಿ ವರ್ಗವು ಪ್ರಜಾಪ್ರಭುತ್ವವನ್ನು ತಕ್ಷಣವೇ ಖಾಸಗಿ ಮಾಲಿಕತ್ವದ ಮೇಲೆ ನೇರ ದಾಳಿ ಮಾಡುವಂಥ ವಿಸ್ತೃತ ಕ್ರಮಗಳನ್ನು ಸಾಧಿಸುವ ಸಾಧನವನ್ನಾಗಿ ಮತ್ತು ಶ್ರಮಜೀವಿ ವರ್ಗದ ಅಸ್ತಿತ್ವವನ್ನು ಭದ್ರಗೊಳಿಸುವ ಸಾಧನವನ್ನಾಗಿ ಬಳಸಲಾಗದಿದ್ದಲ್ಲಿ ಪ್ರಜಾಪ್ರಭುತ್ವವು ಶ್ರಮಜೀವಿ ವರ್ಗಕ್ಕೆ ನಿಷ್ಪ್ರಯೋಜಕವಾಗುತ್ತದೆ. ಈಗಾಗಲೇ ಅಸ್ತಿತ್ವದಲ್ಲಿರುವ ಸಂಬಂಧಗಳ ಫಲಗಳಾದ ಈ ಕ್ರಮಗಳಲ್ಲಿ ಮುಖ್ಯವಾದವು ಕೆಳಗಿನವು:

1. ವರಮಾನ ಹೆಚ್ಚಿದಂತೆ ಹೆಚ್ಚು ಹೆಚ್ಚಾಗುತ್ತ ಹೋಗುವ ತೆರಿಗೆಗಳು, ಪಿತ್ರಾರ್ಜಿತ ಆಸ್ತಿಗಳ ಮೇಲೆ ಉನ್ನತ ಪ್ರಮಾಣದ ತೆರಿಗೆಗಳು. ಸಗೋತ್ರ

ರೀತಿಗಳಲ್ಲಿ (ಸೋದರರು, ಸೋದರಳಿಯಂದಿರು. ಇತ್ಯಾದಿ) ಪಿತ್ರಾರ್ಜಿತ ಆಸ್ತಿ ವ್ಯವಸ್ಥೆಯ ರದ್ದತಿ, ಕಡ್ಡಾಯವಾದ ಸಾಲಗಳು, ಇವೇ ಮುಂತಾದ ಕ್ರಮಗಳ ಮೂಲಕ ಖಾಸಗಿ ಮಾಲಿಕತ್ವವನ್ನು ನಿರ್ಬಂಧಿಸುವುದು.

2. ರಾಜ್ಯ ಕೈಗಾರಿಕೆಯ ಪೈಪೋಟಿಯ ಮೂಲಕ ಭಾಗಶಃವೂ, ಕರೆನ್ಸಿ ನೋಟುಗಳ ರೂಪದಲ್ಲಿ ನಷ್ಟಪರಿಹಾರ ನೀಡುವ ಮೂಲಕ ಪ್ರತ್ಯಕ್ಷವಾಗಿ ಭಾಗ ಶಃವೂ. ಭೂಕಾಣಿ ಒಡೆಯರಿಂದಲೂ, ಕಾರ್ಖಾನೆ ಮಾಲಿಕರಿಂದಲೂ, ರೈಲ್ವೇ ಹಾಗೂ ಹಡಗು ಸಾಗಣೆ ಧಣಿಗಳಿಂದಲೂ ಆಸ್ತಿಯನ್ನು ಕ್ರಮಕ್ರಮವಾಗಿ ವಶ ಪಡಿಸಿಕೊಳ್ಳುವುದು.

3. ಜನತೆಯ ಬಹುಸಂಖ್ಯಾತರ ವಿರುದ್ಧ ಬಂಡಾಯವೇಳುವವರ ಹಾಗೂ ಹೊರ ದೇಶಗಳಿಗೆ ವಲಸೆ ಹೋಗುವವರೆಲ್ಲರ ಆಸ್ತಿಯನ್ನು ವಶಪಡಿಸಿಕೊಳ್ಳು ವುದು.

4. ಶ್ರಮ ಬಳಕೆಯ ಸಂಘಟನೆ ಅಥವಾ ಶ್ರಮಜೀವಿಗಳನ್ನು ರಾಷ್ಟ್ರೀಯ ಎಸ್ಟೇಟುಗಳಲ್ಲಿ, ರಾಷ್ಟ್ರೀಯ ಕಾರ್ಖಾನೆ ಹಾಗೂ ಕರ್ಮಾಗಾರಗಳಲ್ಲಿ ಕೆಲಸ ನೀಡಿ ತನ್ಮೂಲಕ ಕಾರ್ಮಿಕರ ಮಧ್ಯೆಯೇ ಸ್ಪರ್ಧೆಯನ್ನು ಕೊನೆಗಾಣಿಸುವುದು ಮತ್ತು ರಾಜ್ಯ ನೀಡುವಷ್ಟೇ ಉನ್ನತ ಕೂಲಿಗಳನ್ನು ನೀಡುವಂತೆ ಕಾರ್ಖಾನೆ ಮಾಲಿಕರನ್ನು, ಅವರು ಎಲ್ಲಿಯವರೆಗೆ ಅಸ್ತಿತ್ವದಲ್ಲಿರುವರೋ ಅಲ್ಲಿಯವರೆಗೆ, ಬಲಾತ್ಕರಿಸುವುದು.

5. ಖಾಸಗಿ ಮಾಲಿಕತ್ವವನ್ನು ಸಂಪೂರ್ಣವಾಗಿ ಇಲ್ಲವಾಗಿಸುವವರೆಗೂ ಸಮಾಜದ ಸದಸ್ಯರೆಲ್ಲರಿಗೂ ಕೆಲಸ ಮಾಡುವ ಸಮಾನ ಜವಾಬ್ದಾರಿ. ಕೈಗಾರಿಕಾ ಸೇನೆಗಳ ನಿರ್ಮಾಣ, ವಿಶೇಷವಾಗಿ ವ್ಯವಸಾಯದಲ್ಲಿ ಬಳಸುವುದಕ್ಕಾಗಿ.

6. ರಾಜ್ಯ ಬಂಡವಾಳದ ರಾಷ್ಟ್ರೀಯ ಬ್ಯಾಂಕ್ ಮೂಲಕವೂ ಎಲ್ಲ ಖಾಸಗಿ ಬ್ಯಾಂಕುಗಳನ್ನೂ ಬ್ಯಾಂಕರುಗಳನ್ನೂ ನಿಗ್ರಹಿಸುವ ಮೂಲಕವೂ ಸಾಲ ಹಾಗೂ ಬ್ಯಾಂಕಿಂಗ್ ವ್ಯವಸ್ಥೆಗಳನ್ನು ರಾಜ್ಯದ ಕೈಗಳಲ್ಲೇ ಕೇಂದ್ರೀಕರಿಸುವುದು.

7. ರಾಷ್ಟ್ರದ ವಶದಲ್ಲಿರುವ ಬಂಡವಾಳವೂ ಕಾರ್ಮಿಕರ ಸಂಖ್ಯೆಯೂ ಹೆಚ್ಚುತ್ತಿರುವ ಪ್ರಮಾಣದಲ್ಲೇ, ರಾಷ್ಟ್ರೀಯ ಕಾರ್ಖಾನೆಗಳನ್ನೂ, ಕರ್ಮಶಾಲೆ ಗಳನ್ನೂ, ರೈಲ್ವೇ ಹಾಗೂ ಹಡಗುಗಳನ್ನೂ ಹೆಚ್ಚಿಸುವುದು, ಸಾಗುವಳಿಯಾಗದ ಎಲ್ಲ ಭೂಮಿಗಳನ್ನೂ ಸಾಗುವಳಿ ಮಾಡುವುದು ಮತ್ತು ಆಗಲೇ ಸಾಗುವಳಿ ಯಾಗಿರುವ ಭೂಮಿಯನ್ನು ಸುಧಾರಣೆ ಮಾಡುವುದು.

8. ಎಲ್ಲ ಮಕ್ಕಳಿಗೂ, ಅವರು ತಾಯಿಯ ಶುಶ್ರೂಷೆ ಬೇಡವಾದಷ್ಟು ದೊಡ್ಡವರಾದ ಕೂಡಲೇ, ರಾಷ್ಟ್ರದ ವಿದ್ಯಾಸಂಸ್ಥೆಗಳಲ್ಲಿ ರಾಷ್ಟ್ರದ ವೆಚ್ಚದಲ್ಲೇ ವಿದ್ಯಾಭ್ಯಾಸ ನೀಡುವುದು. ಉತ್ಪಾದನೆಯೊಂದಿಗೆ ಸಂಯೋಜಿಸಿದ ಶಿಕ್ಷಣ.

9. ಕೈಗಾರಿಕೆ ಹಾಗೂ ಕೃಷಿಯಲ್ಲಿ ತೊಡಗಿರುವ ಪ್ರಜೆಗಳ ಸಮುದಾಯುಗಳಿಗೆ ಸಾಮಾನ್ಯ ವಸತಿಗಳಾಗಿ ರಾಷ್ಟ್ರದ ಎಸ್ಟೇಟುಗಳಲ್ಲಿ ದೊಡ್ಡ ಪ್ರಾಸಾದಗಳನ್ನು ನಿರ್ಮಿಸುವುದು. ಪ್ರಜೆಗಳು ನಗರದ ಇಲ್ಲವೇ ಗ್ರಾಮುಗಳ ಏಕಪಕ್ಷೀಯತೆ ಹಾಗೂ ಅನಾನುಕೂಲಗಳನ್ನು ಅನುಭವಿಸದಿರುವಂತೆ ನಗರ ಹಾಗೂ ಗ್ರಾಮಾಂತರ ಜೀವನದ ಅನುಕೂಲಗಳನ್ನು ಒಂದುಗೂಡಿಸುವುದು.

10. ನಗರಗಳಲ್ಲಿ ನಿರ್ಮಲವಾಗಿರದ, ಚೆನ್ನಾಗಿ ಕಟ್ಟಿರದ ಎಲ್ಲ ಮನೆಗಳನ್ನೂ ವಸತಿವಿಭಾಗಗಳನ್ನೂ ನಾಶಮಾಡುವುದು.

11. ವಿವಾಹದ ಚೌಕಟ್ಟಿನೊಳಗೆ ಹುಟ್ಟಿದ ಹಾಗೂ ಹೊರಗೆ ಹುಟ್ಟಿದ ಎಲ್ಲ ಮಕ್ಕಳೂ ಸಮಾನ ಆನುವಂಶಿಕ ಹಕ್ಕುಗಳನ್ನು ಅನುಭವಿಸುವಂತೆ ಏರ್ಪಡಿಸುವುದು.

12. ಸಾರಿಗೆ ಸಾಧನಗಳೆಲ್ಲವನ್ನೂ ರಾಷ್ಟ್ರದ ಕೈಗಳಲ್ಲೇ ಕೇಂದ್ರೀಕರಿಸಿ ಇರಿಸುವುದು.

ನಿಜ, ಈ ಎಲ್ಲ ಕ್ರಮುಗಳನ್ನೂ ಒಂದೇ ಕಾಲದಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ. ಆದರೆ ಅವುಗಳಲ್ಲಿ ಒಂದು ಯಾವತ್ತೂ ಇನ್ನೊಂದಕ್ಕೆ ದಾರಿ ಮಾಡಿಕೊಡುತ್ತದೆ. ಖಾಸಗಿ ಮಾಲಿಕತ್ವದ ಮೇಲೆ ಒಮ್ಮೆ ಮೊದಲ ಮೂಲ ಪ್ರಹಾರ ನೀಡಲಾಯಿತೆಂದರೆ ಶ್ರಮಜೀವಿ ವರ್ಗವು ಇನ್ನಷ್ಟು ಮುಂದೆ ಹೋಗುವಂತೆ ಮತ್ತು ಎಲ್ಲ ಬಂಡವಾಳವನ್ನೂ ಎಲ್ಲ ಕೃಷಿ, ಎಲ್ಲ ಕೈಗಾರಿಕೆ, ಎಲ್ಲ ಸಾರಿಗೆ ಹಾಗೂ ಎಲ್ಲ ವಿನಿಮಯ ಸಾಧನಗಳನ್ನೂ ಹೆಚ್ಚುಹೆಚ್ಚಾಗಿ ರಾಜ್ಯದ ಕೈಗಳಲ್ಲಿ ಕೇಂದ್ರೀಕರಿಸುವಂತೆ ಒತ್ತಾಯಕ್ಕೊಳಗಾಗುತ್ತದೆ. ಈ ಎಲ್ಲ ಕ್ರಮುಗಳೂ ಅಂಥ ಪರಿಣಾಮುಗಳತ್ತವೇ ಕರೆದೊಯ್ಯುತ್ತವೆ; ಮತ್ತೆ ಇವೆಲ್ಲವೂ ಶ್ರಮಜೀವಿಗಳ ಶ್ರಮದ ಮೂಲಕ ದೇಶದ ಉತ್ಪಾದಕ ಶಕ್ತಿಗಳು ಯಾವ ಪ್ರಮಾಣದಲ್ಲಿ ವೃದ್ಧಿಗೊಳ್ಳುವುವೋ ಅದೇ ಪ್ರಮಾಣದಲ್ಲಿ ಈಡೇರುತ್ತವೆ ಮತ್ತು ಅವುಗಳ ಕೇಂದ್ರೀಕರಣ ಪರಿಣಾಮುಗಳೂ ಅಭಿವೃದ್ಧಿಗೊಳ್ಳುತ್ತವೆ. ಕೊನೆಯದಾಗಿ ಎಲ್ಲ ಬಂಡವಾಳವೂ ಎಲ್ಲ ಉತ್ಪಾದನೆಯೂ ಮತ್ತು ಎಲ್ಲ ವಿನಿಮಯವೂ ರಾಷ್ಟ್ರದ ಕೈಗಳಲ್ಲಿ ಕೇಂದ್ರೀಕೃತವಾಗಿ, ಖಾಸಗಿ ಮಾಲಿಕತ್ವವು ತನ್ನಷ್ಟಕ್ಕೆ ತಾನೇ ಅಸ್ತಿತ್ವ ಕಳೆದುಕೊಳ್ಳಲಿರುವುದು, ಹಣವು ಅನಾವಶ್ಯಕ ವಸ್ತುವಾಗುವುದು; ಉತ್ಪಾದನೆ ಎಷ್ಟು ಹೆಚ್ಚಾಗಲಿರುವುದೆಂದರೆ ಜನರು ಎಷ್ಟು ಬದಲಾಗುವರೆಂದರೆ, ಹಳೆಯ ಸಾಮಾಜಿಕ ಸಂಬಂಧಗಳ ಕೊನೆಯ ರೂಪಗಳೂ ಬಿದ್ದು ಹೋಗಲು ಸಾಧ್ಯವಾಗುವುದು.

ಪ್ರಶ್ನೆ 19: ಈ ಕ್ರಾಂತಿಯು ಒಂದೇ ಒಂದು ದೇಶದಲ್ಲಿ ಆಗಲು ಸಾಧ್ಯವೇ?

ಉತ್ತರ: ಇಲ್ಲ. ಬೃಹತ್ ಪ್ರಮಾಣದ ಕೈಗಾರಿಕೆಯು ಆಗಲೇ ಜಾಗತಿಕ ಮಾರುಕಟ್ಟೆ ಸೃಜಿಸುವ ಮೂಲಕ ಇಳೆಯ ಮೇಲಿನ ಎಲ್ಲ ಜನತೆಗಳನ್ನೂ, ವಿಶೇಷವಾಗಿ ನಾಗರಿಕ ಜನತೆಗಳನ್ನು, ಹೇಗೆ ಸಂಬಂಧಗೊಳಿಸಿದೆಯೆಂದರೆ, ಪ್ರತಿಯೊಂದು ಜನತೆಯೂ ಮತ್ತೊಂದಕ್ಕೆ ಏನು ಆಗುತ್ತದೋ ಅದರ ಮೇಲೆ ಅವಲಂಬಿಸಿರುತ್ತದೆ. ಅಲ್ಲದೆ, ಬೃಹತ್ ಪ್ರಮಾಣದ ಕೈಗಾರಿಕೆಯು ಎಲ್ಲ ನಾಗರಿಕ ದೇಶಗಳ ಸಾಮಾಜಿಕ ಬೆಳವಣಿಗೆಯನ್ನೂ ಎಷ್ಟು ಸಮಮಟ್ಟಕ್ಕೆ ತಂದಿದೆಯೆಂದರೆ ಈ ಎಲ್ಲ ದೇಶಗಳಲ್ಲೂ ಬೂರ್ಷ್ವಾಸೀಯೂ ಶ್ರಮಜೀವಿ ವರ್ಗವೂ ಸಮಾಜದ ಎರಡು ನಿರ್ಧಾರಕ ವರ್ಗಗಳಾಗಿ ಆಗಿವೆ ಮತ್ತು ಅವುಗಳ ನಡುವಿನ ಹೋರಾಟವು ಇಂದಿನ ಮುಖ್ಯ ಹೋರಾಟವಾಗಿ ಆಗಿದೆ. ಆದ್ದರಿಂದ ಕಮ್ಯೂನಿಸ್ಟ್ ಕ್ರಾಂತಿಯು ಒಂದು ರಾಷ್ಟ್ರದ ಕ್ರಾಂತಿ ಆಗಿರುವುದಷ್ಟೆ ಅಲ್ಲ, ಅದು ಎಲ್ಲ ನಾಗರಿಕ ದೇಶಗಳಲ್ಲೂ ಆಗಲಿರುವುದು, ಅಂದರೆ, ಕೊನೆಯ ಪಕ್ಷ ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಒಂದೇ ಕಾಲದಲ್ಲಿ ಆಗಲಿರುವುದು. ಈ ದೇಶಗಳೊಂದೊಂದರಲ್ಲೂ ಯಾವುದು ಹೆಚ್ಚು ಅಭಿವೃದ್ಧಿಗೊಂಡ ಕೈಗಾರಿಕೆ, ಹೆಚ್ಚು ಸಂಪತ್ತು ಹಾಗೂ ಹೆಚ್ಚು ಪ್ರಮಾಣದ ಉತ್ಪಾದಕ ಶಕ್ತಿಗಳನ್ನು ಹೊಂದಿರುತ್ತದೆ ಎಂಬುದರ ಮೇಲೆ ಅವಲಂಬಿಸಿ ಕ್ರಾಂತಿ ವೃದ್ಧಿಗೊಳ್ಳಲು ಹೆಚ್ಚು ಅಥವಾ ಕಮ್ಮಿ ಕಾಲ ಹಿಡಿಯಲಿರುವುದು. ಆದ್ದರಿಂದ ಅದು ಜರ್ಮನಿಯಲ್ಲಿ ಅತ್ಯಂತ ನಿಧಾನ ಗತಿಯಲ್ಲಿ ಮುಂದುವರೆಯುವುದು, ಸಾಧಿಸಲು ಅತ್ಯಂತ ಕಷ್ಟವಾಗುವುದು; ಇಂಗ್ಲೆಂಡಿನಲ್ಲಿ ಅದು ಅತ್ಯಂತ ಶೀಘ್ರವಾಗಿ ಹಾಗೂ ಅತ್ಯಂತ ಸುಲಭವಾಗಿ ನೆರವೇರುವುದು. ಅದು ಜಗತ್ತಿನ ಇತರ ದೇಶಗಳ ಮೇಲೆ ಗಣನೀಯ ಪ್ರಭಾವವನ್ನು ಬೀರಲಿರುವುದು, ಇದುವರೆವಿಗೂ ಅಸ್ತಿತ್ವದಲ್ಲಿರುವ ಅವುಗಳ ಬೆಳವಣಿಗೆಯ ವಿಧಾನವನ್ನು ಸಂಪೂರ್ಣವಾಗಿ ಬದಲಾಯಿಸಿ ಆ ಬೆಳವಣಿಗೆಯನ್ನು ಬಹಳವಾಗಿ ಉತ್ಕರ್ಷಿಸುವುದು. ಅದು ಜಾಗತಿಕ ಕ್ರಾಂತಿಯಾಗಲಿರುವುದು, ಆದ್ದರಿಂದ ಇಡೀ ಜಗತ್ತನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಹೊಂದಲಿರುವುದು.[42]

ಪ್ರಶ್ನೆ 20: ಖಾಸಗಿ ಮಾಲಿಕತ್ವವನ್ನು ಅಂತಿಮವಾಗಿ ತೊಡೆದು ಹಾಕುವುದರಿಂದ ಆಗುವ ಪರಿಣಾಮಗಳೇನು?

ಉತ್ತರ: ಎಲ್ಲ ಉತ್ಪಾದಕ ಶಕ್ತಿಗಳ ಮತ್ತು ಸಂಪರ್ಕ ಸಾಧನಗಳ ಬಳಕೆಯನ್ನೂ, ಉತ್ಪನ್ನಗಳ ವಿನಿಮಯ ಹಾಗೂ ವಿತರಣೆಯನ್ನೂ ಖಾಸಗಿ ಬಂಡವಾಳಗಾರರಿಂದ ಸಮಾಜವೇ ವಶಪಡಿಸಿಕೊಳ್ಳುವುದೂ, ಅವುಗಳನ್ನು ಸಮಾಜವು ಲಭ್ಯವಿರುವ ಸಾಧನಗಳು ಹಾಗೂ ಇಡೀ ಸಮಾಜದ ಅಗತ್ಯಗಳು ಇವುಗಳ

ಮೇಲೆ ಆಧರಿಸಿದ ಯೋಜನೆಯೊಂದಕ್ಕನುಗುಣವಾಗಿ ನಿರ್ವಹಿಸುವುದೂ. ಮೊಟ್ಟ ಮೊದಲನೆಯದಾಗಿ ಪ್ರಸ್ತುತದಲ್ಲಿನ ಬೃಹತ್ ಪ್ರಮಾಣದ ಕೈಗಾರಿಕೆಯನ್ನು ನಡೆಸುವ ವಿಧಾನದಿಂದ ಉಂಟಾಗುವ ಎಲ್ಲ ದುಷ್ಪರಿಣಾಮಗಳನ್ನೂ ನಿವಾರಿಸುವುದು. ಮುಗ್ಗಟ್ಟುಗಳು ಇರುವುದಿಲ್ಲ: ವಿಸ್ತರಿಸಿದ ಉತ್ಪಾದನೆ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಅತಿ ಉತ್ಪಾದನೆಯಾಗಿ ಇಷ್ಟೊಂದು ಸಂಕಷ್ಟಗಳಿಗೆ ಭಾರಿ ಕಾರಣವಾಗಿರುವುದು, ಆಗ ಜನತೆಗಳ ಅಗತ್ಯತೆಗಳನ್ನು ಪೂರೈಸಲು ಸಾಲದೆ ಮತ್ತಷ್ಟು ವಿಸ್ತರಿಸಬೇಕಾಗುವುದು. ಸಮಾಜದ ತುರ್ತಿನ ಅಗತ್ಯತೆಗಳಿಗೂ ಮೀರಿದ ವಿಸ್ತರಿಸಿದ ಉತ್ಪಾದನೆಯು ಸಂಕಷ್ಟಗಳನ್ನು ತರುವ ಬದಲು ಎಲ್ಲರ ಅವಶ್ಯಕತೆಗಳನ್ನೂ ಪೂರೈಸುವುದು, ಹೊಸ ಅವಶ್ಯಕತೆಗಳನ್ನು ಸೃಜಿಸಿ ಅದೇ ಕಾಲದಲ್ಲಿ ಅವುಗಳನ್ನು ತೃಪ್ತಿಗೊಳಿಸುವ ಸಾಧನಗಳನ್ನೂ ಸೃಜಿಸುವುದು. ಅದು ಮತ್ತಷ್ಟು ಪ್ರಗತಿಗೆ ಉಪಾಧಿಯೂ ಉತ್ತೇಜಕವೂ ಆಗುವುದು. ಅದು ಇದುವರೆಗಿನಂತೆ ಸಾಮಾಜಿಕ ವ್ಯವಸ್ಥೆಯಲ್ಲಿ ಬಿಟ್ಟುಬಿಟ್ಟು ಗೊಂದಲ ಉಂಟುಮಾಡದೇ ಪ್ರಗತಿ ಸಾಧಿಸುವುದು. ಖಾಸಗಿ ಮಾಲಿಕತ್ವದ ನೊಗದಿಂದ ಒಮ್ಮೆ ವಿಮೋಚಿತಗೊಂಡು ಬೃಹತ್ ಪ್ರಮಾಣದ ಕೈಗಾರಿಕೆಯು ಎಂಥ ಅದ್ಭುತ ಪ್ರಮಾಣದಲ್ಲಿ ಅಭಿವೃದ್ಧಿಗೊಳ್ಳುವುದೆಂದರೆ ಈಗಿನ ಬೆಳವಣಿಗೆಯ ಮಟ್ಟವು ನಿಕೃಷ್ಟವೆಂದು ಕಂಡುಬರುವುದು – ಕೈಗೆಲಸದ ಕಾರ್ಖಾನೆ ಪದ್ಧತಿಯು ನಮ್ಮ ಕಾಲದ ಬೃಹತ್ ಪ್ರಮಾಣದ ಕೈಗಾರಿಕೆಯೊಂದಿಗೆ ಹೋಲಿಸಿದಾಗ ಕಾಣಬರುವಂತೆಯೇ. ಈ ಕೈಗಾರಿಕಾಭಿವೃದ್ಧಿಯು ಸಮಾಜದ ಎಲ್ಲ ಸದಸ್ಯರ ಅವಶ್ಯಕತೆಗಳನ್ನೂ ಪೂರೈಸಲು ಸಾಲುವಷ್ಟು ಪ್ರಮಾಣದಲ್ಲಿ ಉತ್ಪನ್ನಗಳನ್ನು ಒದಗಿಸುವುದು. ಖಾಸಗಿ ಮಾಲಿಕತ್ವದ ಒತ್ತಡದಿಂದಾಗಿಯೂ, ಭೂಮಿಯನ್ನು ಸಣ್ಣಸಣ್ಣ ಭಾಗಗಳಾಗಿ ತುಂಡರಿಸಿದುದರಿಂದಾಗಿಯೂ, ಆಗಲೇ ಲಭ್ಯವಿರುವ ಸುಧಾರಣೆ ಮತ್ತು ವೈಜ್ಞಾನಿಕ ಸಾಧನೆಗಳನ್ನು ಬಳಸಲು ಅಡ್ಡಿಗೀಡಾಗಿದ್ದ ಕೃಷಿಯೂ ಹೊಸ ಮುನ್ನಡೆಯನ್ನು ಸಾಧಿಸಿ ಉತ್ಪನ್ನಗಳನ್ನು ಅಪಾರ ಪ್ರಮಾಣದಲ್ಲಿ ಸಮಾಜದ ವಶದಲ್ಲಿರಿಸುವುದು. ಹೀಗೆ ಸಮಾಜವು ತನ್ನೆಲ್ಲ ಸದಸ್ಯರ ಅಗತ್ಯತೆಗಳನ್ನೂ ಪೂರೈಸುವಂತೆ ವಿತರಣೆಯನ್ನು ಏರ್ಪಡಿಸಲು ಸಾಲುವಷ್ಟು ಉತ್ಪನ್ನಗಳನ್ನು ತಯಾರಿಸುವುದು. ಸಮಾಜವನ್ನು ನಾನಾ ವಿರುದ್ಧ ಹಿತಾಸಕ್ತಿಗಳ ವರ್ಗಗಳನ್ನಾಗಿ ವಿಭಜಿಸುವುದು ಹಾಗೆ ಅನಾವಶ್ಯಕವಾಗುತ್ತದೆ. ಅನಾವಶ್ಯಕವಾಗುತ್ತದಷ್ಟೆ ಅಲ್ಲ ಅದು ಹೊಸ ಸಾಮಾಜಿಕ ವ್ಯವಸ್ಥೆಯೊಂದಿಗೆ ಅಸಂಗತವೂ ಆಗುತ್ತದೆ. ವರ್ಗಗಳು ಶ್ರಮ ವಿಭಜನೆಯ ಮೂಲಕ ಅಸ್ತಿತ್ವಕ್ಕೆ ಬಂದವು. ಅಂಥ ಶ್ರಮವಿಭಜನೆಯು ಇದುವರೆವಿಗೂ ಅಸ್ತಿತ್ವದಲ್ಲಿರುವ ರೂಪದಲ್ಲಿ ಸಂಪೂರ್ಣವಾಗಿ ಕಣ್ಮರೆಯಾಗುವುದು. ಈಗ ವಿವರಿಸಿರುವ ಔನ್ನತ್ಯಗಳಿಗೆ ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆ

ಅಭಿವೃದ್ಧಿಗೊಳ್ಳಲು ಯಾಂತ್ರಿಕ ಹಾಗೂ ರಾಸಾಯನಿಕ ಸಹಾಯಕಗಳಷ್ಟೆ ಸಾಲವು; ಈ ಸಹಾಯಕಗಳನ್ನು ಚಾಲನೆಗೆ ತರುವ ಜನರ ಸಾಮರ್ಥ್ಯಗಳೂ ಸಹ ಅದೇ ರೀತಿ ಅನುಗುಣವಾಗಿ ಅಭಿವೃದ್ಧಿಗೊಳ್ಳಬೇಕು. ಕಳೆದ ಶತಮಾನ ದಲ್ಲಿ ರೈತರೂ ಕೈಗೆಲಸದ ಕಾರ್ಖಾನೆ ಕಾರ್ಮಿಕರೂ ಬೃಹತ್ ಪ್ರಮಾಣದ ಕೈಗಾರಿಕೆ ಯೊಳಕ್ಕೆ ಸೆಳೆಯಲ್ಪಟ್ಟಾಗ ತಮ್ಮ ಇಡೀ ಜೀವನ ವಿಧಾನವನ್ನೇ ಬದಲಿಸಿ ಕೊಂಡು ತಾವೇ ಸಂಪೂರ್ಣವಾಗಿ ಭಿನ್ನರಾದ ಜನರಾದ ಹಾಗೆಯೇ, ಇಡೀ ಸಮಾಜವೇ ಉತ್ಪಾದನೆಯನ್ನು ಸಂಯುಕ್ತವಾಗಿ ನಿರ್ವಹಿಸುವುದಕ್ಕೂ ತತ್ಫಲವಾದ ಉತ್ಪಾದನೆಯ ಹೊಸ ಬೆಳವಣಿಗೆಗೂ ತೀರ ಭಿನ್ನರಾದ ಜನರು ಬೇಕಾಗುತ್ತದೆ ಮತ್ತು ಅಂಥ ಜನರನ್ನು ರೂಪಿಸುವುದೂ ಅವಶ್ಯವಾಗುತ್ತದೆ. ಉತ್ಪಾದನೆಯ ಸಂಯುಕ್ತ ನಿರ್ವಹಣೆಯನ್ನು ಇಂದಿರುವಂಥ ರೀತಿಯ ಜನರಿಂದ ಮಾಡಲಾ ಗುವುದಿಲ್ಲ. ಇಂದು ಪ್ರತಿಯೊಬ್ಬ ವ್ಯಕ್ತಿಯೂ ಉತ್ಪಾದನೆಯ ಒಂದೇ ಶಾಖೆಗೆ ನಿಯೋಜಿತನಾಗಿರುತ್ತಾನೆ, ಅದಕ್ಕೆ ಬಂಧಿತನಾಗಿರುತ್ತಾನೆ, ಅದರಿಂದ ಶೋಷಣೆ ಗೊಳಗಾಗಿರುತ್ತಾನೆ. ಇಂದಿನ ಜನರಲ್ಲಿ ಪ್ರತಿಯೊಬ್ಬನೂ ಉಳಿದೆಲ್ಲ ಸಾಮ ರ್ಥ್ಯಗಳನ್ನೂ ಕಳೆದುಕೊಂಡು ಒಂದೇ ಒಂದು ಸಾಮರ್ಥ್ಯವನ್ನು ಬೆಳೆಸಿಕೊಂಡಿ ರುತ್ತಾನೆ, ಉತ್ಪಾದನೆಯ ಒಂದೇ ಒಂದು ಶಾಖೆಯನ್ನಷ್ಟೆ ಅಥವಾ ಒಂದು ಶಾಖೆಯ ಶಾಖೆಯನ್ನಷ್ಟೆ ತಿಳಿದಿರುತ್ತಾನೆ. ಸಮಕಾಲೀನ ಕೈಗಾರಿಕೆಯೂ ಸಹ ಅಂಥ ಜನರನ್ನು ಅಷ್ಟು ಪ್ರಯೋಜಕರನ್ನಾಗಿ ಕಂಡುಕೊಳ್ಳುತ್ತಿಲ್ಲ. ಇಡೀ ಸಮಾ ಜವೇ ಯೋಜನೆಯೊಂದಕ್ಕನುಗುಣವಾಗಿ ಕೈಗಾರಿಕೆಯನ್ನು ಸಂಯುಕ್ತವಾಗಿ ನಡೆಸು ವುದಕ್ಕೆ ಸರ್ವತೋಮುಖವಾಗಿ ಅಭಿವೃದ್ಧಿಗೊಂಡ ಸಾಮರ್ಥ್ಯವುಳ್ಳ, ಉತ್ಪಾ ದನೆಯ ಇಡೀ ವ್ಯವಸ್ಥೆಯನ್ನು ಸಮೀಕ್ಷಿಸುವ ಸಾಮರ್ಥ್ಯವುಳ್ಳ ಜನರಿರ ಬೇಕೆಂಬುದು ಪೂರ್ವಸೂಚಿತವಾಗಿರುತ್ತದೆ. ಆದ್ದರಿಂದ, ಒಬ್ಬನನ್ನು ರೈತನನ್ನಾಗಿ, ಇನ್ನೊಬ್ಬನನ್ನು ಮೋಚಿಯನ್ನಾಗಿ, ಮತ್ತೊಬ್ಬನನ್ನು ಕಾರ್ಖಾನೆ ಕಾರ್ಮಿಕನನ್ನಾಗಿ, ಮಗದೊಬ್ಬನನ್ನು ಬಂಡವಾಳ ಸಟ್ಟಾ ವ್ಯಾಪಾರಿಯನ್ನಾಗಿ ಮಾಡುವ ಶ್ರಮ ವಿಭಜನೆಯು – ಯಂತ್ರ ವ್ಯವಸ್ಥೆ ಆಗಲೇ ಇದನ್ನು ಶಿಥಿಲಗೊಳಿಸಿದೆ – ಸಂಪೂ ರ್ಣವಾಗಿ ಕಣ್ಮರೆಯಾಗುವುದು. ಶಿಕ್ಷಣವು ಯುವಜನರಿಗೆ ಬೇಗ ಉತ್ಪಾದನೆಯ ಇಡೀ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಾಧ್ಯಮಾಡಿಕೊಡುವುದು. ಸಾಮಾ ಜಿಕ ಅವಶ್ಯಕತೆಗಳಿಗೆ ಅಥವಾ ತಮ್ಮ ಸ್ವಂತ ಮನೋಒಲವುಗಳಿಗೆ ತಕ್ಕಂತೆ ಕೈಗಾ ರಿಕೆಯ ಒಂದು ಶಾಖೆಯನಂತರ ಮತ್ತೊಂದಕ್ಕೆ ಹೋಗಲು ಅದು ಅವರಿಗೆ ಸಾಧ್ಯಮಾಡಿಕೊಡುವುದು. ಆದ್ದರಿಂದ ಅದು ಈಗಿನ ಶ್ರಮವಿಭಜನೆ ಎಲ್ಲರ ಮೇಲೆಯೂ ಹೊರಿಸಿರುವಂಥ ಬೆಳವಣಿಗೆಯಲ್ಲಿನ ಏಕಪಾರ್ಶ್ವೀಯತೆಯನ್ನು ತೆಗೆದು ಹಾಕುವುದು. ಹೀಗೆ ಕಮ್ಯೂನಿಸ್ಟ್ ರೀತಿಯಲ್ಲಿ ಸಂಘಟಿತವಾದ ಸಮಾಜವು

ತನ್ನ ಸದಸ್ಯರಿಗೆ ಅವರ ಸಮಗ್ರವಾಗಿ ಬೆಳೆದ ಸಾಮರ್ಥ್ಯಗಳನ್ನು ಸಮಗ್ರವಾದ ರೀತಿಯಲ್ಲಿ ಬಳಸುವ ಅವಕಾಶವನ್ನು ಒದಗಿಸಲು ಸಮರ್ಥವಾಗುತ್ತದೆ. ಇದ ರೊಟ್ಟಿಗೇ ನಾನಾ ವರ್ಗಗಳೂ ಅವಶ್ಯವಾಗಿಯೇ ಕಣ್ಮರೆಯಾಗುತ್ತವೆ. ಹೀಗೆ ಕಮ್ಯೂನಿಸ್ಟ್ ರೀತಿಯಲ್ಲಿ ಸಂಘಟಿತವಾದ ಸಮಾಜವು ಒಂದು ಕಡೆ ವರ್ಗಗಳ ಅಸ್ತಿತ್ವಕ್ಕೆ ಅಸಂಗತವಾದುದಾಗುತ್ತದೆ, ಇನ್ನೊಂದು ಕಡೆ, ಈ ಸಮಾಜ ನಿರ್ಮಾಣವೇ ಈ ವರ್ಗ ಭೇದಗಳನ್ನು ತೊಡೆದುಹಾಕಲು ಸಾಧನಗಳನ್ನು ಒದಗಿಸುತ್ತದೆ.

ಇದೇ ರೀತಿ ನಗರ ಹಾಗೂ ಗ್ರಾಮಗಳ ನಡುವಿನ ವಿಭೇದವೂ ಕಣ್ಮರೆಯಾಗುತ್ತದೆಂದು ಇವೆಲ್ಲವುಗಳೂ ತೋರಿಸಿಕೊಡುತ್ತವೆ. ಎರಡು ವಿಭಿನ್ನ ವರ್ಗಗಳಲ್ಲದೆ ಒಂದೇ ಜನರು ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆ ಎರಡನ್ನೂ ನಡೆಸಿಕೊಂಡು ಹೋಗುವುದು, ಶುದ್ಧ ವಸ್ತು ಕಾರಣಗಳಿಗಾಗಿಯಾದರೂ ಸರಿ, ಕಮ್ಯೂನಿಸ್ಟ್ ರೀತಿಯ ಸಹಯೋಜನೆಗೆ ಅಗತ್ಯ ಉಪಾಧಿಯಾಗಿದೆ. ಕೃಷಿಯಲ್ಲಿ ನಿರತರಾದ ಜನರು ದೇಶದಾದ್ಯಂತ ಹರಡಿ ಹಂಚಿ ಹೋಗಿರುವುದು, ಅದೇ ಸಮಯದಲ್ಲಿ ಕೈಗಾರಿಕೆಯಲ್ಲಿ ನಿರತರಾದ ಜನರು ದೊಡ್ಡ ನಗರಗಳಲ್ಲಿ ಗುಂಪು ಕೂಡಿರುವುದು, ಕೃಷಿ ಹಾಗೂ ಕೈಗಾರಿಕೆ ಅಭಿವೃದ್ಧಿಗೊಂಡಿರದ ಹಂತಕ್ಕಷ್ಟೆ ಸರಿಯಾದ ಸ್ಥಿತಿಯಾಗಿದೆ. ಎಲ್ಲ ಮುಂದಿನ ಬೆಳವಣಿಗೆಗೂ ಆತಂಕಕಾರಿಯಾಗಿದೆ. ಇದು ಈಗಲೂ ಸಾಕಷ್ಟು ಗಮನಾರ್ಹ ರೀತಿಯಲ್ಲಿ ಗೋಚರಕ್ಕೆ ಬರುತ್ತಿದೆ.

ಉತ್ಪಾದಕ ಶಕ್ತಿಗಳನ್ನು ಸಾಮಾನ್ಯ ಹಾಗೂ ಸುಯೋಜಿತ ರೀತಿಯಲ್ಲಿ ಉಪಯೋಗವಾಗುವಂತೆ ಮಾಡಲು ಸಮಾಜದ ಎಲ್ಲ ಸದಸ್ಯರೂ ಸಾರ್ವತ್ರಿಕವಾಗಿ ಪಾಲ್ಗೊಳ್ಳುವುದು, ಎಲ್ಲರ ಅಗತ್ಯತೆಗಳನ್ನೂ ಒದಗಿಸಲು ಸಾಲುವಷ್ಟು ಪ್ರಮಾಣದಲ್ಲಿ ಉತ್ಪಾದನೆಯನ್ನು ವಿಸ್ತರಿಸುವುದು, ಕೆಲವರ ಅಗತ್ಯತೆಗಳನ್ನು ಇತರರ ಖರ್ಚಿನಲ್ಲಿ ಪೂರೈಸುವಂಥ ಪರಿಸ್ಥಿತಿಯ ಕೊನೆಗಾಣಿಕೆ, ವರ್ಗಗಳ ಮತ್ತು ಅವುಗಳ ವೈರುಧ್ಯತೆಗಳ ಸಂಪೂರ್ಣ ವಿನಾಶ, ಇದುವರೆವಿಗೂ ಇರುವಂಥ ಶ್ರಮವಿಭಜನೆಯನ್ನು ಅಳಿಸಿಹಾಕುವ ಮೂಲಕ, ಕೈಗಾರಿಕಾ ಶಿಕ್ಷಣದ ಮೂಲಕ, ಕಾರ್ಯಚಟುವಟಿಕೆಗಳನ್ನು ಬದಲಾಯಿಸುವುದರ ಮೂಲಕ, ಎಲ್ಲರೂ ಉತ್ಪಾದಿಸಿದ ಶ್ರೇಯಸ್ಸುಗಳಲ್ಲಿ ಎಲ್ಲರೂ ಭಾಗವಹಿಸುವ ಮೂಲಕ, ನಗರ ಹಾಗೂ ಗ್ರಾಮಗಳ ಒಂದುಗೂಡಿಕೆಯ ಮೂಲಕ ಸಮಾಜದ ಎಲ್ಲ ಸದಸ್ಯರ ಸಾಮರ್ಥ್ಯಗಳ ಸರ್ವತೋಮುಖ ಅಭಿವೃದ್ಧಿ – ಖಾಸಗಿ ಆಸ್ತಿಯನ್ನು ತೊಡೆದುಹಾಕುವುದರಿಂದ ನಿರೀಕ್ಷಿಸಬಹುದಾದ ಮುಖ್ಯ ಪರಿಣಾಮಗಳು ಇಂಥವಾಗಿವೆ.

ಪ್ರಶ್ನೆ 21: ಕಮ್ಯೂನಿಸ್ಟ್ ರೀತಿಯ ಸಮಾಜ ವ್ಯವಸ್ಥೆಯು ಕುಟುಂಬದ ಮೇಲೆ ಯಾವ ಪ್ರಭಾವ ಬೀರುವುದು?

ಉತ್ತರ: ಅದು ಸ್ತ್ರೀ-ಪುರುಷರ ನಡುವಿನ ಸಂಬಂಧಗಳನ್ನು ಸಂಬಂಧ ಪಟ್ಟ ವ್ಯಕ್ತಿಗಳಿಗಷ್ಟೆ ಸೀಮಿತವಾದ ಶುದ್ಧ ಖಾಸಗಿ ವ್ಯವಹಾರವನ್ನಾಗಿ ಮಾಡುವುದು. ಸಮಾಜವು ಮಧ್ಯೆ ಪ್ರವೇಶಿಸುವುದಕ್ಕೆ ಆಸ್ಪದವಿರುವುದಿಲ್ಲ. ಇಂಥ ವ್ಯವಸ್ಥೆ ಜಾರಿಗೆ ತರಲು ಅದಕ್ಕೆ ಸಾಧ್ಯವಾಗುತ್ತದೆ, ಏಕೆಂದರೆ, ಅದು ಖಾಸಗಿ ಆಸ್ತಿಯನ್ನು ತೊಡೆದುಹಾಕುತ್ತದೆ ಮತ್ತು ಮಕ್ಕಳಿಗೆ ಸಾಮುದಾಯಿಕ ಶಿಕ್ಷಣ ನೀಡುತ್ತದೆ. ತನ್ಮೂಲಕ ಅದು ಇದುವರೆವಿಗೂ ಇದ್ದಂಥ ವಿವಾಹದ ಎರಡು ಅಡಿಗಲ್ಲುಗಳನ್ನು – ಖಾಸಗಿ ಆಸ್ತಿ ಪದ್ಧತಿ ಗೊತ್ತುಮಾಡಿದಂತೆ ಪತ್ನಿ ತನ್ನ ಪತಿಯ ಮೇಲೂ ಮಕ್ಕಳು ತಮ್ಮ ತಾಯಿತಂದೆಯರ ಮೇಲೂ ಅವಲಂಬಿಸಿರುವಂಥ ಪರಿಸ್ಥಿತಿಗಳನ್ನು – ನಾಶಪಡಿಸುತ್ತದೆ. ಕಮ್ಯೂನಿಸ್ಟ್ ಸಮಾಜ ವ್ಯವಸ್ಥೆಯಲ್ಲಿ ಪತ್ನಿಯರ ಕೂಡು ಒಡೆತನ ಸ್ಥಾಪಿಸಲಾಗುತ್ತದೆ ಎಂದು ಸೋಗಿನ ನೀತಿ ಬೋಧಕರಾದ ಸಂಕುಚಿತಮತಿಗಳು ಎತ್ತುತ್ತಿರುವ ಕೂಗಿಗೆ ಇದು ತಕ್ಕ ಉತ್ತರವಾಗಿದೆ. ಪತ್ನಿಯರ ಕೂಡು ಒಡೆತನ ಬೂರ್ಷ್ವಾ ಸಮಾಜಕ್ಕೇ ಸಂಪೂರ್ಣವಾಗಿ ಮೀಸಲಾದ ಸಂಬಂಧ ವ್ಯವಸ್ಥೆಯಾಗಿದೆ ಮತ್ತು ಇಂದು ಅದು ಸೂಳೆಗಾರಿಕೆಯಾಗಿ ಪರಿಪೂರ್ಣ ರೂಪದಲ್ಲಿ ಅಸ್ತಿತ್ವದಲ್ಲಿದೆ. ಆದರೆ ಸೂಳೆಗಾರಿಕೆಯು ಖಾಸಗಿ ಆಸ್ತಿ ಪದ್ಧತಿಯಲ್ಲಿ ಬೇರುಬಿಟ್ಟಿದೆ, ಅದರೊಂದಿಗೇ ಪತನವಾಗುತ್ತದೆ. ಆದ್ದರಿಂದ ಕಮ್ಯೂನಿಸ್ಟ್ ರೀತಿಯ ಸಮಾಜ ಸಂಘಟನೆಯು ಮಹಿಳೆಯರ ಕೂಡು ಒಡೆತನ ಸ್ಥಾಪಿಸುತ್ತದೆ ಎನ್ನುವುದಕ್ಕಿಂತ ಅದನ್ನು ಕೊನೆಗಾಣಿಸುತ್ತದೆ ಎನ್ನುವುದೇ ಯುಕ್ತ.

ಪ್ರಶ್ನೆ 22: ಇಂದು ಅಸ್ತಿತ್ವದಲ್ಲಿರುವ ವಿವಿಧ ಜನಾಂಗಗಳ ಬಗೆಗೆ ಕಮ್ಯೂನಿಸ್ಟ್ ರೀತಿಯ ಸಮಾಜ ಸಂಘಟನೆಯ ಮನೋಭಾವವೇನು?

ಉತ್ತರ: ಉಳಿದುಕೊಳ್ಳುತ್ತದೆ.[43]

ಪ್ರಶ್ನೆ 23: ಇಂದು ಅಸ್ತಿತ್ವದಲ್ಲಿರುವ ಮತಧರ್ಮಗಳ ಬಗೆಗೆ ಅದರ ಮನೋಧರ್ಮವೇನು?

ಉತ್ತರ: ಉಳಿದುಕೊಳ್ಳುತ್ತದೆ.

ಪ್ರಶ್ನೆ 24: ಕಮ್ಯೂನಿಸ್ಟರು ಸೋಷಲಿಸ್ಟರಿಂದ ಯಾವ ರೀತಿಯಲ್ಲಿ ಭಿನ್ನರಾಗಿರುತ್ತಾರೆ?

ಉತ್ತರ: ಸೋಷಲಿಸ್ಟರು ಎಂದು ಕರೆದುಕೊಳ್ಳುವಂಥವರನ್ನು ಮೂರು ಪಂಗಡಗಳನ್ನಾಗಿ ವಿಂಗಡಿಸಬಹುದು.

ಮೊದಲ ಪಂಗಡದಲ್ಲಿ ಸಾಮಂತಶಾಹಿ ಹಾಗೂ ಕುಲಪತಿಯಾಡಳಿತ ವ್ಯವಸ್ಥೆಯ ಸಮಾಜದ ಅನುಯಾಯಿಗಳಿರುತ್ತಾರೆ. ಇಂಥ ಸಮಾಜ ವ್ಯವಸ್ಥೆಯನ್ನು ಬೃಹತ್ ಪ್ರಮಾಣದ ಕೈಗಾರಿಕೆಯೂ ಜಾಗತಿಕ ಮಾರು

ಕಟ್ಟೆಯೂ ಮತ್ತು ಇವೆರಡೂ ಅಸ್ತಿತ್ವಕ್ಕೆ ತಂದಂಥ ಬೂರ್ಷ್ವಾ ಸಮಾಜವೂ ನಾಶಮಾಡಿವೆ ಮತ್ತು ಇನ್ನೂ ದಿನದಿನವೂ ನಾಶಮಾಡುತ್ತಿವೆ. ಇಂದಿನ ಸಮಾಜದ ಕೇಡುಗಳನ್ನು ಕಂಡ ಈ ಪಂಗಡದವರು ಸಾಮಂತಶಾಹಿ ಹಾಗೂ ಕುಲಪತಿಯಾಡಳಿತ ವ್ಯವಸ್ಥೆಯ ಸಮಾಜವನ್ನೇ ಪುನರ್‌ಸ್ಥಾಪಿಸಬೇಕು, ಏಕೆಂದರೆ ಅದು ಇಂಥ ಕೇಡು ಅನಿಷ್ಟಗಳಿಂದ ಮುಕ್ತವಾಗಿದ್ದಿತು, ಎಂಬ ತೀರ್ಮಾನಕ್ಕೆ ಬರುತ್ತಾರೆ. ಅವರ ಸಲಹೆಗಳೆಲ್ಲ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಇದೇ ಗುರಿ ಹೊಂದಿರುತ್ತವೆ. ಪ್ರತಿಗಾಮಿ ಸೋಷಲಿಸ್ಟರಾದ ಈ ವೃಂದವನ್ನು, ಅವರು ಶ್ರಮಜೀವಿಗಳ ಬಗೆಗೆ ಕಪಟ ಸಹಾನುಭೂತಿ ಹೊಂದಿದ್ದರೂ ಮತ್ತು ಅವರ ಕಷ್ಟಕಾರ್ಪಣ್ಯಗಳ ಬಗೆಗೆ ಬಿಸುಸುಯ್ದು ಕಣ್ಣೀರು ಕರೆಯುತ್ತಿದ್ದರೂ, ಕಮ್ಯೂನಿಸ್ಟರು ಅವರನ್ನು ಕೆಳಗಿನ ಕಾರಣಗಳಿಗಾಗಿ ಪ್ರಬಲವಾಗಿ ವಿರೋಧಿಸುತ್ತಾರೆ:

1. ಅವರು ಏನೇನೂ ಸಾಧ್ಯವಿಲ್ಲದಂಥ ಉದ್ದೇಶವೊಂದರ ಸಾಧನೆಗಾಗಿ ಯತ್ನಿಸುತ್ತಿದ್ದಾರೆ;

2. ಅವರು ಉತ್ತಮ ಕುಲದವರ, ಗಿಲ್ಡ್ ಮಾಸ್ಟರ್ ಹಾಗೂ ಕೈಗೆಲಸದ ಕಾರ್ಖಾನೆ ಮಾಲಿಕರ ಆಳ್ವಿಕೆಯನ್ನು, ಅವರ ನಿರಂಕುಶ ಅಥವಾ ಸಾಮಂತಶಾಹಿ ರಾಜರು ಅಧಿಕಾರಿಗಳು ಸೈನಿಕರು ಹಾಗೂ ಮತಪ್ರಚಾರಕರು ಮತ್ತೆಲ್ಲ ಹಿಂಬಾಲಕರೊಂದಿಗೆ, ಪುನರ್‌ಸ್ಥಾಪಿಸಲು ಯತ್ನಿಸುತ್ತಾರೆ. ಆ ಸಮಾಜವು ಇಂದಿನ ಸಮಾಜದ ಕುಂದುಕೊರತೆಗಳಿಂದ ಮುಕ್ತವಾಗಿದ್ದರೂ ತನ್ನದೇ ಆದ ಅಷ್ಟೇ ಪ್ರಮಾಣದ ಕೇಡುಗಳನ್ನು ಹೊಂದಿದ್ದಿತು. ಅಲ್ಲದೆ ಕಮ್ಯೂನಿಸ್ಟ್ ರೀತಿಯಲ್ಲಿ ಸಂಘಟಿಸಿಕೊಳ್ಳುವ ಮೂಲಕ ಮರ್ದಿತ ಕಾರ್ಮಿಕರು ವಿಮೋಚನೆ ಪಡೆದುಕೊಳ್ಳುವ ಪ್ರತೀಕ್ಷೆಗಳನ್ನು ಸಹ ಆ ಸಮಾಜ ಹೊಂದಿರಲಿಲ್ಲ;

3. ಶ್ರಮಜೀವಿಗಳು ಕ್ರಾಂತಿಕಾರಿ ಹಾಗೂ ಕಮ್ಯೂನಿಸ್ಟಿಕ್ ಆದಾಗಲೆಲ್ಲ ಈ ಪಂಗಡದ ಸೋಷಲಿಸ್ಟರು ಯಾವತ್ತೂ ತಮ್ಮ ನೈಜ ಉದ್ದೇಶಗಳನ್ನು ಹೊರಗೆಡಹುತ್ತಾರೆ. ಅಂಥ ಪ್ರಸಂಗಗಳಲ್ಲೆಲ್ಲ ಅವರು ಕೂಡಲೇ ಶ್ರಮಜೀವಿಗಳ ವಿರುದ್ಧ ಬೂರ್ಷ್ವಾಸೀಯೊಂದಿಗೆ ಕೂಡಿಕೊಳ್ಳುತ್ತಾರೆ.

ಎರಡನೆಯ ಗುಂಪಿನವರು ಇಂದಿನ ಸಮಾಜದ ಅನುಯಾಯಿಗಳು. ಇಂದಿನ ಸಮಾಜದ ಅನಿವಾರ್ಯ ಪರಿಣಾಮಗಳೇ ಆದ ಕೇಡುಕೊರತೆಗಳು ಇವರಲ್ಲಿ ಈ ಸಮಾಜದ ಅಸ್ತಿತ್ವದ ಬಗೆಗೇ ಕಾತುರತೆಯನ್ನು ಉಂಟುಮಾಡಿವೆ. ಆದ್ದರಿಂದ ಇವರು ಇಂದಿನ ಸಮಾಜವನ್ನು ಹಾಗೆಯೇ ಉಳಿಸಿಕೊಂಡು ಅವರೊಂದಿಗೆ ಸಂಬಂಧಿಸಿದ ಕೇಡುಕೊರತೆಗಳನ್ನಷ್ಟೆ ನಿವಾರಿಸಲು ಯತ್ನಿಸುತ್ತಾರೆ. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಲ್ಲಿ ಕೆಲವರು ನಾನಾ ಕಲ್ಯಾಣ ಕ್ರಮ

ಗಳನ್ನು ಸಲಹೆ ಮಾಡುತ್ತಾರೆ. ಇನ್ನು ಕೆಲವರು ಭವ್ಯ ಸುಧಾರಣಾ ವ್ಯವಸ್ಥೆ ಗಳನ್ನು ಪ್ರತಿಪಾದಿಸುತ್ತಾರೆ. ಅವುಗಳು ಸಮಾಜವನ್ನು ಪುನಸ್ಸಂಘಟಿಸುವ ನೆಪದ ಮೇಲೆ ಇಂದಿನ ಸಮಾಜದ ಅಡಿಪಾಯಗಳನ್ನು, ತನ್ಮೂಲಕ ಇಂದಿನ ಸಮಾಜ ವನ್ನೇ ಹಾಗೆಯೇ ಉಳಿಸಿಕೊಳ್ಳಲು ಹವಣಿಸುತ್ತವೆ. ಈ ಬೂರ್ಷ್ವಾ ಸೋಷ ಲಿಸ್ಟರನ್ನೂ ಕಮ್ಯೂನಿಸ್ಟರು ಅದೇ ರೀತಿ ದೃಢವಾಗಿ ವಿರೋಧಿಸಬೇಕು, ಏಕೆಂದರೆ, ಇವರು ಕಮ್ಯೂನಿಸ್ಟರ ಶತ್ರುಗಳಿಗಾಗಿ ಕೆಲಸಮಾಡುತ್ತಿದ್ದಾರೆ ಮತ್ತು ಕಮ್ಯೂ ನಿಸ್ಟರು ನಾಶಮಾಡ ಹೊರಟಿರುವ ಸಮಾಜವನ್ನು ಇವರು ಸಂರಕ್ಷಿಸ ಹೊರ ಟಿದ್ದಾರೆ.

ಕೊನೆಯದಾಗಿ, ಮೂರನೆಯ ವರ್ಗದಲ್ಲಿ ಪ್ರಜಾಸತ್ತಾತ್ಮಕ ಸೋಷಲಿಸ್ಟ ರಿದ್ದಾರೆ. ಇವರು ಕಮ್ಯೂನಿಸ್ಟರ ರೀತಿಯಲ್ಲೇ... ಪ್ರಶ್ನೆ*ಯಲ್ಲಿನ ಕ್ರಮಗಳಲ್ಲಿ ಒಂದು ಭಾಗವನ್ನು ಬಯಸುತ್ತಾರೆ, ಕಮ್ಯೂನಿಸಂಗೆ ಪರಿವರ್ತನೆಯ ಸಾಧನ ವಾಗಿ ಅಲ್ಲ ಆದರೆ ಇಂದಿನ ಸಮಾಜದ ಕೇಡು ಕ್ಲೇಷಗಳನ್ನು ಇಲ್ಲವಾಗಿಸಲು ಸಾಲುವ ಕ್ರಮಗಳಾಗಿ. ಈ ಪ್ರಜಾಸತ್ತಾತ್ಮಕ ಸೋಷಲಿಸ್ಟರು ತಮ್ಮ ವರ್ಗದ ವಿಮೋಚನೆಗೆ ಯಾವ ಪರಿಸ್ಥಿತಿಗಳು ಉಂಟಾಗಬೇಕೆಂಬುದರ ಬಗೆಗೆ ಇನ್ನೂ ಸಾಕಷ್ಟು ಜಾಗೃತಿ ಪಡೆಯದಿರುವಂಥ ಶ್ರಮಜೀವಿಗಳಾಗಿದ್ದಾರೆ, ಇಲ್ಲವೇ ಪೆಟಿ ಬೂರ್ಷ್ವಾ ವರ್ಗದ ಸದಸ್ಯರಾಗಿದ್ದಾರೆ. ಈ ಪೆಟಿ ಬೂರ್ಷ್ವಾ ವರ್ಗವು ಪ್ರಜಾ ಪ್ರಭುತ್ವವನ್ನು ಗಳಿಸುವವರೆಗೂ ಮತ್ತು ಅದನ್ನನುಸರಿಸಿ ಬರುವ ಸಮಾಜವಾದೀ ಕ್ರಮಗಳು ಪೂರೈಕೆಯಾಗುವವರೆಗೂ ಅನೇಕ ರೀತಿಯಲ್ಲಿ ಶ್ರಮಜೀವಿಗಳೊಂದಿಗೆ ಸಮಾನ ಹಿತಗಳನ್ನು ಹೊಂದಿರುತ್ತದೆ. ಆದ್ದರಿಂದ ಕಾರ್ಯಾಚರಣೆಯ ಕಾಲದಲ್ಲಿ ಕಮ್ಯೂನಿಸ್ಟರು ಪ್ರಜಾಸತ್ತಾತ್ಮಕ ಸೋಷಲಿಸ್ಟರೊಂದಿಗೆ ಒಪ್ಪಂದ ಮಾಡಿಕೊಳ್ಳ ಬೇಕಾಗುವುದು ಮತ್ತು ಕೊನೆಯಪಕ್ಷ ಆ ಕಾಲದಲ್ಲಾದರೂ, ಸಾಧ್ಯವಾದಾಗ, ಅವರೊಂದಿಗೆ ಸಾಮಾನ್ಯ ನೀತಿಯನ್ನು ಬಹುಮಟ್ಟಿಗೆ ಅನುಸರಿಸಬೇಕಾಗು ತ್ತದೆ – ಈ ಪ್ರಜಾಸತ್ತಾತ್ಮಕ ಸೋಷಲಿಸ್ಟರು ಆಳುವ ಬೂರ್ಷ್ವಾಸೀಯ ಸೇವೆ ಯಲ್ಲಿ ತೊಡಗಿ ಕಮ್ಯೂನಿಸ್ಟರ ಮೇಲೆ ದಾಳಿ ಮಾಡದೆ ಹೋದಾಗ ಮಾತ್ರ. ಅವರೊಂದಿಗೆ ಸಾಮಾನ್ಯ ಕಾರ್ಯಾಚರಣೆ ಎಂದ ಮಾತ್ರಕ್ಕೇ ಅವರೊಂದಿಗಿರುವ ಭಿನ್ನಾಭಿಪ್ರಾಯಗಳನ್ನು ಚರ್ಚಿಸುವುದಿಲ್ಲ ಎಂದೇನೂ ಅಲ್ಲವೆಂಬುದು ಸ್ವಯಂ ಸ್ಪಷ್ಟ.

---

*ಹಸ್ತಪ್ರತಿಯಲ್ಲಿ ಇಲ್ಲಿ ಖಾಲಿ ಜಾಗವಿದೆ. ಪ್ರಶ್ನೆ 18ಕ್ಕೆ ಉತ್ತರ ನೋಡಿ. – ಸಂ.

ಪ್ರಶ್ನೆ 25: ನಮ್ಮ ಈ ದಿನದ ಇತರ ರಾಜಕೀಯ ಪಾರ್ಟಿಗಳ ಬಗೆಗೆ ಕಮ್ಯೂನಿಸ್ಟರ ಮನೋಧರ್ಮವೇನು?

ಉತ್ತರ: ಈ ಮನೋಧರ್ಮ ದೇಶದಿಂದ ದೇಶಕ್ಕೆ ಬದಲುತ್ತದೆ. ಬೂರ್ಷ್ವಾಸೀ ಆಡಳಿತ ನಡೆಸುತ್ತಿರುವ ಇಂಗ್ಲೆಂಡ್. ಫ್ರಾನ್ಸ್ ಹಾಗೂ ಬೆಲ್ಜಿಯಂಗಳಲ್ಲಿ ಕಮ್ಯೂನಿಸ್ಟರು ಸದ್ಯದಲ್ಲಿ ನಾನಾ ಪ್ರಜಾಸತ್ತಾತ್ಮಕ ಪಾರ್ಟಿಗಳೊಂದಿಗೆ ಇನ್ನೂ ಸಾಮಾನ್ಯ ಹಿತಗಳನ್ನು ಹೊಂದಿರುತ್ತಾರೆ. ಪಜಾಪ್ರಭುತ್ವವಾದಿಗಳು ಈಗ ಎಲ್ಲೆಲ್ಲೂ ಪ್ರತಿಪಾದಿಸುತ್ತಿರುವ ಸಮಾಜವಾದೀ ಕ್ರಮಗಳು ಕಮ್ಯೂನಿಸ್ಟರ ಗುರಿಗಳೊಂದಿಗೆ ಎಷ್ಟು ಹೆಚ್ಚು ಸಮೀಪವಿದ್ದರೆ, ಅಂದರೆ ಅವರು ಶ್ರಮಜೀವಿ ವರ್ಗದ ಹಿತಗಳನ್ನು ಎಷ್ಟು ಹೆಚ್ಚು ಸ್ಪಷ್ಟವಾಗಿಯೂ ನಿರ್ದಿಷ್ಟವಾಗಿಯೂ ಎತ್ತಿ ಹಿಡಿದರೆ ಮತ್ತು ಶ್ರಮಜೀವಿಗಳ ಮೇಲೆ ಎಷ್ಟು ಹೆಚ್ಚು ಅವಲಂಬಿಸಿದರೆ, ಈ ಹಿತಗಳ ಸಮಾನತೆಯು ಅಷ್ಟೂ ಹೆಚ್ಚಾಗಿರುತ್ತದೆ. ಇಂಗ್ಲೆಂಡಿನಲ್ಲಿ, ಉದಾಹರಣೆಗೆ, ಚಾರ್ಟಿಸ್ಟರು – ಇವರೆಲ್ಲರೂ ಕಾರ್ಮಿಕರೇ – ಕಮ್ಯೂನಿಸ್ಟರಿಗೆ ಪ್ರಜಾಸತ್ತಾತ್ಮಕ ಪೆಟಿ ಬೂರ್ಷ್ವಾ ಅಥವಾ ರ್ಯಾಡಿಕಲ್ಸ್ ಎಂದು ಕರೆದುಕೊಳ್ಳುತ್ತಿರುವವರಿಗಿಂತ ಅಪರಿಮಿತವಾಗಿ ಹೆಚ್ಚು ಹತ್ತಿರವಿದ್ದಾರೆ.

ಪ್ರಜಾಸತ್ತಾತ್ಮಕ ಸಂವಿಧಾನ ಜಾರಿಗೆ ತರಲಾಗಿರುವ ಅಮೆರಿಕದಲ್ಲಿ ಕಮ್ಯೂನಿಸ್ಟರು ಈ ಸಂವಿಧಾನವನ್ನು ಬೂರ್ಷ್ವಾಸೀಯ ವಿರುದ್ಧ ಅನ್ವಯಿಸುವಂಥ ಹಾಗೂ ಅದನ್ನು ಶ್ರಮಜೀವಿ ವರ್ಗದ ಹಿತಗಳ ಪರವಾಗಿ ಬಳಸುವಂಥ ಪಾರ್ಟಿಯೊಂದಿಗೆ, ಅಂದರೆ ರಾಷ್ಟ್ರೀಯ ಕೃಷಿ ಸುಧಾರಣೆ ಪ್ರತಿಪಾದಿಸುವವರೊಂದಿಗೆ, ಸಾಮಾನ್ಯ ಹಿತಾಸಕ್ತಿ ಕಂಡುಕೊಳ್ಳಬೇಕು.

ಸ್ವಿಟ್ಸರ್ಲೆಂಡಿನಲ್ಲಿ ರ್ಯಾಡಿಕಲ್ಸ್‌ರು ಇನ್ನೂ ಅತ್ಯಂತ ಮಿಶ್ರಿತ ಪಾರ್ಟಿಯಾಗಿದ್ದರೂ ಸಹ, ಕಮ್ಯೂನಿಸ್ಟರು ಯಾವುದೇ ರೀತಿಯ ಸಂಬಂಧ ಇಟ್ಟುಕೊಳ್ಳಲು ಯೋಗ್ಯರಾದಂಥ ಏಕೈಕ ಜನರಾಗಿದ್ದಾರೆ. ಮತ್ತೆ ಈ ರ್ಯಾಡಿಕಲ್ಸ್‌ರ ಮಧ್ಯೆಯೂ ವಾದ್ ಹಾಗೂ ಜಿನೀವಾ ಸಂಸ್ಥಾನಗಳಲ್ಲಿರುವವರು ಹೆಚ್ಚು ಪ್ರಗತಿಶೀಲರಾಗಿದ್ದಾರೆ.

ಕೊನೆಯದಾಗಿ, ಜರ್ಮನಿಯಲ್ಲಿ, ಬೂರ್ಷ್ವಾಸೀಗೂ ನಿರಂಕುಶ ರಾಜಪ್ರಭುತ್ವಕ್ಕೂ ನಡುವಿನ ನಿರ್ಧಾರಕ ಹೋರಾಟ ಇನ್ನೂ ಜರುಗಬೇಕಾಗಿದೆ. ಬೂರ್ಷ್ವಾಸೀಯು ಆಳುವಂತಾಗುವವರೆಗೂ ಕಮ್ಯೂನಿಸ್ಟರು ಅವರ ವಿರುದ್ಧ ನಿರ್ಧಾರಕ ಹೋರಾಟ ಹೂಡುವ ವಿಚಾರ ಮಾಡಲಾಗುವುದಿಲ್ಲವಾದ್ದರಿಂದ, ಬೂರ್ಷ್ವಾಸೀಯು ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಆಡಳಿತ ಪಡೆದುಕೊಳ್ಳುವಂತೆ – ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಅವರನ್ನು ಉರುಳಿಸಲೋಸುಗ – ಸಹಾಯಮಾಡುವುದು ಕಮ್ಯೂನಿಸ್ಟರ ಹಿತದೃಷ್ಟಿಯಿಂದಲೇ ಯುಕ್ತ

ವಾದುದು. ಆದ್ದರಿಂದ ಕಮ್ಯೂನಿಸ್ಟರು ಯಾವತ್ತೂ ಸರಕಾರಗಳ ವಿರುದ್ಧ ಉದಾರ ವಾದಿ ಬೂರ್ಷ್ವಾಗಳ ಪಕ್ಷ ವಹಿಸಬೇಕು. ಆದರೆ ಬೂರ್ಷ್ವಾಗಳ ಆತ್ಮವಂಚನೆ ಯಲ್ಲಿ ಪಾಲ್ಗೊಳ್ಳುವಂತಾಗದಂತೆ, ಅಥವಾ ತನ್ನ ವಿಜಯ ಶ್ರಮಜೀವಿಗಳಿಗೆ ಲಾಭದಾಯಕ ಪರಿಣಾಮಗಳನ್ನು ಉಂಟುಮಾಡುವುದೆಂಬ ಬೂರ್ಷ್ವಾಸೀಯ ಆಕರ್ಷಕ ಘೋಷಣೆಗಳಿಗೆ ಮಾರುಹೋಗುವಂತಾಗದಂತೆ, ಎಚ್ಚರದಿಂದಿರಬೇಕು. ಬೂರ್ಷ್ವಾಸೀಯ ವಿಜಯವು ಕಮ್ಯೂನಿಸ್ಟರಿಗೆ ನೀಡುವಂಥ ಎಲ್ಲ ಅನುಕೂಲ ಗಳೆಂದರೆ: 1. ನಾನಾ ರೀತಿಯ ರಿಯಾಯಿತಿಗಳು; ಇವು ಕಮ್ಯೂನಿಸ್ಟರಿಗೆ ಮೂಲತತ್ವಗಳ ರಕ್ಷಣೆ, ಚರ್ಚೆ ಹಾಗೂ ವ್ಯಾಪನೆಯ ಕಾರ್ಯವನ್ನು ಸಾಗಿಸಲು ಹೆಚ್ಚು ಸುಲಭ ಮಾಡಿಕೊಡುತ್ತವೆ. ತನ್ಮೂಲಕ ಶ್ರಮಜೀವಿಗಳನ್ನು ಒಂದು ಅಡಕ ವಾದ, ಸಮರಶೀಲ ಹಾಗೂ ಸುಸಂಘಟಿತ ವರ್ಗದಲ್ಲಿ ಒಂದುಗೂಡಿಸುವುದೂ ಹೆಚ್ಚು ಸುಲಭವಾಗುತ್ತದೆ. 2. ನಿರಂಕುಶ ಸರಕಾರಗಳ ಪತನವಾದ ದಿನದಿಂದ ಬೂರ್ಷ್ವಾ ಹಾಗೂ ಶ್ರಮಜೀವಿಗಳ ನಡುವಿನ ಹೋರಾಟದ ಸರದಿ ಬಂದಿ ತೆಂಬುದು ಖಾತರಿಯಾಗುತ್ತದೆ. ಆ ದಿನದಿಂದ ಕಮ್ಯೂನಿಸ್ಟರ ಪಾರ್ಟಿ ನೀತಿಯು ಬೂರ್ಷ್ವಾಸೀ ಆಗಲೇ ಆಡಳಿತ ನಡೆಸುತ್ತಿರುವ ದೇಶಗಳಲ್ಲಿರುವಂಥದೇ ಆಗ ಲಿರುವುದು.

1847ರ ಅಕ್ಟೋಬರ್-ನವಂಬರ್
ಕೊನೆಯ ಭಾಗದಲ್ಲಿ ಎಂಗೆಲ್ಸ್‌ರಿಂದ ಬರೆಯಲ್ಪಟ್ಟುದು

ಮೊದಲು ಪ್ರತ್ಯೇಕ ಆವೃತ್ತಿಯಾಗಿ
1914ರಲ್ಲಿ ಪ್ರಕಟವಾಯಿತು

# ಟಿಪ್ಪಣಿಗಳು

1 ಫ್ರಾನ್ಸಿನ 1848ರ ಫೆಬ್ರವರಿ ಕ್ರಾಂತಿಗೆ ಉಲ್ಲೇಖ.

ಪುಟ 9.

2 1848ರ ಜೂನ್ 23-26ರಲ್ಲಿ ಪ್ಯಾರಿಸ್ ಶ್ರಮಜೀವಿಗಳು ನಡೆಸಿದ. ಬಂಡಾಯಕ್ಕೆ ಉಲ್ಲೇಖ. ಈ ಜೂನ್ ಬಂಡಾಯವು ಯೂರೋಪಿನ 1848-1849 ಕ್ರಾಂತಿಯ ಬೆಳವಣಿಗೆಯ ಪರಾಕಾಷ್ಠೆಯಾಗಿದ್ದಿತು.

ಪುಟ 9.

3 1871ರ ಪ್ಯಾರಿಸ್ ಕಮ್ಯೂನ್ – ಪ್ಯಾರಿಸ್‌ನಲ್ಲಿ ಶ್ರಮಜೀವಿ ಕ್ರಾಂತಿಯು ಸ್ಥಾಪಿಸಿದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಸರಕಾರ. ಶ್ರಮಜೀವಿ ವರ್ಗ ಸರ್ವಾಧಿಕಾರ ಸೃಜಿಸುವುದರಲ್ಲಿ ಮೊದಲ ಐತಿಹಾಸಿಕ ಅನುಭವ. ಪ್ಯಾರಿಸ್ ಕಮ್ಯೂನ್ 72 ದಿನಗಳವರೆಗೆ – 1871ರ ಮಾರ್ಚ್ 18ರಿಂದ ಮೇ 28 ರವರೆಗೆ – ಇದ್ದಿತು.

ಪುಟ 10.

4 ಉಲ್ಲೇಖಿಸಿರುವ ಆವೃತ್ತಿ 1869ರಲ್ಲಿ ಹೊರಬಂದಿತು. 1888ರ ಇಂಗ್ಲಿಷ್ ಆವೃತ್ತಿಗೆ ಎಂಗೆಲ್ಸ್‌ರು ಬರೆದ ಮುನ್ನುಡಿಯಲ್ಲಿ "ಪ್ರಣಾಳಿಕೆ"ಯ ಈ ರಶಿಯನ್ ಭಾಷಾಂತರದ ಪ್ರಕಟಣೆಯ ತಾರೀಖನ್ನು ಸರಿಯಾಗಿ ನೀಡಿಲ್ಲ. (ಈ ಆವೃತ್ತಿಯ ಪುಟ 17 ನೋಡಿ.)

ಪುಟ 12.

5 "ಕೋಲೊಕೊಲ್" ("ಗಂಟೆ") – ರಶಿಯನ್ ಕ್ರಾಂತಿಕಾರಿ - ಪ್ರಜಾಸತ್ತಾತ್ಮಕ ವೃತ್ತಪತ್ರಿಕೆ. ರಶಿಯನ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳಾದ ಎ. ಐ. ಹೆರ್ಟ್ಸೆನ್ ಹಾಗೂ ಎನ್. ಪಿ. ಒಗರ್ಯೋವ್‌ರು 1857-1867ರಲ್ಲಿ ಪ್ರಕಟಿಸಿದ ಪತ್ರಿಕೆ. 1865ರವರೆಗೆ ಲಂಡನ್ನಿನಲ್ಲೂ ಆನಂತರ ಜಿನೀವಾದಲ್ಲೂ ಪ್ರಕಟವಾಯಿತು.

ಪುಟ 12.

6 1881ರ ಮಾರ್ಚ್ 1ರಂದು "ನರೋದ್ನಯ ವೋಲ್ಯ" ("ಜನತಾ ಸಂಕಲ್ಪ") ವೃಂದದ ಸದಸ್ಯರೊಬ್ಬರಿಂದ ದ್ವಿತೀಯ ಅಲೆಕ್ಸಾಂದರ್ ಚಕ್ರವರ್ತಿಯ ಕೊಲೆಯಾದನಂತರ ಉದ್ಭವಿಸಿದ ಪರಿಸ್ಥಿತಿಗೆ ಉಲ್ಲೇಖ. ಆನಂತರ ಸಿಂಹಾಸನ ಏರಿದ ತೃತೀಯ ಅಲೆಕ್ಸಾಂದರ್ ಚಕ್ರವರ್ತಿಯು "ನರೋದ್ನಯ. ವೋಲ್ಯ"

(ಭಯೋತ್ಪಾದಕರ ರಹಸ್ಯ ರಾಜಕೀಯ ಸಂಘಟನೆ) ಸದಸ್ಯರಿಂದ ಆಗಬಹುದಾಗಿದ್ದ ಹೊಸ ಭಯೋತ್ಪಾದಕ ಚರ್ಯೆಗಳಿಗೂ ಕ್ರಾಂತಿಕಾರಿ ಪ್ರದರ್ಶನಗಳಿಗೂ ಅಂಜಿ ಗಾಟ್ಚಿನ (ಸೆಂಟ್ ಪೀಟರ್ಸ್‌ಬರ್ಗ್ ಬಳಿ ತ್ಸಾರ್‌ನ ನಿವಾಸ)ದಲ್ಲಿ ಅಡಗಿ ಕುಳಿತ.

ಪುಟ 13.

7 ಡಾರ್ವಿನ್, ಚಾರ್ಲ್ಸ್ ರಾಬರ್ಟ್ (Darwin, Charles Robert) (1809-1882) – ಬ್ರಿಟಿಷ್ ವಿಜ್ಞಾನಿ, ವಸ್ತುವಾದ ಜೀವಶಾಸ್ತ್ರದ ಸಂಸ್ಥಾಪಕ. ವಿಸ್ತೃತ ವೈಜ್ಞಾನಿಕ ಸಾಮಗ್ರಿಯನ್ನು ಬಳಸಿಕೊಂಡು ಡಾರ್ವಿನ್ ಪ್ರಪ್ರಥಮ ಬಾರಿಗೆ ಜೀವಂತ ಪ್ರಕೃತಿಯ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದರು. ಜೈವ ಜಗತ್ತು ಸರಳ ರೂಪಗಳಿಂದ ಹೆಚ್ಚು ಜಟಿಲವಾದ ರೂಪಗಳಿಗೆ ಬೆಳೆದುಕೊಂಡು ಹೋಯಿತು, ಹಳೆಯ ರೂಪಗಳು ಕಣ್ಮರೆಯಾದಂತೆ ಹೊಸ ರೂಪಗಳು ಕಾಣಿಸಿಕೊಂಡುದು ನೈಸರ್ಗಿಕ-ಐತಿಹಾಸಿಕ ಬೆಳವಣಿಗೆಯ ಫಲ ಎಂದವರು ಸಾಧಿಸಿ ತೋರಿದರು.

ಡಾರ್ವಿನ್‌ರ ಸಿದ್ಧಾಂತದ ಮುಖ್ಯ ವಿಚಾರವೆಂದರೆ ಸಹಜ ಹಾಗೂ ಕೃತಕ ಆಯ್ಕೆಯ ಮೂಲಕ ಜೀವಿ ವಂಶಗಳ ಮೂಲವನ್ನು ಕುರಿತಾದ ಅವರ ಬೋಧೆ. ಜೀವಾಂಗವೊಂದು ಪರಿವರ್ತನೀಯ ಹಾಗೂ ಆನುವಂಶೀಯ ಲಕ್ಷಣಗಳನ್ನು ಹೊಂದಿರುತ್ತದೆ, ಅಸ್ತಿತ್ವಕ್ಕಾಗಿ ಹೋರಾಟದಲ್ಲಿ ಪ್ರಾಣಿಗೆ ಅಥವಾ ಸಸ್ಯಕ್ಕೆ ಪ್ರಯೋಜನಕಾರಿಯಾದಂಥ ಬದಲಾವಣೆಗಳು ದೃಢಗೊಳ್ಳುತ್ತವೆ ಮತ್ತು ಹೊಸ ಪ್ರಾಣಿ ಹಾಗೂ ಸಸ್ಯ ರೂಪಗಳ ಉದ್ಭವವನ್ನು ನಿರ್ಧರಿಸುತ್ತವೆ. ಈ ಸಿದ್ಧಾಂತದ ಮುಖ್ಯ ಸೂತ್ರಗಳನ್ನೂ ಪ್ರತಿಪಾದನೆಗಳನ್ನೂ "ದಿ ಆರಿಜಿನ್ ಆಫ್ ಸ್ಪೀಸೀಸ್" ("ಜೀವಿ ವಂಶಗಳ ಉದ್ಭವ," 1859) ಎಂಬ ಗ್ರಂಥದಲ್ಲಿ ವಿವರಿಸಲಾಗಿದೆ.

ಪುಟ 16.

8 ಟಿಪ್ಪಣಿ ನಂ. 1 ನೋಡಿ.

ಪುಟ 17.

9 ಪ್ರುದೋನ್, ಪಿಯೇರ್ ಜೋಸೆಫ್ (Proudhon, Pierre Joseph) (1809-1865) – ಫ್ರೆಂಚ್ ಪತ್ರಿಕಾ ಲೇಖಕ, ಅರ್ಥಶಾಸ್ತ್ರಜ್ಞ ಹಾಗೂ ಸಮಾಜಶಾಸ್ತ್ರಜ್ಞ; ಪೆಟಿ ಬೂರ್ಷ್ವಾಸೀಯ ಸಿದ್ಧಾಂತವಾದಿ, ಅರಾಜಕತಾವಾದದ ಸಂಸ್ಥಾಪಕರಲ್ಲೊಬ್ಬರು. ಪ್ರುದೋನ್‌ರು ಪೆಟಿ ಬೂರ್ಷ್ವಾ ನಿಲುವುಗಳಿಂದ ದೊಡ್ಡ ಬಂಡವಾಳವಾದಿ ಆಸ್ತಿಯನ್ನು ಟೀಕಿಸಿ ಸಣ್ಣ ಖಾಸಗಿ ಆಸ್ತಿಯನ್ನು ಸದಾ ಇರುವಂತೆ ಮಾಡುವ ಕನಸುಕಂಡರು. "ಜನತಾ ಬ್ಯಾಂಕ್"

ಒಂದನ್ನು ಸ್ಥಾಪಿಸಬೇಕು, ಅದು "ಉಚಿತ ಸಾಲ" ನೀಡುವ ಮೂಲಕ ಕಾರ್ಮಿಕರಿಗೆ ಸ್ವಂತ ಉತ್ಪಾದನಾ ಸಾಧನಗಳನ್ನು ಪಡೆದುಕೊಂಡು ಕುಶಲ ಕರ್ಮಿಗಳಾಗಲು ನೆರವಾಗಬೇಕು, ಎಂದವರು ಸಲಹೆ ಮಾಡಿದರು. ಕಾರ್ಮಿಕ ಜನ ಉತ್ಪಾದಿಸಿದ ಉತ್ಪನ್ನಗಳ "ನ್ಯಾಯಯುತ ಮಾರಾಟ"ವನ್ನು ಖಚಿತಗೊಳಿಸುವುವೆಂದು ಹೇಳಲಾದ ಹಾಗೂ ಅದೇ ಹೊತ್ತಿನಲ್ಲಿ ಉತ್ಪಾದನಾ ಸಾಧನ ಸಲಕರಣೆಗಳ ಬಂಡವಾಳಶಾಹಿ ಮಾಲಿಕತ್ವಕ್ಕೆ ಬಾಧಕ ಉಂಟುಮಾಡದ ವಿಶೇಷ "ವಿನಿಮಯ ಬ್ಯಾಂಕು"ಗಳನ್ನು ಸ್ಥಾಪಿಸುವ ಪ್ರುದೋನ್‌ರ ಸಿದ್ಧಾಂತವು ಪ್ರತಿಗಾಮಿಯಾಗಿದ್ದಿತು. ಪ್ರುದೋನ್‌ರು ಶ್ರಮಜೀವಿ ವರ್ಗದ ಐತಿಹಾಸಿಕ ಪಾತ್ರವನ್ನು ಅರ್ಥಮಾಡಿಕೊಳ್ಳಲಿಲ್ಲ. ವರ್ಗ ಹೋರಾಟ, ಶ್ರಮಜೀವಿ ವರ್ಗ ಕ್ರಾಂತಿ ಹಾಗೂ ಶ್ರಮಜೀವಿ ವರ್ಗ ಸರ್ವಾಧಿಕಾರತ್ವದ ಬಗೆಗೆ ಅವರ ಮನೋಧರ್ಮ ಋಣಾತ್ಮಕವಾಗಿದ್ದಿತು. ಅವರು ರಾಜ್ಯದ ಅವಶ್ಯಕತೆಯನ್ನು ಅರಾಜಕತಾವಾದಿ ನಿಲುವುಗಳಿಂದ ನಿರಾಕರಿಸಿದರು. ಪ್ರುದೋನ್‌ವಾದಿಗಳು ತಮ್ಮ ಅಭಿಪ್ರಾಯಗಳನ್ನು ಪ್ರಥಮ ಇಂಟರ್‌ನ್ಯಾಷನಲ್ ಮೇಲೆ ಹೊರಿಸಲು ಮಾಡಿದ ಯತ್ನಗಳ ವಿರುದ್ಧ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರು ನಿರಂತರ ಹೋರಾಟ ನಡೆಸಿದರು. "ತತ್ತ್ವಶಾಸ್ತ್ರದ ದಾರಿದ್ರ್ಯ" ಎಂಬ ತಮ್ಮ ಕೃತಿಯಲ್ಲಿ ಕಾರ್ಲ್ ಮಾರ್ಕ್ಸ್‌ರು ಪ್ರುದೋನ್‌ವಾದವನ್ನು ಖಂಡತುಂಡರಿಸುವ ಟೀಕೆಗೆ ಗುರಿಪಡಿಸಿದ್ದಾರೆ.

ಪುಟ 18.

10 ಲಸ್ಸಾಲಿಯನಸರು – ಜರ್ಮನ್ ಪೆಟಿ ಬೂರ್ಷ್ವಾ ಸಮಾಜವಾದಿ ಫರ್ಡಿನಾಂಡ್ ಲಸ್ಸಾಲ್ (Ferdinand Lassale)ರವರ ಅನುಯಾಯಿಗಳು ಹಾಗೂ ಅವರ ಸಿದ್ಧಾಂತದ ಪ್ರತಿಪಾದಕರು. ಅವರು ಜರ್ಮನ್ ಕಾರ್ಮಿಕರ ಜನರಲ್ ಅಸೋಸಿಯೇಷನ್‌ನ ಸದಸ್ಯರಾಗಿದ್ದರು. ಈ ಸಂಸ್ಥೆಯನ್ನು 1863ರಲ್ಲಿ ಲೈಪ್ಸಿಗ್‌ನಲ್ಲಿ ಜರುಗಿದ ಕಾರ್ಮಿಕರ ಸೊಸೈಟಿಗಳ ಮಹಾಧಿವೇಶನದಲ್ಲಿ ಸ್ಥಾಪಿಸಲಾಯಿತು. ಲಸ್ಸಾಲ್‌ರೇ ಅದರ ಮೊದಲ ಅಧ್ಯಕ್ಷರಾಗಿದ್ದರು. ಅವರು ಸಂಸ್ಥೆಯ ಕಾರ್ಯಕ್ರಮವನ್ನೂ ಮೂಲ ತಂತ್ರಗಳನ್ನೂ ರೂಪಿಸಿದರು. ಕಾರ್ಮಿಕ ವರ್ಗದ ಸಾಮೂಹಿಕ ರಾಜಕೀಯ ಪಾರ್ಟಿಯೊಂದನ್ನು ಸ್ಥಾಪಿಸಿದುದು ನಿಸ್ಸಂದೇಹವಾಗಿಯೂ ಜರ್ಮನ್ ಕಾರ್ಮಿಕರ ಚಳವಳಿಯ ಬೆಳವಣಿಗೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗಿದ್ದಿತು. ಆದರೆ ಸಿದ್ಧಾಂತ ಹಾಗೂ ಕಾರ್ಯಾಚರಣೆಯ ಮೂಲ ಪ್ರಶ್ನೆಗಳಿಗೆ ಸಂಬಂಧಿಸಿ ಲಸ್ಸಾಲ್‌ರೂ ಅವರ ಅನುಯಾಯಿಗಳೂ ಸಂದರ್ಭಸಾಧಕ ನಿಲುವು ತಳೆದರು. ಸಾಮಾಜಿಕ ಪ್ರಶ್ನೆಯನ್ನು ಬಗೆಹರಿಸಲು

ಪ್ರಷ್ಯನ್ ರಾಜ್ಯವನ್ನು ಬಳಸುವುದು ಸಾಧ್ಯವೆಂದು ಲಸ್ಸಾಲ್ ಅನುಯಾಯಿಗಳು ಭಾವಿಸಿದ್ದರು ಮತ್ತು ಪ್ರಷ್ಯನ್ ಸರಕಾರದ ಅಧಿಪತಿ ಬೀಸ್ಮಾರ್ಕ್‌ರೊಂದಿಗೆ ಸಂಧಾನ ನಡೆಸಲು ಯತ್ನಿಸಿದರು. ಕೆ. ಮಾರ್ಕ್ಸ್ ಹಾಗೂ ಎಫ್. ಎಂಗೆಲ್ಸರು ಲಸ್ಸಾಲಿಯನ್‌ವಾದದ ಸಿದ್ಧಾಂತ ತಂತ್ರ ಹಾಗೂ ಸಂಘಟನಾ ಸೂತ್ರಗಳನ್ನು ಜರ್ಮನ್ ಕಾರ್ಮಿಕ ಚಳವಳಿಯಲ್ಲಿ ಸಂದರ್ಭಸಾಧಕ ಪ್ರವೃತ್ತಿ ಎಂದು ಪದೇಪದೇ ತೀವ್ರವಾಗಿ ಟೀಕಿಸಿದರು.

ಪುಟ 18.

11 ಓವೆನ್‌ವಾದಿಗಳು – ಬ್ರಿಟಿಷ್ ಅಸಾಧ್ಯಾದರ್ಶ ಸಮಾಜವಾದಿ ರಾಬರ್ಟ್ ಓವೆನ್ (Robert Owen) (1771-1858)ರ ಅನುಯಾಯಿಗಳು, ಆತನ ಸಿದ್ಧಾಂತ ಪ್ರತಿಪಾದಕರು.

ರಾಬರ್ಟ್ ಓವೆನ್‌ರು ಬಂಡವಾಳಶಾಹಿ ವ್ಯವಸ್ಥೆಯನ್ನು ತೀವ್ರವಾಗಿ ಟೀಕಿಸಿದರು, ಆದರೆ ಬಂಡವಾಳವಾದದ ವೈರುಧ್ಯತೆಗಳ ನಿಜವಾದ ಮೂಲಗಳನ್ನು ತೆರೆದು ತೋರಿಸುವುದರಲ್ಲಿ ವಿಫಲರಾದರು. ಸಾಮಾಜಿಕ ಅಸಮಾನತೆಯ ಮುಖ್ಯ ಕಾರಣ ಸಾಕಷ್ಟು ಶಿಕ್ಷಣ ಇಲ್ಲದುದೇ ಹೊರತು ಬಂಡವಾಳವಾದಿ ಉತ್ಪಾದನಾ ವಿಧಾನವಲ್ಲ ಎಂದು ಅವರು ನಂಬಿದ್ದರು. ಸೂಕ್ತ ತಿಳಿವಳಿಕೆ ಹರಡುವ ಮೂಲಕ ಮತ್ತು ಸಾಮಾಜಿಕ ಸುಧಾರಣೆಗಳ ಮೂಲಕ ಅಸಮಾನತೆಯನ್ನು ತೊಡೆದುಹಾಕಬಹುದು ಎಂದವರು ಭಾವಿಸಿದ್ದರು. ಅಂಥ ಸುಧಾರಣೆಗಳ ವಿಶಾಲ ಕಾರ್ಯಕ್ರಮವೊಂದನ್ನೂ ಅವರು ಮುಂದಿರಿಸಿದರು. ಭವಿಷ್ಯತ್ತಿನ "ವಿಚಾರವಾದಿ" ಸಮಾಜವು ಸಣ್ಣಪುಟ್ಟ ಸ್ವಯಮಾಡಳಿತದ ಕಮ್ಯೂನ್‌ಗಳ ಮುಕ್ತ ಸಮುದಾಯವಾಗಿರುವ ಕನಸು ಕಂಡರು. ಆದರೆ ತಮ್ಮ ವಿಚಾರಗಳನ್ನು ವಾಸ್ತವಿಕತೆಗೆ ಪರಿವರ್ತಿಸುವ ಅವರ ಎಲ್ಲ ಯತ್ನಗಳೂ ವಿಫಲಗೊಂಡವು.

ಪುಟ 21.

12 ಫೂರಿಯೇವಾದಿಗಳು – ಫ್ರೆಂಚ್ ಅಸಾಧ್ಯಾದರ್ಶವಾದಿ ಸಮಾಜವಾದಿ ಷಾರ್ಲ್ ಫೂರಿಯೇ (Charles Fourier) (1772-1837)ರವರ ಅನುಯಾಯಿಗಳು ಅವರ ಸಿದ್ಧಾಂತ ಪ್ರತಿಪಾದಕರು.

ಫೂರಿಯೇರವರು ಬೂರ್ಷ್ವಾ ವ್ಯವಸ್ಥೆಯನ್ನು ತೀವ್ರವಾಗಿಯೂ ಸಮಗ್ರವಾಗಿಯೂ ಟೀಕಿಸಿ, ಭವಿಷ್ಯತ್ತಿನ "ಸಾಮರಸ್ಯ" ಮಾನವ ಸಮಾಜವು ಮಾನವ ರಾಗಭಾವಗಳ ಸಮನ್ವಯದ ಮೇಲೆ ಅವಲಂಬಿಸಿರುತ್ತದೆಂದು

ವರ್ಣಿಸಿದರು. ಸಮಾಜವಾದಿ ಸಮಾಜಕ್ಕೆ ಪರಿವರ್ತನೆಯನ್ನು, ಸ್ವಯಮೇಚ್ಛೆಯ ಆಕರ್ಷಣೀಯವಾದ ಶ್ರಮವು ಮಾನವ ಅವಶ್ಯಕತೆಯಾಗಿರುವಂಥ ಮಾದರಿ ಫಾಲನ್‌ಸ್ಟೆರ್ (ಶ್ರಮ ಸಂಸ್ಥೆ)ಗಳ ಬಗೆಗೆ ಶಾಂತಿಯುತ ಪ್ರಚಾರ ಮಾಡುವ ಮೂಲಕ ಆಗುಮಾಡಬಹುದೆಂದು ನಂಬಿ ಅವರು ಬಲಪ್ರಯೋಗದ ಕ್ರಾಂತಿಗಳನ್ನು ವಿರೋಧಿಸಿದರು. ಆದರೆ ಫೂರಿಯೇರವರು ಖಾಸಗಿ ಆಸ್ತಿಯನ್ನು ರದ್ದುಮಾಡ ಬಯಸಲಿಲ್ಲ. ಅವರ ಫಾಲನ್‌ಸ್ಟೆರ್‌ಗಳಲ್ಲಿ ಶ್ರೀಮಂತರೂ ಬಡವರೂ ಇದ್ದರು.

ಪುಟ 21.

13 ಕಾಬೇ, ಎತ್ಯೇನ್ (Cabet, Etienne) (1788-1856) – ಫ್ರೆಂಚ್ ಪೆಟಿ ಬೂರ್ಷ್ವಾ ಪತ್ರಿಕಾ ಲೇಖಕ, ಅಸಾಧ್ಯಾದರ್ಶವಾದಿ ಕಮ್ಯೂನಿಸಂನ ಒಬ್ಬ ಪ್ರಮುಖ ಪ್ರತಿನಿಧಿ. ಬೂರ್ಷ್ವಾ ವ್ಯವಸ್ಥೆಯ ಕುಂದುಕೊರತೆಗಳನ್ನು ಸಮಾಜವನ್ನು ಶಾಂತಿಯುತವಾಗಿ ಪರಿವರ್ತಿಸುವುದರ ಮೂಲಕ ನಿವಾರಿಸಲು ಸಾಧ್ಯವೆಂದು ಅವರು ನಂಬಿದ್ದರು. ತಮ್ಮ ಅಭಿಪ್ರಾಯಗಳನ್ನು ಅವರು "ಇಕಾರಿಯಾ ಯಾತ್ರೆ" (1840) ಎಂಬ ಗ್ರಂಥದಲ್ಲಿ ವಿವರಿಸಿದರು. ಅಮೆರಿಕದಲ್ಲಿ ಒಂದು ಕಮ್ಯೂನಿಸ್ಟ್ ಕೂಟ ಸ್ಥಾಪಿಸುವ ಮೂಲಕ ಅವರು ತಮ್ಮ ಈ ಸಿದ್ಧಾಂತವನ್ನು ಕಾರ್ಯಾಚರಣೆಗೆ ತರಲು ಯತ್ನಿಸಿದರು. ಆದರೆ ಈ ಪ್ರಯೋಗವು ಸಂಪೂರ್ಣವಾಗಿ ಅಪಯಶಸ್ಸಿನಲ್ಲಿ ಕೊನೆಗಂಡಿತು.

ವೈಟ್ಲಿಂಗ್, ವಿಲ್ಹೆಲ್ಮ್ (Weitling, Wilhelm) (1808-1871) – ಜರ್ಮನ್ ಕಾರ್ಮಿಕ ವರ್ಗ ಚಳವಳಿಯ ಆರಂಭಿಕಕಾಲದ ಪ್ರಮುಖ ವ್ಯಕ್ತಿ, ಅಸಾಧ್ಯಾದರ್ಶವಾದಿ "ಸಮಾನತಾವಾದಿ" ಕಮ್ಯೂನಿಸಂ ಸಿದ್ಧಾಂತದ ಪ್ರತಿಪಾದಕ. ಎಂಗೆಲ್ಸ್‌ರ ಅಭಿಪ್ರಾಯದಲ್ಲಿ, ವೈಟ್ಲಿಂಗ್‌ರ ವಿಚಾರಗಳು "ಜರ್ಮನ್ ಶ್ರಮಜೀವಿಗಳ ಪ್ರಥಮ ಸ್ವತಂತ್ರ ಸೈದ್ಧಾಂತಿಕ ಚಳವಳಿ"ಯಾಗಿ ಧನಾತ್ಮಕ ಪಾತ್ರ ನಿರ್ವಹಿಸಿದವು.

ಪುಟ 21.

14 ಟಿಪ್ಪಣಿ ನಂ. 7 · ನೋಡಿ.

ಪುಟ 22.

15 ಟಿಪ್ಪಣಿ ನಂ. 3 ನೋಡಿ.

ಪುಟ 23.

16 ಟಿಪ್ಪಣಿ ನಂ. 2 ನೋಡಿ.

ಪುಟ 29.

17 ಪ್ರಷ್ಯನ್ ಸರಕಾರ ನಡೆಸಿದ ಉದ್ರೇಕಕಾರಿ ವಿಚಾರಣೆಗೆ (1852ರ ಅಕ್ಟೋಬರ್ 4ರಿಂದ ನವಂಬರ್ 12ರವರೆಗೆ) ಉಲ್ಲೇಖ. ಅಂತರರಾಷ್ಟ್ರೀಯ ಕಮ್ಯೂನಿಸ್ಟ್

ಸಂಘಟನೆ "ಕಮ್ಯೂನಿಸ್ಟ್ ಲೀಗ್" (1847-1852)ನ ಹನ್ನೊಂದು ಮಂದಿ ಸದಸ್ಯರ ಮೇಲೆ ರಾಜ್ಯದ್ರೋಹದ ಅಪಾದನೆ ಹೊರಿಸಲಾಯಿತು. ಈ ಆಪಾದಿತರಲ್ಲಿ ಏಳು ಮಂದಿಯನ್ನು ಮೋಸದ ಕಾಗದಪತ್ರ ಹಾಗೂ ಸುಳ್ಳು ಸಾಕ್ಷ್ಯದ ಆಧಾರದ ಮೇಲೆ ಮೂರರಿಂದ ಆರು ವರ್ಷಗಳವರೆಗೆ ಶಿಕ್ಷೆ ವಿಧಿಸಿ ಕೋಟೆಯೊಂದರಲ್ಲಿ ಬಂಧಿಸಿ ಇರಿಸಲಾಯಿತು.

ಪುಟ 29.

18 ಕಾರ್ಲ್ ಮಾರ್ಕ್ಸ್‌ರ "ಅಂತರರಾಷ್ಟ್ರೀಯ ಕಾರ್ಮಿಕ ಜನತಾ ಸಂಸ್ಥೆಯ ಸಾಮಾನ್ಯ ನಿಯಮಾವಳಿ" ನೋಡಿ.

ಪುಟ 29.

19 ಟಿಪ್ಪಣಿ ನಂ. 13 ನೋಡಿ.

ಪುಟ 31.

20 ಕಾಂಗ್ರೆಸ್ ಪೋಲೆಂಡ್ — 1814-1815ರಲ್ಲಿ ಜರುಗಿದ ವಿಯನ್ನಾ ಕಾಂಗ್ರೆಸ್ಸಿನ ನಿರ್ಧಾರದ ಪ್ರಕಾರ ಪೋಲಿಷ್ ಸಾಮ್ರಾಜ್ಯದ ಹೆಸರಿನಲ್ಲಿ ರಶಿಯಕ್ಕೆ ಹೋದ ಪೋಲೆಂಡಿನ ಒಂದು ಭಾಗಕ್ಕೆ ನೀಡಿದ ಹೆಸರು.

ಪುಟ 33.

21 ತೃತೀಯ ನೆಪೋಲಿಯನ್ (ಲುಯಿ ಬೊನಪಾರ್ಟ್) (Louis Bonaparte) (1808-1873) — ಪ್ರಥಮ ನೆಪೋಲಿಯನ್‌ನ ಸೋದರಳಿಯ, ದ್ವಿತೀಯ ರಿಪಬ್ಲಿಕ್‌ನ ಅಧ್ಯಕ್ಷ (1848-1851), ಫ್ರೆಂಚ್ ಚಕ್ರವರ್ತಿ (1852-1870).

ಬೀಸ್ಮಾರ್ಕ್, ಒಟ್ಟೊ ಎಡುವಾರ್ಡ್ ಲಿಯೊಪೋಲ್ಡ್ (Bismarck, Otto Eduard Leopold) (1815-1898) – ಪ್ರಷ್ಯನ್ ಹಾಗೂ ಜರ್ಮನ್ ರಾಜನೀತಿಜ್ಞ, ಮತ್ತು ರಾಯಭಾರ ನಿರ್ವಾಹಕ. ವಿದೇಶಾಂಗ ಹಾಗೂ ಗೃಹ ನೀತಿ ನಿರ್ವಹಣೆಯಲ್ಲಿ ಯುಂಕರ್ (ಜಮೀನುದಾರರ) ಹಾಗೂ ದೊಡ್ಡ ಬೂರ್ಷ್ವಾಗಳ ಹಿತಗಳಿಂದ ಮಾರ್ಗದರ್ಶಿತನಾಗಿದ್ದನು. ದರೋಡೆಯ ಯುದ್ಧಗಳು ಮತ್ತು ಯಶಸ್ವಿ ರಾಯಭಾರ ಚರ್ಯೆಗಳ ಮೂಲಕ 1871ರಲ್ಲಿ ಜರ್ಮನಿ ಹಾಗೂ ಪ್ರಷ್ಯಗಳನ್ನು ಒಂದುಗೂಡಿಸುವುದರಲ್ಲಿ ಯಶಸ್ವಿಯಾದ, 1871-1890ರಲ್ಲಿ ಜರ್ಮನ್ ಸಾಮ್ರಾಜ್ಯದ ಚಾನ್ಸೆಲರ್ ಆಗಿದ್ದನು.

"1848ರ ಕ್ರಾಂತಿಯೂ ಅದಕ್ಕೆ ಮುನ್ನಿನ ಅನೇಕಾನೇಕ ಕ್ರಾಂತಿಗಳಂತೆಯೇ, ವಿಚಿತ್ರ ಸಹಚರರನ್ನೂ ಉತ್ತರಾಧಿಕಾರಿಗಳನ್ನೂ ಹೊಂದಿದ್ದಿತು. ಅದನ್ನು ಹತ್ತಿಕ್ಕಿದ ಜನರೇ, ಕಾರ್ಲ್ ಮಾರ್ಕ್ಸ್ ಹೇಳುತ್ತಿದ್ದಂತೆ, ಅದರ ನಿಯೋಜಿತ ಕಾರ್ಯನಿರ್ವಾಹಕರಾದರು. ಲುಯಿ ನೆಪೋಲಿಯನ್ ಅಖಂಡ ಹಾಗೂ ಸ್ವತಂತ್ರ ಇಟಲಿಯನ್ನು ನಿರ್ಮಿಸುವ ಬಲಪಂತಕ್ಕೊಳಗಾದ. ಬೀಸ್ಮಾರ್ಕ್

ಜರ್ಮನಿಯಲ್ಲಿ ಒಂದು ರೀತಿಯ ರಾಜ್ಯಕ್ರಾಂತಿ ಉಂಟುಮಾಡಿ ಹಂಗೆರಿಗೆ ಸ್ವಾತಂತ್ರ್ಯ ಹಿಂದಿರುಗಿಸುವ ಬಲಾತ್ಕಾರಕ್ಕೊಳಗಾದ...." ("ಬ್ರಿಟನ್ನಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ" ಕೃತಿಯ ಇಂಗ್ಲಿಷ್ ಆವೃತ್ತಿಗೆ ಮುನ್ನುಡಿ, ಎಂಗೆಲ್ಸ್‌ರಿಂದ.)

ಪುಟ 34.

22 ರಶಿಯನ್ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಪೋಲಿಷ್ ಪ್ರದೇಶದಲ್ಲಿ 1863ರ ಜನವರಿಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ವಿಮೋಚನಾ ಬಂಡಾಯಕ್ಕೆ ಉಲ್ಲೇಖ. ಈ ಬಂಡಾಯವನ್ನು ತ್ಸಾರನ ದಳಗಳು ಮೃಗೀಯವಾಗಿ ಹತ್ತಿಕ್ಕಿದವು. ಪಾಶ್ಚಿಮಾತ್ಯ ಸರಕಾರಗಳು ಮಧ್ಯೆ ಪ್ರವೇಶಿಸುವುವೆಂದು ಬಂಡಾಯದ ಕೆಲವು ನಾಯಕರು ನಂಬಿದ್ದರು. ಆದರೆ ಆ ಸರಕಾರಗಳು ರಾಯಭಾರ ಕಾರ್ಯಕ್ರಮಗಳಿಗಷ್ಟೆ ತಮ್ಮ ಚಟುವಟಿಕೆಯನ್ನು ಸೀಮಿತಗೊಳಿಸಿ, ಪರಿಣಾಮದಲ್ಲಿ ಬಂಡಾಯಗಾರರಿಗೆ ದ್ರೋಹ ಬಗೆದವು.

ಪುಟ 34.

23 ಒಂಬತ್ತನೆಯ ಪೋಪ್ ಪಯಸ್ (Pope Pius IX) 1846ರಲ್ಲಿ ಪೋಪ್‌ನ ಸಿಂಹಾಸನ ಏರಲು ಆಯ್ಕೆಗೊಂಡರು. ಅವರು ಆ ಕಾಲದಲ್ಲಿ "ಉದಾರವಾದಿ"ಯೆಂದು ಭಾವಿಸಲಾಗಿದ್ದಿತು. ಆದರೆ ಸಮಾಜವಾದದ ಬಗೆಗೆ ಅವರ ಮನೋಧರ್ಮ ರಶಿಯನ್ ತ್ಸಾರ್ ಪ್ರಥಮ ನಿಕೋಲಸ್‌ನ ಮನೋಧರ್ಮಕ್ಕಿಂತ ಕಮ್ಮಿ ಏನೂ ಹಗೆತನದಿಂದ ಕೂಡಿರಲಿಲ್ಲ. 1848ರ ಕ್ರಾಂತಿಗೆ ಮುನ್ನವೇ ಈ ರಶಿಯನ್ ತ್ಸಾರ್ ಯೂರೋಪಿನ ಪೊಲೀಸಸೈನಿಕನ ಪಾತ್ರ ನಿರ್ವಹಿಸಿದ್ದನು. ಆಸ್ಟ್ರಿಯನ್ ಸಾಮ್ರಾಜ್ಯದ ಚಾನ್ಸೆಲರ್ ಆಗಿದ್ದ ಹಾಗೂ ಆ ಕಾಲದಲ್ಲಿ ಇಡೀ ಯೂರೋಪಿಯನ್ ಪ್ರತಿಗಾಮಿಗಳ ನಾಯಕನೆಂದು ಮನ್ನಿಸಲ್ಪಟ್ಟಿದ್ದ ಮೆಟೆರ್‌ನಿಕ್ (Metternich)ರು ಫ್ರೆಂಚ್ ಇತಿಹಾಸಕಾರ ಹಾಗೂ ಸಚಿವನಾಗಿದ್ದ, ಫ್ರಾನ್ಸಿನ ದೊಡ್ಡ ಹಣಕಾಸು ಹಾಗೂ ಕೈಗಾರಿಕಾ ಬೂರ್ಷ್ವಾಸೀಯ ಸಿದ್ಧಾಂತವಾದಿಯೂ ಶ್ರಮಜೀವಿಗಳ ಪರಮಶತ್ರುವೂ ಆಗಿದ್ದ ಗಿಜೋ (Guisot)ಗೆ ವಿಶೇಷವಾಗಿ ನಿಕಟವಾದರು. ಪ್ರಷ್ಯನ್ ಸರಕಾರದ ಕೇಳಿಕೆಯಂತೆ ಗಿಜೋವು ಮಾರ್ಕ್ಸ್‌ರವರನ್ನು ಪ್ಯಾರಿಸ್ಸಿನಿಂದ ಗಡೀಪಾರು ಮಾಡಿದನು. ಜರ್ಮನ್ ಪೊಲೀಸರು ಜರ್ಮನಿಯಲ್ಲಷ್ಟೆ ಅಲ್ಲ ಫ್ರಾನ್ಸ್ ಹಾಗೂ ಬೆಲ್ಜಿಯಂಗಳಲ್ಲೂ, ಸ್ವಿಟ್ಸರ್ಲೆಂಡಿನಲ್ಲೂ ಸಹ ಕಮ್ಯೂನಿಸ್ಟರನ್ನು ಸ್ವತಂತ್ರವಾಗಿರಲು ಬಿಡಲಿಲ್ಲ, ಅವರ ಪ್ರಚಾರ ಕಾರ್ಯಕ್ಕೆ ಎಲ್ಲ ರೀತಿಗಳಿಂದಲೂ ಅಡ್ಡಿ ತಂದುಹಾಕಲು ಯತ್ನಿಸಿದರು.

ಪುಟ 39.

24 ಹಾಕ್ಸ್‌ಥೌಸೆನ್, ಆಗಸ್ಟ್ (Haxthausen, August) (1792-1866)– ರಶಿಯದ ಕೃಷಿ ವ್ಯವಸ್ಥೆಯನ್ನೂ ರಶಿಯನ್ ರೈತರ ಜೀವನವನ್ನೂ ಅಧ್ಯಯಿಸಲು ರಶಿಯಕ್ಕೆ ಬರಲು (1843-1844) ಪ್ರಥಮ ನಿಕೋಲಸ್‌ನಿಂದ ಪರವಾನಗಿ ಪಡೆದ ಪ್ರಷ್ಯನ್ ಬೇರನ್ (ರಾಜಮಾನ್ಯ ಶ್ರೀಮಂತ ವರ್ಗದ ಸದಸ್ಯ). ರಶಿಯದ ಭೂ ಸಂಬಂಧಗಳಲ್ಲಿ ಕಮ್ಯೂನ್ ಪದ್ಧತಿಯ ಉಳಿಕೆಗಳ ಕುರಿತಾದ ಗ್ರಂಥದ ಕರ್ತೃ.

ಪುಟ 40.

25 ಮೌರರ್, ಗಿಯೋರ್ಗ್ ಲೂಡ್ವಿಗ್ (Maurer, Georg Ludwig) (1790-1872) – ಪುರಾತನ ಹಾಗೂ ಮಧ್ಯಯುಗ ಜರ್ಮನಿಯ ಸಾಮಾಜಿಕ ವ್ಯವಸ್ಥೆಯನ್ನು ಅಭ್ಯಸಿಸಿದ ಜರ್ಮನ್ ಇತಿಹಾಸಕಾರ, ಸಂಶೋಧಕ; ಮಧ್ಯಯುಗದ ಜರ್ಮನ್ ಕಮ್ಯೂನ್‌ನ (ಮಾರ್ಕದ) ಇತಿಹಾಸದ ಅಧ್ಯಯನಕ್ಕೆ ಪ್ರಮುಖ ಕಾಣಿಕೆ ಸಲ್ಲಿಸಿದವರು.

ಪುಟ 40.

26 ಮೋರ್ಗನ್, ಲೂಯಿ ಹೆನ್ರಿ (Morgan, Lewis Henry) (1818-1881) – ಅಮೆರಿಕದ ಮಾನವಕುಲಶಾಸ್ತ್ರಜ್ಞ, ಪ್ರಾಚೀನ ಶೋಧಕ ಹಾಗೂ ಇತಿಹಾಸಕಾರ. ಅಮೆರಿಕನ್ ಇಂಡಿಯನರ ದೈನಂದಿಕ ಜೀವನ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಅಭ್ಯಸಿಸುವಾಗ ಪಡೆದ ಅಪಾರ ಮಾನವಕುಲ ಶಾಸ್ತ್ರ ಸಾಮಗ್ರಿಯ ಮೇಲೆ ಆಧರಿಸಿ ಅವರು ಬುಡಕಟ್ಟೇ ಆದಿಕಾಲದ ಸಮುದಾಯ ಸಮಾಜ ವ್ಯವಸ್ಥೆಯ ಪ್ರಧಾನ ಸ್ವರೂಪವೆಂಬ ಬುಡಕಟ್ಟಿನ ಬೆಳವಣಿಗೆಯ ಸಿದ್ಧಾಂತವನ್ನು ವಿಕಾಸಗೊಳಿಸಿದರು. ವರ್ಗಪೂರ್ವ ಸಮಾಜದ ಇತಿಹಾಸವನ್ನು ವಿವಿಧ ಕಾಲಘಟ್ಟಗಳನ್ನಾಗಿ ವಿಂಗಡಿಸುವ ಕ್ರಮವನ್ನು ಸೃಷ್ಟಿಸಲು ಯತ್ನಿಸಿದರು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಮೋರ್ಗನ್‌ರ ಕೃತಿಗಳನ್ನು ಅತ್ಯಮೂಲ್ಯವೆಂದು ಪರಿಗಣಿಸಿದ್ದರು. ಮಾರ್ಕ್ಸ್‌ರವರು ಮೋರ್ಗನ್‌ರ "ಪುರಾತನ ಸಮಾಜ" (1877) ಎಂಬ ಕೃತಿಯ ಸವಿವರವಾದ ಸಾರಾಂಶವನ್ನು ಸಿದ್ಧಗೊಳಿಸಿದ್ದರು. ಎಂಗೆಲ್ಸ್‌ರು ತಮ್ಮ "ಕುಟುಂಬ. ಖಾಸಗಿ ಆಸ್ತಿ ಹಾಗೂ ರಾಜ್ಯದ ಉಗಮ" ಎಂಬ ಕೃತಿಯಲ್ಲಿ ಮೋರ್ಗನ್‌ರು ಸಂಗ್ರಹಿಸಿದ್ದ ವಾಸ್ತವಿಕ ಸಾಮಗ್ರಿಗಳನ್ನು ಉಲ್ಲೇಖಿಸಿದ್ದಾರೆ.

ಪುಟ 41.

27 ಧರ್ಮಯುದ್ಧಗಳು – ಪಶ್ಚಿಮ ಯೂರೋಪಿನ ಸಾಮಂತಶಾಹಿಗಳೂ ಶ್ರೀಮಂತವೀರರೂ ಜೆರುಸಲೆಮ್‌ನಲ್ಲಿನ ಪವಿತ್ರ ಸ್ಥಳಗಳನ್ನೂ ಮತ್ತು ಇತರ

"ಪವಿತ್ರ ವಸ್ತುಗಳನ್ನೂ" ಮುಸ್ಲಿಮ್ ಆಳ್ವಿಕೆಯಿಂದ ಬಿಡುಗಡೆಗೊಳಿಸುವ ಧಾರ್ಮಿಕ ಘೋಷಣೆಯಡಿ 11-13ನೇ ಶತಮಾನಗಳಲ್ಲಿ ಪೂರ್ವರಾಷ್ಟ್ರಗಳ ಮೇಲೆ ನಡೆಸಿದ ಸೈನಿಕ-ವಸಾಹತುಶಾಹಿ ದಂಡಯಾತ್ರೆಗಳು.

ಪುಟ 45.

28 ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ತಮ್ಮ ಕೊನೆಯ ಕೃತಿಗಳಲ್ಲಿ "ಶ್ರಮದ ಮೌಲ್ಯ" ಹಾಗೂ "ಶ್ರಮದ ಬೆಲೆ" ಎಂಬ ಪದಗಳಿಗೆ ಬದಲಾಗಿ ಮಾರ್ಕ್ಸ್‌ರವರು ಜಾರಿಗೆ ತಂದ "ಶ್ರಮಶಕ್ತಿಯ ಮೌಲ್ಯ" ಹಾಗೂ "ಶ್ರಮಶಕ್ತಿಯ ಬೆಲೆ" ಎಂಬ ಹೆಚ್ಚು ನಿಷ್ಕೃಷ್ಟವಾದ ಪದಗಳನ್ನು ಬಳಸಿದರು.

ಪುಟ 50.

29 ಜರ್ಮನ್ ಆವೃತ್ತಿಯಲ್ಲಿ "ಲುಂಪೆನ್ ಪ್ರಾಲಟೇರಿಯಟ್" (Lumpen proletariat – ಪುಂಡ ಶ್ರಮಜೀವಿಗಳು; ಜರ್ಮನ್ ಭಾಷೆಯಲ್ಲಿ "ಲುಂಪೆನ್" ಎಂದರೆ ಚಿಂದಿಬಟ್ಟೆ ಎಂದು ಅರ್ಥ) – ವರ್ಗಹೀನ ಜನರು – ಪುಂಡ ಅಲೆಮಾರಿಗಳು, ಭಿಕ್ಷುಕರು, ಕಳ್ಳರು, ಇತ್ಯಾದಿ.

ಸುಸಂಘಟಿತ ರಾಜಕೀಯ ಹೋರಾಟವನ್ನು ಹೂಡಲು ಈ ಪುಂಡ ಶ್ರಮಜೀವಿಗಳ ಅಸಾಮರ್ಥ್ಯ, ಅವರ ನೈತಿಕ ಅಸ್ಥಿರತೆ ಹಾಗೂ ದುಸ್ಸಾಹಸ ಕೃತ್ಯಗಳನ್ನು ಎಸಗುವ ಅವರ ಸಹಜ ಶಕ್ತಿ ಇವುಗಳು ಬೂರ್ಷ್ವಾಸೀಗೆ ಅವರನ್ನು ಮುಷ್ಕರ ಮುರಿಯುವವರನ್ನಾಗಿ, ಸಾಮೂಹಿಕ ಕಗ್ಗೊಲೆ ನಡೆಸುವ ತಂಡಗಳ ಸದಸ್ಯರನ್ನಾಗಿ ಉಪಯೋಗಿಸಲು ಸಾಧ್ಯ ಮಾಡಿಕೊಟ್ಟಿದ್ದವು.

ಪುಟ 55.

30 ಇದು ಚುನಾವಣಾ ಶಾಸನದಲ್ಲಿ ಜಾರಿಗೆ ತಂದ ಸುಧಾರಣೆಗೆ ಉಲ್ಲೇಖ. ಜನರ ಒತ್ತಡಕ್ಕೆ ಮಣಿದು ಈ ಕಾಯಿದೆಯನ್ನು ಹೌಸ್ ಆಫ್ ಕಾಮನ್ಸ್ 1831ರಲ್ಲೂ ಅಂತಿಮವಾಗಿ ಹೌಸ್ ಆಫ್ ಲಾರ್ಡ್ಸ್ 1832ರ ಜೂನ್‌ನಲ್ಲೂ, ಅನುಮೋದಿಸಿದವು. ಈ ಸುಧಾರಣೆಯು ಭೂಮಾಲಿಕ ಹಾಗೂ ಹಣಕಾಸು ಶ್ರೀಮಂತಶಾಹಿಯ ರಾಜಕೀಯ ಏಕಸ್ವಾಮ್ಯದ ವಿರುದ್ಧ ನಿರ್ದೇಶಿತವಾಗಿದ್ದಿತು ಮತ್ತು ಕೈಗಾರಿಕಾ ಬೂರ್ಷ್ವಾಸೀಯ ಪ್ರತಿನಿಧಿಗಳಿಗೆ ಪಾರ್ಲಿಮೆಂಟಿಗೆ ಹೋಗಲು ಮಾರ್ಗ ತೆರೆದು ಕೊಟ್ಟಿತು. ಈ ಸುಧಾರಣೆಗಾಗಿ ಹೋರಾಟದಲ್ಲಿ ಮುಖ್ಯ ಶಕ್ತಿಯಾಗಿದ್ದ ಶ್ರಮಜೀವಿಗಳನ್ನೂ ಪೆಟಿ ಬೂರ್ಷ್ವಾಸೀಯನ್ನೂ ಉದಾರವಾದಿ ಬೂರ್ಷ್ವಾಸೀಯು ಮೋಸಗೊಳಿಸಿತು ಮತ್ತು ಅವರಿಗೆ ಚುನಾವಣಾ ಹಕ್ಕುಗಳನ್ನು ನೀಡಲಿಲ್ಲ.

ಪುಟ 72.

[31] ಫ್ರೆಂಚ್ ಲೆಜಿಟಿಮಿಸ್ಟರು (ಆನುವಂಶಿಕ ದೊರೆತನದ ಪ್ರತಿಪಾದಕರು) – 1830ರಲ್ಲಿ ಪದಚ್ಯುತಗೊಳಿಸಲ್ಪಟ್ಟ ಬೂರ್ಬೋನ್ ರಾಜಮನೆತನದ ಅನುಯಾಯಿಗಳು. ಈ ರಾಜಮನೆತನವು ಭಾರಿ ಆನುವಂಶಿಕ ಭೂಮಾಲಿಕ ಕುಲೀನರ ಹಿತಗಳನ್ನು ಪ್ರತಿನಿಧಿಸುತ್ತಿದ್ದಿತು. ಆಗ ರಾಜ್ಯಭಾರ ಮಾಡುತ್ತಿದ್ದ ಒರ್ಲಿಯಾನ್ ರಾಜಮನೆತನ (1830-1848)ದ ವಿರುದ್ಧ ತಮ್ಮ ಹೋರಾಟದಲ್ಲಿ ಈ ಮನೆತನದವರು ಹಣಕಾಸು ಶ್ರೀಮಂತಶಾಹಿಯ ಹಾಗೂ ದೊಡ್ಡ ಬೂರ್ಷ್ವಾಸೀಯ ಮೇಲೆ ವಿಶ್ವಾಸವಿರಿಸಿದ್ದರು. ಈ ಲೆಜಿಟಿಮಿಸ್ಟರ ಒಂದು ವಿಭಾಗದ ಜನರು ಆಗಾಗ್ಗೆ ಸಾಮಾಜಿಕ ಸುಧಾರಣೆಯ ಘೋಷಣೆಗಳನ್ನು ಕೂಗುತ್ತ ಜನರಲ್ಲಿ ಆಶಾಭಾವನೆಯನ್ನು ಕೆರಳಿಸುವುದರಲ್ಲೂ ನಿರತರಾಗಿದ್ದರು. ಇಷ್ಟೇ ಅಲ್ಲದೆ ಇವರು ಬೂರ್ಷ್ವಾಸೀಯ ಶೋಷಣೆಯ ವಿರುದ್ಧ ಶ್ರಾಮಿಕ ಜನರ ಹಿತಸಂರಕ್ಷಕರಾಗಿಯೂ ಸೋಗುಹಾಕುತ್ತಿದ್ದರು.

"ಯಂಗ್ ಇಂಗ್ಲೆಂಡ್" – ಟೋರಿ ಪಾರ್ಟಿಗೆ ಸೇರಿದ ಬ್ರಿಟಿಷ್ ರಾಜಕಾರಣಿಗಳ ಹಾಗೂ ಸಾಹಿತಿಗಳ ಒಂದು ತಂಡ. ಇದನ್ನು 1840ರ ಆರಂಭಿಕ ವರ್ಷಗಳಲ್ಲಿ ಸ್ಥಾಪಿಸಲಾಯಿತು. ಬೂರ್ಷ್ವಾಸೀಯ ಆರ್ಥಿಕ ಹಾಗೂ ರಾಜಕೀಯ ಶಕ್ತಿಯು ಹೆಚ್ಚುತ್ತಿದ್ದುದರ ಬಗೆಗೆ ಭೂಮಾಲಿಕ ಶ್ರೀಮಂತಶಾಹಿಯ ಅತೃಪ್ತಿಯನ್ನು ವ್ಯಕ್ತಪಡಿಸುತ್ತ ಈ "ಯಂಗ್ ಇಂಗ್ಲೆಂಡ್" ನಾಯಕರು, ಕಾರ್ಮಿಕ ವರ್ಗವನ್ನು ತಮ್ಮ ಪ್ರಭಾವದೊಳಕ್ಕೆ ಸೆಳೆದುಕೊಂಡು ಅದನ್ನು ಬೂರ್ಷ್ವಾಸೀಯ ವಿರುದ್ಧ ತಮ್ಮ ಹೋರಾಟದಲ್ಲಿ ಬಳಸಿಕೊಳ್ಳಲು ಸೋಗಿನ ಘೋಷಣೆಗಳ ಕುಯುಕ್ತಿಯಲ್ಲಿ ತೊಡಗಿದ್ದರು.

ಪುಟ 73.

[32] ಸಿಸ್ಮೊಂದಿ, ಜಾನ್ ಚಾರ್ಲ್ಸ್ ಲಿಯೋನಾರ್ಡ್ ಸಿಮೋಂದ್ (Sismondi, Jean-Charles Simonde) (1773-1842) – ಸ್ವೀಡನ್ನಿನ ಅರ್ಥಶಾಸ್ತ್ರಜ್ಞ ಹಾಗೂ ಇತಿಹಾಸಕಾರ, ಪೆಟಿ ಬೂರ್ಷ್ವಾ ಸಮಾಜವಾದದ ಪ್ರತಿನಿಧಿ.

ಸಿಸ್ಮೊಂದಿಯವರು ಭಾರಿ ಬಂಡವಾಳಶಾಹಿ ಉತ್ಪಾದನೆಯ ಪುರೋಗಾಮಿ ಪ್ರವೃತ್ತಿಗಳನ್ನು ಅರ್ಥಮಾಡಿಕೊಳ್ಳದಾಗಿದ್ದರು. ಅವರು ತಮ್ಮ ಸಮಾಜವಾದಿ ವಿಚಾರಗಳಿಗೆ ದೃಷ್ಟಾಂತಗಳನ್ನು ಹಳೆಯ ಸಮಾಜ ವ್ಯವಸ್ಥೆಗಳಲ್ಲಿ ಹಾಗೂ ಪರಂಪರೆಗಳಲ್ಲಿ – ಗಿಲ್ಡ್ ರೀತಿಯ ಕೈಗಾರಿಕೆಯ ಸಂಘಟಣೆಯಲ್ಲಿ ಹಾಗೂ ಕುಲಪತಿ ಆಡಳಿತ ಪದ್ಧತಿಯ ಕೃಷಿ ವ್ಯವಸ್ಥೆಯಲ್ಲಿ – ಕಂಡುಕೊಳ್ಳಲು ಯತ್ನಿಸಿದರು. ಆದರೆ ಅವು ಬದಲಿದ ಆರ್ಥಿಕ ಪರಿಸ್ಥಿತಿಗಳಿಗೆ ಸರಿಹೊಂದುತ್ತಿರಲಿಲ್ಲ.

ಪುಟ 75.

[33] ಯುಂಕರ್‌ಗಳು – ಪ್ರಷ್ಯ ದೇಶದ ಜಮೀನುದಾರ ಕುಲೀನರು.

ಪುಟ 79.

[34] ಗ್ರೂನ್, ಕಾರ್ಲ್ (Grün, Karl) (1817-1887) – ಜರ್ಮನಿಯ ಪೆಟಿ ಬೂರ್ಶ್ವಾ ಪತ್ರಕರ್ತ.

ಪುಟ 80.

[35] ಬಾಬೇಫ್, ಗ್ರಾಕಸ್ (Babeuf, Gracchus); ನಿಜವಾದ ಹೆಸರು ಫ್ರಾನ್ಸಿಸ್ ನೋಯೆಲ್ (François Noël) (1760-1797) – ಫ್ರೆಂಚ್ ಕ್ರಾಂತಿಕಾರಿ, ಅಸಾಧ್ಯಾದರ್ಶ ಕಮ್ಯೂನಿಸಂನ ಪ್ರಮುಖ ಪ್ರತಿನಿಧಿ. ಜನರ ಹಿತಗಳನ್ನು ರಕ್ಷಿಸಲು ಕ್ರಾಂತಿಕಾರಿ ಸರ್ವಾಧಿಕಾರತ್ವವನ್ನು ಸ್ಥಾಪಿಸ ಲೋಸುಗ ಸಶಸ್ತ್ರ ಬಂಡಾಯಕ್ಕೆ ಸಿದ್ಧತೆಗೊಳಿಸಲು ಇವರು ಗುಪ್ತ ಸಂಸ್ಥೆ ಯೊಂದನ್ನು ಸಂಘಟಿಸಿದರು. ಇವರ ಈ ಸಂಚು ಬಯಲಾಗಿ ಇವರನ್ನು 1797ರ ಮೇ 27ರಂದು ಗಲ್ಲಿಗೇರಿಸಲಾಯಿತು.

ಪುಟ 83.

[36] ಸೆಂತ್-ಸಿಮೋನ್, ಹೆನ್ರಿ ಕ್ಲಾದ್ (Saint-Simon, Henry Clodt) (1760-1825) – ಫ್ರೆಂಚ್ ಅಸಾಧ್ಯಾದರ್ಶವಾದಿ ಸಮಾಜವಾದಿ. ಬಂಡ ವಾಳಶಾಹಿ ವ್ಯವಸ್ಥೆಯನ್ನು ಟೀಕಿಸಿದರು. ಅದರ ಸ್ಥಳದಲ್ಲಿ ಸಹಕಾರ ಸೂತ್ರ ಗಳ ಮೇಲೆ ಅವಲಂಬಿಸಿದ ಸಮಾಜವನ್ನು ಸ್ಥಾಪಿಸುವ ಕಾರ್ಯಕ್ರಮ ವೊಂದನ್ನು ಮುಂದಿಟ್ಟರು. ಈ ಹೊಸ ಸಮಾಜದಲ್ಲಿ ಪ್ರತಿಯೊಬ್ಬರೂ ಕೆಲಸ ಮಾಡಬೇಕು ಮತ್ತು ವ್ಯಕ್ತಿಗಳ ಪಾತ್ರವು ಅವರ ಶ್ರಮಸಾಧನೆಗಳಿಗೆ ಅನು ಗುಣವಾಗಿರಬೇಕು, ಎಂಬುದು ಅವರ ನಂಬಿಕೆಯಾಗಿದ್ದಿತು. ವಿಜ್ಞಾನ ಹಾಗೂ ಕೈಗಾರಿಕೆಯ ನಡುವೆ ಸಹಕಾರವಿರಬೇಕೆಂಬ ವಿಚಾರವನ್ನೂ, ಕೇಂದ್ರೀಕೃತ ವಾದ ಹಾಗೂ ವ್ಯವಸ್ಥಾಬದ್ಧವಾದ ಉತ್ಪಾದನೆಯ ವಿಚಾರವನ್ನೂ ಅವರು ಮುಂದಿಟ್ಟರು. ಆದರೆ ಅವರು ಖಾಸಗಿ ಆಸ್ತಿಯನ್ನಾಗಲೀ ಬಂಡವಾಳದ ಹಿತಗಳನ್ನಾಗಲೀ ಮುಟ್ಟಹೋಗಲಿಲ್ಲ. ರಾಜಕೀಯ ಹೋರಾಟ ಹಾಗೂ ಕ್ರಾಂತಿಯ ಬಗೆಗೆ ಋಣಾತ್ಮಕ ಭಾವನೆಗಳನ್ನು ಹೊಂದಿದ್ದರು. ಶ್ರಮಜೀವಿ ವರ್ಗದ ಐತಿಹಾಸಿಕ ಧ್ಯೇಯಕಾರ್ಯವನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿ ಅವರು ಸರಕಾರೀ ಸುಧಾರಣೆಗಳೂ, ಹೊಸ ಧರ್ಮವೊಂದರ ಸದ್ಭಾವದಲ್ಲಿ ಸಮಾಜಕ್ಕೆ ನೈತಿಕ ಶಿಕ್ಷಣ ನೀಡುವುದೂ, ವರ್ಗವೈರುಧ್ಯತೆಗಳ ನಿರ್ಮೂಲ ನಕ್ಕೆ ದಾರಿ ಮಾಡಿಕೊಡುವುವೆಂದು ನಂಬಿದ್ದರು.

ಓವೆನ್ ಹಾಗೂ ಫೂರಿಯೇರವರ ಬಗೆಗೆ 11 ಹಾಗೂ 12ನೇ ಟಿಪ್ಪಣಿಗಳನ್ನು ನೋಡಿ.

ಪುಟ 83.

[37] ಚಾರ್ಟಿಸ್ಟ್ (Charter ಎಂಬ ಪದದಿಂದ) – ಕಷ್ಟಕರ ಆರ್ಥಿಕ ಪರಿಸ್ಥಿತಿಗಳಿಂದಾಗಿಯೂ ರಾಜಕೀಯ ಹಕ್ಕುಗಳ ಅಭಾವದಿಂದಾಗಿಯೂ ಬ್ರಿಟಿಷ್ ಕಾರ್ಮಿಕರು ಪ್ರಾರಂಭಿಸಿದ ಒಂದು ಸಾಮೂಹಿಕ ಕ್ರಾಂತಿಕಾರಿ ಚಳವಳಿ. 1830ರ ಕೊನೆಯ ವರ್ಷಗಳಲ್ಲಿ ಈ ಚಳವಳಿಯು ಸಾಮೂಹಿಕ ಸಭೆ ಹಾಗೂ ಪ್ರದರ್ಶನಗಳೊಂದಿಗೆ ಪ್ರಾರಂಭವಾಗಿ, ಮಧ್ಯೆಮಧ್ಯೆ ನಿಲ್ಲುತ್ತ 1850ರ ಆರಂಭಿಕ ವರ್ಷಗಳವರೆಗೂ ಮುಂದುವರೆಯಿತು.

ಪುಟ 86.

[38] ಫ್ರೆಂಚ್ ವೃತ್ತಪತ್ರಿಕೆ "ರಿಫೋರ್ಮ್" (*Le Rèforme*) (ಪ್ಯಾರಿಸ್, 1843-1850)ನ ಅನುಯಾಯಿಗಳಿಗೆ ಇಲ್ಲಿ ಉಲ್ಲೇಖ. ಇವರು ಗಣತಂತ್ರ ಸ್ಥಾಪನೆಯಾಗಬೇಕೆಂದೂ ಪ್ರಜಾಸತ್ತಾತ್ಮಕ ಹಾಗೂ ಸಾಮಾಜಿಕ ಸುಧಾರಣೆಗಳಾಗಬೇಕೆಂದೂ ಪ್ರತಿಪಾದಿಸಿದರು.

ಪುಟ 86.

[39] ಲೆದ್ರೂ-ರೊಲೆನ್, ಅಲೆಕ್ಸಾಂದರ್ ಒಗ್ಯೂಸ್ತ್ (Ledru-Rollin, Alexander Auguste) (1807-1874) – ಫ್ರೆಂಚ್ ಪತ್ರಕರ್ತ ಹಾಗೂ ರಾಜಕಾರಣಿ. ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿಗಳ ನಾಯಕರಲ್ಲೊಬ್ಬರು. "ರಿಫೋರ್ಮ್" ಪತ್ರಿಕೆಯ ಸಂಪಾದಕರಾಗಿದ್ದರು. 1848ರಲ್ಲಿ ತಾತ್ಕಾಲಿಕ ಸರಕಾರದ ಸದಸ್ಯರಾಗಿದ್ದರು.

ಬ್ಲಾಂಕ್, ಲುಯಿ (Blanc, Louis) (1811-1881) – ಫ್ರೆಂಚ್ ಪೆಟಿ ಬೂರ್ಷ್ವಾ ಸಮಾಜವಾದಿ, ಇತಿಹಾಸಕಾರ, 1848-1849ರ ಕ್ರಾಂತಿಯ ನಾಯಕರಲ್ಲೊಬ್ಬರು. ಬೂರ್ಷ್ವಾಸೀಯೊಂದಿಗೆ ರಾಜಿ ಮಾಡಿಕೊಳ್ಳಬೇಕೆಂದು ಪ್ರತಿಪಾದಿಸಿದರು.

ಪುಟ 87.

[40] ಪೋಲೆಂಡಿನ ರಾಷ್ಟ್ರೀಯ ವಿಮೋಚನೆಯನ್ನು ಸಾಧಿಸುವ ಗುರಿಯೊಂದಿಗೆ 1846ರ ಫೆಬ್ರುವರಿಯಲ್ಲಿ ಪೋಲಿಷ್ ದೇಶದಾದ್ಯಂತ ಜರುಗಿದ ಬಂಡಾಯಕ್ಕೆ ಪೋಲಿಷ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳೇ ಮುಖ್ಯ ಸ್ಫೂರ್ತಿದಾಯಕರಾಗಿದ್ದರು.

ಪುಟ 88.

41 ಫ್ರೆಡರಿಕ್ ಎಂಗೆಲ್ಸ್‌ರವರ ಕೃತಿ "ಕಮ್ಯೂನಿಸಂನ ಮೂಲತತ್ವಗಳು" ಕಮ್ಯೂನಿಸ್ಟ್ ಲೀಗ್‌ನ ಕಾರ್ಯಕ್ರಮದ ಪೂರ್ವಭಾವಿ ಕರಡು. ಕಮ್ಯೂನಿಸ್ಟ್ ಲೀಗ್‌ನ ಎರಡನೇ ಮಹಾಧಿವೇಶನವು (1847ರ ನವಂಬರ್ 29ರಿಂದ ಡಿಸೆಂಬರ್ 8ರವರೆಗೆ) ಕಾರ್ಯಕ್ರಮವನ್ನು ಪ್ರಣಾಳಿಕೆಯ ರೂಪದಲ್ಲಿ ನಿರೂಪಿಸುವ ಕಾರ್ಯವನ್ನು ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್‌ರವರಿಗೆ ವಹಿಸಿತು. "ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ"ಯ ರಚನೆಯಲ್ಲಿ ಮಾರ್ಕ್ಸ್‌ವಾದದ ಸಂಸ್ಥಾಪಕರು "ಕಮ್ಯೂನಿಸಂನ ಮೂಲತತ್ವಗಳು" ಕೃತಿಯಲ್ಲಿ ಮುಂದಿಡಲಾಗಿದ್ದ ಕೆಲವು ಸೂತ್ರಗಳನ್ನು ಬಳಸಿಕೊಂಡಿದ್ದಾರೆ.

ಪುಟ 90.

42 ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಏಕಕಾಲದಲ್ಲಿ ಮಾತ್ರ ಶ್ರಮಜೀವಿ ಕ್ರಾಂತಿಯು ವಿಜಯ ಗಳಿಸುವುದು ಸಾಧ್ಯ – ಅಂದರೆ ಪ್ರತ್ಯೇಕ ದೇಶವೊಂದರಲ್ಲಿ ಕ್ರಾಂತಿಯ ವಿಜಯ ಅಸಾಧ್ಯ – ಎಂಬ ನಿರ್ಣಯವು ಏಕಸ್ವಾಮ್ಯ ಬಂಡವಾಳಶಾಹಿತ್ವದ ಮುನ್ನಾ ಕಾಲಕ್ಕೆ ಸರಿಯಾಗಿ ಅನ್ವಯಿಸುತ್ತದೆ. ಏಕಸ್ವಾಮ್ಯ ಬಂಡವಾಳಶಾಹಿ ಯುಗದ ನೂತನ ಐತಿಹಾಸಿಕ ವಾತಾವರಣದಡಿಯಲ್ಲಿ, ವಿ. ಐ. ಲೆನಿನರು ತಾವೇ ರೂಪಿಸಿದ ಸಾಮ್ರಾಜ್ಯಶಾಹಿ ಯುಗದಲ್ಲಿ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಯ ನಡುವಣ ಅಸಮಾನತೆ ಸೂತ್ರದ ಆಧಾರದ ಮೇಲೆ, ಆರಂಭದಲ್ಲಿ ಹಲವು ಅಥವ ಕೇವಲ ಒಂದೇ ದೇಶದಲ್ಲಿ ಸಮಾಜವಾದಿ ಕ್ರಾಂತಿಯು ಜಯಗಳಿಸುವ ಸಾಧ್ಯತೆ ಇದೆ ಎಂಬ ನೂತನ ನಿರ್ಣಯಕ್ಕೆ ಬಂದರು. ಈ ನೂತನ ನಿರ್ಣಯದ ನಿರೂಪಣೆಯನ್ನು ವಿ. ಐ. ಲೆನಿನರ "ಯೂರೋಪಿನ ಸಂಯುಕ್ತ ಸಂಸ್ಥಾನಗಳ ಘೋಷಣೆಯ ಬಗೆಗೆ" ಎಂಬ ಲೇಖನದಲ್ಲಿ (1915) ಪ್ರಪ್ರಥಮವಾಗಿ ಕಾಣಬಹುದು.

ಪುಟ 107.

43 ಹಸ್ತಪ್ರತಿಯಲ್ಲಿ 22 ಮತ್ತು 23ನೇ ಪ್ರಶ್ನೆಗಳ ಮುಂದೆ ಉತ್ತರಗಳ ಬದಲಾಗಿ "ಉಳಿದುಕೊಳ್ಳುತ್ತದೆ" ಎಂಬ ಪದವಿದೆ. ಬಹುಶಃ, ಉತ್ತರವು ನಮಗೆ ಇನ್ನೂ ದೊರೆಯದ ಕಮ್ಯೂನಿಸ್ಟ್ ಲೀಗ್‌ನ ಕಾರ್ಯಕ್ರಮದ ಇನ್ನೂ ಹಳೆಯ ಪೂರ್ವಭಾವಿ ಕರಡಿನಲ್ಲಿ ನಿರೂಪಿಸಿರುವ ಹಾಗೆಯೇ ಉಳಿದುಕೊಳ್ಳುತ್ತದೆ ಎಂದು ಅರ್ಥಮಾಡಿಕೊಳ್ಳಬಹುದು.

ಪುಟ 111.

ಓದುಗರಿಗೆ

ಈ ಕೃತಿಯ ಅನುವಾದ, ಮುದ್ರಣ ಹಾಗೂ ರಚನೆ ಕುರಿತು ನಿಮ್ಮ ಅಭಿಪ್ರಾಯ ಅಭಿಲಾಷೆಗಳನ್ನು ತಿಳಿಸಿ ನಮಗೆ ಪತ್ರ ಬರೆದರೆ ನಾವು ಉಪಕೃತರು. ನಮ್ಮ ವಿಳಾಸ:

Progress Publishers,
17, Zubovsky Boulevard,
Moscow, USSR

ನಮ್ಮ ಪ್ರತಿಗಳು ದೊರೆಯುವ ಸ್ಥಳ:

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ), ಲಿಮಿಟೆಡ್,
ಬಿ. ಆರ್. ಸಿ. ಕಾಂಪ್ಲೆಕ್ಸ್,
ಎಸ್. ಸಿ. ರೋಡ್,
ಬೆಂಗಳೂರು – 560009

ಕೆಂಪೇಗೌಡ ಸರ್ಕಲ್,
ಬೆಂಗಳೂರು – 560009

ಕೆ. ಎಸ್. ಆರ್. ರೋಡ್,
ಮಂಗಳೂರು – 575001

К. Маркс и Ф. Энгельс

«МАНИФЕСТ КОММУНИСТИЧЕСКОЙ ПАРТИИ»

*на языке каннада*